THE BOOK WAS DRENCHED

TIGHT BINDING BOOK

TEXT FLY WITHIN THE BOOK ONLY

UNIVERSAL
LIBRARY
OU_198961
UNIVERSAL
LIBRARY

ಪ್ರತಿಭಾ ಗ್ರಂಥಮಾಲೆ, ವರುಷ ೨–ಕಿರಣ ೬

# ಬಿರುಗಾಳಿ

## ಭಾಗ ೨

ಲೇಖಕರು:– **ಪ್ರೊ. ನಾ. ಸಿ. ಫಡಕೆ, ಎಂ. ಎ.**

ಅನುವಾದಕರು:–

**ರಘುನಾಥ ಮೋಡಿ,** ಮಿಶ್ರೀಕೋಟಿ

**ಭಾಲಚಂದ್ರ ಘಾಣೇಕರ**

೯೪೫

**ಬೆಲೆ ೨ ರೂ.**

ಪ್ರಕಾಶಕರು:—
ಬಾಲಚಂದ್ರ ಘಾಣೇಕರ
ಸಮಾಜ ಪುಸ್ತಕಾಲಯ, ಧಾರವಾಡ

( ಸಂಪೂರ್ಣ ಹಕ್ಕು ಪ್ರಕಾಶಕರ ಸ್ವಾಧೀನ )

ಮುದ್ರಕರು:—
ಶೇ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ, ಧಾ

# ಬಿರುಗಾಳಿ

---

೧೦

೧೯೩೨ನೇ ವರ್ಷ ಸಮುದ್ರದ ಮೇಲೆ ಸ್ಟಾಲಿನನ ಅಧಿಕಾರ ಬಹಳ ಬೆಳೆದು ಹೋಗಿತ್ತು. ಸಪ್ತ ಸಮುದ್ರದ ಮೇಲೆ ನಡೆವ ಇವನ ಅಧಿಕಾರ ನೋಡಿ ಎಲ್ಲರೂ ಚಕಿತರಾಗಿದ್ದರು. ದೂರದೂರದ ಬಂದರದಲ್ಲಿ ತಮ್ಮ ಪ್ರಚಾರದ ಕೇಂದ್ರ ಸ್ಥಾಪಿಸುವದು, ನಿರ್ಬಂಧಿತ ಸಾಮಾನು ತರುವದು, ಸಾಗಿಸುವದು ಜೇರಿ ದೇಶಗಳ ಔದ್ಯೋಗಿಕ ಪ್ರಗತಿ ಕುಂಠಿತವಾಗಲಿಕ್ಕೆ ಕೆಲಸಗಾರರಲ್ಲಿ ಬಂಡಾಯ-ಸಂಪು ಮಾಡಿಸುವದು, ಅವರಿಗೆ ಆಶ್ರಯ ಕೊಡುವದು, ಇಷ್ಟಕ್ಕೆ ಮುಗಿಯಲಿಲ್ಲ ಈ ಕಂತೆ ಪುರಾಣ. ಕಮ್ಯುನಿಷ್ಟ ಪ್ರಚಾರಕ್ಕೆ ಅಡ್ಡಿ ಮಾಡಿದವರನ್ನೆಲ್ಲ ಓಡಿಸಿಕೊಂಡು ಹೋಗುವದು, ಕಡೆಗೆ ಕೊಲೆ, ಹೀಗೆಲ್ಲ ಹದಿನೆಂಟು ಕಾರಖಾನೆಯ ಅಂತರ್ಭಾಗ ಈ ಕಾರಭಾರ ದಲ್ಲಿ ನಡೆದಿತ್ತು.

ಮಾಸ್ಕೋದ ಅಧಿರಾಜ್ಯ ಜಗತ್ತಿನಲ್ಲೆಲ್ಲ ಪಸರಿಸಬೇಕಾದರೆ ಭಾಂಡವಲು ದಾರ ದೇಶದ ಉದ್ಯೋಗ-ಧಂದೆಗಳ ಸೂತ್ರ ನಮ್ಮ ಕೈಯಲ್ಲಿರಬೇಕೆಂಬುದು ಸ್ಟಾಲಿನನ ರಾಜಕಾರಣದ ಮಹಾಮಂತ್ರ. ಜಗತ್ತಿನ ಸಣ್ಣ-ದೊಡ್ಡ ಬಂದರಗಳಲ್ಲಿ ಸಾಗುವ ವ್ಯಾಪಾರ ನಮ್ಮ ಮನಸ್ಸಿಗೆ ಬಂದಾಗ ನಿಲ್ಲುವಂತಿರ ಬೇಕು. ಅಂದರೇ ನಮ್ಮ ಸತ್ತೆಯು ಸುರಕ್ಷಿತವಾದಂತೆ. ಇದಕ್ಕನುಸಾರ ವಾಗಿಯೇ ಅವನ ತಂತ್ರ ಸಾಗಿದ್ದಿತು. ೧೯೩೦ನೇ ವರ್ಷ ಮಾಸ್ಕೋದಲ್ಲಿ ಕಾಮಿಂಟರ್ನ ನೌಕಾ ವಿಭಾಗದ ದೊಡ್ಡ ಪರಿಷತ್ತಾಯಿತು; ಅದಕ್ಕೆ ನಾನು ಸ್ವತಃ ಹೋಗಿದ್ದೆ. ಈ ಪರಿಷತ್ತಿನ ಕಾಲದಲ್ಲಿಯೇ ನಾವಿಕರ ಅಂತರ-ರಾಷ್ಟ್ರೀಯ ಸಮಿತಿ ಸ್ಥಾಪಿತವಾಗಿದ್ದಿತು. ಇದರ ಕಾರ್ಯ ಮರ್ಯಾದೆ ವಿಶಾಲ. ಮೇಲೆ ವರ್ಣಿಸಿದ ಕಾರ್ಯಗಳ ಪ್ರಚಾರವು ಈ ಸಮಿತಿಯ

ದ್ವಾರದಿಂದಲೇ ಸಾಗಿದ್ದವು. I. S. H. ಎಂದು ಈ ಸಮಿತಿಯ ಸಂಕ್ಷಿಪ್ತ ಹೆಸರು.

ಆಲ್ಬರ್ಟ ವಾಲ್ಟರನು ಸಮಿತಿಯ ಮುಖ್ಯಸ್ಥ. ಅಂತರರಾಷ್ಟ್ರೀಯ ಪ್ರಚಾರಕ್ಕೆ ಪ್ರತಿ ತಿಂಗಳು ಎರಡು ಲಕ್ಷ ರೂಪಾಯಿ ಅವನಿಗೆ ದೊರೆಯುತ್ತಿದ್ದವು. ೧೯೩೧ನೇ ವರ್ಷದ ಅಗಸ್ಟ ತಿಂಗಳಲ್ಲಿ ಆಯ್. ಎಸ್. ಎಚ್. ದ ರಾಜಕೀಯ ವಿಭಾಗದಲ್ಲಿ ಕಾರ್ಯ ಮಾಡಲಿಕ್ಕೆಂದು ಡಿಮಿಟ್ರೋಫನು ನನ್ನನ್ನು ನೇಮಿಸಿದನು. ನನ್ನ ಪಗಾರ ತಿಂಗಳಿಗೆ ಆರುನೂರಾಗಿತ್ತು. ಈ ಅಧಿಕಾರದಿಂದ ಜಗತ್ತಿನ ಎಲ್ಲ ಬಂದರಗಳಲ್ಲಿ ನಡೆಯುವ ಸೋವ್ಹಿಯೆಟ ಯುನಿಯನದ ಕಾರ್ಯಗಳು ನನಗೆ ತಿಳಿಯುತ್ತಿದ್ದವು. ಈ ಕಾರ್ಯಗಳಲ್ಲಿ ಕೆಲವು ಶ್ರೇಷ್ಠ ಕೆಲವು ಮಾತ್ರ ಭಯಂಕರ ಸ್ವರೂಪದವು. ಸಾಮ-ದಾನ-ಭೇದ-ದಂಡ ಮೊದಲಾದ ಚತುರೋಪಾಯಗಳಿಂದ ರಾಜ್ಯ ಶಕಟ ನಡೆಸುವದು ಸ್ಟಾಲಿನನ ರೀತಿ. ರಶಿಯದ ಸತ್ತೆಯನ್ನು ಬೆಳೆಸಿ ಜಗತ್ತಿನ ಭಾಂಡವಲಶಾಹಿಯನ್ನು ಮಣ್ಣುಗೂಡಿಸಲಿಕ್ಕೆ ಧರ್ಮಾ-ಧರ್ಮದ ವಿಧಿ ನಿಷೇಧ ಸ್ಟಾಲಿನನು ನೋಡಲಿಲ್ಲ. ಈ ಸಂಬಂಧವಾಗಿ ಅನೇಕ ಉದಾಹರಣೆ ಕೊಡಬಹುದು. ಆದರೆ ಹೋಗಲಿ. ೧೯೩೨ನೇ ವರ್ಷದ ಮೇ ತಿಂಗಳಿನ ಕೊನೆಗೆ ಹಾಂಬುರ್ಗ ಪಟ್ಟಣದಲ್ಲಿ I. S. H. ದ ಪರವಾಗಿ ನಾವಿಕರ ಜಾಗತಿಕ ಪರಿಷತ್ತೊಂದು ನೆರೆದಿತ್ತು, ಅದನ್ನಷ್ಟೇ ಇಲ್ಲಿ ಹೇಳುತ್ತೇನೆ. ಅದು ಮನೋರಂಜಕ ಮತ್ತು ಬೋಧಪ್ರದವಾಗಿದೆ.

ಈ ಪರಿಷತ್ತು ಹಾಂಬುರ್ಗದ ಆಲ್ಟೋನಾ ಉಪನಗರದಲ್ಲಿ ನೆರೆಯುವದಿತ್ತು. ಜಾತಿ - ಧರ್ಮ - ರಾಜಕಾರಣ - ಇತ್ಯಾದಿ ಭೇದಗಳನ್ನು ಲಕ್ಷಿಸದೆ ಜಗತ್ತಿನ ಎಲ್ಲ ನಾವಿಕರ ವಿಚಾರವಿನಿಮಯಕ್ಕೆ ಈ ಪರಿಷತ್ತು ಕೂಡುವದು, ಎಂದು ಜಾಹೀರು ಮಾಡಿತ್ತು. ಒಳಗಿನ ತಂತ್ರ ಹೀಗೆ. ಪರಿಷತ್ತಿಗೆ ಬರುವ ನಾವಿಕರ ಸಹಾನುಭೂತಿ ಸೋವ್ಹಿಯೆಟ ಸರಕಾರದ ಕಡೆಗೆ ತಿರುಗಬೇಕು ಎಂದು. ದೂರದೂರದಿಂದ ಬರುವ ಪ್ರತಿನಿಧಿಗಳ ಊಟ - ವಸತಿ - ವೆಚ್ಚವೆಲ್ಲ ಸಮಿತಿಯ ಹಣದಿಂದ ಸಾಗಬೇಕಾಗಿದ್ದಿತು.

ಪರಿಷತ್ತಿಗೆ ಮೂರು ವಾರ ಮೊದಲೇ ಪ್ರತಿನಿಧಿಗಳು ಬರಹತ್ತಿದರು. ರೈಲಿನಿಂದ, ಹಡಗುಗಳಿಂದ, ವಿಮಾನದಿಂದ ಹಿಂಡುಹಿಂಡಾಗಿ ಬಂದರು.

ಪ್ರತಿನಿಧಿಗಳೆಲ್ಲ ಸ್ಟಾಲಿನನ ಸಮುದ್ರದ ಮೇಲಿನ ಅಧಿಕಾರ ನೋಡಿ ಬೆರಗು-ಗೊಳ್ಳಬೇಕಾಗಿತ್ತು. ಅವನ ಕಡೆ ತಿರುಗಬೇಕಾಗಿತ್ತು. ಎಂತಲೇ ಸ್ವಾಗತ ಸಮಿತಿಯವರು ಪ್ರತಿನಿಧಿಗಳ ಊಟ ವಸತಿಯಲ್ಲಿ ಬಾದಶಾಹೀ ಥಾಟು ಇಳಿಸಿದ್ದರು. ಮನೋರಂಜನೆಯ ಸಾಧನಗಳ ಕೊರತೆಯೂ ಇದ್ದಿಲ್ಲ. ಪ್ರತಿಯೊಂದು ದೇಶದ ಪ್ರತಿನಿಧಿಯ ಕೈಕೆಳಗೆ ಒಬ್ಬ ಸ್ವಯಂಸೇವಕ ತೈನಾತಿಗೆ ಕೊಡಲ್ಪಟ್ಟಿದ್ದ. ಮೇಲೆ ಮೇಲೆ ನೋಡಿದರೆ ಅವನು ದುಭಾಷಿ ಮತ್ತು ಎಲ್ಲ ತಿಳಿಸಿಕೊಡುವವ. ವಸ್ತುತಃ ಗುಪ್ತ ಹೇರ. ಪರದೇಶ-ದಿಂದ ಬರುವ ಪ್ರೇಕ್ಷಕ-ಪ್ರತಿನಿಧಿ ವರ್ಗದಲ್ಲಿ ಸ್ಟಾಲಿನನ ವಿರೋಧಿಗಳು ಯಾರಾದರೂ ಇರುವರೋ ಹೇಗೆ; ಇದೆಲ್ಲ ಸಮಿತಿಗೆ ತಿಳಿಯುವದು ಅವಶ್ಯವಿತ್ತು.

ಪರಿಷತ್ತಿನ ಕಾರ್ಯಕ್ರಮ. ಬರುವ ಠರಾವು, ನಡೆಯುವ ಭಾಷಣ ಇವೆಲ್ಲ ಪಕ್ಷದ ಮುಖ್ಯ ಕಚೇರಿಯಿಂದ ಮುದ್ರಿತವಾಗಿ ಮೊದಲೇ ಬಂದು-ಬಿಟ್ಟಿದ್ದವು. ಭಾಷಣಕಾರರು ಮೊದಲೇ ಆರಿಸಲ್ಪಟ್ಟಿದ್ದರು. ಯಾರು ಏನು ಮಾತಾಡಬೇಕು ? ಇದು ಕೂಡ ಹುಕುಮಿನಲ್ಲಿ ಇತ್ತು. ಈ ಕಾರ್ಯಕ್ರಮದ ವಿರುದ್ಧ ನಡೆಯುವ ಸಾಹಸವನ್ನು ಒಬ್ಬ ಪ್ರತಿನಿಧಿ ಮಾತ್ರ ಮಾಡಿಬಿಟ್ಟ. ಆ ಧಿಟ್ಟತನದ ಪ್ರಾಯಶ್ಚಿತ್ತ ಕೂಡಲೇ ಅವನಿಗೆ ಸಿಕ್ಕಿತು. ಅವನ ಹೆಸರು ಆಂಗ್ಲಾ. ಫ್ರಾನ್ಸದ 'ರೂಯಾ' ಪಟ್ಟಣದಿಂದ ಬಂದಿದ್ದ. ಹ್ಯೂಗೋ ಮಾರ್ಕ್ಸನ ಇಬ್ಬರು ಹಸ್ತಕರು ಜರ್ಮನ ಪೋಲೀಸರ ಗಣವೇಷ ತಾಳಿದ್ದರು. ರಾತ್ರಿ ಆಂಗ್ಲಾನನ್ನು ಬಂಧಿಸಿದರು. ಪರರಾಷ್ಟ್ರದಲ್ಲಿ ಒಂದು ಸಂಶಯಿತ ಆಸಾಮಿ ಎಂದು ಆರೋಪ ಮಾಡಿ ರಾತ್ರಿಯಲ್ಲಿಯೇ ಕೋಲೋನ ಪಟ್ಟಣಕ್ಕೆ ಒಯ್ದು, ಪ್ಯಾರಿಸದ ಗಾಡಿಯಲ್ಲಿ ಕುಳ್ಳಿರಿಸಿಬಿಟ್ಟರು. ಇನ್ನೊಮ್ಮೆ ಜರ್ಮನಿಗೆ ಬಂದರೆ ಜೇಲಿನಲ್ಲಿ ಹಾಕುವೆವೆಂದು ಬೇರೆ ಹುಕುಮು ಬಜಾಯಿಸಿದರು.

ಪರಿಷತ್ತು ಜಾಗತಿಕವೆನಿಸಬೇಕಾಗಿತ್ತು. ಕಾರಣ ಯಾವ ದೇಶದಿಂದ ಪ್ರತಿನಿಧಿಗಳು ಬಂದಿಲ್ಲವೋ ಆಯಾ ದೇಶಗಳ ಪ್ರತಿನಿಧಿಗಳನ್ನು ನಾವೇ ನಿರ್ಮಿಸಿಕೊಂಡೆವು. ಪರಿಷತ್ತಿನ ಚಾಲಕರು ಅವರ ಕೈಯ್ಯಲ್ಲಿತ್ತ ಭಾಷಣ ಗಳನ್ನು ಅವರು ಓದಬೇಕು. ಯಾವ ದೇಶಗಳ ವಿಷಯಕ್ಕೆ ಅವರ ಭಾಷಣ

ನಡೆಯುವದೋ ಅದು ಯಾವ ದಿಕ್ಕಿಗಿದೆ ಎಂಬುದು ಅವರಿಗೆ ಗೊತ್ತಿರದಿದ್ದರೂ ಪರವಿಲ್ಲ. ಬರ್ಲಿನದಲ್ಲಿ ಹತ್ತೆಂಟು ಚೀನಿ ವಿದ್ಯಾರ್ಥಿಗಳು ಸಿಕ್ಕರು. ಅವರನ್ನು ಹಿಡಿದು ತಂದೆವು. ಸರಿ, ಅವರಾದರು ಕ್ಯಾಂಟನ ನಾವಿಕರ ಪ್ರತಿನಿಧಿ. ಮಿಸಿಸಿಪಿ ನದಿಯ ಮೇಲಿರುವ ನಿಗ್ರೋ ಜನರ ಪ್ರತಿನಿಧಿ ಅದೊಂದು ಅಲೌಕಿಕ ವ್ಯಕ್ತಿಯಾಗಿದ್ದಿತು. ಅವನು ಸ್ವತಃ ನಿಗ್ರೋ ಎಂಬುದಷ್ಟೇ ಅವನ ಪಾತ್ರತೆ. ಮೂಲ ಅವನ ವಾಸಸ್ಥಾನ ತ್ರಿನಿದಾದ. ಆಯುಷ್ಯ ಕಳೆದದ್ದು ಲಂಡನದಲ್ಲಿ. ಕಮ್ಯುನಿಷ್ಟ ಪಕ್ಷದ ಪರವಾಗಿ ಜರಗುವ ಪರಿಷತ್ತು-ಗಳಲ್ಲಿ ಒಟ್ಟಾರೆ ಇಂಥ ಯುಕ್ತಿಗಳೆಷ್ಟೋ!

ಪರಿಷತ್ತು ಆರಂಭವಾದ ಮೇಲೆ ಹಿಂದುಸ್ಥಾನದಿಂದ ಪ್ರತಿನಿಧಿಗಳು ಬಂದಿಲ್ಲವೆಂದು ತಿಳಿಯಿತು. ಬ್ರಿಟಿಶ ಸರಕಾರದವರು ಅವರಿಗೆ ಪಾಸ-ಪೋರ್ಟು ಕೊಡದೇ ಅವರ ಮುಖ್ಯನನ್ನು ಬಂಧಿಸಿದ್ದರು. ಪ್ರತಿನಿಧಿಗಳನ್ನು ಕರೆಸಿ ಭಾಷಣ ಮಾಡಿಸುವ ಭಾಗದಲ್ಲಿ 'ಕ್ಯಾಮಿಸಾರಿಂಕೋ' ಅಧಿಕಾರಿ. ಹಿಂದುಸ್ಥಾನದ ಪರವಾಗಿ ಭಾಷಣವಿಲ್ಲವಲ್ಲ ಎಂದು ಅಸಮಾಧಾನದಿಂದ ನನ್ನ ಕಡೆಗೆ ಬಂದು ಹೇಳಿದನು.

"ಹಿಂದುಸ್ಥಾನದ ಮಹತ್ವವಂತೂ ಬಹಳ. ಆ ದೇಶದ ಪ್ರತಿನಿಧಿ-ಯನ್ನು ನಾವು ಸಭೆಯಲ್ಲಿ ನಿಲ್ಲಿಸಬೇಕು. ಹೋಗು ಹೇಗಾದರೂ-ಏನಾದರೂ ಮಾಡಿ ಒಬ್ಬ ಹಿಂದೂ ಕೂಲಿಕಾರನನ್ನು ಕರಕೊಂಡು ಬಾ. ನಾವು ಅವನನ್ನೇ ಮಾತಾಡಹಚ್ಚೋಣ.."

ನಾನು ಹಿಂದೂ ಕೂಲಿಕಾರರ ಬೇಟೆಗಾರಂಭಿಸಿದೆ. ಹ್ಯಾನ್ಸಾ ಕಂಪನಿಯ ಒಂದು ಹಡಗು ಬಂದರದಲ್ಲಿತ್ತು. ಅದರಲ್ಲಿ ಇದ್ದಲು ತುಂಬುವ ಕಾರ್ಯವನ್ನು ಹಿಂದೂ ಕೂಲಿಕಾರರು ಮಾಡುತ್ತಿರುವದು ನನಗೆ ಗೊತ್ತಿ-ದ್ದಿತು. ಕೂಡಲೇ ಅಲ್ಲಿಗೆ ಹೋದೆ. ಅವರಿಗೆ ಭೆಟ್ಟಿಯಾಗಿ ಪಟ್ಟಣದಲ್ಲಿ ಇಂಥ ಇಂಥ ಪರಿಷತ್ತು ಕೂಡುವದು ಇತ್ಯಾದಿ ಹೇಳಹತ್ತಿದೆ. ಅದೇನೂ ಅವರಿಗೆ ತಿಳಿಯಲಿಲ್ಲ. ನಾನು ಬೇರೊಂದು ಯುಕ್ತಿ ಹುಡುಕಿದೆ—"ಒಳ್ಳೇ ಸುಂದರ ಹುಡುಗರಿಂದ ನಿಮಗೆ ಹಾಡು ಕೇಳಿಸುತ್ತೇನೆ. ಖರ್ಚು-ವೆಚ್ಚ ಏನೂ ಇಲ್ಲ. ಗಮ್ಮತ್ತು ನೋಡಬೇಕಾಗಿದ್ದರೆ ನನ್ನ ಬೆನ್ನುಹತ್ತಿ ಬನ್ನಿ."

ಮೂರು ಜನ ಒಪ್ಪಿದರು. ಇಬ್ಬರು ಮುದಿ ಆಡಿನಂತೆ ಗಡ್ಡ ಬೆಳಿಸಿ-ದವರು. ಮತ್ತೊಬ್ಬ ಕವಡೆ ಕಷ್ಟದವ. ಇವನು ಬಹಳ ಬಡಕ. ಎಲುವಿನ ಹಂದರ. ಮೂವರ ತಲೆಯ ಮೇಲೂ ಹೊಗಗಟ್ಟಿದ ಪಾವುಡಗಳಿದ್ದವು. ನಡುಕಟ್ಟಿನ ಕೆಳಗೆ ಹೊಗೆಯಿಂದ ಕಪ್ಪಾದ ಶರ್ಟಿನ ತುದಿಗಳು ಜೋಲು ಬಿದ್ದಿದ್ದವು. ಒಂದು ಟ್ಯಾಕ್ಸಿಯಲ್ಲಿ ಅವರನ್ನು ಕೂಡಿಸಿ ಪರಿಷತ್ತಿನ ಸ್ಥಾನಕ್ಕೆ ಕರೆತಂದೆ. ಕೆಳಗಿಳಿಸಿ ಹೇಳಿದೆನು.

“ ಇನ್ನು ಹುಡುಗರನ್ನು ತೋರಿಸುತ್ತೇನೆ, ಒಳಗೆ ಸಾಗಿರಿ. ”

ಆ ದೊಡ್ಡ ಹಾಲಿನಲ್ಲಿ ನೆರೆದ ಜನಸಮುದಾಯ ನೋಡಿ ಅವರು ತಣ್ಣಗಾದರು. ಅಲ್ಲಲ್ಲಿ ಕೆಂಪು ಧ್ವಜಗಳು ಹಾರುತ್ತಿದ್ದವು. ಅವುಗಳನ್ನು ಹುಚ್ಚರಂತೆ ಅವರು ನೋಡಿದರು. ನಾನು ಆ ಜನರನ್ನು ಎಳೆಯುತ್ತ ಒಯ್ದುದ್ದು ವ್ಯಾಸಪೀಠದ ವರೆಗೆ. ಅಲ್ಲಿ ಮುಟ್ಟಿದ ಕೂಡಲೇ ಆ ಕವಡೆ ಕಷ್ಟದ ಬಡಕನನ್ನು ಮುಂದೆ ನೂಕಿದೆ. ಅದೇ ವೇಳೆಗೆ ಬ್ಯಾಂಡು ಉಚ್ಚ ಸ್ವರದಿಂದ ಬಾಜಿಸಿದವು. ಅದೆಲ್ಲ ಮುಗಿದ ಮೇಲೆ ಎಲ್ಲ ಕಡೆ ಶಾಂತತೆ-ಯಾಯಿತು. ಅನ್ಸ್ಟರ್ವಾಲವೆಬರನು ಪರಿಷತ್ತಿಗೆ ಅಧ್ಯಕ್ಷನಿದ್ದ. ಮೇಲಕ್ಕೆದ್ದು ಬಿಂಕದಿಂದ ಗರ್ಜಿಸಿದನು.

“ ಗೆಳೆಯರೇ ! ಈ ಪರಿಷತ್ತಿನಲ್ಲಿ ಹಿಂದುಸ್ಥಾನದ ಕಾಮ್ರೇಡರಿಗೆ ಭಾಗ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಬಾರದು ಎಂದು ಬ್ರಿಟಿಶ ಸರಕಾರವು ಬಹಳ ಯತ್ನಿಸಿತು. ಆದರೆ ಅವರಿಂದ ನುಸುಳಿಕೊಂಡು ಆ ಕಾಮ್ರೇಡರು ಇಲ್ಲಿ ಬಂದು ಮುಟ್ಟಿದರು. ಕಲಕತ್ತೆಯ ನಾವಿಕ ಸಂಘದ ಒಬ್ಬ ಪ್ರತಿ-ನಿಧಿಯು ನಿಮ್ಮ ಮುಂದೆ ಈಗ ಭಾಷಣ ಮಾಡುತ್ತಾನೆ. ”

ಇದನ್ನು ಕೇಳಿ ಸಭೆಯಲ್ಲಿ ಜನ ಚಪ್ಪಳೆ ಹಾಕಿದರು.

ಇರಲಿ. ಹಿಡಿದು ತಂದ ಆ ಮೂವರು ‘ ಪ್ರತಿನಿಧಿ ’ಗಳು ಆಶ್ಚರ್ಯ ಚಕಿತರಾಗಿ, ಗೊಂಬೆಗಳಂತೆ ನಿಂತುಕೊಂಡರು ! ಅವರ ಬಾಯಿಂದ ಒಂದು ಶಬ್ದ ಹೊರಗೆ ಬಂದರೆ ಶಪಥ !

ಇದನ್ನು ನೋಡಿ ಮಾಯಿಕ ಆಪೆಲಮನನೆಂಬ ಅಮೇರಿಕೆಯ ಕಾರ್ಯಕರ್ತನು ಮುಂದೆ ಬಂದನು. ಅವನು ಮೂವರನ್ನೂ ಆರ್ಭಟೆಯಿಂದ ವಿಚಾರಿಸಿದನು.

“ ನೀವು ಎಷ್ಟು ವೇಳೆ ದುಡಿಯಬೇಕಾಗುತ್ತದೆ ? ”

ಮೂವರಲ್ಲಿ ಒಬ್ಬ ಗುಣುಗುಟ್ಟಿದ. “ ಆರರಿಂದ ಆರು. ”

ಆಪೆಲಮನನು ಸಭೆಯನ್ನುದ್ದೇಶಿಸಿ ಆರ್ಭಟೆಯಿಂದ ಕೂಗಿದನು. “ ಕೇಳಿಕೊಳ್ಳಿ. ಕೇಳಿಕೊಳ್ಳಿ. ಹಿಂದುಸ್ಥಾನದಿಂದ ಬಂದ ಈ ಕಾಮ್ರೇಡರು ಹೇಳುತ್ತಾರೆ. ಅಲ್ಲಿಯ ಸಾಮ್ರಾಜ್ಯಶಾಹೀ ಭಾಂಡವಲುದಾರರು, ಕೂಲಿ-ಕಾರರನ್ನು ಬೆಳಗಿನ ಆರರಿಂದ ಸಂಜೆಯ ಆರು ಗಂಟೆಯ ವರೆಗೆ ದುಡಿಸಿ ಕೊಳ್ಳುತ್ತಾರಂತೆ. ಮಧ್ಯದಲ್ಲಿ ವಿಶ್ರಾಂತಿ ಇಲ್ಲ. ಆದಿತ್ಯವಾರ ಸೂಟಿ ಇಲ್ಲ. ನಿತ್ಯ ಹನ್ನೆರಡು ತಾಸು ದುಡಿತ !

ಆ ಮೇಲೆ ಪುನಃ ಮೂವರ ಕಡೆಗೆ ತಿರುಗಿ ವಿಚಾರಿಸಿದನು.

“ ನಿಮಗೆ ಸಂಬಳವೆಷ್ಟು ದೊರೆಯುವದು ? ”

“ ಮೂರು ಪೌಂಡು. ”

ಸಭೆಗೆ ಹೇಳಿದನು. “ ಕೇಳಿದಿರಾ ? ಹಿಂದುಸ್ಥಾನದಲ್ಲಿಯ ಈ ನಮ್ಮ ಬಾಂಧವರು ಅರವತ್ತು ಶಿಲಿಂಗುಗಳಿಗಾಗಿ ಮುನ್ನೂರಾ ಅರವತ್ತು ತಾಸು ದುಡಿಯಬೇಕಾಗುತ್ತದೆ ! ”

ಮೂರನೆಯ ಪ್ರಶ್ನೆ :— “ ನೀವು ಏನು ತಿನ್ನುವಿರಿ ? ”

ಉತ್ತರ :— “ ಅನ್ನ. ”

ಪುನಃ ಆಪೆಲಮನನು ಸಭೆಗೆ ಹೇಳಿದನು.

“ ನೋಡಿ ! ನೋಡಿ !! ಶುದ್ಧ ಪಶುಗಳಂತಾಗಿದೆ ಇವರ ಸ್ಥಿತಿ ! ನಮ್ಮ ಈ ಪ್ರಿಯ ಕಾಮ್ರೇಡರಿಗೆ ಪ್ರತಿ ದಿನ ಮೂರು ವೇಳೆ ಕೇವಲ ಅನ್ನದ ಕಿಚ್ಚಡಿ ದೊರೆಯುತ್ತದೆ. ”

ಆ ಮೂವರರನ್ನೂ ಚುಚ್ಚಿ ಕೇಳಿದನು. “ ಕೆಲಸದ ತಾಸುಗಳು ಕಡಿಮೆಯಾಗಬೇಕೆಂದು ನಿಮಗನಿಸುವದೇ ? ಕೂಲಿ ಹೆಚ್ಚಾಗಬೇಕೋ ? ಭಾಂಡವಲುಶಾಹಿಯನ್ನು ನಾಶಗೊಳಿಸಬೇಕೋ ? ”

ಆ ಮೂವರೂ ಹುಚ್ಚರಂತಾಗಿ ಅತ್ತಿತ್ತ ನೋಡಹತ್ತಿದರು. ಆ ಮೇಲೆ ಹಲ್ಲು ಕಿರಿದು, ತಲೆ ಹಾಕಿದರು.

ಸಭೆಯನ್ನುದ್ದೇಶಿಸಿ ಆಪೆಲಮನನು ಗರ್ಜಿಸಿದನು.

" ನಮ್ಮ ವರ್ಗ ವಿಗ್ರಹದ ಯುದ್ಧದಲ್ಲಿ ಕೂಡಿಕೊಳ್ಳುವ ನಿಶ್ಚಯವನ್ನು ಹಿಂದುಸ್ಥಾನದಿಂದ ಕಷ್ಟಪಟ್ಟು ಇಲ್ಲಿಗೆ ಬಂದ ಈ ಮೂವರು ಕಾಮ್ರೇಡರು ಜಾಹೀರು ಮಾಡುತ್ತಾರೆ. ಸಾಮ್ರಾಜ್ಯಶಾಹೀ ಹದ್ದುಗಳಿಂದ ಸೊನ್ನಿಯೆಟ ಯುನಿಯನದ ರಕ್ಷಣ ಮಾಡಲಿಕ್ಕೆ ನಾವು ಆರಂಭಿಸಿದ ಪ್ರಚಂಡ ಚಳುವಳಿಯಲ್ಲಿ ಭುಜಕ್ಕೆ ಭುಜ ಆನಿಸಿ ಯುದ್ಧ ಮಾಡುವ ಸಂಕಲ್ಪವನ್ನು ನಮ್ಮ ಈ ಹಿಂದೂ ಬಾಂಧವರು ಮಾಡುತ್ತಾರೆ. "

ಸಭೆಯಲ್ಲಿ ಶಾಬಾಸ! ಶಾಬಾಸ! ಎಂಬ ಗರ್ಜನೆಯಾಯಿತು. ಬ್ಯಾಂಡಿನವರು ಕೆಲಸಗಾರರ ಅಂತರರಾಷ್ಟ್ರೀಯ ಗೀತ ಬಾಜಿಸಹತ್ತಿದರು. ಎಲ್ಲ ಪ್ರತಿನಿಧಿಗಳು ಎದ್ದು ನಿಂತು ಆ ಗೀತ ಹಾಡಹತ್ತಿದರು. ಆ ಸಂಧಿ ಸಾಧಿಸಿ ಆ ಮೂವರು ಪ್ರತಿನಿಧಿಗಳನ್ನು ಕರೆದುಕೊಂಡು ಹೊರಟೆ. ಹಾಲಿನ ಬಾಗಿಲ ಹೊರಗೆ ಬಂದ ಕೂಡಲೆ ಅವರು ವಿಚಾರಿಸಿದರು.

" ಇದೇನಯ್ಯಾ! ನೀವು ಹುಡುಗರನ್ನು ತೋರಿಸುತ್ತೇವೆಂದು ಹೇಳಿದ್ದಿರಿ. ಅದರ ವ್ಯವಸ್ಥೆ ಏನು? "

ನಾನು ಹೇಳಿದೆ. " ವಿದ್ವಾಂಸರಿದ್ದೀರಿ. ಹೊರಟು ಹೋಗಿ ನಿಮ್ಮ ಹಡಗಕ್ಕೆ. "

ಪರಿಷತ್ತು ಮುಗಿದು ಪ್ರತಿನಿಧಿಗಳೆಲ್ಲ ಹೊರಟುಹೋದರು. ಆ ನಂತರ ಒಂದು ದಿನ ಬರ್ಲಿನದಿಂದ ನನಗೆ ಕರೆ ಬಂದಿತು. ಡಿಮಿಟ್ರಾಫನ ಭೆಟ್ಟಿಗೆ ನಾನು ಹೋದಾಗ ಹಿಂದಿನಕಿಂತ ಮೈತ್ರಿಯ ಸ್ವರದಲ್ಲಿ ಅವನು ಮಾತಾಡಿದನು.

" ಪ್ರಿಯ ಗೆಳೆಯಾ! ನಿನ್ನನ್ನು ಇಂಗ್ಲಂಡಕ್ಕೆ ಕಳಿಸಬೇಕೆಂದು ಯೋಚಿಸಿದ್ದೇವೆ. ಅಲ್ಲಿಯ ಪರಿಸ್ಥಿತಿ ಸೂಕ್ಷ್ಮವಾದುದು ನಿನಗೆ ಕಂಡು ಬಂದೀತು. ಅಲ್ಲಿಯ ಚಳುವಳಿ ಎಂದರೆ ಹಳೆ ಹುಣ್ಣಿನಂತಾಗಿದೆ. ಆ ಚಳುವಳಿ ಬೆಳೆದಿಲ್ಲ, ಇತ್ತ ಸತ್ತಿಲ್ಲ. ಈ ಇಂಗ್ಲೀಷು ಜನ ಪ್ರತಿಷ್ಠಿತ ಆಯುಷ್ಯ ಕ್ರಮಕ್ಕೆ ಮರುಳುಗೊಂಡಿದ್ದಾರೆ. ಕ್ರಾಂತಿಯ ಚಳುವಳಿ ಅವರಿಂದ ನಡೆಯ್ಯುವದೇ ಕಠಿಣವೆಂದು ಕಾಣುವದು. "

ನಾನು ಇಂಗ್ಲಂಡಕ್ಕೆ ಹೋಗಿ ಏನು ಮಾಡಬೇಕೆಂಬುದನ್ನು ಐದು ತಾಸುಗಟ್ಟಲೇ ಮಾತಾಡಿದನು.

ಇಂಗ್ಲಂಡದಲ್ಲಿ ಸುರಕ್ಷಿತ ನನ್ನ ಪ್ರವೇಶವಾಗಬೇಕು. ಅಲ್ಲಿ ನನ್ನ ಕಾರ್ಯ ಸುಖಕರವಾಗಬೇಕು. ಎಂಬ ವಿಷಯದಲ್ಲಿ ಶಕ್ಯವಾದಷ್ಟು ಜಾಗ್ರತೆಯನ್ನು ಪಕ್ಷದವರು ತೆಗೆದುಕೊಂಡಿದ್ದರು. ಆದರೆ ಅಲ್ಲಿ ಕಾಲೂರಿ ನಿಲ್ಲುವದು ಎಷ್ಟು ಕಠಿಣವೆಂಬುದು ನನಗೆ ಗೊತ್ತಿದ್ದಿತು. ಮೇಲೆ ಮೇಲೆ ನೋಡಿದರೆ ಇಂಗ್ಲಂಡವು ಉಳಿದ ದೇಶಗಳಿಗಿಂತ, ಹೆಚ್ಚು ಸ್ವಾತಂತ್ರ್ಯ ಪ್ರಿಯ ದೇಶವೆಂದು ತಿಳಿಯಲ್ಪಡುತ್ತದೆ. ಬೇಕಾದವರು ಹೋಗಿ ಬರುವದಕ್ಕೆ ತೆರೆದ ಬಾಗಿಲು ಇಂಗ್ಲಂಡು ದೇಶ. ಆದರೆ ಆ ಸ್ವಾತಂತ್ರ್ಯ ಆ ತೆರೆದ ಬಾಗಿಲು ಇದೆಲ್ಲ ಹೊರಗಿನ ಸೋಗು. ವಸ್ತುಸ್ಥಿತಿ ಮಾತ್ರ ಬೇರೆ. ಹೊರಗಿನಿಂದ ಬರುವ ಪರಕೀಯರ ಮೇಲೆ ಸ್ಕಾಟಲಂಡಯಾರ್ಡ ಎಂಬ ಹೆಸರಿನ ಪೋಲೀಸರ ಗುಪ್ತ ತಪಾಸು ವಿಲಕ್ಷಣವಾಗಿರುತ್ತದೆ. ಪಾಸಪೊರ್ಟ ತಪಾಸಿಸುವ ಬ್ರಿಟಿಶ ಅಧಿಕಾರಿಗಳ ಖ್ಯಾತಿ ಬಹಳ. ಸುಳ್ಳು ಪಾಸಪೋರ್ಟನ್ನು ಒಂದು ದೃಷ್ಟಿಕ್ಷೇಪದಿಂದ ಗೊತ್ತು ಹಚ್ಚುವರು. ಪರರಾಷ್ಟ್ರೀಯ ಸರಕಾರದ ಯಾವನಾದರೂ ಹಸ್ತಕನೊಬ್ಬನು ಇಂಗ್ಲಂಡದ ಯಾವ ಬಂದರದಲ್ಲಿಯೂ ಇಳಿಯುವದು ಸಾಧ್ಯವಿಲ್ಲ. ಅಲ್ಲಿಯ ಪೋಲೀಸರ ಕೀರ್ತಿ ಕಾಮಿಂಟರ್ನದಲ್ಲಿ ಪೂರ್ವದಿಂದಲೇ ಪಸರಿಸಿದೆ. ಕಾಮಿಂಟರ್ನದ ಎಷ್ಟೋ ಕಾರ್ಯಕರ್ತರು ಕೈ ತೋರಿಸಿ ಅವಲಕ್ಷಣವೆನಿಸಿಕೊಂಡು ಬಂದಿದ್ದರು.

ನನ್ನ ಬಳಿಯಲ್ಲಿ ಒಂದು ನಾರ್ವೇಜಿಯನ ಸರಕಾರದ್ದು, ಮತ್ತೊಂದು ಡಚ್ ಸರಕಾರದ್ದು, ಇನ್ನೊಂದು ಅಮೇರಿಕೆಯದು, ಹೀಗೆ ಮೂರು ಖೊಟ್ಟಿ ಪಾಸಪೋರ್ಟಗಳಿದ್ದವು. ಪ್ರವಾಸಕ್ಕೆ ಬೇಕಾಗುವ ಪಾಸಪೋರ್ಟ ಫೋಟೋ, ಕಾಗದ-ಪತ್ರ ಮುಂತಾದವುಗಳನ್ನು ಸಿದ್ಧಗೊಳಿಸಲಿಕ್ಕೆ ಕಾಮಿಂಟರ್ನ ಪಕ್ಷವು ಬರ್ಲಿನ ಪಟ್ಟಣದಲ್ಲಿ ಎಸ್. ಡಬ್ಲ್ಯೂ. ೬೮ – ೭೨ ಈ ಮನೆಯಲ್ಲಿ ಒಂದು ಕೇಂದ್ರವನ್ನೇ ಏರ್ಪಡಿಸಿತ್ತು. ಈ ಕೇಂದ್ರದಿಂದಲೇ ನನಗೆಲ್ಲ ಸಾಹಿತ್ಯ ದೊರೆತದ್ದು. ರಾಟರಡಮದಲ್ಲಿ ಮೀನದ ಠೋಕು ವ್ಯಾಪಾರ ಮಾಡುವ ಒಬ್ಬ ದೊಡ್ಡ ದಲ್ಲಾಳನ ಗುಮಾಸ್ತನಾದೆ ನಾನು. ಈ ವ್ಯಾಪಾರಸ್ಥ ಮಾತ್ರ ನಿಜವಾಗಿ ಇದ್ದವನೇ. ಸ್ಕಾಟಲಂಡ ಯಾರ್ಡದವರು

ತಪಾಸು ನಡೆಸಿದರೆ ನಿಜವಾಗಿಯೇ ನಾನು ತನ್ನ ಗುಮಾಸ್ತನೆಂದು ಹೇಳಬೇಕೆಂದು, ಆ ವ್ಯಾಪಾರಿಗೆ ಭಾರಿ ಲಂಚ ಕೊಡಬೇಕಾಯಿತು.

ಫಿರೇಲಾಯಳ ನಿರೋಪ ತೆಗೆದುಕೊಂಡು ನಾನು ಹಾಂಬುರ್ಗದಿಂದ ವಿಮಾನ ಪ್ರವಾಸ ಕೈಕೊಂಡೆ. ಆ ದಿನ ವಾತಾವರಣವು ಸ್ವಚ್ಛವಾಗಿಯೂ, ಸುಂದರವಾಗಿಯೂ ಇದ್ದಿತು. ಇನ್ನೇನಾಗುವದೋ ಎಂದು ಮನದಲ್ಲಿ ಡುಗಡುಗಿ ಇದ್ದೇ ಇತ್ತು. ನಿಲ್ದಾಣದಲ್ಲಿಯ ಅಧಿಕಾರಿಗಳು ನನ್ನ ಪಾಸ-ಪೋರ್ಟ ಬೇಡಿದರು. ಡಚ್ ಪಾಸಪೋರ್ಟ ಕೊಟ್ಟುಬಿಟ್ಟೆ. ಅದರಲ್ಲಿನ ಪ್ರತಿಯೊಂದು ಶಬ್ದವನ್ನೂ ಅವರು ತಪಾಸು ಮಾಡುವಾಗ, ನಾನು ಕಿಂಚಿತ್ ಗಾಬರಿಯಾಗಿದ್ದೆ. ಅದು ಮುಗಿದ ಮೇಲೆ ತಮ್ಮ ಬಳಿ ಇದ್ದ 'ಕಪ್ಪು' ಯಾದಿ ತೆಗೆದರು. ಅದರಲ್ಲಿ ನನ್ನ ಹೆಸರು ಹೊರಡುವದೇನೋ? ಎಂದು ಸಂದೇಹ ಅವರಿಗೆ. ಕಡೆಗೆ ಒಂದೆರಡು ಪ್ರಶ್ನೆ ಕೇಳಿ ನನ್ನನ್ನು ಬಿಟ್ಟುಬಿಟ್ಟರು. ನಾನು ಭರದಿಂದ ಲಂಡನದ ಕಡೆಗೆ ಹೋಗುವ ಒಂದು ಬಸ್ಸು ಹಿಡಿದೆ. ಸಹಜವಾಗಿಯೇ ನನಗೆ ಆಗ ಹರ್ಷವೆನಿಸಿತು. ಲಂಡನವನ್ನಂತೂ ಮುಟ್ಟಿದೆ.

ಯೂಸ್ಟನ ನಿಲ್ದಾಣದ ಬಳಿಯಲ್ಲಿ ಇರುವ ಖಾನಾವಳಿಯೊಂದರಲ್ಲಿ ನಾನು ಮುಕ್ಕಾಮು ಹಾಕಿದೆ. ನಾನು ಲಂಡನಕ್ಕೆ ಬಂದು ಯಾರ ಯಾರ ಭೆಟ್ಟಿಯಾಗಬೇಕು, ಎಂಬ ವಿಷಯ ಗೊತ್ತಾಗಿತ್ತು. ಇಲ್ಲಿಯವರಿಗೂ ಸೂಚನೆ ಬಂದಿದ್ದವು. ಆ ಜನರಲ್ಲಿ ಓರ್ವ ಆಸ್ಟ್ರೇಲಿಯನ, ಮತ್ತೊಬ್ಬ ನ್ಯೂಝಿಲಂಡದವ. ಒಬ್ಬನು ಆಯರಿಶ ಅಲ್ಲದೆ 'ಸಿಲೀ' ಎಂಬ ಜರ್ಮನ ಹುಡುಗೆಯೊಬ್ಬಳು. ಒಂದು ಅಡ್ಡ ಬೀದಿಯ ವಿಶ್ರಾಂತಿ ಗೃಹದಲ್ಲಿ ನಮ್ಮ ಸಂಘಟನೆ ಪ್ರಾರಂಭವಾಯಿತು.

ಕಾಮಿಂಟರ್ನದ ಬ್ರಿಟಿಶ ಶಾಖೆಯ ಸ್ಥಿತಿ ಒಳ್ಳೆ ಚಮತ್ಕಾರಿಕವಿತ್ತು. ಉಳಿದ ದೇಶದ ಶಾಖೆಯಲ್ಲಿ ಅಂತರ್ಗತ ಜಗಳಗಳು ನಡೆಯುವಂತೆ ನಡೆದು, ಯಾವಾಗಾದರೊಮ್ಮೆ ಅವು ವಿಕೋಪಕ್ಕೂ ಹೋಗುತ್ತಿದ್ದವು. ಈ ಬ್ರಿಟಿಶ ಶಾಖೆಯಲ್ಲಿ ಹಾಗೇನೂ ಪರಿಸ್ಥಿತಿ ಇರಲಿಲ್ಲ. ಆದರೆ ಏನು ಮಾಡಿದರೂ ಕಾರ್ಯಕ್ಷಮತೆಯ ಜೀವಂತತನವು ಅದರಲ್ಲಿ ಬಂದಿರಲಿಲ್ಲ. ಈ ಶಾಖೆ ಸ್ಥಾಪಿತವಾದ ಹತ್ತು ವರ್ಷಗಳಲ್ಲಿ ಹಾಂಬುರ್ಗ ಶಾಖೆಯ ಹತ್ತಾಂಶದಷ್ಟು

ಸಹಕಾರ್ಯ ಸಾಗಿರಲಿಲ್ಲ. ಹೀಗೆ ಏಕಾಗುವದು? ಮುಂದಿನ ಉಪಾಯವೇನು? ಇವೆರಡು ಮುಖ್ಯ ಪ್ರಶ್ನಗಳಾಗಿದ್ದವು.

ನಿರೀಕ್ಷಣೆಯಿಂದ ಕಂಡುಬಂದುದೇನಂದರೆ— ಬ್ರಿಟಿಶ ಕೆಲಸಗಾರರ ವಿಶಿಷ್ಟ ಮನೋರಚನೆಯಿಂದ ಚಳುವಳಿ ಬೆಳೆದಿಲ್ಲ. ಇನ್ನೊಂದು ಕಾರಣ- ಅಲ್ಲಿ ಮುಂದಾಳುಗಳ ಮಾನಸಿಕ ದೌರ್ಬಲ್ಯ. ಕ್ರಾಂತಿಯನ್ನು ಪ್ರತ್ಯಕ್ಷ ಉಂಟು ಮಾಡುವದಕ್ಕಿಂತ, ಅದನ್ನು ದೂರವಿರಿಸಿ, ಆ ವಿಷಯದಲ್ಲಿ ಸಮೀಚೀನ ಮಾತಾಡಬೇಕೆಂಬ ವೃತ್ತಿ ಅವರಲ್ಲಿ ಕಾಣಿಸಿತು. ಮೂರನೆಯ ಕಾರಣವೆಂದರೆ ಟ್ರೇಡ ಯೂನಿಯನದ ಮುಂದಾಳುಗಳು ಮತ್ತು ಸ್ಕಾಟಲಂಡ ಯಾರ್ಡ ಪೋಲೀಸರು. ಇವರು ಕಮ್ಯುನಿಷ್ಟ ಚಳುವಳಿ ಬೆಳೆಸುವ ಸಣ್ಣ ಸಂಗತಿಯನ್ನು ಸಹ ಸುಲಭವಾಗಿ ಮೆಲ್ಲನೆ ದೂರ ಮಾಡುವದರಲ್ಲಿ ಕುಶಲರಾಗಿದ್ದರು.

ನನ್ನಂಥ ಆಗಂತುಕನು ಬಂದು ಚಳುವಳಿಯ ಸೂತ್ರ ವಹಿಸುವೆನಲ್ಲ, ಎಂದು ಹೊಟ್ಟೆ ಉರಿದ ಯಾವುದೋ ವ್ಯಕ್ತಿ ಪೋಲೀಸರಿಗೆ ನನ್ನ ವಿಷಯ ತಿಳಿಸಿರಬೇಕು. ಒಂದು ದಿನ ಬಸ್ಸಿನಿಂದಿಳಿದು ಆಲ್ಡಗೇಟ ಸ್ಟೇಶನದ ಕಡೆಗೆ ಹೋಗುವ ರಸ್ತೆಯನ್ನು ದಾಟುತ್ತಿರುವಾಗ ಇಬ್ಬರು ದಾಂಡಿಗರು ಒಮ್ಮೆಲೇ ನನ್ನ ಮುಂದೆ ನಿಂತರು. ಮತ್ತು ನನ್ನನ್ನು ಹಿಡಿದರು.

ನಾನಂದೆ. "ಇದೇನು? ನೀವು ಇದನ್ನೇನು ನಡೆಸಿರುವಿರಿ?"

ಅವರಿಬ್ಬರೂ ತಮ್ಮ ಬಿಲ್ಲೆ ತೋರಿಸಿ ಹೇಳಿದರು.

"ನಾವು ಸ್ಕಾಟಲಂಡ ಯಾರ್ಡದವರು."

ಇವರ ವೈಶಿಷ್ಟ್ಯವೆಂದರೆ, ಉಳಿದ ದೇಶದವರಂತೆ ಅವರು ಹುಂಬಗುತ್ತಿಗೆಯವರಲ್ಲ. ಅವರು ಜಪಾನಿಯರ ಕುಸ್ತಿಯಂತೆ ಕುತ್ತಿಗೆ ಹಿಡಿಯಲಿಲ್ಲ. ಬೇಡಿಗಳನ್ನು ಮುಂದೆ ಮಾಡಲಿಲ್ಲ. ಬೀದಿಯಲ್ಲಿ ನಿಂತ ಪೋಲೀಸ ಮೋಟಾರು ತೋರಿಸಲಿಲ್ಲ. ಮೆಲ್ಲನೆ ನನ್ನನ್ನು ಚಪ್ಪರಿಸಿ ಹೇಳಿಬಿಟ್ಟರು.

"ನಮ್ಮೊಡನೆ ನೀವು ಬರಬೇಕಾಗುವದು. ನೀವು ಗುದ್ದಾಟ ಮಾಡಲಾರಿರೆಂದು ಆಶಿಸುತ್ತೇವೆ."

"ನಾನೇಕೆ ಗುದ್ದಾಟ ಮಾಡಲಿ?"

“ ನೀವೆಲ್ಲಿಗೆ ನಡೆದಿದ್ದಿರಿ ? ”

“ ಇಂದೇ ನಾನು ಇಂಗ್ಲಂಡದಿಂದ ಹೋಗಬೇಕಾಗಿದೆ. ಸಾಮಾನು ಸಟ್ಟು ಹೊಂದಿಸಿಕೊಳ್ಳಲಿಕ್ಕೆ ನನ್ನ ಮನೆಗೆ ಸಾಗಿದ್ದೆನು. ”

“ ಒಳ್ಳೇದು. ಹಾಗಾದರೆ ನಾವೂ - ನೀವೂ ಕೂಡಿಯೇ ನಿಮ್ಮ ಮನೆಗೆ ಹೋಗುವಾ. ”

ಆಲ್ಡ ಗೇಟ ಸಿಲ್ದಾಣದಲ್ಲಿ ಬಂದ ಗಾಡಿಯ ಒಂದು ಡಬ್ಬಿಯಲ್ಲಿ ಮೂವರೂ ಕುಳಿತೆವು. ದಾರಿಯಲ್ಲಿ ಅವರು ತ್ರಾಸ ಕೊಡದೇ ವಿನೋದ-ದಿಂದ ಮಾತಾಡಹತ್ತಿದರು. ಒಬ್ಬನು ವಿಚಾರಿಸಿದನು :

“ ಇಲ್ಲಿಯ ಇಂಗ್ಲಿಷ ಹುಡುಗೆಯರ ವಿಷಯಕ್ಕೆ ನಿಮ್ಮದೇನು ಅಭಿಪ್ರಾಯ ? ರಶಿಯದ ಹುಡುಗೆಯರು ಪ್ರೇಮ ಚೇಷ್ಟೆಯಲ್ಲಿ ಒಳ್ಳೇ ಬಲ್ಲಿದರಂತೆ. ”

ಒಳ್ಳೇ ಎಚ್ಚರದಿಂದ ನಾನು ಹೇಳಿದೆ. “ ನಿಜ. ನಾನೂ ಹಾಗೆ ಕೇಳಿದ್ದೇನೆ. ”

“ ಎಂದರೆ, ನೀವು ರಶಿಯನರಲ್ಲವೇ ? ”

“ ಛೀ ! ”

“ ವಾ ! ಇದೇನು ಹೇಳುವಿರಿ ? ಅದು ಹೋಗಲಿ. ನಮ್ಮ ಇಂಗ್ಲಂಡ ದೇಶ ನಿಮಗ ರುಚಿಸುವದೋ ? ”

. “ ಎಳ್ಳಷ್ಟೂ ಇಲ್ಲ. ”

“ ನೀವು ಸರಳ ರೀತಿಯಿಂದ ಬಂದಿದ್ದರೆ, ನಾವು ನಿಮ್ಮನ್ನು ಜೊತೆ ಮಾಡಿಕೊಂಡು ತಿರುಗುತ್ತಿದ್ದೆವು. ಆಗ ನಮ್ಮ ದೇಶ ನಿಮಗೆ ರುಚಿಸ-ಬಹುದಾಗಿತ್ತು. ”

“ ಕದಾಚಿತ್ ಹಾಗೂ ಆಗಬಹುದಿತ್ತು. ”

“ ಜಗತ್ತಿನಲ್ಲೆಲ್ಲ ಯಾವ ದೇಶ ಶ್ರೇಷ್ಠವೆನ್ನುವಿರಿ ? ”

“ ಅಮೇರಿಕಾ ! ”

“ ರಶಿಯಾ ಅಲ್ಲವೇ ? ”

“ ಉಂಹು. ”

ನನ್ನ ಛದ್ಮ ವೇಷ ತಿಳಿದವನಂತೆ ಚುಚ್ಚಿ ಮತ್ತೊಬ್ಬನೆಂದನು “ ನೀವು ನಮ್ಮ ಮನಸ್ಸಿನಲ್ಲಿರುವದನ್ನೇ ಮಾತಾಡುವದು ಕಂಡು ನನಗೆ ಬಹಳ ಆನಂದವೆನಿಸುವದು. ಆದರೆ ನೋಡಿ ಮಿಸ್ಟರ, ಬ್ರಿಟನದಲ್ಲಿ ನಾವು ನಿಮ್ಮ ಉಪದ್ವ್ಯಾಪ ನಡಿಯಗೊಡುವದಿಲ್ಲ. ನಮ್ಮ ದೇಶ ರಶಿಯದಂತಾಗುವದು ಬೇಡ ನಮಗೆ. ರಶಿಯಾದಲ್ಲಿ ಏಳೇಳು ಜನ ಮಲಗಲಿಕ್ಕೆ ಒಂದೇ ಹಾಸಿಗೆ ಯಂತೆ. ನಿಜವೇ ? ”

“ ನಾನೇನು ಬಲ್ಲೆ ? ನಾನೆಂದೂ ರಶಿಯಾ ನೋಡಿಲ್ಲ. ”

ನನ್ನ ಮನೆ ಮುಟ್ಟಿದ ಮೇಲೆ ಅವರು ಎಲ್ಲ ಸಾಮಾನು ತಪಾಸು ಮಾಡಿದರು. ಅಷ್ಟಾದ ಮೇಲೆ ನಿಮ್ಮ ಅರಿವೆ ಕಳೆದಿಡಬೇಕೆಂದೂ ಪ್ರಸಂಗ ತಂದರು. ಎಲ್ಲಿಯೂ ಏನೂ ಸಿಗದಾದ ಕೂಡಲೇ ಮರುಸವಾಲು ಮಾಡುವ ವಕೀಲರಂತೆ ನನ್ನ ಮೇಲೆ ಪ್ರಶ್ನೆಗಳ ಮಳೆಗರೆಯಹತ್ತಿದರು. ಉಪಯುಕ್ತ ಶಬ್ದ ಒಂದೂ ನನ್ನ ಬಾಯಿಂದ ಬರದೆಂದು ತಿಳಿದಕೂಡಲೇ, ಎಲ್ಲಿ ಬಡಿಯು ವರೋ ಎಂದುಕೊಂಡಿದ್ದೆ. ಆ ಛಲ ತಾಳಲು ಮನಸ್ಸನ್ನೂ ಗಟ್ಟಿ ಮಾಡಿದ್ದೆ ಹಾಗೇನೂ ಆಗಲಿಲ್ಲ. ನನ್ನ ಧೂರ್ತತನಕ್ಕೆ ವಿನೋದದ ರೂಪ ಕೊಟ್ಟು ಅವರು ಬಿದ್ದು ಬಿದ್ದು ನಕ್ಕರು.

ಒಬ್ಬನೆಂದನು “ ನೀನು ಪಕ್ಕಾ ಇರುವೆಯಯ್ಯಾ ! ಇದು ನೋಡು, ನೀನು ನಮ್ಮಲ್ಲಿ ಏಕೆ ನೌಕರಿಗೆ ಇರುವದಿಲ್ಲ ? ಯಾರ ನೌಕರಿ ನೀನು ಮಾಡುತ್ತಿರುವೆಯೋ ಅವನೆಷ್ಟು ಪಗಾರ ಕೊಟ್ಟಾನು ? ನಮ್ಮಲ್ಲಿ ಸಾಕಷ್ಟು ಪಗಾರ ಸಿಕ್ಕು ಚೈನಿಯಿಂದ ಇರಲು ಸಾಧ್ಯ. ”

ನಾನೆಂದೆ “ ನಿಮಗೆ ಒಂದು ಸಾರೆ ಹೇಳಲಿಲ್ಲವೇ ನನಗೆ ಇಂಗ್ಲಂಡ ದೇಶವು ರುಚಿಸುವದಿಲ್ಲವೆಂದು. ”

“ ಇಲ್ಲಿಂದ ನೀನು ಎಲ್ಲಿಗೆ ಹೋಗುವವ ? ”

“ ಜರ್ಮನಿಗೆ. ಅಲ್ಲಿ ನನ್ನ ಚಲುವೆ ಇದ್ದಾಳೆ. ”

" ಹುಂ; ನೀನು ತಿಳಿದುಕೊಂಡಷ್ಟು ಬೇಗ ಅವಳ ಭೆಟ್ಟಿ ನಿನಗಾಗಲಾರದು. ನಿನ್ನ ಮೇಲೆ ಆರೋಪವಿಟ್ಟು ಇಲ್ಲಿ ನಿನ್ನನ್ನು ಕೊಳೆ ಹಾಕುವದು ನಮಗೇನೂ ಕಠಿಣವಿಲ್ಲ. "

" ನಿಮಗೆ ಬೇಕಾದಂತೆ ಮಾಡಿಬಿಡಿ. "

ಪರದೇಶಗಳ ಗುಪ್ತ ಹೇರರನ್ನು ಬೇರೆ ಬೇರೆ ದೇಶಗಳಲ್ಲಿ ಹೇಗೆ ನಡೆಸಿಕೊಳ್ಳುವರೆಂಬುದಕ್ಕೆ ಕಾಮಿಂಟರ್ನದಲ್ಲಿ ಒಂದು ಸುಭಾಷಿತವಿದೆ. " ರಶಿಯದಲ್ಲಿ ಮಣ್ಣುಗೂಡಿಸುವರು. ಇತರ ದೇಶದಲ್ಲಿ ಅವನ ಬೆನ್ನಮೇಲೆ ಪೆಟ್ಟುಹಾಕಿ ಪಕಾಲಪಟ್ಟಿ ಮಾಡುವರು. ಇಂಗ್ಲಂಡದಲ್ಲಿ ಮಾತ್ರ ನಮಸ್ಕಾರ, ದೊಡ್ಡವರಿದ್ದೀರಿ ಎಂದು ಹೇಳಿ ಗಡಿ ದಾಟಿಸುವರು. ಇದು ಸತ್ಯವೆಂದು ಅನುಭವಕ್ಕೆ ಬಂದಿತು. ಕಡೆಗೆ ಒಬ್ಬನು ಹೇಳಿದನು. " ಖಟ್ಲಿ, ಶಿಕ್ಷಾ, ಮುಂತಾದ ಉಪದ್ವ್ಯಾಪಗಳಿಗೆ ನಮಗೆ ವೇಳೆ ಇಲ್ಲ. ನಿನ್ನಂಥ ಬದಮಾಷರು ಭೆಟ್ಟಿಯಾದರೆ, ಅವರು ಎಲ್ಲಿಂದ ಬಂದಿರುವರೋ ಅಲ್ಲಿಗೆ ಪಾರ್ಸಲು ವಾಪಸು ಮಾಡುವದು, ಕಪ್ಪು ಯಾದಿಯಲ್ಲಿ ಹೆಸರು ಬರೆದುಕೊಳ್ಳುವದು ನಮ್ಮ ಸರಕಾರದ ಕಾರ್ಯ. ಬೆಳಿಗ್ಗೆ ಒಂದು ಹಡಗದಲ್ಲಿ ನಿನ್ನನ್ನು ಹತ್ತಿಸುವೆವು. ಇರಲಿ. ನಿನ್ನ ಪಾಸಪೋರ್ಟನ್ನಷ್ಟು ಇಲ್ಲಿ ತಾ. "

" ಇಷ್ಟೆಯೊ? ನನ್ನ ಫೋಟೋ ತೆಗೆದುಕೊಳ್ಳುವದಿಲ್ಲವೇ ನೀವು? ನನ್ನ ಹೆಬ್ಬಟ್ಟಿನ ಗುರುತು ನಿಮಗೆ ಬೇಡವೋ? "

ನನ್ನ ಮನದಲ್ಲಿ ಸಂದೇಹ ಉಂಟಾಗಿದ್ದಿತು. ಇವರಿಬ್ಬರು ಪೋಲೀಸರೋ? ವೇಷಧಾರಿಗಳೋ? ನನ್ನೊಡನೆ ಇಷ್ಟು ಸರಳ ಮತ್ತು ನಿರ್ಭಯವಾಗಿ ಏಕೆ ವರ್ತಿಸುತ್ತಾರೆ. ಪೋಲೀಸ ಚೌಕಿಗೆ ಏಕೆ ಕರೆದೊಯ್ಯುವದಿಲ್ಲ?

ಮತ್ತೆ ನಾನು ಹೇಳಿದೆ. " ನೀವು ನಿಜವಾದ ಪೋಲೀಸರೆಂದು ಹೇಗೆ ನಂಬಬೇಕು? ಸ್ಕಾಟಲಂಡ ಯಾರ್ಡದ ಬಿಲ್ಲೆಯನ್ನು ಬೇಕಾದವರು ದೊರಕಿಸಬಹುದು. "

ತಮ್ಮ ಜೇಬಿನಲ್ಲಿದ್ದ ಕಾರ್ಡುಗಳನ್ನು ಅವರಿಬ್ಬರು ತೋರಿಸಿದರು. ಬ್ರಿಟಿಶ ಪೋಲೀಸು ಖಾತೆಯ ವಿಷಯಕ್ಕೆ ನನ್ನಲ್ಲಿ ಆದರ ದ್ವಿಗುಣಿಸಿತು.

ಅವರಲ್ಲೊಬ್ಬರ್ವ ಮಾತಾಡಿದನು “ ನೀನು ಸಭ್ಯನಿರುವೆ, ನಾವೂ ಸಭ್ಯರೇ. ನಾವು ನಿನ್ನನ್ನು ಹಿಡಿದು ತಿರುಗಿ ಕಳಿಸುತ್ತೇವೆ. ಇದೊಂದು ಉಪಕಾರವೆಂದು ತಿಳಿ. ಹೆಚ್ಚು ಗೊಂದಲ ಮಾಡುವದರಲ್ಲಿ ಅರ್ಥವೇನು? ಆದರೆ ಒಳ್ಳೆ ಸಂಬಳ ನಿನಗೆ ಬೇಕೆನಿಸಿದರೆ, ಅಂದೇ ನಮಗೊಂದು ಪತ್ರ ಬರೆ. ”

ನನ್ನ ಮೇಲೆ ಕಣ್ಣಿಡುವದಕ್ಕಾಗಿ ಒಬ್ಬನು ರಾತ್ರಿ ಎಲ್ಲ ನನ್ನ ಕೊಟ್ಟಡಿಯಲ್ಲೇ ಉಳಿದನು. ನನಗೆ ನಮಸ್ತೇ ಮಾಡಿ, ಇಂಗ್ಲಂಡದಿಂದ ವಿಸರ್ಜಿಸುವದಕ್ಕಾಗಿ ಒಬ್ಬ ಹೊರಟು ಹೋದನು. ಬೆಳಗಿನಲ್ಲಿಯೇ ಇನ್ಸಪೆಕ್ಟರರೊಡನೆ ಆತ ಬಂದುಬಿಟ್ಟ. ನಾನು ಬ್ಯಾಗಿನಲ್ಲಿ ಸಾಮಾನು ತುಂಬುತ್ತಿರುವಾಗ ಇನ್ಸಪೆಕ್ಟರನೆಂದ :

“ ನಿನ್ನ ಸಾಮಾನುಗಳಲ್ಲಿ ಒಂದೂ ಸಂಶಯಾಸ್ಪದ ಕಾಗದಗಳನ್ನಿಟ್ಟಿಲ್ಲವೆಂದಮೇಲೆ ನೀನು ಧೂರ್ತ ನಿಜ. ಈಗ ಒಂದು ಮಾತ್ರ ಉಪಕಾರ ಮಾಡು. ಪುನಃ ಇಂಗ್ಲಂಡಕ್ಕೆ ಬರಬೇಡ. ಇಲ್ಲಿ ನಿನ್ನ ಕೆಲಸವಂತೂ ಸಾಗುವದಿಲ್ಲ. ಸುಮ್ಮನೇ ನಮಗೆ ಕಿಟಿಕಿಟಿ. ”

ಪೋಲೀಸರ ಪಹರೆಯಲ್ಲಿ ಬಂದರಕ್ಕೆ ಬಂದೆ. ಒಂದು ಹಡಗಿನಲ್ಲಿ ನನ್ನನ್ನು ಕೂಡಿಸಿದರು. ಸಮುದ್ರದಲ್ಲಿಯು ಬ್ರಿಟಿಶ ಸೀಮೆ ತೀರುವತನಕ ಒಬ್ಬ ಗುಪ್ತ ಪೋಲೀಸನು ನನ್ನ ಸಂಗಡವಿದ್ದನು. ಆ ಸೀಮೆ ತೀರಿತು. ಹೋಗ ಹೋಗುತ್ತ ನನಗೆ ಬಜಾಯಿಸಿದನು.

“ ಗುಡಬಾಯ ! ಮೆಹರಬಾನಿಗೆ ಮಾಡಿ ಪುನಃ ಇತ್ತ ಬರಬೇಡಿರಿ. ”

ನಾನು ಬಂದು ಇನ್ನೂ ಬಹಳ ದಿನಗಳಾಗಿರಲಿಲ್ಲ. ಒಂದು ದಿನ ಆಲ್ಬರ್ಟ ವಾಲ್ಟರನು ಹುಕುಮು ಕೊಟ್ಟನು. ಪುನಃ ನೀನು ಇಂಗ್ಲಂಡಕ್ಕೆ ಹೋಗಬೇಕು.

ಅದು ಚಮತ್ಕಾರವೆನಿಸಿ ನಾನಂದೆ. “ ನನ್ನನ್ನು ದಬ್ಬಿಕೊಟ್ಟ ಕೈ ಇನ್ನೂ ಅವರದಾರಿಲ್ಲ ! ”

“ ಅದೆಲ್ಲ ನನಗೆ ಗೊತ್ತು. ಗೊತ್ತಿದ್ದೇ ನಾನು ಪುನಃ ನಿನ್ನನ್ನು ಕಳಿಸುವೆನು. ಇಷ್ಟು ಬೇಗ ನೀನು ಬರುವೆ ಎಂದು ಅವರ ಕಲ್ಪನೆ-

ಯಾಗುವದು ಶಕ್ಯವಿಲ್ಲ. ಅದಕ್ಕಾಗಿ ನೀನು ಹೋದರೆ ನಿನ್ನ ಪ್ರವೇಶ ಸಹಜವಾಗುವದು. ''

ಈ ಸಮಯದಲ್ಲಿ ಮತ್ತೊಂದು ತರದ ಬೇರೆ ಪಾಸಪೋರ್ಟ ಕಾಗದ-ಪತ್ರಗಳು ನನಗಾಗಿ ಸಿದ್ಧವಾದವು. ಕೈಯಲ್ಲಿ ಒಂದೂವರೆ ಸಾವಿರ ರೂಪಾಯಿ ಕೊಟ್ಟರು. ಈ ಸಾರಿ ಲಂಡನ ಬಿಟ್ಟು ಗ್ಲಾಸಗೋಕ್ಕೆ ನಾನು ಹೋಗಬೇಕೆಂದು ನಿರ್ಧರಿಸಲ್ಪಟ್ಟಿತು. ಗ್ಲಾಸಗೋದ ಬ್ರಿಟಿಶ ನಾವಿಕ ಶಾಖೆಯವರು, ಮುಖ್ಯ ಯುನಿಯನದ ವರ್ಚಸ್ವ ಲಕ್ಷಿಸದೇ ಸ್ವತಂತ್ರವಾಗಿ ವರ್ತಿಸುತ್ತಿದ್ದರು. ಈ ಶಾಖೆಯಲ್ಲಿ ಮೂವರು ಕಮ್ಯುನಿಷ್ಟರು ಇರುವರೆಂದು ತಿಳಿದುಬಂದಿತು. ಆ ಮೂವರನ್ನು ಒಡೆದುಕೊಂಡು, ಸಂಪೂರ್ಣ ಶಾಖೆಯನ್ನೇ ಕಮ್ಯುನಿಷ್ಟ ನಿಯಂತ್ರಣದಲ್ಲಿ ತರುವ ಕಾರ್ಯ ನನ್ನ ಪಾಲಿಗೆ ಬಂದಿತ್ತು.

ಒಂದು ಬ್ರಿಟಿಶ ಕಂಪನಿಯ ಸಣ್ಣ ಮಾಲಿನ ಹಡಗು ನ್ಯೂ ಕ್ಯಾಸಲದ ಕಡೆಗೆ ಹೋಗುತ್ತಿದ್ದಿತು. ಅದರಿಂದಲೇ ನಾನು ಹೊರಟೆ ನಾನಲ್ಲದೇ ಇನ್ನೊಬ್ಬ ಪ್ರವಾಸಿ ಅದರಲ್ಲಿದ್ದ. ನಮ್ಮಿಬ್ಬರ ಮೈತ್ರಿ ಕೂಡಿತು. ನ್ಯೂ ಕ್ಯಾಸಲ ಸಮೀಪಿಸಿತು. ಟಾಯಿನ ನದಿಯಲ್ಲಿ ಹಡಗು ನಡೆದಿತು. ಆಗ ಅವನು ನುಡಿದನು :

'' ಇಳಿದುಕೊಳ್ಳಲಿಕ್ಕೆ ನಮ್ಮ ಮನೆಗೇ ನಡೆಯಿರಿ. ಎರಡು ದಿನ ನಮ್ಮ ಸತ್ಕಾರ ಕೈಕೊಳ್ಳಿ. ಆ ಮೇಲೆ ಬೇಕಾದ ಕಡೆಗೆ ಹೋಗಿಬಿಡಿ. '' ನಾನು ಮನಸ್ಸಿನಲ್ಲಿಯೇ ಅಂದುಕೊಂಡೆ. ಇಂಥ ಪ್ರತಿಷ್ಠಿತ ನಾಗರಿಕನ ಅತಿಥಿಯಾಗಿ ನಗರದಲ್ಲಿ ಪ್ರವೇಶಿಸಿದರೆ ಪೋಲೀಸರ ಉಪದ್ರವ ಕಡಿಮೆಯಾಗಬಹುದು. ನಾನು ಆಮಂತ್ರಣ ಸ್ವೀಕರಿಸಿದೆ.

ಆದರೆ ಬ್ರಿಟಿಶ ಪೋಲೀಸರ ಹದ್ದಿನ ಕಣ್ಣಿನ ಮುಂದೆ ನನ್ನ ಯುಕ್ತಿ ಏನೂ ಉಪಯೋಗವಾಗಲಿಲ್ಲ. ಹಡಗು ನಿಂತಕೂಡಲೇ ಸಾದಾ ಉಡುಪಿನ ಇಬ್ಬರು ಲಠ್ಠಮುಠ್ಠ ಪೋಲೀಸರು, ನನ್ನ ಕೊಟ್ಟಡಿ ಹೊಕ್ಕು ನನಗೆಂದರು '' ನಿಮ್ಮ ಪಾಸಪೋರ್ಟ ತೋರಿಸಿರಿ ನೋಡುವಾ. ನಿಮ್ಮ ವಿಷಯಕ್ಕೆ ನಮಗೆ ಮೊದಲೇ ಸೂಚನೆ ಬಂದಿದೆ. ''

ನನ್ನ ಪಾಸಪೋರ್ಟು ಅವರ ಕೈಯಲ್ಲಿ ಕೊಟ್ಟು, ನಿರಾಶೆಯ ಆಘಾತ ಸಹಿಸುತ್ತ, ನನ್ನ ಕುರ್ಚಿಯ ಮೇಲೆ ಕುಳಿತೆ. ನನ್ನ ಪಾಸಪೋರ್ಟಿನ ಪ್ರತಿ ಅಕ್ಷರವನ್ನು ಅವರು ಸೂಕ್ಷ್ಮದರ್ಶಕ ಯಂತ್ರದಿಂದ ನೋಡಲು ಪ್ರಾರಂಭಿಸಿದರು. ನನಗೆ ಆಮಂತ್ರಣ ಕೊಟ್ಟ ಗೃಹಸ್ಥ ಯಾವಾಗಲೋ ಇಳಿದು, ಬಂದರದಲ್ಲಿ ಹೋಗಿದ್ದನು. ನಾನು ಬೇಗನೆ ಬರುವಂತೆ ತನ್ನ ಮೋಟಾರಿನ ಹಾರ್ನ ಬಾರಿಸಹತ್ತಿದ್ದನು. ಬೇಸತ್ತು ಅವನು ಹೊರಟು ಹೋಗಿರಬಹುದು. ಆ ಇಬ್ಬರೂ ಡಿಟೆಕ್ಟಿವ್ಹರು ನನ್ನ ಪಾಸಪೋರ್ಟಿನ ಮೇಲೆ ಬೊಟ್ಟು ಚುಚ್ಚುತ್ತ ನನ್ನನ್ನು ಕೆಕ್ಕರಿಸಿ ನೋಡಿ ಮಾತಾಡಿದರು.

“ ಇದು ಖೊಟ್ಟಿ ಪಾಸಪೋರ್ಟು. ”

ಆ ಮೇಲೆ ನನ್ನ ಸಾಮಾನುಗಳ ಝಡತಿ ಮಾಡಿದರು. ಗುಪ್ತ ಕೆಲಸಕ್ಕಾಗಿ ಪರದೇಶಕ್ಕೆ ಹೋಗುವ ಪ್ರಚಾರಕನು ತನ್ನ ಕಾರ್ಯದ ಕಾಗದಪತ್ರಗಳನ್ನು ಸಂಗಡ ಒಯ್ಯಬಾರದು. ಅವು ಬೇರೆ ದೂತರಿಂದ ಮುಟ್ಟುವ ವ್ಯವಸ್ಥೆ ಇರಬೇಕು, ಎಂಬುದು ನಮ್ಮದೊಂದು ಕಲಮು. ಹೀಗಾಗಿ ಝಡತಿಯಲ್ಲಿ ಅವರಿಗೆ ಏನೂ ಸಿಗಲಿಲ್ಲ. ಪ್ರಶ್ನೆಗಳ ಸುರಿಮಳೆ ಸಾಗಿತು. ಆದರೆ ನಾನು ಸ್ವಚ್ಛ ಹೇಳಿಬಿಟ್ಟೆ. ನಿಮ್ಮ ಒಂದೂ ಪ್ರಶ್ನೆಗೆ ಉತ್ತರ ಕೊಡುವದು ನನ್ನ ಇಚ್ಛೆ ಇಲ್ಲ. ಅವರೆಂದರು. “ ಒಳ್ಳೇದು. ಹಾಗಾದರೆ ನಡೆಯಿರಿ. ನಮ್ಮೊಡನೆ. ”

ಬಂದರದಲ್ಲಿದ್ದ ಪೋಲೀಸು ಠಾಣೆಗೆ ನನ್ನನ್ನು ಒಯ್ದರು. ಕೋಣೆಯಲ್ಲಿ ಹಾಕುವದಕ್ಕಿಂತ ಮೊದಲು ಚಹಾ ಮುಂತಾದವುಗಳನ್ನು ಮಾತ್ರ ಸಾಕಷ್ಟು ಕೊಟ್ಟರು. ಮಧ್ಯರಾತ್ರಿ ಕಳೆದಮೇಲೆ, ಆ ಕೋಣೆ ಬಿಡಿಸಿ ಮುಂದಿನ ಕೊಟಡಿಗೆ ಒಯ್ದರು. ನಾನು ಭಾವಿಸಿದೆ. ಇಲ್ಲಿ ಸೂಕ್ಷ್ಮ ತಪಾಸು ನಡೆಯುವದು ಎಂದು. ಆದರೆ ಅಲ್ಲಿ ಒಬ್ಬನೂ ಗುಪ್ತ ಪೋಲೀಸನಿರಲಿಲ್ಲ. ಆಶ್ಚರ್ಯವೆನಿಸಿತು. ಕುರ್ಚಿಯಲ್ಲಿ ಕುಳಿತ ಒಬ್ಬನೇ ಒಬ್ಬ ಅಧಿಕಾರಿ ನಾವಿಕ ದಲದ ಗಣವೇಷ ಹಾಕಿಕೊಂಡಿದ್ದ. ಅವನ ಮೋರೆಯಲ್ಲ ಸುಕ್ಕುಗಟ್ಟಿ ಹೋಗಿತ್ತು. ಬಹಳ ದಿನ ನಿದ್ದೆ ಇರಲಿಲ್ಲವೇನೋ ?

ನನಗೆ ಕಸಕ್ಕನೇ ಅವನೆಂದನು. “ ಖೊಟ್ಟಿ ಪಾಸಪೋರ್ಟು ತೆಗೆದುಕೊಂಡು ನೀನು ಇಂಗ್ಲಂಡಕ್ಕೆ ಏಕೆ ಬಂದೆ ಹೇಳು. ”

“ ಉತ್ತರ ಕೊಡಲು ನನ್ನ ಇಚ್ಛೆ ಇಲ್ಲ. ”

“ ಏನು ಹೇಳುವೆ? ಇಚ್ಛೆ ಇಲ್ಲವೋ? ”

“ ಹುಂ. ”

ಆಗಿನ ಅವನ ಕೈಕಾಲು ಅಪ್ಪಳಿಸುವದೇನು? ಸಂತಾಪದಿಂದ ಬಡಬಡಿಸುವದೇನು? ನನಗೆ ಖಾತ್ರಿಯಾಗಿಬಿಟ್ಟಿತು. ನಾನೊಬ್ಬ ದೊಡ್ಡ ಹುಚ್ಚನ ಕೈಯಲ್ಲಿ ಸಿಕ್ಕಿಕೊಂಡೆ. ನಾನು ಹಿಂದೆ ಹಿಂದೆ ಸರಿಯುತ್ತ ಕಡೆಗೆ ಗೋಡೆಗೆ ಆತುನಿಂತೆ. ನನ್ನ ಮೇಲೆ ಜಿಗಿಯಬೇಕೆಂದೋ ಏನೋ? ಅವನು ಒಂದೊಂದೇ ಹೆಜ್ಜೆ ಮುಂದೆ ಬರುತ್ತಿದ್ದ.

ಒಮ್ಮೆಲೇ ಕೂಗಿದನು. “ ನನ್ನೊಡನೆ ಮಾತಾಡುವಾಗ, ಪ್ರತಿಯೊಂದು ಸಾರೆ ಮಹಾರಾಜ! ಎಂದು ಹೇಳುತ್ತೀರು. ಭಲೆ ಬುದ್ಧಿವಂತಾ! ನಾನು ಯಾರೆಂದು ತಿಳಿದಿರುವೆ? ಮಹಾರಾಜನೆಂದು ಹೇಳು. ”

ಮೈಯಲ್ಲಿ ಸಂಚಾರವಾದವರಂತೆ ಅವನ ಅಕಲ್ಪಿತ ಅವತಾರ ನೋಡಿ ನಾನು ಚಕಿತನಾದೆ. ಮೆಲ್ಲನೆ ಅಂದೆ. “ ಹುಂ ಮಹಾರಾಜ! ”

ಅವನು ಚೀರಿದ. “ ನೀವು ಸುಡುಗಾಡಿಗೆ ಏಕೆ ಹೋಗುವದಿಲ್ಲ? ಕಮ್ಯುನಿಷ್ಟರು ಒಮ್ಮೆ. ಜಗತ್ತಿನ ಹೋಳಿ ಮಾಡಬೇಕೆಂದಿದ್ದೀರಿ, ಅಲ್ಲವೇ? ನಾನು ಜೀವಂತನಿರುವವರೆಗೆ ಮಾತ್ರ ಊಹುಂ! ಹಿಂದಿನ ಮಹಾಯುದ್ಧದಲ್ಲಿ ಅಡಗಿಕೊಂಡು ಕುಳಿತು ನಮ್ಮ ಹಡಗು ಮುಳುಗಿಸುತ್ತಿದ್ದ ಜರ್ಮನರಂತೇ ನೀವು ಮೂರ್ಖರಿದ್ದೀರಿ. ಅಲ್ಲ ಅವರಿಗಿಂತ ಜಾಸ್ತಿ! ”

ಅವನ ಮಾತು ಕೇಳಿ ಮೊದಲು ನನಗೆನಿಸಿತ್ತು. ಏನಾದರೂ ಯದ್ವಾ-ತದ್ವಾ ಮಾತಾಡಿ, ನನ್ನನ್ನು ಗಾಬರಿಗೊಳಿಸಿ, ನನ್ನ ಕಬೂಲಿ ಜವಾಬು ತಕ್ಕೊಳ್ಳುವ ಇದೊಂದು ಆಟ. ಆದರೆ– ಬರಬರುತ್ತ ಅವನೋರ್ವ ತಲೆತಿರುಕನೆಂದು ತಿಳಿದುಬಂದಿತು. ಕೈಕಾಲು ಅಪ್ಪಳಿಸಿ, ಸಂತಾಪದಿಂದ ಬಡಬಡಿಸಿಕೊಂಡು ಅವನು ದಣಿವಕೂಡಲೇ ಪುನಃ ನನ್ನನ್ನು ಕೊಟ್ಟಡಿಗೆ ಕಳಿಸಿದರು.

ನನ್ನ ಹಾಸಿಗೆ ಅಲ್ಲಿ ಸ್ವಚ್ಛವಾಗಿತ್ತು. ಒಳಿಯಲ್ಲಿ ಹೊತ್ತಿದ ಒಂದು ಅಗ್ಗಿಷ್ಟಿಕೆ ಇಟ್ಟಿದ್ದರು. ನಿದ್ದೆ ಚನ್ನಾಗಿಯೇ ಹತ್ತಿತು. ಮರುದಿನ ಆ ಹಿಂದಿನ ಗುಪ್ತ ಪೋಲಿಸರು ಬಂದರು. ಆಗ ರಾತ್ರಿಯ ಅಧಿಕಾರಿ ವೃತ್ತಾಂತ

ತಿಳಿಸಿದನು. ಅವರು ಕ್ಷಮೆಯಾಚಿಸಿ ಕತೆ ಹೇಳಿದರು. ಕಳೆದ ಮಹಾಯುದ್ಧದಲ್ಲಿ ಒಂದು ಜರ್ಮನ ಟಾರ್ಪೇಡೊ, ಆವನ ಹಡಗಿಗೆ ಹೊಡೆದಿತ್ತು. ಆಗ ಇವನ ತಲೆಬುರುಡೆ ಬಿಚ್ಚಿದಕಾರಣ, ಅವನು ಬೆಳ್ಳಿಯ ತಲೆಬುರುಡೆ ಉಪಯೋಗಿಸುತ್ತಿದ್ದನಂತೆ !

ನ್ಯೂ ಕ್ಯಾಸಲದ ಜೇಲಿನಲ್ಲಿ ಎರಡು ದಿನ ಹಾಗೇ ಇಟ್ಟರು. ಹೊಟ್ಟೆಯಲ್ಲಿದ್ದ ಹರಳು ಕರಗುವಂತೆ ಕೇಳಿದರೂ, ಅವರಿಗೆ ಉಪಯೋಗವಾಗುವ ಒಂದೂ ಅಕ್ಷರ ನನ್ನ ಬಾಯಿಂದ ಬರುವದಿಲ್ಲವೆಂದು ಅವರಿಗೆ ಖಾತ್ರಿಯಾಯಿತು. ಆಮೇಲೆ- ಅಂತಿಂಥ ಮಾತು ಆರಂಭವಾದವು. ಒಂದು ಸಾರೆ ದಬ್ಬಿಸಿಕೊಂಡು ಹೋದರೂ, ಪುನಃ ಬಂದುದಕ್ಕೆ ಅವರು ನನ್ನ ಗೋಳು ಹುಯ್ದರು. ನಾನೂ ವಿನೋದವಾಗಿ ಅವರಿಗೆ ಪ್ರಶ್ನಿಸಿದೆ. "ಏನಯ್ಯಾ ? ನಾನು ಇಲ್ಲಿಗೆ ಬರುತ್ತೇನೆ. ಎಂಬುದು ನಿಮಗೆ ಹೇಗೆ ತಿಳಿದಿತು. ಸ್ಕಾಟಲಂಡಯಾರ್ಡ ಗುಪ್ತಚಾರರು ಯಾರೋ ಇರುವರೆಂದು ಕಾಣುತ್ತದೆ ಹಾಂಬುರ್ಗದಲ್ಲಿ." ಆದರೆ ಅವರೂ ಪಕ್ಕಾ. ನಗೆಯಿಂದಲೇ ಹೇಳಿಬಿಟ್ಟರು. "ಅಯ್ಯೋ ಮರುಳಾ! ನಮಗೇತಕ್ಕೆ ಬೇಕು ಗುಪ್ತಹೇರರು? ಸುಮ್ಮನೇ ಗಾಳಿ ಮೂಸಿನೋಡಿ ಯಾರು ಬರುವರೆಂಬುದು ತಿಳಿಯುತ್ತೇವೆ ನಾವು."

ಪುನಃ ಇಂಗ್ಲಂಡದಿಂದ ನಮಗೆ- ನಮಸ್ತೇ. ಬಂದ ಹಡಗದಿಂದಲೇ ಪುನರ್ಗಮನ. ಇಂಗ್ಲಂಡಕ್ಕೆ ಹೋಗುವದರಿಂದ ಉಪಯೋಗವಿಲ್ಲ ಎಂದು ಸಿದ್ಧವಾಯಿತು. ಸ್ಕಾಟಲಂಡಯಾರ್ಡದವರು ಒಮ್ಮೆ ಒಬ್ಬನನ್ನು ನೆನಪಿಟ್ಟರೆಂದರೆ ಆಯಿತು. ಅವನು ಬೇಕಾದಂಥ ಸೋಗಿನಿಂದ ಬರಲಿ. ಉಪಯೋಗವಿಲ್ಲ. ಕಾಮಿಂಟರ್ನಕ್ಕೆ ಇಂಗ್ಲಂಡದ ಭಯ ಅಷ್ಟೇನಿಲ್ಲ. ಇದು ನಿಜ. ಆದರೂ, ಅಲ್ಲಿ ಕಾಮಿಂಟರ್ನದ ಬೇಳೆ ಬೆಯ್ಯುವದಿಲ್ಲ. ಇದೂ ನಿಜ.

ನಾನು ಮನೆಗೆ ತಿರುಗಿಬಂದುದಕ್ಕೆ ಫಿರೇಲಾಯುಳಿಗೆ, ಅವರ್ಣನೀಯ ಆನಂದವಾಯಿತು. ಮೊದಲಿಗಿಂತ ಸುಂದರಳಾಗಿ ಆಕೆ ಕಂಡಳು. ನನ್ನ ಹೃದಯ ಹಿಂದೆಂದೂ ಇಲ್ಲದ ಪ್ರೇಮದಿಂದ ತುಂಬಿತು. ಅಂದು ೧೯೩೨- ಸಪ್ಟಂಬರ ೨೫ನೇ ತಾರೀಖು. ಮುಂದೆ ಎರಡು ದಿನಕ್ಕೆ ಆಕೆ ಹಡೆದಳು. ಫಿರೇಲಾಯುಳಿಗೆ ಪ್ರಸೂತ ವೇದನೆಗಳು ಎಷ್ಟು ತೀವ್ರವಾಗಿದ್ದವು. ಎಂಥ

ಧೈರ್ಯದಿಂದ ಆಕೆ ಸಹಿಸುತ್ತಿದ್ದಳು. ಇದನ್ನೆಲ್ಲ ನೋಡಿ ನಾನು ವಿಚಾರಿಸಿದೆ. ಮನುಷ್ಯನ ವೈಯಕ್ತಿಕ ಜೀವನದಲ್ಲಿ ಕ್ರಾಂತಿಗಿಂತ ಅಪತ್ಯಜನ್ಮವು. ಹೆಚ್ಚು ಹಿರಿದಾದ ಮಹತ್ವದ ಘಟನೆ ಎಂದು ಹೇಳಬೇಕಾಗುವದು. ಅಪತ್ಯಜನ್ಮ—ಮತ್ತು ಕ್ರಾಂತಿ ಎರಡರಲ್ಲಿಯೂ ಎಷ್ಟು ಸಾಮ್ಯ? ಎರಡರಲ್ಲಿಯೂ ಅತೀವ-ದುಃಖ. ಅತೀವ ವೇದನಾ! ದೇಹದಲ್ಲಿನ ರಕ್ತದ ಬೆಲೆ ಕೊಟ್ಟೇ ಎರಡೂ ದೊರೆಯುವವು. ಎರಡರಲ್ಲಿಯೂ ನವಜೀವನದ ಪ್ರಾರಂಭ. ಆದರೆ— ಆ ಜೀವನ ಓಘ— ಹೇಗೆ ತಿರುಗೀತು. ಎಂಬುದು ತಿಳಿಯಲಿಕ್ಕೆ ಮೊದಲು ಸಾಧ್ಯವಿಲ್ಲ! ......

ಕಡೆಗೆ ಬಾಣತಿತನಕ್ಕೆ ಬಂದ ಡಾಕ್ಟರರು ಹೇಳಿದರು. “ ಹುಡುಗ ಹುಟ್ಟಿದೆ. ” ಇದನ್ನು ಕೇಳಿ ಫಿರೇಲಾಯ ಹರ್ಷಾತಿಶಯದಿಂದ ನುಡಿದಳು. “ ಹುಡುಗ! ಜಾನ, ಕೇಳಿದೆಯಾ? ಅಹಾ ಎಂಥ ಎಂಥ ಆನಂದದ ಸಂಗತಿ!”

ಕೂಡಲೇ ಭಯದಿಂದ ಕೇಳಿದಳು. “ ನನ್ನ ಕೂಸು ಇನ್ನೂ ಅಳಲಿಲ್ಲವಲ್ಲ? ಹೀಗೇಕೆ? ”

ಅದೇ ಕ್ಷಣದಲ್ಲಿ ಬಾಲರೋದನ ಕೇಳಿತು. ಕೂಡಲೇ ಸಂತೋಷದಿಂದ ಆಕೆ ಹೇಳಿದಳು. “ ಕೇಳಿದೆಯಾ? ನನ್ನ ಕೂಸು! ಅಹಾ, ಎಂಥ ಆನಂದವಿದು ?

ಆಕೆಯ ಆನಂದದ ಆ ಮೃದು ನುಡಿಯಿಂದ, ನನ್ನ ಚಿಕ್ಕ ಮಂದಿರವಷ್ಟೇ ಏಕೆ? ವಿಶ್ವವೆಲ್ಲ ತುಂಬಿತೆಂದು ನಾನು ಭಾವಿಸಿದೆ.

ನಮ್ಮ ಕೂಸಿಗೆ – ಜಾನ – ಎಂದು ಹೆಸರಿಟ್ಟೆವು.

ಮಾಘ- ಶು- ೧೨- ಸಂಧ್ಯಾಕಾಲ- ೬॥ ಗಂಟೆ-

## ೧೧

ಒಂದು ದಿನ ಅಸ್ಸ್ವರ್ಥಾಎಲಮಾನನನ್ನು ನಾನು ವಿಚಾರಿಸಿದೆ. “ ಹಿಟ್ಲರನ ಕೈಯಲ್ಲಿ ಅಧಿಕಾರ ಬಂದರೆ ಹೇಗಾದೀತು? ”

ಅವನು ತೀವ್ರವೇ ಉತ್ತರಕೊಟ್ಟ. “ ಬರಲಿ. ಅದು ಅವನಿಗೆ ಬಹಳ ದಿವಸ ಲಭಿಸುವದಿಲ್ಲ. ಕೆಲಸಗಾರರು ಅವನ ವಿರುದ್ಧವಾಗಿ ಬಂಡು ಮಾಡದೇ ಇರುವದಿಲ್ಲ. ದೇಶದಲ್ಲಿ ಯಾದವೀ ಕಲಹ ಹುಟ್ಟುವದು. ”

೧೯೩೨ನೇ ವರ್ಷದ ವಸಂತಕಾಲ. ಆಗ ಜರ್ಮನಿಯ ಕಮ್ಯುನಿಷ್ಟರು ಸೋಶಾಲಿಷ್ಟರ ಸಂಗಡ ಮೈತ್ರಿ ಬೆಳೆಸಿ ಕಾರ್ಯಸಾಗಿಸಿದ್ದರೆ ಹಿಟ್ಲರನ ಬೆಳವಣಿಗೆ ಕುಂಠಿಸಬಹುದಾಗಿತ್ತು. ಜಗತ್ತಿನ ಇತಿಹಾಸ ಈಗಿನ ಕಿಂತ ಬೇರೆಯಾಗಬಹುದಾಗಿತ್ತು. ನಾನಿದನ್ನು ಬರೆಯುವಾಗ ಕೇವಲ ಅಲಿಪ್ತ ವೃತ್ತಿಯಿಂದ ಸಿಂಹಾವಲೋಕನ ಮಾಡುವ ಇತಿಹಾಸಕಾರನಂತೆ ಬರೆಯುವದಿಲ್ಲ. ಹಿಟ್ಲರನಿಗೆ ಎದುರಾಗಿ ಹೊಡೆದಾಡಿದ ಸೈನ್ಯ ಪ್ರಮುಖನೆಂದು ಅನುಭವಕ್ಕೆ ಬಂದುದನ್ನು ಹೇಳುತ್ತೇನೆ.

೧೯೩೨ರ ಪ್ರಾರಂಭದಲ್ಲಿ ಥುರಿಂಜಿಯಾ ಮತ್ತು ಬ್ರುನ್ಸವಿಕ ಎರಡೇ ಪ್ರಾಂತಗಳಲ್ಲಿ ಹಿಟ್ಲರನ ಸತ್ತೆ ಬೆಳೆದಿತ್ತು. ಉಳಿದ ಎರಡು ಮೂರಾಂಶ ಭಾಗ ಇನ್ನು ಸೋಶಾಲಿಷ್ಟರ ಕೈಯಲ್ಲಿತ್ತು. ಮಾರ್ಚ ೧೭ನೇ ತಾರೀಖಿಗೆ ಬರ್ಲಿನದ ಮೇಲೆ ಸ್ವಾರಿ ಮಾಡುವದನ್ನು ಹಿಟ್ಲರನ ಭರಾರಿ ಶಿಪಾಯರು ನಿರ್ಧರಿಸಿದ್ದರು. ಆದರೆ ಸೋಶಾಲಿಷ್ಟರ ಹುಕುಮಿನಲ್ಲಿದ್ದ ಸರಕಾರೀ ಸೈನಿಕರು ನಾಝಿಗಳ ಮುಖ್ಯ ಕೇಂದ್ರವನ್ನು ಮೊದಲೇ ಮುತ್ತಿ ಅವರ ಕೊಂಡೆಚಿವುಟಿದರು. ಮುಂದೆ ಒಂದು ತಿಂಗಳಿನಲ್ಲಿಯೇ ನಾಝಿಗಳ ಲಷ್ಕರೀ ಸಂಘಟನೆ ಬೇಕಾಯಿದೇಶೀರವೆಂದು ಜಾಹೀರ ಸರಕಾರೀ ಪತ್ರಿಕೆ ಹೊರಟಿತು. ನಾಝಿಗಳ ಕೇಂದ್ರಗಳನೆಲ್ಲ ಮುತ್ತಿಬಿಟ್ಟರು.

ಹೀಗೆ ಜಾಹೀರು ಆದುದೇನೋ ನಿಜ. ಆದರ ಪ್ರತ್ಯಕ್ಷ ಅಮಲು ಬಜಾವಣೆ ನಾಟಕವಾಯಿತು ಮಾತ್ರ. ನಾಝಿಗಳೇನೂ ಹಿಮ್ಮೆಟ್ಟಲಿಲ್ಲ. ಇಷ್ಟುಮಾತ್ರ ಪರಿಣಾಮವಾಯಿತು. ನಾಝಿಗಳು ನೀಲಿಶರ್ಟು, ತೆಗೆದು ಬಿಳೀಶರ್ಟು ಹಾಕಿಕೊಂಡರು.

ಆ ಕಾಲದ ಬೇರೆ ಬೇರೆ ಪಕ್ಷಗಳ ಸಂಖ್ಯಾಬಲವು ನೋಡುವಂತಿದೆ. ಹಿಟ್ಲರನ ಪಕ್ಷದಲ್ಲಿ ಸುಮಾರು ಒಂದು ಕೋಟಿ ಮುವತ್ತು ಲಕ್ಷ. ಸೋಶಲ ಡೆಮೋಕ್ರೇಟರ ಕಡೆಗೆ, ಎಂಭತ್ತು ಲಕ್ಷ. ಕೆಥೊಲಿಕ್ಸರು ಇದರ ಅರ್ಧದಷ್ಟು, ಕಮ್ಯುನಿಷ್ಟರು ಐವತ್ತು ಲಕ್ಷ, ದೇಶದ ಸತ್ತೆಯ ದಂಡವನ್ನು ತಿರುಗಿಸುವ ಸಾಮರ್ಥ್ಯ ನಮ್ಮಲ್ಲಿ ಇನ್ನೂ ಇತ್ತು. ಹಿಂದೆ ಹಿಟ್ಲರನಿಗಾದ ಆಘಾತ ಹಾಗೇ ಸಾಗಿದ್ದರೆ, ಅವನ ಪಕ್ಷ ನಾಮಶೇಷವಾಗಲಿಕ್ಕೆ ಕಾಲ-ಹಿಡಿಯುತ್ತಿರಲಿಲ್ಲ. ಈ ಸಂಧಿಯ ಲಾಭ ಹೊಂದಬೇಕೆಂದು ನಮ್ಮ

ಪಕ್ಷದ ಸಾಮಾನ್ಯ ಜನರು ಇಚ್ಛಿಸುತ್ತಿದ್ದರು. ಆದರೆ ದುರ್ದೈವ! ಮಾಸ್ಕೋದ ವರಿಷ್ಠರಿಗೆ ಈ ತಂತ್ರ ಸರಿಬರುತ್ತಿರಲಿಲ್ಲ. ಕಣ್ಣು ಕೂಡ ಕುರುಡಾಗಿದ್ದವೇನೋ ಯಾರು ಬಲ್ಲರು? ಕಾಮಿಂಟರ್ನದ ಕಾರ್ಯಕಾರೀ ಸಮಿತಿಯ ೧೧ನೇ ಅಧಿವೇಶನದಲ್ಲಿ ಸ್ಟಾಲಿನನ ಪ್ರತಿಧ್ವನಿ. ಮ್ಯಾನುಇಲಸ್ಕಿ ಆವನು ತೆಗೆದ ಉದ್ಗಾರಗಳಿವು.

“ಕೆಲಸಗಾರರ ನಿಜ ಶತ್ರುಗಳು ಫಾಸಿಸ್ಟರೆಂದು ಸೋಶಲ ಡೆಮೋಕ್ರೆಟರು ಹೇಳುತ್ತಾರೆ. ಆದರೆ ಜನರನ್ನು ಮೋಸಗೊಳಿಸುವ ಧೂರ್ತ ತಂತ್ರವಿದು. ಜನರ ಶತ್ರು ಹಿಟ್ಲರನೆಂಬ ತಿಳಿವಳಿಕೆಯಲ್ಲಿ ಏನೂ ತಥ್ಯವಿಲ್ಲ......”

ಇವನ ಮತವೇ ಕಾಮಿಂಟರ್ನರ ಮತವಾಗಿತ್ತು. ಆವನ ಉದ್ಗಾರವೇ ವೇದವೆಂದು ತಿಳಿಯುವ ಪರಿಸ್ಥಿತಿ ಕಮ್ಯುನಿಸ್ಟರದಿತ್ತು ಆಗ. ಒಮ್ಮೆ ಹಿಟ್ಲರನ ಸಖ್ಯ. ಮತ್ತೊಮ್ಮೆ ಭರಾಡಿ ಸಿಪಾಯರೊಡನೆ ಧಕ್ಕಾಮುಕ್ಕಿ. ಹೀಗೆ ವಿಲಕ್ಷಣ ವರ್ತನವು ಕಮ್ಯುನಿಸ್ಟರದಾಗಹತ್ತಿದ್ದಿತು.

ಇದೇ ವೇಳೆಗೆ ಹೊಸ ಚುನವಾಣಿ ಸನಿಯಕ್ಕೆ ಒಂದಿತು. ಬೇರೆ ಬೇರೆ ಪಕ್ಷದವರು ಪ್ರಾರಂಭಿಸಿದ ಪ್ರಚಾರ ಕಾರ್ಯಗಳಿಗೆ ಯುದ್ಧದ ಸ್ವರೂಪ ಬರತೊಡಗಿತು. ಇದರಲ್ಲಿ ಹಿಟ್ಲರನ ಪಕ್ಷದವರು ತುರಸಿನಿಂದ ಹೋರಾಡಿ ಪ್ರಚಂಡ ಲೋಕಮತ ದೊರಕಿಸಿಕೊಂಡರು.

೧೯೧೯ ರಲ್ಲಿ ಲೋಕಶಾಹೀ ಪಕ್ಷಕ್ಕೆ ಎರಡೂವರೆ ಕೋಟಿ ಮತ. ಲೋಕಶಾಹಿ ಬೇಡವೆನ್ನುವ ಉಳಿದ ಎಲ್ಲ ಪಕ್ಷಗಳಿಗೆ ಕೂಡಿ ನಾಲ್ವತ್ತಾರು ಲಕ್ಷ ಮತ. ೧೯೩೨ನೇ ವರ್ಷ ನವಂಬರ ಚುನಾವಣೆಯಲ್ಲಿ, ಲೋಕಶಾಹೀ ಪಕ್ಷಕ್ಕೆ ಒಂದೂಕಾಲು ಕೋಟಿ. ಡಿಕ್ಟೇಟರಶಿಪ್ಪು ಹೊಡೆಯಬೇಕೆನ್ನುವ ಹಿಟ್ಲರನಿಗೆ ಎರಡು ಕೋಟಿ ಹದಿಮೂರು ಲಕ್ಷ.

ಇದರ ಕಾರಣವೆಂದರೆ ಹಿಟ್ಲರನ ಪಕ್ಷದವರ ಅಭೂತಪೂರ್ವ ಮತ ಪ್ರಚಾರವೆಂಬುದಕ್ಕೆ ಸಂದೇಹವಿಲ್ಲ. ಪ್ರಚಾರಕ್ಕಾಗಿ ಒಂದು ದಿನಕ್ಕೆ ಎರಡು ಸಾವಿರ ಸ್ಥಳಗಳಲ್ಲಿ ಸಭೆ ಕೂಡುತಿದ್ದವಂತೆ. ನಾಲ್ಕು ಸಾವಿರ ಭಾಷಣಕಾರರು ಅದರಲ್ಲಿ ತೊಡಗಿಕೊಂಡಿದ್ದರು. ಶಕ್ಯವೆನಿಸಿದ ಸ್ಥಾನಗಳಲ್ಲಿ ಗೋರಿಂಗ, ಗೋಬೆಲ್ಸರ ಗರ್ಜನೆ ಇದ್ದುದೇ. ಹಿಟ್ಲರನಂತೂ ಪ್ರಚಾರದಲ್ಲಿ

ಝಂಝಾವಾತ. ಗುರುವಾರ ಕೊಯೆನಿಂಗ್ಸ್‌ಬರ್ಗದಲ್ಲಿದ್ದರೆ ಶುಕ್ರವಾರ ಕಾಸೆಲ. ಶನಿವಾರ ಹಾಂಬುರ್ಗ. ಹೀಗೆ ದೇಶದಲ್ಲಿ ರಾಘೋದಾಪಾ ಭರಾರಿ ನಡೆದಿತ್ತು. ರಾತ್ರಿಯಿಲ್ಲ. ಹಗಲೆಂಬುದಿಲ್ಲ. ಹದ್ದಿನಂತೆ ವಿಮಾನದಿಂದ ಹಿಟ್ಲರ ಹಾರಿ ಸಭೆಗೆ ಬರುತ್ತಿದ್ದ. ನೆರೆದ ಜನಸಮುದಾಯದ ಮುಂದೆ ನಡೆಯುವ ಅವನ ಮುಲುಖ ಮೈದಾನ ವಕ್ತೃತ್ವದಿಂದ ಪರಿಣಾಮವೂ ಸಾಕಷ್ಟಾಗುತ್ತಿದ್ದಿತು.

ಪ್ರಾಮಾಣಿಕನಂತೆ ಇದನೆಲ್ಲ ಒಪ್ಪುವ ನಾನು, ಕಮ್ಯುನಿಷ್ಟರು ಇಲ್ಲಿ ತಪ್ಪಿದರೆಂಬುದನ್ನೂ ಒಪ್ಪದೆ ಗತಿ ಇಲ್ಲ. ನಮ್ಮ ನಿಜ ಶತ್ರು ಹಿಟ್ಲರನೇ ಎಂದು ಆ ಕಾಲದಲ್ಲಿ ನಾವು ಅವನ ಮೇಲೆ ಪ್ರಾಣಾಂತಿಕಪ್ರಹಾರ ಮಾಡಿದ್ದರೆ, ಅದಕ್ಕೆ ಇಂಥ ಅಕರಾಳವಿಕರಾಳ ಸ್ವರೂಪವೆಲ್ಲಿಂದ ಬರುತ್ತಿತ್ತು? ಆದರೆ ನಮ್ಮ ಪಕ್ಷದವರು ಹಾಗೆ ಮಾಡಲಿಲ್ಲ. ನಮ್ಮ ಪಕ್ಷ ನಯರ್ಾಯದಿಂದ ಹಿಟ್ಲರನಿಗೆ ಸಹಕಾರಿ ಎನಿಸಿತು. ಮೇಲಿನಿಂದ "ಹಿಟ್ಲರನನ್ನು ಲಕ್ಷಿಸ ಬೇಡಿರಿ. ಡೆಮೋಕ್ರೇಟರನ್ನು ನಿರ್ನಾಮ ಮಾಡಿರಿ." ಎಂದು ಹುಕುಮು ಬರುತ್ತಿದ್ದವು. ಮುಂದಾಳುಗಳ ದನಿಯಲ್ಲಿ ಅನುಯಾಯಿಗಳ ದಶಸಹಸ್ರ ಕಂಠಗಳೂ ದನಿಗೂಡಿಸಬೇಕೆಂಬುದು ಪಕ್ಷದ ಶಿಸ್ತು! ಈ ವಿಚಿತ್ರಪ್ರಕಾರ ನೋಡಿ ನಾನನ್ನುತ್ತಿದ್ದೆ— ನಾವು ಕಾರ್ಲ ಮಾರ್ಕ್ಸನ ಭಕ್ತರೋ? ಬಿಸ್ಮಾರ್ಕನ ಭಕ್ತರೋ?

ಇದೆಲ್ಲ ಫಿರೇಲಾಯಳಿಗೆ ತಿಳಿಯುತ್ತಿದ್ದಿತು.

ಒಂದುಸಾರೆ ಆಕೆ ಅಂದಳು. "ನಮ್ಮೆಲ್ಲರ ಅವಸ್ಥೆ ಫೋನೊಗ್ರಾಫಿನ ಪ್ಲೇಟಿನಂತಾಗಿದೆ."

ನಾನು ಹೇಳಿದೆ. "ಅದರಲ್ಲಿಯೇ ನಮ್ಮ ನಿಜವಾದ ಸಾಮರ್ಥ್ಯ ನಾವು ಸಂಪೂರ್ಣ ಜಗತ್ತು ಗೆಲ್ಲಬೇಕಾದರೆ– ಜಗತ್ತಿನಲ್ಲಿ ಅಜಿಂಕ್ಯ ಪಕ್ಷವನ್ನು ನಿರ್ಮಿಸಬೇಕು. ಮತಭೇದದ ಮೈಲಿಗೆ ಪಕ್ಷದಲ್ಲಿ ಉಪಯೋಗವಿಲ್ಲ."

"ಅಂತರರಾಷ್ಟ್ರೀಯ ಗೀತ ಹಾಡುವ ಪ್ಲೇಟುಗಳ, ಪ್ರಚಂಡ ಗೋಪುರ ಕಟ್ಟಿದರೆ ತಾನೇ ಏನು? ಆ ನಿರ್ಜೀವ ಗೋಪುರ ಯಾವಾಗ ಬೀಳುವದೋ ನಿಯಮವಿಲ್ಲ."

ಹೀಗೆಂದು ಉಪರೋಧಾತ್ಮಕವಾಗಿ ಫಿರೇಲಾಯಳು ನಕ್ಕುಬಿಟ್ಟಳು.

೧೯೩೨ರ ಚುನಾವಣೆಯಲ್ಲಿ ಕಮ್ಯುನಿಸ್ಟ ಪಕ್ಷವು ಪ್ರತ್ಯಕ್ಷ ಹಿಟ್ಲರನ ವೈರಕಟ್ಟಿಕೊಳ್ಳಲಿಲ್ಲ. ಸಹಕಾರ್ಯ ಒಪ್ಪಂದವನ್ನೂ ಮಾಡಿ ಕೊಳ್ಳಲಿಲ್ಲ. ಮೇಲಿನ ಹುಕುಮಿನಿಂದ ಧೋರಣವೇನೋ ತಿಳಿಯಲೇ ಇಲ್ಲ. ಡೆಮೋಕ್ರೇಟ ಪಕ್ಷದವರನ್ನು ನಿಷ್ಕಾರಣ ವೈರಿಗಳೆಂದು ನಮ್ಮ ಪಕ್ಷ ಭಾವಿಸುವದಂತೂ ನಿಜ. ಇದಕ್ಕೂ ಒಂದೆರಡು ಅಪವಾದಗಳಿದ್ದವು. ಅದರಲ್ಲಿ ಒಂದು ಹೀಗೆ.

ಮತಪ್ರಚಾರಕ್ಕಾಗಿ ನಡೆಯುವ ಸಭೆಗಳಲ್ಲಿ ನಾವು ಕ್ರಾಂತಿ– ಕ್ರಾಂತಿ ಎಂದು ಕೂಗಿಕೊಳ್ಳುವದೇನೋ ನಿಜ. ಮನದಲ್ಲಿ ಮಾತ್ರ ಖಂಡಿತ ಇರು ತ್ತಿತ್ತು. ಈ ಶಕ್ತಿ ನಮ್ಮ ಪಕ್ಷದಲ್ಲಿ ಎಷ್ಟುಮಾತ್ರವೂ ಇಲ್ಲ. ದೇಶದಲ್ಲಿ ಬಹಳ ಕಡೆ ನಾಝಿಗಳ ಗುಪ್ತ ಸಂಚಾರ ಸಾಗಿತ್ತು. ‘ ನೀಲಿ ಅಂಗಿ ’ ‘ ಉಕ್ಕಿನ ಟೊಪ್ಪಿಗೆ ’ ಯ ಹಿಟ್ಲರನ ಸೈನ್ಯಕ್ಕೆ ಎದುರಾಗುವ ಸಾಮರ್ಥ್ಯ ಪ್ರಸಂಗ ಬಂದರೆ .....ಟ್ರೇಡ ಯುನಿಯನದವರಲ್ಲಿತ್ತು. ಅದು ಡೆಮೋಕ್ರೇಟರ ನಿಯಂತ್ರಣಕ್ಕೊಳಪಟ್ಟದ್ದು. ಈ ಪಕ್ಷದ ಮುಂದಾಳು ಅಂತರ್ಗತ ಯುದ್ಧಕಲ್ಪನೆ ಎಂದಕೂಡಲೆ ನೆಲಕ್ಕಿಳಿಯುತ್ತಿದ್ದರು.

ಇವರ ಹೇಡಿತನದ ಮೂಲಕ ಟ್ರೇಡಯೂನಿಯನದ ಪ್ರಭಾವ ಶಾಲೀ ಶಕ್ತಿಯು ಸುಮ್ಮನೇ ಬಿದ್ದಿತ್ತು. ಅದನ್ನು ಕಮ್ಯುನಿಸ್ಟ ಕಾರ್ಯ ಕ್ರಮದ ಗಾಡಿಗೆ ಹೂಡ ಬರುವದೇನೋ ನೋಡಬೇಕು- ಎಂಬುದು ಒಂದು ವಿಚಾರವಾಗಿತ್ತು. ನಮ್ಮ ಪ್ರಮುಖ ಅರ್ನ್ಸ್ಟ ಥಾಎಲಮಾನನು ಇದನ್ನು ವಿಚಾರಿಸಿ ಒಂದು ತಂತ್ರ ಯೋಜಿಸಿದನು. ಎಲ್ಲ ಕಾರ್ಯಕರ್ತರಿಗೆ ಗುಪ್ತ ಹುಕುಮು ಹೋಯಿತು. ಹಿಟ್ಲರನ ಸೈನ್ಯ–ಹಾಗೂ ಕೆಲಸಗಾರರು ಇವ ರಲ್ಲಿ ಯುದ್ಧವಾಗಬೇಕು. ನೂರಾರು ಕೆಲಸಗಾರರು ಹೊಡೆಯಲ್ಪಡಬೇಕು. ಇಂಥ ಪ್ರಸಂಗ ಬೇಕೆಂತಲೇ ಉಂಟುಮಾಡಬೇಕು! ಇಲ್ಲಿ ಥಾಎಲಮಾನನ ಧೋರಣವೆಂದರೆ ಹಿಟ್ಲರನ ಜನ ಕೆಲಸಗಾರರನ್ನು ಹೊಡೆದುಹಾಕಿದರೆ, ಟ್ರೇಡಯುನಿಯನದ ಲಕ್ಷಾವಧಿ ಕೆಲಸಗಾರರು ಉರಿದೇಳುವರು. ಮುಂದಾಳು ಗಳನ್ನೂ ಲೆಕ್ಕಿಸಲಿಕ್ಕಿಲ್ಲ. ಹೀಗೆ ಒಡಕು ಹುಟ್ಟಿತೆಂದರೆ ಕಮ್ಯುನಿಷ್ಟ ಪಕ್ಷ ದವರು ಅವರ ಮುಂದಾಳುಗಳಾಗಬಹುದು. ಮುಂದೆ ಸಾರ್ವತ್ರಿಕ ಸಂಪು

ಮಾಡಿಸಲಿಕ್ಕೆ ಸಂಘಟಿತ ಕೆಲಸಗಾರರ ಸಶಸ್ತ್ರ ಸೈನ್ಯ ನಿರ್ಮಿಸುವ ನಮ್ಮ ತಂತ್ರ ಸಹಜ ಸಾಧಿಸುವದು. ಮೇಲೆ ಮೇಲೆ ಇದು ಹಿಟ್ಲರನ ವಿರುದ್ಧ ವಾಗಿದ್ದರೂ, ವಸ್ತುಸ್ಥಿತಿ ಡೆಮೋಕ್ರೇಟ ಪಕ್ಷದ ಯಂತ್ರ ಮುರಿದು, ತಾವು ಬಲಿಷ್ಠರಾಗಬೇಕೆಂದು.

ಜುಲೈ ತಿಂಗಳ ಒಂದು ರವಿವಾರ ಮೇಲಿನ ಧೋರಣದಂತೆ ದಂಗೆ ಯಾಗಬೇಕೆಂದು ಯೋಜನೆ ಸಿದ್ಧವಾಯಿತು. ಆದಿನ ಹಿಟ್ಲರನ 'ನೀಲಿ ಅಂಗಿ' ಯುವರ ದೊಡ್ಡ ಮೆರವಣಿಗೆ ಹೊರಡುವದಿತ್ತು. ನಾವು ಕೆಲಸ ಗಾರರ ಪ್ರಚಂಡ ಮೆರವಣಿಗೆ ಹೊರಡಿಸಬೇಕೆಂದು ನಿರ್ಧರಿಸಿದೆವು. ಪರಸ್ಪರ ವಿರುದ್ಧ ದಿಕ್ಕಿನಿಂದ ಬರುವ ಆ ಮೆರವಣಿಗೆಗಳು ಭೆಟ್ಟಿಯಾದಲ್ಲಿ ಹೊಡೆ ದಾಟದ ಸುರಂಗ ಹಾರುವದಿತ್ತು.

ಅಪೇಕ್ಷೆಯಂತೆ ಸುರಂಗ ಹಾರಿತು. ಆದರೆ ಥಾವಲಮಾನನ ಹೇತು ಮಾತ್ರ ಸಫಲವಾಗಲಿಲ್ಲ. ಆ ಕೆಟ್ಟ ದಿನಕ್ಕೆ ಹೆಸರಿಟ್ಟರು. ರಕ್ತಲೇಪಿತ ರವಿವಾರ! ಗಾಯಗೊಂಡವರು, ಸತ್ತವರು ಬೀದಿಯಲ್ಲಿ ಬಿದ್ದುಕೊಂಡಿದ್ದರು. ಹೊಡೆದಾಟ-ಕೊಳ್ಳೆಸುಲಿಗೆ ದೊಡ್ಡಪ್ರಮಾಣದಿಂದಾದವು. ಆದರೆ ಪೆಟ್ಟು ಯಾರಿಗೆ? ಹಿಟ್ಲರನಿಗಲ್ಲ. ನಮ್ಮ ಪಕ್ಷಕ್ಕೆ!

ಹೀಗೆ ಮೂರು ಪ್ರಮುಖ ಪಕ್ಷಗಳ-ಮೂರಾಬಟ್ಟೆ ಜಗಳ ನಡೆದಿತ್ತು. ಡೆಮೋಕ್ರೆಟ ಪಕ್ಷ ಕತ್ತಲೆಯಲ್ಲಿದ್ದುಕೊಂಡು ಆಗೀಗ ಮಿಸುಕುತ್ತಿದ್ದಿತು. ನಮ್ಮ ಪಕ್ಷಕ್ಕಂತೂ ನಿಶ್ಚಿತ ಧೋರಣವಿರಲಿಲ್ಲ. ಹಿಟ್ಲರನ ಪಕ್ಷ ದಿನದಿನಕ್ಕೆ ಬೆಳೆಯುತ್ತಿದ್ದಿತು. ಬರುವ ಚುನಾವಣೆಯ ಚಿಹ್ನಗಳು ನನಗಂತೂ ನೆಟ್ಟಗೆ ಕಾಣಿಸಲಿಲ್ಲ.

ಇದೇ ಸಂಧಿಯಲ್ಲಿ ಡಿಮಿಟ್ರಾಫನು ನನ್ನನ್ನು ಬರ್ಲಿನಕ್ಕೆ ಕರೆಸಿ ಕೊಂಡನು. ಸ್ಕಾಂಡಿನೇವ್ಹಿಯಾ, ಸ್ವೀಡನ, ನಾರ್ವೇ ದೇಶಗಳ ಕಮ್ಯುನಿಷ್ಟ ಸಂಘಟನೆಯ ತಪಾಸುಮಾಡಲಿಕ್ಕೆ, ಐದಾರು ವಾರಗಳ ಫಿರತಿ ಹೋಗಬೇಕೆಂದು ಹುಕುಮಾಯಿತು. ಸಹಜವಾಗಿ ನಾನು ಕೇಳಿದೆ.

"ಹಿಟ್ಲರನ ವಿಷಯಕ್ಕೆ ನಿಮ್ಮ ಭವಿಷ್ಯವೇನು ?"

ನಿಶ್ಚಯ ಮುದ್ರೆಯಿಂದ ಡಿಮಿಟ್ರಾಫ ಹೇಳಿದನು. "ಹಿಟ್ಲರನು ಸತ್ತಾರೂಢನಾಗುವದು ಎಂದೂ ಸಾಧ್ಯವಿಲ್ಲ."

ತಿರುಗಿ–ನಾನು ಏನೂ ಮಾತಾಡಲಿಲ್ಲ.

ನಾನು ಸಂಚಾರಕ್ಕೆ ಹೊರಟೆ. ಡೆನ್ಮಾರ್ಕದಲ್ಲಿ ಹತ್ತು ದಿನ ತಿರುಗಿದೆ. ಬೇರೆಬೇರೆ ಬಂದರಗಳುಳ್ಳ ಪಟ್ಟಣಗಳಲ್ಲಿ ನಾವಿಕರ ಸಭೆ ಕರೆದು ವ್ಯಾಖ್ಯಾನ ಕೊಡುವದೊಂದು ಮುಖ್ಯ ಕಾರ್ಯವಾಗಿತ್ತು. ಈ ಸಂಚಾರ ಒಳ್ಳೇ ಮನೋರಂಜಕವಾಯಿತು. ಮುಂದೆ ಸ್ವೀಡನಕ್ಕೆ ಹೋದೆ.... ಇಲ್ಲಿಯು ಕಾರ್ಯ ಚಮತ್ಕಾರಕವಾಗಿತ್ತು.

ಸ್ವೀಡನದಲ್ಲಿ ಕಮ್ಯುನಿಸ್ಟ ಪಕ್ಷವು, ಬೇರೆ ದೇಶಗಳಿಗಿಂತ ಹೆಚ್ಚು ಸುಸಜ್ಜಿತ ಮತ್ತು ಸಂಘಟಿತವಾಗಿತ್ತು. ಆದರೆ ಹೀಗಿರುವದು ಮಾಸ್ಕೋಕ್ಕೆ ಬೇಡಾಗಿದ್ದಿತು. ನಾನು ಬಂದದ್ದು ಅದೇಕಾರಣ. ಈ ವಿಧಾನವು ನೋಡಲಿಕ್ಕೆ ಚಮತ್ಕಾರಿಕ ನಿಜ. ಅವರ ವಿವರ ತಿಳಿದಾಗ ಮಾತ್ರ ನನ್ನ ವಿಧಾನವು ಮನಸಟ್ಟಾಗುವದು. ಸ್ವೀಡನದ ಕಾಮಿಂಟರ್ನ ಮುಖ್ಯ ಕೇಂದ್ರಕ್ಕೆ ಎಪ್ಪತ್ತಾರು ಕೇಂದ್ರಗಳು ಜೋಡಿಸಲ್ಪಟ್ಟಿದ್ದವು. ಎಲ್ಲ ಸಭಾಸದರಿಂದ ವರ್ಗಣಿ ವ್ಯವಸ್ಥಿತವಾಗಿ – ನಿಯಮಿತವಾಗಿ ಬರುತ್ತಿದ್ದಿತು. ಪಕ್ಷದ ಕಾರ್ಯಕ್ರಮಗಳಿಗೆ ಹಣದ ಕೊರತೆ ಇರಲಿಲ್ಲ. ಇತರ ದೇಶದಲ್ಲಿಯ ಪಕ್ಷಗಳು ಮಾಸ್ಕೋದಿಂದ ದೊರೆವ ಹಣವನ್ನವಲಂಬಿಸಿರುವವು. ಅದಕ್ಕಾಗಿ ಮಾಸ್ಕೋದಿಂದ ಬರುವ ಹುಕುಮುನ್ನು ಸುಮ್ಮನೆ ಅವು ಸ್ವೀಕರಿಸಬೇಕಾಗಿತ್ತು. ಇಲ್ಲಿಯು ಪರಿಸ್ಥಿತಿ ಮಾತ್ರ ತಿರುಗುಮುರಗು. ದ್ರವ್ಯಬಲದ ದೃಷ್ಟಿಯಿಂದ ಆ ಪಕ್ಷ ಸ್ವಯಂಪೂರ್ಣ. ಎಂದಮೇಲೆ ಮಾಸ್ಕೋದ ಗುಲಾಮವಾಗುವದು ಸ್ವೀಡನ ಪಕ್ಷಕ್ಕೆ ಕಾರಣವಿರಲಿಲ್ಲ. ಈ ಸಂಗತಿ ಮಾಸ್ಕೋಕ್ಕೆ ರುಚಿಸುತ್ತಿದ್ದಿಲ್ಲ. ಸ್ವೀಡನದ ಈ ಸ್ವಾಯತ್ತತೆ ನಾಶಮಾಡಿ ಉಳಿದ ದೇಶದ ಪಕ್ಷಗಳಂತೆ ಮಾಸ್ಕೋವನ್ನೇ ಅವಲಂಬಿಸುವ ಪಕ್ಷವಿರುವಂತೆ ಮಾಡುವ ಯೋಜನೆ ಸಿದ್ಧಿಗೊಯ್ಯಲು ನಾನು ಯತ್ನಿಸಿದೆ.

ಈ ನಾಜೂಕು ಕೆಲಸ ನಾನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಸಭಾಸದರಿಂದ ಬರುವ ಹಣವನ್ನೆಲ್ಲ ಕೂಡಿಸಿ, ಮಾಸ್ಕೋಕ್ಕೆ ಕಳಿಸಬೇಕು. ಅಲ್ಲಿಂದ ಬರುವ ದುಡ್ಡಿನಿಂದ ಕಾರ್ಯ ಸಾಗಿಸಬೇಕು. ಹೀಗೆ 'ಶಿಸ್ತಿ'ನ ಮಂತ್ರ ಊದಿ ನಾನು ಸ್ವೀಡನ ಕಾರ್ಯಕರ್ತರನ್ನು ಒಪ್ಪಿಸಿಬಿಟ್ಟೆ.

ಮುಂದೆ ನಾರ್ವೆ. ಇಲ್ಲಿ ಪಕ್ಷಸಂಘಟನೆ– ಮತ್ತು ವ್ಯಾಖ್ಯಾನಗಳನ್ನೇ

ನಾನು ಹೆಚ್ಚಾಗಿ ಮಾಡಿದೆ. ಹೊಸ ಕಾರ್ಯಕರ್ತರ ಗುರುತಾದಂತೆ ಹಳಬರೂ ಅನೇಕ ಜನ ಭೆಟ್ಟಿಯಾದರು. ಹಳಬರಲ್ಲಿ ಕೆಲವರ ಪಾಡು ಹೀಗೆ ಸತತ ನಿಷ್ಠೆಯಿಂದ ಅವರು ಪಕ್ಷದ ಕೆಲಸ ಮಾಡಿಯೂ, ವರಿಷ್ಠರು ಅವರೊಡನೆ ಉದ್ದಾಮ ರೀತಿಯಿಂದ ವರ್ತಿಸಿದ್ದರು. ಅವರ ಕಷ್ಟ-ತ್ಯಾಗಗಳನ್ನು ಪಕ್ಷವು ನೋಡಲಿಲ್ಲ. ಹೀಗೆ ಫಲ ದೊರೆತವರು ಕೋಪಿಗಳೂ, ನಿರಾಶಾಪ್ರವೃತ್ತಿಯವರೂ ಆಗಿದ್ದರು. ಇಂಥ ವ್ಯಕ್ತಿಗಳಲ್ಲಿ ಆರ್ಥರ ಸಮುಸಿಂಗನು ಒಂದು ಮಾದರಿ.

ಕಪ್ಪುಗಣ್ಣಿನ, ನಗೆಮೊಗದ ಗಿಡ್ಡ. ಆದರೂ ಬಲಶಾಲಿ. ಈ ಗೃಹಸ್ಥನು ಕ್ರಾಂತಿ ಕಾರ್ಯಕ್ಕಾಗಿ, ಸತತ ದುಡಿಯುತ್ತಿದ್ದ. ಆದರೆ ಪ್ರಾಮಾಣಿಕ ರೀತಿಯಿಂದ ಮಾತಾಡಿ ವರಿಷ್ಠರ ತಪ್ಪು, ವಿಸಂಗತತೆಗಳನ್ನು ತೋರಿಸಿಕೊಡುವ ಮಹಾಪರಾಧ ಇವನ ಕೈಯಿಂದ ಘಟಿಸಿತ್ತು. ಹೀಗಾಗಿ ವರಿಷ್ಠರ ಅಪ್ರೀತಿಯ ಸಂಕಟವನ್ನು ಮೈಮೇಲೆ ಹಾಕಿಕೊಂಡಂತಾಗಿದ್ದಿತು. ಒಮ್ಮೆ ಪಕ್ಷದ ಕಾರ್ಯಕ್ಕಾಗಿ ದೂರ ಎಲ್ಲಿಯೋ ಹೋಗಬೇಕಾದಾಗ, ಮನೆಯಲ್ಲಿ ಅವನ ಹೆಂಡತಿ ಎರಡು ಸಣ್ಣ ಹುಡುಗರು ಬೇನೆಯಿಂದ ಬಳಲುತ್ತಿದ್ದವು. ಆ ಬೇನೆಗೆ ಉಪಚಾರ ಮಾಡಿಸಬೇಕೆಂದರೆ- ಬಹಳ ಹಣ ಹಿಡಿಯುವಂತಿತ್ತು. ಸಮುಸಿಂಗ ಯೋಚಿಸಿದ ಪಕ್ಷದ ಕಾರ್ಯದ ಮುಂದೆ ನಾನು ಸ್ಪರ್ಧೆಯನ್ನು ಎಂದೂ ನೋಡಿಲ್ಲ. ಸಂಸಾರ ಹಾಳಾದರೂ ನಾನು ಹಿಂದೆಗೆದಿಲ್ಲ. ಆದಕ್ಕಾಗಿ ನನ್ನ ಹೆಂಡತಿ ಮಕ್ಕಳು ಬೇನೆಯಿಂದ ಮರಣೋನ್ಮುಖರಾಗಿ ಬಿದ್ದಿರುವಾಗ ಅವರನ್ನು ಬದುಕಿಸಲು ಹತ್ತುವ ಹಣವನ್ನು ಪಕ್ಷವು ಆನಂದದಿಂದ ಕೊಡಬಹುದು. ಡಿಮಿಟ್ರಾಫನ ಕಡೆಗೆ ಅರ್ಜಿಹಾಕಿ ಹಣದ ಸಹಾಯ ಕೇಳಿದನು. ಉತ್ತರ ಬಂತು ನಿನ್ನ ಹೆಂಡತಿ ಪಕ್ಷದ ಸಭಾಸದಳಿಲ್ಲದ ಕಾರಣ, ಅವಳ ಉಪಚಾರಕ್ಕೆ ಪಕ್ಷದ ಹಣ ವೆಚ್ಚಮಾಡಲಿಕ್ಕೆ ಬರುವದಿಲ್ಲ. ಈ ಕಾರ್ಯ ಪತ್ರವ್ಯವಹಾರದಿಂದ ಆಗುವದಿಲ್ಲವೆಂದು ತಿಳಿದು, ಸಮುಸಿಂಗ ಬರ್ಲಿನಕ್ಕೆ ಹೋದನು. ಆ ಕಚೇರಿಯಲ್ಲಿ ತಿಳಿದುಬಂದುದೇನೆಂದರೆ ಪಕ್ಷದವರಲ್ಲಿ ಫಂಡಿನ ಹಣ ಬಹಳವಿಲ್ಲ ಎಂದು. ಡಿಮಿಟ್ರಾಫನಿಗೇ ಭೆಟ್ಟಿಯಾಗುತ್ತೇನೆ ಎಂದು ಸಮುಸಿಂಗ ಹೇಳಿದಾಗ- ಅವನಿಗೆ ಹೇಳಿಬಿಟ್ಟರು. ಅವನು ರಜೆ ತೆಗೆದುಕೊಂಡು

ಪ್ರವಾಸಕ್ಕೆ ಹೋಗಿದ್ದಾನೆ. ಎಲ್ಲಿ? 'ಡಾಂಝಿಕ' ಬಂದರದ ಹತ್ತರ 'ಝೋಟೋ' ಎಂಬ ಜೂಜಾಡುವ ಶ್ರೀಮಂತ ಜನರ ಫ್ಯಾಶನೇಬಲ ವಿಶ್ರಾಮ ಸ್ಥಾನವಿತ್ತು. ಅಲ್ಲಿಗೆ ಪಾಪ! ಅಲ್ಲಿಯ ವರೆಗೆ ಸಮಸಿಂಗ ಹೋದನು. ಡಿಮಿಟ್ರಾಫನು ಅಲ್ಲಿಯು ಒಂದು ಬಾದಶಾಹೀ ಹಾಟೆಲದ ನಾಲ್ಕಾರು ಕೊಟ್ಟಡಿ ಹಿಡಿದು, ಬರ್ಲಿನದ ಓರ್ವ ಸುರೂಪ ಸುಂದರ ನರ್ತಕಿಯೊಡನೆ ವಿಲಾಸ ಭೋಗಿಸುತ್ತ ಕುಳಿತಿರುವದನ್ನು ನೋಡಿದನು. ಭೆಟ್ಟಿಯಾಗಿ ಹಣದ ಸಹಾಯ ಕೇಳಿದನು. ಸಮಸಿಂಗನು ಕೇಳಿದು ದೇನಂದರೆ– "ಇಂದಿನ ವರೆಗೆ ನನ್ನ ಎಲ್ಲ ಆಯುಷ್ಯವನ್ನು ನಾನು ಪಕ್ಷದ ಕಾರ್ಯಕ್ಕಾಗಿ ಕಳೆದಿರುವೆನು. ನನ್ನ ಹೆಂಡರು ಮಕ್ಕಳನ್ನು ನಾನು ಉಳಿಸಿಕೊಳ್ಳಬೇಕು. ಇದಕ್ಕೆ ಅವಶ್ಯವಾದ ಹಣವನ್ನು ಪಕ್ಷ ಕೊಡ ಬೇಡವೋ ?" ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತನು, ತಾನು ವಿಲಾಸದಲ್ಲಿರುವಾಗ, ಮುದ್ದೇ ಮಾಲು ಸಹಿತ, ಹಿಡಿದುದನ್ನು ನೋಡಿ ಡಿಮಿಟ್ರಾಫ ಬೆಂಕಿಯಾಗಿದ್ದ. ಒಂದು ಕಾಸು ಸಹ ಕೊಡದೆ ಸಮಸಿಂಗ ನನ್ನು ದಬ್ಬಿಕೊಟ್ಟ.

ಊರಿಗೆ ಒಂದು ಸಮಸಿಂಗನು ಅಡವಿಯ ಒಂದು ಗುಡಿಸಲಿನಲ್ಲಿ ಹೆಂಡತಿ–ಮಕ್ಕಳ ಶುಶ್ರೂಷೆ ಮಾಡಹತ್ತಿದನು. ಕಾಮಿಂಟರ್ನ ಕಾರ್ಯ ಕರ್ತರ ಯಾದಿಯಿಂದ ಅವನ ಹೆಸರು ವಜಾ ಆಯಿತು. ಸಂಬಳ ನಿಂತು ಹೋಯಿತು. ಸಮಸಿಂಗನು ವೃತ್ತಪತ್ರದಲ್ಲಿ ಒಂದು ಅನಾವೃತ ಪತ್ರ ಪ್ರಸಿದ್ಧಿಸಿದನು. ಅದರಲ್ಲಿ ಸ್ವಚ್ಛವಾಗಿ ಬರೆದನು. ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಒಂದು ಕಡೆಗೆ ದಾರಿದ್ರ್ಯದಲ್ಲಿ, ದೈನ್ಯದಿಂದ ಕಾಲ ಕಳೆ ಯುತ್ತಿರುವಾಗ, ವರಿಷ್ಠ ಅಧಿಕಾರಿಗಳು ಮಾತ್ರ ಶ್ರಿಮಂತ ನವಾಬರಂತೆ ಮನಸೋಕ್ತ ಸುಖಭೋಗಿಸುತ್ತಿರುವರು. ಡಿಮಿಟ್ರಾಫ ಜಾಹೀರ ರೀತಿ ಯಿಂದ ಮರಳಿ ಉತ್ತರಿಸಿದ. ಸಮಸಿಂಗನಿಗೆ ಹುಚ್ಚು ಹಿಡಿದಿದೆ.

ಮುಂದಾದರೂ ತನ್ನ ಶಕ್ತಿಯಂತೆ ಸಮಸಿಂಗನು ಕಮ್ಯುನಿಷ್ಟ ಪಕ್ಷದ ಕಾರ್ಯ ನಡೆಸಿಯೇ ಇದ್ದ. ಕೆಲಸಗಾರರು ಮತ್ತು ಕೂಲಿಕಾರರು ಇವರಿಗೆ ಅವನು ಅತಿಶಯ ಪ್ರಿಯನಾಗಿದ್ದ. ಏನಾದರೂ ಪ್ರಯತ್ನಿಸಿ ಕಾರ್ಯ ಹೇಳಿ ಅವನನ್ನು ರಶಿಯಕ್ಕೆ ಹೊರಬೇಕೆಂದು ವರಿಷ್ಠರ ಯತ್ನ

ನಡೆದಿತ್ತು. ಆದರೆ ಸಮುಸಿಂಗನು ಕಾರ್ಯ ವಹಿಸಲಿಕ್ಕೆ ಸಿದ್ಧನಿರಲಿಲ್ಲ. ಎಲ್ಲ ಗೊತ್ತಾಗಿತ್ತು ಅವನಿಗೆ. ಇದೆಲ್ಲ ಸೋಗು. ನಾನು ರಶಿಯಾಕ್ಕೆ ಹೋದೆನೆಂದರೆ, ಹಿಂದಿನವರಂತೆ ನನಗೂ ಮರಣ ನಿಶ್ಚಯ!

ಇತರ ಕಾರ್ಯಕರ್ತರು ನಾರ್ವೆಯಲ್ಲಿ ಭೆಟ್ಟಿಯಾದಂತೆ ಸಮುಸಿಂಗನೂ ಭೆಟ್ಟಿಯಾದ. ರಶಿಯಕ್ಕೆ ಹೋಗುವಂತೆ ಅವನ ಮನ ತಿರುಗಿಸುವ ಕಾರ್ಯ ನನ್ನ ಪಾಲಿಗಿತ್ತು. ನಾನು ಆ ಮಾತು ತೆಗೆದಾಗ ಉನ್ಮತ್ತ ಹಾಸ್ಯ ಮಾಡಿ ಅವನೆಂದನು.

“ನನ್ನ ಒಂದು ನಿರೋಪವನ್ನು ನೀನು ಡಿಮಿಟ್ರಾಫನಿಗೆ ಹೇಳು. ನನ್ನ ಹೆಸರು ತೆಗೆಯಬೇಡ. ಪಗಾರದ ಹಣಕ್ಕೆ ನಾನು ಮರುಳಾಗುವದಿಲ್ಲ. ಚೀ! ಚೀ! ಕಮ್ಯುನಿಷ್ಟ ಪಕ್ಷದಲ್ಲಿ, ಉಂಡಾಡಿ, ವಂಚಕ, ಮುಂದಾಳು ಗಳೆಂಬ ಕೀಟಕ ಪಸರಿಸಹತ್ತಿವೆ. ಅವಗಳನ್ನು ನಾಶ ಮಾಡುವ ಕಾರ್ಯ ಮಹತ್ವದ್ದೆಂದು ನಾನು ತಿಳಿಯುತ್ತೇನೆ. ಮತ್ತು ಅದಕ್ಕಾಗಿ ನಾನು ನನ್ನ ಜನ್ಮ ಭೂಮಿಯಲ್ಲಿಯೇ ಇರುತ್ತೇನೆ. ಒಂದು ಹರಳೆತ್ತಿ ಇಟ್ಟಂತೆ ನನ್ನನ್ನು ದೂರಮಾಡಬೇಕೆಂದು, ಡಿಮಿಟ್ರಾಫ ಯೋಚಿಸುತ್ತಿರಬಹುದು. ಆದರೆ ನನ್ನ ಸಿದ್ಧತೆ ಇಲ್ಲ.”

ನಾನು ಹೇಳಿದೆ. “ನೀನು ಒಬ್ಬ. ಕಾಮಿಂಟರ್ನಕ್ಕೆ ವಿರೋಧ ಮಾಡಿದರೆ ನಿನಗೆ ಗೆಲುವಿಲ್ಲ. ಕಾಮಿಂಟರ್ನ ಗೆಲ್ಲುವದು.”

ತಲೆ ಹಾಕುತ್ತ ಅವನೆಂದ, “ಸಮುಸಿಂಗನ ಮತ ಹೀಗೆಂದು ನೀವು ಹೇಳಿರಿ. ನಾರ್ವೇದ ಕಮ್ಯುನಿಷ್ಟರು ಮೊದಲು ನಿಷ್ಠೆ ಇಡಬೇಕಾದುದು ಸೋವ್ಹಿಯೆಟ ಯುನಿಯನದಲ್ಲಿ ಅಲ್ಲ. ನಮ್ಮ ನಾರ್ವೇ ದೇಶದಲ್ಲಿ, ನಾವು ಕಮ್ಯುನಿಷ್ಟರು ಯುದ್ಧ ಮಾಡುವದು, ನಮ್ಮ ಕೆಲಸಗಾರ ಬಂಧುಗಳು ಸ್ವತಂತ್ರ ಮತ್ತು ಮುಕ್ತರಾಗಬೇಕೆಂದಲ್ಲವೇ? ಅಥವಾ ಸೋವ್ಹಿಎಟ ಯುನಿಯನದ ವಸಾಹತು ಬೆಳೆಯಬೇಕೆಂದೋ?” ನಾನಂದೆ— ಜಗತ್ತಿನ ಎಲ್ಲ ಕೆಲಸಗಾರರ, ಶಕ್ತಿಯ, ವೈಭವದ ಪ್ರತೀಕವೆಂದರೆ, ಸೋವ್ಹಿಯೆಟ ಯುನಿಯನ್ನು.

“ಇದು ಕತ್ತೆಮಕ್ಕಳ ವಿಚಾರ. ನೀನಾದರೂ ಒಳಗೆ ಇದನ್ನು ತಿಳಿದಿರಲು ಸಾಕು.”

" ಸೋವ್ಹಿಯೆಟ ಯುನಿಯನ ಅತಿಶಯ ಪ್ರಬಲವಾಗದ ವಿನಾ ಕ್ರಾಂತಿಯು ಜಗತ್ತನ್ನೆಲ್ಲ ಪಸರಿಸಲಾರದು. "

ಉಪರೋಧದಿಂದ ಸಮಸಿಂಗ ನಕ್ಕುನುಡಿದನು. " ಹಾಗೇನೂ ಇಲ್ಲ. ಗುಲಾಮಗಿರಿಯಿಂದ ಕೆಲಸಗಾರರ ಮುಕ್ತತೆಯಾಗಬೇಕು; ಅದು ಅವರ ಸ್ವತಃದ ಜಾಗ್ರತಿ ಮತ್ತು ಕರ್ತೃತ್ವದಿಂದ. ಅದಕ್ಕಾಗಿ ಕೈಯಲ್ಲಿ ದಂಡ ಹಿಡಿದುಕೊಂಡು ನಿಲ್ಲುವ ಮುಕಾದಮನ ಆವಶ್ಯಕತೆ ಏನೂ ಇಲ್ಲ."

ಅವನ ಅಸ್ಪಷ್ಟ ಭಾಷಣದ ಪ್ರತಿಧ್ವನಿ, ನನ್ನ ಸ್ವತಃದ ಅಂತಃಕರಣದಲ್ಲಿ ಹೊರಡುತ್ತಿದ್ದಿತು. ಅಂಥ ವಿಚಾರ ಎಷ್ಟೋ ಸಾರೆ ನಾನು ಮಾಡಿದ್ದೆ. ಆದರೆ ಪಕ್ಷದ ವಿಷಯದಲ್ಲಿ ಏಕನಿಷ್ಠೆಯು, ನನ್ನ ದೇವರೆಂದು ನಾನು ಕಲ್ಪಿಸಿದ್ದೆ. ಹಾಗೂ ಆ ದೇವರ ಮುಂದೆ ಎಲ್ಲಾ ಶಂಕೆ-ಕುಶಂಕೆಗಳನ್ನು ಬಲಿ ಕೊಡುತ್ತ ಬಂದಿದ್ದೆ. ಸಮಸಿಂಗನಿಗೂ ನಿಷ್ಠೆಯ ಮಹತ್ವ ತಿಳಿಸಿಕೊಡಬೇಕೆಂದು ನಾನು ವಾದ ಮಾಡಹತ್ತಿದೆ. ಆಗ ಸಮಸಿಂಗನೆಂದನು.

" ನೀನು ಹೇಳುವಂಥ ಮಾತುಗಳು ಕೇಳಿ ಕೇಳಿ ನನಗೆ ಪಾಠ ಆಗಿ ಹೋಗಿವೆ. ಬೇಕಾದರೆ ಅದಕ್ಕೂ ಉದ್ದ ಭಾಷಣ ನಾನೂ ಮಾಡೇನು. ನಾನು ಕೂಡ ಕುರುಡನೇ ಆಗಿದ್ದೆ. ಆದರೆ ಭೆಟ್ಟಿಗೆಂದು, ಝುವ್ಹೋಕ್ಕೆ ಹೋದೆ. ಅಲ್ಲಿ ಅವನ ವಿಲಾಸಮಯ ಚರಿತ್ರವನ್ನು ನೋಡಿ, ಆಗ ಕಣ್ಣು ನಿಚ್ಚಳ ತೆರೆದವು. ನನಗೆ ಅವನು ಭೆಟ್ಟಿಯಾದಾಗ, ಮೃದುವಾದ ರೇಶಿಮೆ ಕೋಟು ಅವನ ಮೈಮೇಲಿತ್ತು. ನಾನು ಸರಳವಾಗಿ ಹೇಳಿದೆ. " ನಾವೆ ನನ್ನ ಜನ್ಮಭೂಮಿ. ಅದನ್ನೇ ನಾನು ಸೇವಿಸುತ್ತೇನೆ " ಅವನು ಆ ಕೋಪದಿಂದ ಕೂಗಾಡಿದನು. ನಾನು ಮತ್ತೆ ಹೇಳಿದೆ. " ಡಿಮಿಟ್ರಾಫ ಸಾಹೇಬ ! ನಿಮ್ಮ ಮೈಮೇಲೆ ಬೆಲೆಯುಳ್ಳ ಅರಿವೆಗಳಿವೆ. ಅವು ನನ್ನ ಮೈಗೇನೂ ಬರುವಂತಿಲ್ಲ. ಆದರೆ ನನ್ನ ಮೈಮೇಲಿನ ಅರಿವೆ ತೆಗೆದುಕೊಂಡು ನಿಮ್ಮವನ್ನು ಕೊಟ್ಟರೆ ಅಡ್ಡಿ ಇಲ್ಲ. " ಈ ಮಾತಿಗೆ ಅವನೇನು ಹೇಳಿದ ಗೊತ್ತೋ ? " ಸಮಸಿಂಗ ! ನಿನ್ನ ಪ್ರಕೃತಿ ಸರಿಯಾಗಿದ್ದಂತೆ ಕಂಡುಬರುವದಿಲ್ಲ. ತುಸು ವಿಶ್ರಾಂತಿ ತಕ್ಕೊಂಡರೆ ನೆಟ್ಟಗೆ. "

ನಾನೂ ಮೆಲ್ಲಗೆ ಹೇಳಿದೆ. " ನಿಜ ನೀನು ತುಸು ವಿಶ್ರಾಂತಿ ತಕ್ಕೊಂಡರೆ ನೆಟ್ಟಗೆ. ಸಮಸಿಂಗ ಮುಂದೆ ಹೇಳತೊಡಗಿದ. " ಡಿಮಿ-

ಟ್ರಾಫನಿಗೆ ಆಗ ನಾನು ಅನೇಕ ಸಂಗತಿ ಹೇಳಿದೆ. ನನ್ನದು ಸರಳವಾದ ಅಭಿಪ್ರಾಯವೆಂದು ಹೇಳಿಬಿಟ್ಟೆ. ನಿಮ್ಮ ಮುಂದೆ ಕೌಲೆತ್ತಿನಂತೆ ಗೋಣು ಹಾಕದೇ ಇರುವ ಸ್ವತಂತ್ರ ವಿಚಾರಿಗಳನ್ನು ದೂಡಿಕೊಡುವದು, ನಿಮ್ಮ ಮಾತಿಗೆ ತಲೆಹಾಕುವವರನ್ನು ಪಕ್ಷದಲ್ಲಿ ತುಂಬಿಕೊಳ್ಳುವದು. ಈ ಧೋರಣ ನೀವು ನಡೆಸಿದ್ದೀರಿ. ಇದರಿಂದ ಕಡೆಗೆ ಕಾರ್ಯನಾಶ ಸಿದ್ಧ! ಈ ಶಬ್ದ ಸಮುಸಿಂಗನದಲ್ಲ. ಬುಖಾರಿನನಿಗೆ ಬರೆದ ಒಂದು ಪತ್ರದಲ್ಲಿ ಕಾಮ್ರೇಡ ಲೆನಿನನು, ಹಿಂದೇ ಅವನ್ನು ಬರೆದಿಟ್ಟಿದ್ದಾನೆ." ನನ್ನ ಮಾತು ಕೇಳಿ ನನ್ನನ್ನೇನು ನುಂಗಿಬಿಡುವನೋ, ಎಂಬಂತೆ ಮೋರೆ ಮಾಡಿ ಡಿಮಿಟ್ರಾಫ ನೋಡಿದನು. ಹಃ ಹಃ ಹಃ ನನಗೆಲ್ಲ ಗೊತ್ತು. ಡಿಮಿಟ್ರಾಫ, ಮತ್ತು ಪಕ್ಷದವರ ಕಣ್ಣಲ್ಲಿ ನಾನು ಬತ್ತಹತ್ತಿದ್ದೇನೆ. ಆದರೆ ನೀನು ಮರಳಿ ಹೋದಾಗ ಹೇಳು. ಸಮುಸಿಂಗನು ಒಳ್ಳೇ ಮೋಜಿನಲ್ಲಿದ್ದಾನೆ. ಅವನ ಕೂದಲು ಕೊಂಕಿಸುವದು ಸಾಧ್ಯವಿಲ್ಲ."

ನಾನು ತಿಳಿದುಕೊಂಡಿದ್ದೆ. ಸಮುಸಿಂಗನ ಮಾತು ಕಡೆ ಪೂರೈಸುವಂಥವಲ್ಲ, ಎಂದು ಹಾಗೇ ಮುಂದೆ ಜರುಗಿತು. ಸಮುಸಿಂಗನ ಕಂಟಕ ದಾರಿಯಿಂದ ಕಿತ್ತೊಗೆದರು. ಆದರೆ ನಿಜವಾಗಿ ಅವನ ಗತಿ ಏನಾಯಿತೋ, ಯಾರಿಗೂ ಗೊತ್ತಾಗಲಿಲ್ಲ. "ಸಮುಸಿಂಗ ರಶಿಯಾಕ್ಕೆ ಹೋದ" ಇಷ್ಟೇ ನಾವೆಲ್ಲ ತಿಳಿಯುತ್ತೇವೆ. ಕಾಮಿಂಟರ್ನಕ್ಕೆ ವಿರುದ್ಧರಾದವರು ಜಗತ್ತಿನಲ್ಲಿ ಕಾಣೆಯಾದರೆಂದರೆ, ಹೀಗೆ ಉಲ್ಲೇಖಿಸುವ ಸಾಂಪ್ರದಾಯ ನಮ್ಮಲ್ಲಿ ರೂಢವಾಗಿತ್ತು.

ಇನ್ನೂ ಎಷ್ಟು ದಿನ ನಾನು ನಾರ್ವೆಯಲ್ಲಿ ಇರುತ್ತಿದ್ದೆನೋ? ಯಾರು ಬಲ್ಲರು. ೧೯೩೩ ನೇ ಜಾನೇವರಿಯ ೩೦ ನೇ ತಾರೀಖಿಗೆ ಫಿರೇಲಾಯಳ ಅವಸರದ ತಂತಿ ಬಂದಿತು. "ತೀವ್ರ ಹೊರಟು ಬಾ." ಎಲ್ಲ ಕೆಲಸಬಿಟ್ಟು ಹೊರಟೆ. ತಂತಿ ಏಕೆ ಬಿಟ್ಟಳೋ ಏನೋ ಎಂದು ಅಸ್ವಸ್ಥನಾದೆ.

ತಿರುಗಿಬಂದಾಗ, ಸ್ಟೇಶನದ ಪ್ಲಾಟಫಾರ್ಮಿನಲ್ಲಿಯೇ ಫಿರೇಲಾಯಳು ಬಂದಿದ್ದಳು. ಗಾಡಿ ಬಂದೊಡನೆ ಕಣ್ಣರಳಿಸಿ ಪ್ರತಿಯೊಂದು ಡಬ್ಬಿಯಲ್ಲಿ

ಆವಳು ಇಣಿಕಿ ನೋಡುತ್ತಿರುವದು ಕಾಣಿಸಿತು. ನಾನು— ಒಮ್ಮೆಲೇ ಕಿಡಕಿಯಲ್ಲಿ ಬಾಗಿ, ಫಿರೇಲಾಯ! ಎಂದು ಕೂಗಿದೆನು. ನಾಝೀ ಲಷ್ಕರೀ ಸಿಪಾಯರ ಗುಂಪು ಅಡ್ಡಾದುದರಿಂದ ಕ್ಷಣ ಮಾತ್ರ ಆಕೆ ಮರೆಯಾದಳು.

ಮರುಕ್ಷಣದಲ್ಲಿ ನಾನು ಕೆಳಗಿಳಿದು ನನ್ನ ಫಿರೇಲಾಯಳನ್ನು ಬಾಹು ಪಾಶದಲ್ಲಿ ಬಂಧಿಸಿದೆ!

ಆಕೆ ನುಡಿದಳು. “ಒಂದು ಬಹಳ ದುಃಖದಾಯಕ ವಾರ್ತೆ.”

“ಏನದು? ಹೇಳು.”

“ನಿನ್ನ ತಾಯಿ....ತೀರಿದಳು!”

ನನಗೆ ಅತೀವ ವೇದನೆಯಾಯಿತು. ಇದಲ್ಲದೆ ನಾನು ತಾಯಿಯ ಸುಖಕ್ಕಾಗಿ, ಯಾವ ಕೆಲಸ ಮಾಡಬೇಕಾಗಿತ್ತೋ, ಅದು ನನ್ನ ಕೈಯಿಂದಾಗದುದಕ್ಕೆ ಎಲ್ಲ ನೆನಪಿಗೆ ಬಂದವು. ಈ ದುಃಖ— ಅತಿ ತೀವ್ರ ಮತ್ತು ಅಸಹ್ಯವಾಗಿತ್ತು. ಕೈಕಾಲು ಲಟಪಟಿಸಿದವು. ಆದರೆ ಆ ಪಶ್ಚಾತ್ತಾಪ ಈಗೇನು ಉಪಯೋಗವಿತ್ತು? ಮೆಲ್ಲನೆ ನಾನು ವಿಚಾರಿಸಿದೆನು. “ನೀನು ತಂತಿ ಬಿಟ್ಟಾಗ ತಾಯಿ ಬದುಕಿದ್ದಳೇ?”

“ಇಲ್ಲ....ಅದಕ್ಕೂ ಮೊದಲೇ!

ಗಾಡಿಯ ಇಂಜಿನದಿಂದ ಹೊಗೆ ಬಂತು. ಅದರ ಕರ್ಕಶ ದನಿಯಿಂದ ವಾತಾವರಣ ತುಂಬಿಹೋಯಿತು. ಗೊಗ್ಗರು ದನಿಯ ಪೋರ್ಟರ ಶಬ್ದ, ಸಾಮಾನು ಮಾರುವವರ ಕೂಗು, ಜನಸಮುದಾಯದ ಅಸ್ಪಷ್ಟ ಮಾತುಗಳು, ಕಿವಿಯಲ್ಲಿ ಬೀಳಹತ್ತಿದವು. ಫಿರೇಲಾಯಳು ಒತ್ತಟ್ಟಿಗೆ ನನ್ನನ್ನು ಕರೆದೊಯ್ದು ಮೆಲ್ಲನೆ ಅಂದಳು.

“ಹಿಟ್ಲರ ಚಾನ್ಸಲರನಾದ.”

## ೧೨

ಹಿಟ್ಲರನು ಪದಾರೂಢನಾದ ಮೇಲೆ, ಆವನ ಅನುಯಾಯಿಗಳಿಗಾದ ಹರ್ಷ ಹೇಳಲಾಸಲ್ಲ: ಮೆರವಣಿಗೆ ತೆಗೆದು-ಕೂಗು-ಬೊಬ್ಬೆಹಾಕುವ ಭರಾರಿ ಸಿಪಾಯಿಗಳು ಕಾಣಹತ್ತಿದರು. ರಾತ್ರಿ ಎಂಬಂತಿಲ್ಲ. ಹಗಲು ಕೇಳುವಂತಿಲ್ಲ. ಬೇಕಾದಾಗ ಮೆರವಣಿಗೆ. ಇವರು ರಾತ್ರಿ ಹೊರಟಾಗ

ಕೈಯಲ್ಲಿರುವ ಸ್ವಸ್ತಿಕ ಚಿಹ್ನಾಂಕಿತಧ್ವಜ, ವಿದ್ಯುದ್ದೀಪಗಳ ಬೆಳಕಿನಲ್ಲಿ ಗಾಂಭೀರ್ಯದಿಂದ ಹಾರಾಡುವದು ಕಾಣುತ್ತಿದ್ದಿತು. "ಎಲ್ಲ ಕಡೆಗೆ ಹಿಟ್ಲರನ ಧ್ವಜವೇರಿಸಿರಿ. ಜರ್ಮನ ದೇಶದ ಸ್ವಾತಂತ್ರ್ಯ ಸೂರ್ಯ ಈಗ ಉದಯಿಸಿದ್ದಾನೆ." ಎಂಬಂರ್ಥದ ಪದ್ಯವನ್ನು ಉಚ್ಚ ಕಂಠದಿಂದ ಎಲ್ಲರೂ ಹಾಡುತ್ತಿದ್ದರು.

ನಮ್ಮ ಪಕ್ಷದಲ್ಲಿ ನನ್ನಂತೆ ಅಧಿಕಾರಿಗಳಾಗಿರುವವರಿಗೆಲ್ಲ, ಪೂರ್ಣ ತಿಳಿದುಹೋಗಿತ್ತು. ಹಿಟ್ಲರನು ದಡಪಶಾಹಿಯ ಪ್ರಬಲಾಸ್ತ್ರ ನಮ್ಮ ಮೇಲೆ ಉಪಯೋಗಿಸದೇ ಬಿಡುವದಿಲ್ಲ. ನಾಝಿಗಳ ಲಷ್ಕರೀ ಸಂಘಟನೆಯ ಅದ್ಭುತ ಸಾಮರ್ಥ್ಯದ ಅರಿವು ನಮಗಿದ್ದಿಲ್ಲವೆಂತಲ್ಲ. ನಮ್ಮ ಪಕ್ಷದ ಅಲ್ಪ ಸಾಮರ್ಥ್ಯವೂ ಗೊತ್ತಿತ್ತು. ಬಹಿರಂಗವಾಗಿ ಹಿಟ್ಲರನಿಗೆ ಎದುರಾಗುವದೆಂದರೆ ಎಂಥ ಆತ್ಮಘಾತಕತನವಾಗುವದೆಂಬುದನ್ನು ನಾವು ತಿಳಿದಿದ್ದೆವು. ದೇಶದಲ್ಲಿಯ ಕೆಲಸಗಾರರು ಭಿನ್ನಭಿನ್ನ ಪಕ್ಷಗಳಲ್ಲಿ ವಿಭಾಗಿಸಲ್ಪಟ್ಟಿದ್ದರು. ಮುಂದಾಳುಗಳು ತಮ್ಮ ಕಾರ್ಯಕ್ರಮ ನೆರವೇರಿಸುವದು ಜಗಿಯಾಗಿದ್ದಿತು. ಅವರು ಹಿಟ್ಲರನಿಗೆ ವಿರುದ್ಧರೆಂದು ತಿಳಿದರೆ ಸಾಕು. ತಲೆ ಬೀಳುವದರಲ್ಲಿ ಸಂದೇಹ ವಿರಲಿಲ್ಲ: ನಮ್ಮ ಜಾಗತಿಕ ಕ್ರಾಂತಿಯ ಘೋಷಣೆ ಹಾಸ್ಯಾಸ್ಪದವೆನಿಸುವಹಾಗಿತ್ತು ಸುತ್ತಲಿನ ಪರಿಸ್ಥಿತಿ. ಅದಕ್ಕಾಗಿ ನಮ್ಮ ಮುಂದಾಳು ಅರ್ನ್ಸ್ಟ್ ಥಾಎಲಮಾನ ಬಂಡಾಯಕ್ಕೆ ಆಜ್ಞೆ ಕೊಡಲು ಎಷ್ಟು ಸಿದ್ಧನಿರಲಿಲ್ಲ, ಪರಾಭವವು ಸ್ಪಷ್ಟ ಕಾಣುತ್ತಿದ್ದರೂ, "ಮುಂದಾಗಿರಿ, ಎಂದು ಸೈನ್ಯಕ್ಕೆ ಆಜ್ಞಾಪಿಸುವ ಸೇನಾಪತಿಯನ್ನು ಗುಂಡುಹಾಕಿ ಕೊಲ್ಲಬೇಕು." ಹೀಗೆ ಸ್ವತಃ ಲೆನಿನನ ಉದ್ಗಾರವಿದೆ. ಎಂದು ಥಾಎಲಮಾನ ತಿರಸ್ಕಾರದಿಂದ ಹೇಳುತ್ತಿದ್ದ.

ಆದರೆ ಮಾಸ್ಕೋ? ಅಲ್ಲಿಯ ವಿಚಾರ ಬೇರೆ. ಇದೇ ಸಮಯದಲ್ಲಿ ಸಾಧ್ಯವಾದಷ್ಟು ದೊಡ್ಡ ಪ್ರಮಾಣದಿಂದ ಹಿಟ್ಲರನಿಗೆ ಎದುರಾಗಬೇಕು. ಮೊದಲ ಹೆಜ್ಜೆ ಎಂದು ದೇಶದಲ್ಲಿ ವ್ಯಾಪಕವಾದ ಸಂಪು ಹೂಡಿಸಬೇಕು. ಹೀಗೆ ಮಾಸ್ಕೋದಿಂದ ನಮಗೆಲ್ಲ ಹುಕುಮು ಬಂದುಬಿಟ್ಟವು. ಮುಂದೇನು? ಎಂಬ ವಿಚಾರಕ್ಕೆ ಹಾಂಬುರ್ಗದಲ್ಲಿ ನಮ್ಮೆಲ್ಲ ಕಾರ್ಯಕರ್ತರ ಸಭೆ ನೆರೆದಿತು. ಮಾಸ್ಕೋದಿಂದ ಹುಕುಮು ತಂದ ಪ್ರತಿನಿಧಿ

ಬೇಕೆಂತಲೇ ಸಭೆಯಲ್ಲಿ ಕುಳಿತಿದ್ದನು. ಚರ್ಚೆಯ ಓಘದಲ್ಲಿ ನಮ್ಮ ಪಕ್ಷದ ವೆಷ್ಟರಮಾನನೆಂಬವನು ಸ್ಪಷ್ಟವಾಗಿ ಕೇಳಿಬಿಟ್ಟನು. "ಹಿಟ್ಲರನ ಆಳಿಕೆಯ ವಿರುದ್ಧವಾಗಿ, ಸಾರ್ವತ್ರಿಕ ಸಂಪು ಎಬ್ಬಿಸಬೇಕೆಂದು ಮಾಸ್ಕೋದಿಂದ ಹುಕುಮಂತೂ ಬಂದಿದೆ. ಆದರೆ ಇಂಥ ಪ್ರಯತ್ನಗಳಿಗೆ ಬರುವ ಫಲವಾದರೂ ಏನು ?"

ಕಾಮಿಂಟರ್ನರ ಪ್ರತಿನಿಧಿ ಗರ್ಜಿಸಿದನು.

"ನಿಷ್ಪನ್ನವೇನಾಗುವದೇ ? ಹಿಟ್ಲರ ಮಣ್ಣುಮುಕ್ಕುವನು ತಿಳಿದಿರಾ ! ಹಿಂದೆ ಎರಡು ಸಾರೆ ಸಾರ್ವತ್ರಿಕ ಸಂಪು ಹೂಡಿಸಿ, ಆಯಾ ಕಾಲದ ಸರಕಾರವನ್ನು ನಾವು ಅಲ್ಲಾಡಿಸಿದೆವು. ಈಗಾದರೂ ಹಿಟ್ಲರನ ಕತೆ ಮುಗಿಸಬೇಕಾದರೆ ಸಂಪಿನ ಶಸ್ತ್ರ ನಾವು ಬೀಸಬೇಕು."

ವೆಸ್ಟರಮಾನ ಹೇಳಿದನು. "ಇದು ಶುದ್ಧ ಹುಚ್ಚುತನ. ಕ್ರಾಂತಿಯು ಒತ್ತಟ್ಟಿಗಿರಲಿ. ಸಾರ್ವತ್ರಿಕ ಸಂಪು ಕೂಡ ಯಶಸ್ವಿರೀತಿಯಿಂದ ಕೊನೆಗಾಣಿಸುವ ಶಕ್ತಿ ನಮ್ಮಲ್ಲಿ ಉಳಿದಿಲ್ಲ. ಎಂಬ ಸಂಗತಿ ನನ್ನಂತೆ ಮಾಸ್ಕೋದಿಂದ ಬಂದ ಕಾಮ್ರೇಡರಿಗೂ ತಿಳಿಯಬೇಕು. ಒಂದು ವೇಳೆ ಸಂಪಿನ ಪ್ರಯತ್ನ– ನಾವು ಮಾಡಿದರೆ ನಮ್ಮ ಪಕ್ಷ ಸಮೂಲ ನಷ್ಟವಾಗುವದು. ಇಷ್ಟು ಮಾತ್ರ ನಾನು ಹೇಳಬಲ್ಲೆ."

ಮಾಸ್ಕೋ ಪ್ರತಿನಿಧಿ ಮಾತಾಡಿದನು.

"ಕಾಮ್ರೇಡ ವೆಸ್ಟರಮಾನರಿಗೆ ಇದು ತಿಳಿಯಬೇಕು. ಸಂಘಟನೆ ಕೂಡಿಕೊಳ್ಳಲಿಕ್ಕೆ ಹಿಟ್ಲರನಿಗೆ ಅವಕಾಶ ಕೊಟ್ಟರೆ, ರಶಿಯದ ಮೇಲೆ ಸ್ವಾರಿ ಮಾಡಲಿಕ್ಕೆ ಅವನು ಹಿಂದೆಗೆಯಲಾರ. ಹಿಟ್ಲರನಿಗೆ ಯುದ್ಧದ –ಬ್ರಹ್ಮಕಪಾಲ ಸದಾ ಜಿನ್ನಟ್ಟಿರಬೇಕು. ಇದರ ವಿನಾ ಗತ್ಯಂತರವಿಲ್ಲ. ರಶಿಯಾ ಎಲ್ಲ ಕ್ರಾಂತಿಕಾರರಿಗೆ ಪಿತೃದೇಶ. ಅದರ ರಕ್ಷಣೆ ಮುಖ್ಯ ಪ್ರಶ್ನವೆಂದು ಸ್ಪಷ್ಟವಾಗಿ ನಾನು ಹೇಳುತ್ತೇನೆ. ಸೋವ್ಹಿಯೆಟ ರಶಿಯಾ ಜೀವಂತ ಉಳಿದರೆ ಮಾತ್ರ ಸೋವ್ಹಿಯೆಟ ಜರ್ಮನಿ ನಿರ್ಮಿಸಲಿಕ್ಕೆ ಸಾಧ್ಯ. ಇದನ್ನು ಮರೆತರೆ ನಡೆಯುವಂತಿಲ್ಲ."

ಸಭೆಯಲ್ಲಿ ಚಪ್ಪಳೆ ಸಪ್ಪಳ ತಾನೇ ತಾನು. ವೆಸ್ಟರಮಾನನ ಮುಖದ

ಕೆಂಪಿಳಿದು ಹೋಯಿತು. ಆದರೂ ಅವನು ಸುಮ್ಮನೇ ಕೂಡಲಿಲ್ಲ. ಮೆಲ್ಲನೆ ಹೇಳಿದರೂ ಸ್ಪಷ್ಟ ಮಾತಾಡಿದನು.

" ಜರ್ಮನ ಕಮ್ಯುನಿಸ್ಟರು ಶಕ್ತಿಹೀನರಾಗಿರುವದರಿಂದ, ಅವರ ಯಾವ ಕಾರ್ಯಗಳೂ ಯಶಸ್ವಿಯಾಗುವದಿಲ್ಲ. ಜನ ಸಹಾಯವಿಲ್ಲದೇ ಯುದ್ಧ ಹೂಡಿ ಅವರು ನಷ್ಟಹೊಂದುವರು. ಸೋವ್ಹಿಯೆಟ ರಶಿಯವನ್ನು ಸಂರಕ್ಷಿಸಲಿಕ್ಕೆ ನಿಮ್ಮ ಪ್ರಾಣಕೊಡಿರಿ. ಎಂಬ ಉಪದೇಶವು ಸಾಮಾನ್ಯ ಕೆಲಸಗಾರರ ಮನಸ್ಸಿಗೆ ಹಿಡಿಯುವದಿಲ್ಲ. ಈಗ ನಾವು ಯುದ್ಧಮಾಡಿದರೆ ಹಿಟ್ಲರನು ಉರುಳುತ್ತಾನೆಂಬ ವಿಶ್ವಾಸ ಕೆಲಸಗಾರರಿಗೆ ಹುಟ್ಟಬೇಕು. ಈಗ ಇದು ಅಶಕ್ಯವೆಂದು ಕಾಣುತ್ತಿದ್ದರೂ, ನಾವೆಲ್ಲ ಕಾರ್ಯಕರ್ತರು ಸಂಪು ಎಬ್ಬಿಸಲು ಯತ್ನಿಸುವದೆಂದರೆ ಬೆಂಕಿಯಲ್ಲಿ ಹಾರಿದಂತೆಯೇ ಸರಿ ".

ಇಷ್ಟು ಮಾತಾಡಿ ವೆಸ್ಟರಮಾನನು, ತನ್ನ ಕುರ್ಚಿಯ ಮೇಲೆ ದಪ್ಪನೆ ಕುಳಿತನು. ಎಲ್ಲರೂ ಅಸಹ್ಯಮೋರೆ ಮಾಡಿದ್ದರು. ಮಾಸ್ಕೋ ಪ್ರತಿನಿಧಿ ಆವೇಶದಿಂದ ಹೇಳಿದನು.

" ವೆಸ್ಟರಮಾನ, ಒಬ್ಬ ಫಿತೂರಿ ಮನುಷ್ಯನಂತೆ ಮಾತಾಡಹತ್ತಿರುವೆ ಇದರರ್ಥವಾದರೂ ಏನು ?

ಸಭೆಯಲ್ಲಿ ಕೂಗೆದ್ದಿತು. " ವೆಸ್ಟರಮಾನನಿಗೆ ಧಿಃಕಾರವಿರಲಿ. ಫಿತೂರ ! ದೇಶದ್ರೋಹಿ ! ''

ವೆಸ್ಟರಮಾನ ಸಭೆಯಿಂದ ಎದ್ದು ನಡೆದ. ಸಭೆ ಮುಗಿವವರೆಗೆ ಮಾತ್ರ ಆ ಮಂದಿರ ಬಿಟ್ಟು ಅವನನ್ನು ಹೊರಗೆ ಬಿಡಲಿಲ್ಲ. ಮರುದಿನವೇ ಶಿಸ್ತುಭಂಗದ ಆರೋಪ ಹೊರಿಸಿ, ಪಕ್ಷದಿಂದ ಅವನಿಗೆ ಹಕಾಲಪಟ್ಟಿ ಆಯಿತು. ಮುಂದೆರಡು ವರ್ಷಕ್ಕೆ ೧೯೩೫ರಲ್ಲಿ ಗೆಸ್ಟಾಪೋದವರು ಅವನನ್ನು ಬಂಧಿಸಿಟ್ಟರು. ತುಸು ದಿನಗಳಲ್ಲಿಯೇ ಅವನು ಆತ್ಮಹತ್ಯೆ ಮಾಡಿಕೊಂಡ.

ಮಾಸ್ಕೋದ ಹುಕುಮು ಪಾಲಿಸುವ ನಿರ್ಧಾರವಾಯಿತು. ೧೯೩೩ರ ಫೆಬ್ರುವರಿ ತಿಂಗಳಲ್ಲಿ ನಾವು ಕೆಲಸಗಾರರಿಗೆ ಲಕ್ಷಾಗಟ್ಟಲೆ ಹಸ್ತಪತ್ರಿಕೆ ಹಂಚಿದೆವು. " ಜರ್ಮನ ಕೆಲಸಗಾರರೇ ! ಹಿಟ್ಲರನ ನಾಶಗೊಳಿಸಿರಿ ! ಸಾರ್ವತ್ರಿಕ ಸಂಪು ಹೂಡಿರಿ ! "

ಹಿಟ್ಲರ ನಾಶಕ್ಕಾಗಿ ಕಾಮಿಂಟರ್ನ ಪಕ್ಷವು ಹೂಡಿದ ಈ ಯುಕ್ತಿ ಅವನಿಗೆ ಪಥ್ಯಕರವಾಗಿ ಪರಿಣಮಿಸಿತು. ನ್ಯಾಶನಲ ಸೋಶಾಲಿಷ್ಟ ಪಕ್ಷಕ್ಕೆ ಅನುಕೂಲವೆನಿಸುವ ಕ್ರಾಂತಿಯನ್ನು ಅವನು ಊರೂರು ಮಾಡಬೇಕಾಗಿದ್ದಿತು. ನಮ್ಮ ಉದ್ಯೋಗದಿಂದ, ಅದಕ್ಕೆ ಅನುಕೂಲ ಸಂಧಿ ದೊರೆಯಿತು. ನಾವು ಇನ್ನು ಕೆಲವು ದಿನ ಗುಪ್ತರೀತಿಯಿಂದ ನಮ್ಮ ಬಲ ಬೆಳೆಸಿಕೊಳ್ಳಬೇಕು. ಎಂದು ನಮ್ಮ ಪಕ್ಷದಲ್ಲಿ ಅನೇಕರಿಗೆ ಎನಿಸುತ್ತಿದ್ದರೂ, ಮಾಸ್ಕೊ ತನ್ನ ಹಟ ನಡೆಸಿತು. ನಾವು ಆಜ್ಞಾಧಾರಕರು. ಶಿಸ್ತಿನಿಂದ ಬಂಧಿಸಲ್ಪಟ್ಟವರು. ಸಾರ್ವತ್ರಿಕ ಸಂಪಿನ ಕಾಳೆ ಊದಿದೆವು. ನಾವು ಇಂಥದೇನಾದರೂ ಒಂದು ಮೂರ್ಖತನ ಮಾಡಲಿ ಎಂದು ಹಿಟ್ಲರನು ಏನು ಈಶ್ವರನನ್ನು ಪ್ರಾರ್ಥಿಸುತ್ತಿದ್ದನೇನೋ? ನಮ್ಮನ್ನೆಲ್ಲ ಬಂಡುಖೋರರೆಂದು ಅವನು ನಿರ್ಣಯಿಸಿಬಿಟ್ಟ. ಗಣಪತಿಯ ಸಂಗಡ ಇಲಿಗೂ ಪೂಜೆ, ಎಂದಂತೆ, ನಮ್ಮನ್ನಷ್ಟೆ ಅಲ್ಲ. ನಾಝಿ ಪಕ್ಷದ ವಿರುದ್ಧರಾದವರನ್ನೆಲ್ಲ, ಅತ್ಯಂತ ಮವಾಳರನ್ನು ಸಹ ಹತ್ತಿಕ್ಕುವ ಸುವರ್ಣ-ಸಂಧಿ ಹಿಟ್ಲರ ಸಾಧಿಸಿದನು. "ದೇಶದಲ್ಲಿ ಯಾದವೀ ಕಲಹವೆಬ್ಬಿಸುವ ಕಮ್ಯುನಿಷ್ಟರಿಂದ ಜರ್ಮನಿಯನ್ನು ರಕ್ಷಿಸಿರಿ." ಎಂಬ ಘೋಷಣೆಯಿಂದ ಜನರನ್ನು ವಂಚಿಸಿ, ತನ್ನ ಪಕ್ಷಕ್ಕೆಳೆಯುವದು ಅವನಿಗೆ ಸುಲಭವಾಯಿತು. ಆಲುಗಾಡಿಸಿ ಗೂಟ ಬಡಿದಂತೆ, ನಾಝಿ ಪಕ್ಷದ ಬಲ ಬೆಳೆಸಬೇಕಾಗಿರುವದರಿಂದ, ರಿಸ್ಟಾಗ ಸಭೆ ವಿಸರ್ಜಿಸಿ, ಹೊಸ ಚುನಾವಣೆ ಜಾಹೀರ ಮಾಡಿದನು. ಈ ಚುನಾವಣೆಯ ಗೊಂದಲದಲ್ಲಿ ಎಷ್ಟು ಬೇಕೋ ಅಷ್ಟು ನಮ್ಮ ವಿರುದ್ಧ ಜನರಲ್ಲಿ ಅಪಪ್ರಚಾರ ಮಾಡಿದನು. "ಕಮ್ಯುನಿಷ್ಟರನ್ನು ನಿಃಪಾತಗೊಳಿಸಿರಿ." ಇದೇ ಅವನ ಜಪಮಂತ್ರ

ಇದೇ ಸಂಧಿಯಲ್ಲಿ ಕ್ಯಾಪ್ಟನ ಗೋರಿಂಗ ಮಹಾಶಯರು ನಾಝಿ ಸಂಘಟನೆಯ ಹೊಸ ಅಂಗವೆಂದು, ಗುಪ್ತಹೇರರ ದಲವನ್ನು ಅಸ್ತಿತ್ವದಲ್ಲಿ ತಂದರು. ಇದರ ಹೆಸರೇ ಗೆಸ್ಟಾಪೋ. ಎಡಗರ ಆಂಡ್ರಿಯನ್ನು ನಾನು ವಿಚಾರಿಸಿದೆ. "ಗೆಸ್ಟಾಪೋ, ಇದರರ್ಥವಾದರೂ ಏನು?" ತುಚ್ಛತೆಯಿಂದ ನಕ್ಕು ಆಂಡ್ರಿ ಹೇಳಿದ: "ಸೋವ್ಹಿಯಟರ ಜೀ-ಪಿಯೂ-ಇದೆಯಲ್ಲ, ಅದರದೇ ನಕಲು ಮಾಡುತ್ತಾರೆ ಮೊಮ್ಮಕ್ಕಳು!"

ಒಂದು ಕಡೆ ನಮ್ಮದು, ಕೆಲಸಗಾರರ ಸಂಪು ಎಬ್ಬಿಸಬೇಕೆಂದು—ಯೋಚನೆ. ವಸ್ತುಸ್ಥಿತಿ? ಬಿದರಿಸ ನಾಯಿಗಳಂತೆ ಯಾವಾಗೋ ಎಂದು ದಾರಿಕಾಯುತ್ತ ಕುಳಿತ ಕೆಲಸಗಾರರು. ಗೆಸ್ಟಾಪೋ ಸ್ಥಾಪನೆ ಜಾಹೀರವಾಯಿತು. ತೀವ್ರವೇ ಭರಾರಿ ಸಿಪಾಯರೆಲ್ಲ— ಪೋಲೀಸ ಅಧಿಕಾರಿಗಳಾದರು. ನಮ್ಮ ಹೇರರು ತಂದ ಮತ್ತೊಂದು ಸುದ್ದಿಎನೆಂದರೆ— ಆರಿಸಿದ ಮುವಾಳ, ಅಣ್ಣಗಳ ಸಶಸ್ತ್ರ ಪಥಕ ಸಿದ್ಧಪಡಿಸಿ ಖಾಸ ಸಿಪಾಯಿಗಳೆಂದು ಸಂಘಟನೆಮಾಡಿ ಬಿಟ್ಟನಂತೆ!

ಬಂದರ ಹಿಂದೆ ಒಂದು ನಡೆದ ಇವೆಲ್ಲ ಘಟನೆ ಚಮತ್ಕಾರಿಕವಾಗಿದ್ದವು. ಇದರ ಅರ್ಥವಾದರೂ ಏನು? ಹಿಟ್ಲರನ ವಿಚಾರವೇನಿದೆ? ಇದು ನಮ್ಮ ತರ್ಕಕ್ಕೆ ಬಗೆಹರಿಯಲಿಲ್ಲ. ವಾತಾವರಣ ಗಂಭೀರವೂ ತುಸು ಅಭದ್ರವೂ ಎನಿಸುತ್ತಿತ್ತು. ಎರಡು ದಿನ ಹಾಗೇ ಕಳೆದವು.

ಮೂರನೇ ದಿನ ಬೆಳಿಗ್ಗೆ ಸುಮಾರು ಎರಡು ಬಾರಿಸುವ ಸಮಯ. ನಾನು ಬಂದರದಿಂದ ಹೊರಬೀಳುತ್ತಲಿದ್ದೆ. 'ಬೋಖಂ' ಎಂಬ ಹೆಸರಿನ ಹಡಗದ ಮೇಲೆ ಮಾತ್ರ ಪ್ರಚಾರಮಾಡುವದಕ್ಕೆ ನನ್ನ ರಾತ್ರಿ ಎಲ್ಲ ಕಳೆದಿತ್ತು. ಹಾದಿಯನ್ನು ಕೂಡಿ ಒಂದು ವಿಸಿಕ್ಷಿತ ವಿಶ್ರಾಂತಿ ಗೃಹದ ಕಡೆಗೆ ನಾನು ತಿರುಗಿದೆ. ಲೇವನಡಾವುಸ್ಕೀ, ಎಂಬ ಹೆಸರಿನ ಮನುಷ್ಯನು ಐದು ಮಾರ್ಕು ಬೆಲೆಯ ಖೊಟ್ಟಿನಾಣ್ಯಮಾಡಿ ಪಕ್ಷಕ್ಕೆ ಪೂರೈಸುತ್ತಿದ್ದನು. ಈ ವಿಶ್ರಾಂತಿ ಗೃಹದಲ್ಲಿ ನಾನು ಅವನಿಗೆ ಭೆಟ್ಟಿಯಾಗಬೇಕಾಗಿದ್ದಿತು. ಬೆಳಗಾಗುತ್ತ ಬಂದಿದ್ದರೂ ಬೀದಿಯ ಎರಡೂ ಮಗ್ಗಲಿಗಿರುವ ನೃತ್ಯ ಮಂದಿರಗಳು, ಮದ್ಯ ಗೃಹಗಳು ವಿಲಾಸೀ ಸ್ತ್ರೀಪುರುಷರಿಂದ ತುಂಬಿ ಹೋಗಿದ್ದವು. ಕಲ್ಲು ನೆಲಗಟ್ಟಿನ ಕಾಲು ದಾರಿಯಲ್ಲಿ—ಗಣಿಕೆಯರು ಅಡ್ಡಾಡುತ್ತಿದ್ದರು. ಕ್ವಚಿತ್ತಾಗಿ ಎಲ್ಲೋ ಮೂಲೆಯಲ್ಲಿ ಅವರ ವ್ಯಾಪಾರವಾಗುತ್ತಿದ್ದಿತು. ಇದನ್ನೆಲ್ಲ ನೋಡುತ್ತ ನಾನು ಮುಂದೆ ಸಾಗಿರುವಾಗ, ಎದುರು ಬರುವ ಒಬ್ಬನು ನನಗೆ ಢಿಕ್ಕಿ ಹೊಡೆದು ಬಿಟ್ಟ. ನೋಡುತ್ತೇನೆ. ಅವನೋರ್ವ ನಮ್ಮ ಪಕ್ಷದ ಗುಪ್ತ ಹೇರ.

"ಏನು? ಮತ್ತೇನು ಹೊಸ ಸುದ್ದಿ? ನಾನು ವಿಚಾರಿಸಿದೆ.

ಗಾಬರಿಯಿಂದ ಅವನು ಹೇಳಿದ. "ನಮ್ಮ ಎಲ್ಲ ಕಾರ್ಯಕರ್ತರು ಈಗಿಂದೀಗ ಮನೆ ಸ್ಥಳಾಂತರಿಸಬೇಕು. ನೀವು ಮನೆಗೆ ಹೋಗಬೇಡಿ."

"ಎಂದರೆ; ಆಗಿರುವದಾದರೂ ಏನು ?"

"ರಿಷ್ಟಾಗಕ್ಕೆ ಬೆಂಕಿಹತ್ತಿದೆ! ಎಲ್ಲ ಕಡೆಗೂ ಇನ್ನು, 'ಹಿಡಿ' ಕೇಶ್ವರಿ ಸಂಚರಿಸುತ್ತಾಳೆ."

"ಹೇಗೋ !"

ಹಿಟ್ಲರನಿಗೆ ತನ್ನ ಶತ್ರುಗಳನ್ನು ನಿರ್ನಾಮಗೊಳಿಸಿ, ದಡಪಶಾಹಿಯ ಧೂಮಚಕ್ರವನ್ನು ಸಭ್ಯನಂತೆ ತಿರುಗಿಸಲಿಕ್ಕೆ ಎಲ್ಲಿಯದೋ ಏನಾದರೂ ಒಂದು ಅತ್ಯಾಚಾರದ ಕುಂಟು ನೆಪ ಬೇಕಾಗಿದ್ದಿತು. ಅದಕಾಗಿಯೇ ರಿಸ್ಟಾಗಮಂದಿರದ ಆಹುತಿ ಬೆಂಕಿಗಾದದ್ದು....

ಮೊದಲು ಫಿರೇಲಾಯಳ ಕಡೆಗೆ ಹೋಗಬೇಕೆಂದು ವಿಚಾರಬಂದಿತು. ಕೇಂದ್ರ ಕಚೇರಿಯಲ್ಲಿ ನೋಡುವಾ. ಯಾರಾವರೂ ಭೆಟ್ಟಿಯಾಗುವರೋ ಹೇಗೆ? ಅವರ ಭೆಟ್ಟಿಯಾದನಂತರ ಮುಂದಿನ ಮಾರ್ಗದ ನಿಶ್ಚಯ– ಎಂದು ಲಗುಬಗೆಯಿಂದ ನಡೆದೆ. ಭರಾರಿ ಸಿಪಾಯರ ಒಂದು ತುಕ್ಕಡಿ ಬಂದು ಮುಂದೆ ಹಾದು ಹೋಯಿತು. ಅಸ್ಫಾಲ್ಟದ ಬೀದಿಯಲ್ಲಿ "ಒಂದು, ಎರಡು, ಒಂದು, ಎರಡು, ಎಂದು ಅವರ ಬೂಟು ಸಪ್ಪಳ ಮಾಡುತ್ತಿದ್ದವು. ನಾಝಿ ಪಕ್ಷದ ಲಷ್ಕರೀ ಗೀತ ಅವರು ಹಾಡುತ್ತಿದ್ದರು.

* * * *

ರಿಸ್ಟಾಗಕ್ಕೆ ಬೆಂಕಿಹತ್ತಿದ ಆ ರಾತ್ರಿಯಲ್ಲಿ ಸುಮಾರು ೪೬೦೦ ಕಮ್ಯುನಿಷ್ಟ ಮತ್ತು ಸೋಶಾಲಿಷ್ಟ ಮುಂದಾಳುಗಳು ಹಿಡಿಯಲ್ಪಟ್ಟರು. ಪ್ರಶಿಯಾ ದೇಶದಲ್ಲಿ, ಯಾವಯಾವ ಮಂದಿರಗಳಲ್ಲಿ ಕಮ್ಯುನಿಷ್ಟ ಕೇಂದ್ರಗಳಿದ್ದವೋ, ಅವಕ್ಕೆ ಮುತ್ತಿಗೆಹಾಕಿ, ಅವುಗಳನ್ನೆಲ್ಲ ನಾಝಿ ಸಶಸ್ತ್ರ ತುಕ್ಕಡಿಗಳು ಸ್ವಾಧೀನಪಡಿಸಿಕೊಂಡವು. ರಿಸ್ಟಾಗಕ್ಕೆ ಬೆಂಕಿಹತ್ತಿದ ಸಂಬಂಧದಲ್ಲಿ ಹಿಟ್ಲರನು ಒಂದು ಅಧಿಕೃತ ಪತ್ರಿಕೆ ತೆಗೆದ. ಅದರಲ್ಲಿ ಪೂರಿನಸವ್ಹಾನಡರಲುಟೆ' ಎಂಬ ಡಚ ಗೃಹಸ್ಥ ಬೆಂಕಿ ಹಚ್ಚಿರಬೇಕು. ಎಂದು ಹೇಳಿದ್ದ. ಇವನು ಕಮ್ಯುನಿಷ್ಟರ ಹಸ್ತಕನೂ ಇರಬಹುದು ಎಂದು

ವಿಧಾನಮಾಡಿದ್ದ. ಸುಡುತ್ತಿರುವ ರಿಸ್ಟಾಗ ಮಂದಿರದಲ್ಲಿ ಇವನನ್ನು ಬಂಧಿಸಿದರು. ಲುಬೆ ಎಂಬ ಹೆಸರಿನವನು ನಮ್ಮ ಪಕ್ಷದಲ್ಲಿಯೇ ಇರಲಿಲ್ಲ. ಇದೆಲ್ಲ ಹಿಟ್ಲರನ ತಂತ್ರವೆಂಬುದು ನಮಗೆ ಸ್ಪಷ್ಟಕಾಣಿಸುತ್ತಿತ್ತು. ರಿಸ್ಟಾಗಕ್ಕೆ ಬೆಂಕಿಹಚ್ಚಿದ ಅಪಕೀರ್ತಿ ನಮ್ಮ ಪಾಲಿಗೆ ಕೊಡುವ ಹಿಟ್ಲರನಿಗೆ ಖಂಡತುಂಡ ಉತ್ತರ ಕೊಡಬೇಕೆಂದು ನಾವು ನಿರ್ಧರಿಸಿದೆವು. “ರಿಸ್ಟಾಗಕ್ಕೆ ಬೆಂಕಿ ಹಚ್ಚಿದವರು ಯಾರು? ಮತ್ತಾರೂ ಅಲ್ಲ ಗೋರಿಂಗನೇ!” ಎಂದು ಲಕ್ಷಗಟ್ಟಲೆ ಪತ್ರಿಕೆ ತೆಗೆದು, ನಮ್ಮವರಿಂದ ಅವುಗಳನ್ನು ಹಂಚಿಬಿಟ್ಟೆವು.

ಬಹಿರಂಗವಾಗಿಯೇ ಹಿಟ್ಲರನು ಕಮ್ಯುನಿಷ್ಟರ ಬೇಟೆಗೆ ಆರಂಭಿಸಿದನು. ನಮ್ಮ ಪಕ್ಷದಲ್ಲಿ ಸೇರಿದ್ದ ಕೂಟಕೂಳಿನವರು ಬೇಗನೇ ಶರಣಾಗತರಾದರು. ಅಲ್ಲಲ್ಲಿ ಗುಪ್ತ ಹೇರರ ಸುಳಿದಾಟ ಸಾಗಿತ್ತು. ಪಕ್ಷದಲ್ಲಿನ ಅನೇಕ ವರಿಷ್ಠರು ಸೀಮೆಯಾಚೆ ಹೋಗಿ ಉಳಿದುಕೊಂಡರು. ಥಾ ಎಲಮಾನನು ನಿಜವಾಗಿ ಒಂದು ಒಳ್ಳೇ ಗುಪ್ತ ಸ್ಥಳದಲ್ಲಿ ಇರುತ್ತಿದ್ದನು. ಆದರೆ ಅವನ ನಂಬಿಗೆಯ ಒಬ್ಬನು ಮೋಸಮಾಡಿದ್ದರಿಂದ ಥಾ ಎಲಮಾನ ಸಿಕ್ಕ. ಎಡಗರ ಅಂಡ್ರೀ-ಗಾಡಿಹತ್ತುವಾಗ ವಿಶ್ವಾಸಘಾತಕಿಗಳ ತಂತ್ರದಿಂದ, ಗೆಸ್ಟಾಪೋದವರ ಕೈಯಲ್ಲಿ ಸಿಕ್ಕುಬಿಟ್ಟ. ಡಿಮಿಟ್ರಾಫನನ್ನು ಹಾಟೇಲದ ಓರ್ವ ನೌಕರ ಆಲ್ಬರ್ಟಸಾಲ್ಟರ ತನ್ನ ಮುದುಕ ತಾಯಿಯನ್ನು ಉಳಿಸಹೋಗಿ, ಅಕಸ್ಮಾತ್ ಬಂಧಿತನಾದ.

ಇದು ಮುಂದಾಳುಗಳ ಕತೆ, ಪಕ್ಷದಲ್ಲಿಯ ಸಾಮಾನ್ಯರ ಅವಸ್ಥೆ ಏನಾಗಿರಬೇಕು? ಹುತ್ತಿನ ಮೇಲೆ ಆನೆಯು ಕಾಲುಬಿಟ್ಟರೆ ಅಲ್ಲಿಯ ಇರುವೆಗಳ ಅವಸ್ಥೆ ಏನಾಗುವದೋ ಅದೇ. ಬರೇ ಇಪ್ಪತ್ತುನಾಲ್ಕು ತಾಸುಗಳಲ್ಲಿ ಈ ದುರ್ದಶೆ.

ಎಂದಾದರೂ ಒಮ್ಮೆ ಗೆಸ್ಟಾಪೋ ಸಂಕ್ರಾಂತಿ ನನಗೂ ಇದೆ ಎಂಬುದನ್ನು ನಾನು ತಿಳಿದಿದ್ದೆ. ಈ ಬಿರುಗಾಳಿಯಿಂದ ಪಕ್ಷದ ಜನರನ್ನು ಶಕ್ಯವಿದ್ದಮಟ್ಟಿಗೆ ಉಳಿಸಿ ನಿಲ್ಲಿಸಬೇಕು ಎಂದು ಯತ್ನಿಸಹತ್ತಿದೆ. ನಾನಂತೂ ಅತಿ ಜಾಗ್ರತಿಯಿಂದಿರಬೇಕು. ನನ್ನ ಮನೆ ವಿಳಾಸ ಅತಿಶಯ ಗುಪ್ತವಾಗಿತ್ತು. ನಾನೂ ಮನೆಗೆ ಹೋಗುವದನ್ನು ನಿಲ್ಲಿಸಿದ್ದೆನೆಂದರೂ ಸರಿಯೇ. ಎಲ್ಲಿಯಾದರೂ ಊಟ, ಎಲ್ಲಿಯಾದರೂ ನಿದ್ರೆ ಸಾಗಿದ್ದಿತು. ಇಂಥ ಪ್ರತಿ

ಕೂಲ ಪರಿಸ್ಥಿತಿಯಲ್ಲಿಯೂ ಸಹಕರಿಸುತ್ತಿರುವ ಎಂಟು ಹತ್ತು ಜನ ಮಿತ್ರರೊಡನೆ, ಪಕ್ಷದ ಅಸ್ತಿತ್ವವನ್ನು ಹಾಗೇ ಇಡುವ ವಿಷಯದಲ್ಲಿ ಯೋಜನೆ ಮಾಡುತ್ತ ದಿವಸ ಕಳೆಯಬೇಕು. ಹೀಗೆ ನಾನು ಕ್ರಮವಿಟ್ಟಿದ್ದೆ. ನಮ್ಮ ಗುಪ್ತ ಬೈಠಕ್ಕುಗಳು ಒಂದೇ ಮನೆಯಲ್ಲಿ ಎರಡು ಸಾರೆ ಕೂಡಲಿಲ್ಲ. ಇಷ್ಟು ದಕ್ಷತೆ ನಮ್ಮದಿತ್ತು. ಇಷ್ಟಾದರೂ ನನಗೆ ಪೆಟ್ಟು ಯಾವಾಗ? ಎಂಬ ನಿಯಮವಿದ್ದಿಲ್ಲ. ಫಿರೇಲಾಯಳು ಅಸಾಮಾನ್ಯ ಧೈರ್ಯದಿಂದ ವರ್ತಿಸುತ್ತಿದ್ದಳು. ಹಗಲು ಶಕ್ಯವಾದಷ್ಟು ನನ್ನೊಡನೇ ಇರಬೇಕು ಆಕೆ. ರಾತ್ರಿಯಲ್ಲಿ ನಾವು ಒಬ್ಬರೊಬ್ಬರ ನಿರೋಪತಕೊಂಡು, ನಾನು ಗೆಳೆಯರ ಮನೆಗೆ– ಆಕೆ ಮನೆಗೆ ಹೋಗುತ್ತಿದ್ದಳು. ಯಾಕಂದರೆ ನಮ್ಮ ಸಣ್ಣ ಜಾನ ಬರೇ ಐದು ತಿಂಗಳ ಕೂಸು ಆಗ.

ಒಂದು ದಿನ ರಾತ್ರಿ ನಮ್ಮ ಹೇರನೋರ್ವ ಸುದ್ದಿ ತಂದ, ನನ್ನ ಮನೆಯ ವಿಳಾಸ ಗೆಸ್ಟಾಪೋದವರಿಗೆ ಸಿಕ್ಕಿದೆ. ಇದು ತಿಳಿದಾಗ ನಾನು ಮತ್ತು ಫಿರೇಲಾಯ ಇಬ್ಬರು ಕೈಗೆ–ಕೈ ಹಿಡಿದುಕೊಂಡು ಬೀದಿಯಲ್ಲಿ ಸಾಗಿದೆವು. ಯಾವದೋ ಒಂದು ಮೂಲೆಯಲ್ಲಿ ನಮ್ಮ ನಿರೋಪವಾಗುವದಿತ್ತು. ಆಕೆ ನನಗೆ ಹೇಳುತ್ತಿದ್ದಳು.

“ ಜಾನ! ಎಂಥ ಹೊಲಸು ಜೀವನಕ್ರಮ ನೀನು ಸ್ವೀಕರಿಸಿರುವೆ? ಇದರಿಂದ ಏನಾದರೂ ಸತ್ಕಾರ್ಯನಿಷ್ಪನ್ನವಾಗುವದೆಂಬ ಆಶೆ ಎಂಥ ಹುಚ್ಚುತನದ್ದು?

ನಾನು ಹೇಳುತ್ತಿದ್ದೆ. “ ನೀನು ಈಗ ದಣಿದಿರುವೆ, ಮತ್ತೇನೂ ಇಲ್ಲ. ”

“ ನಿಜ ನಾನು ದಣಿದಿದ್ದೇನೆ. ”

ಇಷ್ಟರಲ್ಲಿಯೇ ಹೇರನು ಪೋಲಿಸ ಸುದ್ದಿ ಹೇಳಿದ್ದು.

ಗೆಸ್ಟಾಪೋದವರಿಗೆ ನನ್ನ ಮನೆ ತಿಳಿದಿದ್ದರೆ, ಕೈವಶ ಮಾಡಿಕೊಳ್ಳಲು ವಿಲಂಬ ಮಾಡರೆಂಬುದು ಸ್ಪಷ್ಟವೇ. ಆದರೆ ನಾವಿಬ್ಬರು ಅಲ್ಲಿ ಹೋಗುವದು ಯೋಗ್ಯವಾಗಿರಲಿಲ್ಲ. ಕಾರಣ ಫಿರೇಲಾಯಳೊಬ್ಬಳೇ ಹೋಗಿ ಏನಾದರೂ ಪ್ರಯತ್ನಮಾಡಿ ಮೊದಲು ಜಾನನನ್ನು ಅಲ್ಲಿಂದ ತರಬೇಕು, ಎಂದು ವಿಚಾರಿಸದೇ ವಿಧಿ ಇದ್ದಿಲ್ಲ. ನಮ್ಮ ಮನೆಯ ಸಮೀಪದಲ್ಲಿರುವ

ಸಣ್ಣ ವಿಶ್ರಾಂತಿಗೃಹದಲ್ಲಿ ಆಕೆ ನನ್ನನ್ನು ಕಾಣಬೇಕು ಎಂದು ನಿರ್ಧರ ವಾಯಿತು. ಫಿರೇಲಾಯಳು ಮನೆಯ ಕಡೆ ತಿರುಗಿದಳು.

ನನ್ನ ಕಾರ್ಯ ಮುಗಿಸಿ ಗೊತ್ತು ಮಾಡಿದ ವೇಳೆಗೆ ನಾನು ಆ ವಿಶ್ರಾಂತಿಗೃಹದ ಕಡೆಗೆ ಹೋದೆ, ಆದರೆ ಅಲ್ಲಿ ಫಿರೇಲಾಯಳೆಲ್ಲಿ? ಒಂದು ಒಂದೂವರೆ ತಾಸು ನಾನು ಅಲ್ಲಿ ಕುಳಿತೆ, ಸಾವಿರಾರು ಸಂದೇಹಗಳು ಬಂದು ಹುಚ್ಚಾಗುವ ಪಾಳಿಬಂತು. ಕಡೆಗೆ ಸುಮ್ಮನಿರುವದಾಗಲಿಲ್ಲ. ಒಬ್ಬರಿಂದ ಕಾಲುಗಾಡಿ ತೆಗೆದುಕೊಂಡು ಮನೆಯ ಕಡೆಗೆ ಹೊರಟೆ. ನಮ್ಮ ಮನೇ ಬೀದಿಯ ಸಂದಿ ಹೊರಳಿದ ಕೂಡಲೇ ಕಣ್ಣಿಗೆ ಬಿದ್ದುದನ್ನು ನೋಡಿ: ನಾನು ನಿಂತಲ್ಲಿಯೇ ನಿಂತು ಬಿಟ್ಟೆ. ಮನೆಯ ಮುಂದೆ ಒಂದು ಲಶ್ಕರ ಮೋಟಾರುಗಾಡಿ ನಿಂತುಕೊಂಡಿದೆ. ಅದರ ಸುತ್ತು ಭರಾರಿ ಸಿಪಾಯರಿದ್ದಾರೆ. ಮಹಲಿನ ನನ್ನ ಕೊಟ್ಟಡಿಯಿಂದ ಯಾರೋ– ಕಾಗದ ಪತ್ರ ಪುಸ್ತಕ ಕಿಟಕೆಯಲ್ಲಿ ಹಾರಿಸಿ ಒಗೆಯಹತ್ತಿದ್ದಾರೆ. ಕೆಲವು ಕೆಳಗಿನ ಸಿಪಾಯರು ಅವನ್ನೆಲ್ಲ ಮೋಟರಿನಲ್ಲಿ ತುಂಬಹತ್ತಿದ್ದಾರೆ. ಜನರು–ಹುಡುಗರು ಗುಂಪಾಗಿ ನೆರೆದು ನೋಡಹತ್ತಿದ್ದಾರೆ. ಭರಾರಿ ಸಿಪಾಯರ ಈ ರೀತಿ ಮನೆ ಮುತ್ತಿಗಿಯು ಜನಗಳಿಗೆ ರೂಢಿಯಾಗಿದ್ದಿತು. ಈಗ ವೇಳೆ ಬೆಳಗಿನ ಏಳು.

ಅದನ್ನು ನೋಡುತ್ತ ನಾನು ನಿಂತುಕೊಂಡಿರಲು, ಯಾರೋ ಹಿಂದಿನಿಂದ ನನ್ನ ಹೆಗಲ ಮೇಲೆ ಕೈಹಾಕಿದರು. ತಿರುಗಿ ನೋಡಿದೆ. ನಮ್ಮನನೇ ಓರ್ವ ಕಾಮ್ರೇಡ. ನನ್ನ ಸಂಗಡ ಬಾ–ಎಂದು ಅವನು ಸಂಕೇತ ಮಾಡಿದ. ಹತ್ತಿಪ್ಪತ್ತು ಹೆಜ್ಜೆ ಹೋದ ಮೇಲೆ ಮೆಲ್ಲನೆ ಅವನು ನುಡಿದ.

"ಫಿರೇಲಾಯ ಸುರಕ್ಷಿತ ಇದ್ದಾಳೆ."

"ಎಲ್ಲಿ ಇದ್ದಾಳೆ? ಹುಡುಗನನ್ನು ಕರೆತರುವದಕ್ಕೆ ಅವಳು ಇಲ್ಲ ಬಂದಿದ್ದಳು. ಈಗ ಅವಳೆಲ್ಲಿ?"

"ತಾಳಿ, ಅಲ್ಲಿಗೇ ನಾನು ಕರೆದೊಯ್ಯುತ್ತೇನೆ.

ಒಂದು ಇಕ್ಕಟ್ಟಾದ ಕತ್ತಲೆ ಓಣಿಗೆ ಕರೆದೊಯ್ದನು. ಕಡೆಗೆ ಒಂದು ಸ್ವಚ್ಛ ಚಾಳು ಹೊಕ್ಕೆವು. ಹೊರ ಅಂಗಳದಲ್ಲಿ ಹುಡುಗರು ಕೂಗಾಡುತ್ತಿದ್ದವು. ಒಂದು ಸಣ್ಣಕೊಟ್ಟಡಿಯ ಬಾಗಿಲು ತೆಗೆದು ಒಳಗೆ ನೋಡುತ್ತೇನೆ:

ಕುರ್ಚಿಯ ಮೇಲೆ ಫಿರೇಲಾಯಳು ಕುಳಿತು ಕರವಸ್ತ್ರದಿಂದ ಮೋರೆ ಮುಚ್ಚಿಕೊಂಡಿದ್ದಾಳೆ. ಕೆಂಪುಗಜ್ಜರಿಯಂತಿರುವ ಓರ್ವ ಲಠ್ಠ ಹೆಂಗಸು ಆಕೆಯನ್ನು ಸಂತೈಸಹತ್ತಿದ್ದಾಳೆ, ಒಮ್ಮೆಲೇ ನಾನು ಕೇಳಿದೆ. " ಏನಾಯಿತು ? ನಮ್ಮ ಕೂಸೆಲ್ಲಿದೆ ?

ಫಿರೇಲಾಯಳು ದುಃಖಿಸುತ್ತ, ತಡೆಯುತ್ತ ಎಲ್ಲ ವಿಷಯ ತಿಳಿಸಿದಳು. ಇದರಲ್ಲಿ ನಾನೇ ದೋಷಿ ಎಂದು ಆಕೆ ಹೇಳುತ್ತಿದ್ದಳು.

ಮನೆಗೆ ಫಿರೇಲಾಯ ಮುಟ್ಟಿದಾಗ ಜಾನ ತೊಟಿಲದಲ್ಲಿ ನಿದ್ರಿಸುತ್ತಿದ್ದಿತು. ಕೆಲವೇಳೆ ಹಸುಳನ ಮೋರೆ ದಿಟ್ಟಿಸುತ್ತ ಆಕೆ ನಿಂತಿದ್ದಳು. ಕೂಸಿನ ನಿದ್ರೆ ಕೆಡಿಸುವದು ಆಕೆಯ ಮನಸ್ಸಿಗೆ ಬರಲಿಲ್ಲ. ಒಲೆಯ ಮೇಲೆ ಹಾಲು ಕಾಯಲಿಟ್ಟು ಸ್ನಾನಮಾಡಿದಳು. ತುಸು ವಿಶ್ರಾಂತಿ ತೆಗೆದುಕೊಳ್ಳುವಾ ಎಂದು ಹಾಸಿಗೆ ಮೇಲೆ ಅಡ್ಡಾದಳು. ಬೆಳಗಿನವರೆಗೆ ಜಾಗ್ರತಳಾಗಿರಬೇಕೆಂಬ ಆಕೆಯ ನಿರ್ಧಾರ. ಆದರೆ ದಣಿದ ಆಕೆಗೆ ನಿದ್ರೆ ಹತ್ತಿದ್ದು ತಿಳಿಯಲೇ ಇಲ್ಲ.

ಎಚ್ಚತ್ತಿದ್ದು ಗಾಬರಿಯಾಗಿಯೇ. ಬಾಗಿಲು ಮುಂದಿನ ಗಂಟೆಯನ್ನು ಯಾರೋ ಬಾರಿಸುತ್ತಿದ್ದಾರೆ, ಎಂದು ಆಕೆಗೆ ತಿಳಿದಿದೆ. ಆದರೆ ಸುಮ್ಮನೆ ಮಲಗಿಬಿಟ್ಟಿದ್ದಳಂತೆ, ಕೂಸು ಎದ್ದೀತಲ್ಲ. ಎಂದು ಭಯ.

ಅಷ್ಟರಲ್ಲಿ ಹೊರಗಿನಿಂದ ಯಾರೋ ಕೂಗಿಕೊಂಡರು. " ಬಾಗಿಲು ತೆರೆಯುವಿರೋ ಇಲ್ಲವೋ ? "

ಏಳಲಿಲ್ಲ. ಮರುಕ್ಷಣದಲ್ಲಿಯೇ ಬಾಗಿಲು ಅಪ್ಪಳಿಸಲ್ಪಟ್ಟು ಬಾಗಿಲು ಮುರಿದ ಸಪ್ಪಳ. ಹೊರಕೊಟ್ಟಡಿಯಲ್ಲಿ ಯಾರವೋ ಜಡಬೂಟಿನ ಜುರಜುರ ಸುಳವು. ಒಬ್ಬ ದಾಂಡಿಗ ಕಂಡ. ಅವನು ಕಪ್ಪುಬಣ್ಣದ ಒಂದು ಕವ್ಹರ ಕೋಟು ಹಾಕಿಕೊಂಡಿದ್ದನು. ಅದೇ ಬಣ್ಣದ ಹ್ಯಾಟು ಇತ್ತು. ಕೈಯಲ್ಲಿ ಪಿಸ್ತೂಲು ಹಿಡಿದಿದ್ದನು.

ಹ್ಯಾಟು ತೆಗೆಯದೇ ಫಿರೇಲಾಯಳಿಗೆ ಅವನೆಂದ " ಗುಡಮಾರ್ನಿಂಗ, ನಿಮ್ಮ ಗಂಡನೆಲ್ಲಿ ? ನಾನು ತುಸು ಮಾತಾಡಬೇಕಾಗಿದೆ. "

" ಅವರು ಮನೆಯಲ್ಲಿಲ್ಲ. "

" ಎಲ್ಲಿ ಹೋಗಿದ್ದಾರೆ ? "

" ನನಗೆ ಗೊತ್ತಿಲ್ಲ. ಕದಾಚಿತ್ ಫ್ರಾನ್ಸಕ್ಕೆ ಹೋಗಿರಬಹುದು."

ಗೆಸ್ಟಪೋದ ಆ ಮನುಷ್ಯನು ಕೊಟ್ಟಡಿಯಲ್ಲಿ ಎಲ್ಲ ಕಡೆಗೆ ನೋಡುತ್ತ ಹೇಳಿದನು. " ನಿಮ್ಮ ಮಾತಿನಲ್ಲಿ ನನಗೆ ವಿಶ್ವಾಸವಿಲ್ಲ. ನೀವು ಉಡುಪು ಹಾಕಿಕೊಳ್ಳಿ. "

" ಅದೇಕೆ ? "

" ನನ್ನ ಸಂಗಡ ನೀವು ಬರಬೇಕು. "

" ಎಲ್ಲಿಗೆ? "

" ತಾನೇ ತಿಳಿಯುವದು. ಹುಂ, ಬೇಗನೆ ಏಳಿ."

ಫಿರೇಲಾಯಳು ಯುಕ್ತಿ ಮಾಡಿದಳು. ಮತ್ತು ಅವನೆಂದಳು. " ನಾನು ಹಾಸಿಗೆಯಿಂದ ಹೇಗೆ ಏಳಲಿ ? ಮೈಮೇಲೆ ವಸ್ತ್ರಗಳಿಲ್ಲ. ಅಲ್ಲದೆ ನೀವು ಹೀಗೆ ನಿಂತಿರುವಾಗ ನಾನು ಹೇಗೆ ಉಡುಪು ಹಾಕಿಕೊಳ್ಳುವದು? ಆಚೆ ಕೊಟ್ಟಡಿಯಲ್ಲಿ ನೀವು ಕೂತುಕೊಳ್ಳಬೇಕು."

ಅವನು ಹಿಂದೆ ಮುಂದೆ ನೋಡಹತ್ತಿದನು. ಆದರೆ ಆಚೆ ಕೊಟ್ಟಡಿಗೆ ಹೋಗದೆ ಅವನಿಗೆ ಗತ್ಯಂತರವಿರಲಿಲ್ಲ. ತನ್ನ ಯುಕ್ತಿಯಿಂದ ಫಿರೇಲಾಯಳನ್ನು ಗೆದ್ದುಬಿಟ್ಟ.

" ನೀವು ಉಡುಪು ಹಾಕಿಕೊಳ್ಳುವವರೆಗೆ ನಾನು ನಿಮ್ಮ ಕೂಸು ಆಡಿಸುತ್ತೇನೆ." ಹೀಗೆಂದು ತೊಟ್ಟಿಲದಿಂದ ಕೂಸೆತ್ತಿಕೊಂಡು ಆಚೆಯ ಕೊಟ್ಟಡಿಗೆ ಹೊರಟುಹೋದನು.

ಹಾಸಿಗೆಯಿಂದ ಆಕೆ ಎದ್ದಳು. ತನ್ನ ಉಡಪು ಹಾಕಿಕೊಂಡು ಮತ್ತೊಂದು ಬಾಗಿಲಿನಿಂದ ಹೊರಗೆ ಬಂದಳು. ಗೆಸ್ಟಪೋದ ಆ ಮನುಷ್ಯನು ಮನೆಯೆಲ್ಲ ಝಡತಿ ಮಾಡಲಿಕ್ಕೆ, ಟೆಲಿಫೋನಿನಿಂದ ಜನರನ್ನು ಕರೆಯಹತ್ತಿದುದನ್ನು ಕಂಡಳು. ಮಹಲಿನಿಂದ ಮೆಟ್ಟಲು ಇಳಿದು ಬೀದಿಗೆ ಓಡಿದಳು. ಬೀದಿಯಲ್ಲಿ ಯಾರೂ ಇರಲಿಲ್ಲ. ಕೆಲಸಕ್ಕೆ ಹೊರಟ ಯಾವನಾದರೊಬ್ಬ ಕೆಲಸಗಾರ ಮಾತ್ರ ಕಾಣಬೇಕು. ಓಡುತ್ತ ಫಿರೇಲಾಯಳು, ತಂಬಾಕಿನ ಒಂದು ಸಣ್ಣ ಅಂಗಡಿ ಹೊಕ್ಕಳು. ಈ ಅಂಗಡಿಯಾಕೆ ಫಿರೇಲಾಯಳ ಗುಂಪಿನವಳು. ಆವಳು ಫಿರೇಲಾಯಳಿಗೆ ಆಶ್ರಯ ಕೊಟ್ಟಿದ್ದಳು.

ಇಲ್ಲಿಯೇ ನಮ್ಮೀರ್ವರ ಭೆಟ್ಟಿಯಾದದ್ದು. ದುಃಖಾವೇಗದಿಂದ ಫಿರೇಲಾಯಳು ಎಚ್ಚರಗೆಟ್ಟಿದ್ದಳು. ಆ ದಪ್ಪ ಹೆಂಗಸು ಮಮತೆಯಿಂದ ಆಕೆಗೆ ಧೈರ್ಯ ಹೇಳತೊಡಗಿದ್ದಳು.

“ ಅಳಬೇಡ, ಸುಮ್ಮನೇ....ನಿನ್ನ ಮಗನ ಕೂದಲೆಳೆಗೆ ಸಹ ಅವರು ಧಕ್ಕೆ ಮಾಡುವದಿಲ್ಲ. ತುಸು ತಡೆ. ಮನೆಯನ್ನು ಝಡತಿಮಾಡಿ ಆ ಪಶುಗಳು ಹೋಗುವತನಕ ಧೈರ್ಯ ಹಿಡಿ. ಅವರು ಹೋಗುವದೊಂದೇ ತಡ. ನಾನು ಸ್ವತಃ ಹೋಗುತ್ತೇನೆ. ನಿನ್ನ ಕೂಸು ಕರೆದುಕೊಂಡು ಬರುತ್ತೇನೆ. ಯಾರು ನನ್ನನ್ನು ತಡೆಯುತ್ತಾರೋ ? ನೋಡುವಾ. ಅವರಿಗೆ ಒಂದು ಕೈ ತೋರಿಸುತ್ತೇನೆ. ಅಲ್ಲಿಯವರೆಗೆ ಮಾತ್ರ ಮನಸ್ಸು ಗಟ್ಟಿ ಮಾಡಿಕೊಂಡಿರು. ”

ದುಃಖದಿಂದ ಬೆದರಿದ ಫಿರೇಲಾಯಳು. ಆಕೆಗೆ ಧೈರ್ಯ ಕೊಡುತ್ತಿರುವ, ಮಮತೆಯ ಆ ಹಿರಿಯಾಕೆ, ಈ ದೃಶ್ಯ ನೋಡ ನೋಡುತ್ತ ನನ್ನ ಮನಸಲ್ಲಿ ವಿಚಾರವೆದ್ದಿತು. ಇಂಥವೇ ನೋಟಗಳು, ಈ ಕ್ಷಣಕ್ಕೆ ಜರ್ಮನಿಯ ಸಾವಿರಾರು ಸ್ಥಳಗಳಲ್ಲಿ ಕಾಣಿಸುತ್ತಿರಬಹುದಲ್ಲ !

ಬಹಳ ವೇಳೆಯವರೆಗೆ ನಾನು ಫಿರೇಲಾಯಳ ಬಳಿಯಲ್ಲಿ ಕುಳಿತುಕೊಂಡಿದ್ದೆ. ಹನ್ನೊಂದು ಬಾರಿಸಿದಾಗ ಮಾತ್ರ ನಾನು ಎದ್ದೆ. ಗೆಸ್ಟಪೋ ಪಹರೆಯಲ್ಲಿ ಸಿಕ್ಕುಬಿದ್ದ ನನ್ನ ಸಣ್ಣ ಕೂಸನ್ನು ಏನಾದರೂ ಯುಕ್ತಿಯಿಂದ ನಾನು ಬಿಡಿಸಿಕೊಳ್ಳಬೇಕಾಗಿದ್ದಿತು.

ಸುಮಾರು ಮೂರನೇ ಪ್ರಹರ. ಪುನಃ ಫಿರೇಲಾಯಳ ಭೆಟ್ಟಿಗೆಂದು ನಾನು ಬಂದೆ. ಆದರೆ ಅವಳು ಅಲ್ಲಿ ಇರಲಿಲ್ಲ. ಆ ದಪ್ಪ ಹೆಂಗಸಿನ ಹೇಳಿಕೆಯಿಂದ ನನಗೆ ತಿಳಿದು ಬಂದುದು ಹೀಗೆ. ಹಳೇ ಛಿಪ್ರ ಬಟ್ಟೆಗಳನ್ನು ಹಾಗೂ ಒಂದು ಹರಕು ಟೊಪ್ಪಿಗೆಯನ್ನು ಬೇಡಿ ತಕ್ಕೊಂಡು, ಮೋರೆಗೆ ಬೂದಿಯ ಗೆರೆಹಾಕಿಕೊಂಡು, ಬೇರೊಂದು ವಿಧದಿಂದ ಕೂದಲು ಕಟ್ಟಿಕೊಂಡು ಆಕೆ ಮುದುಕಿಯ ವೇಷ ತಾಳಿದಳಂತೆ. ಕಣ್ಣಿಗೊಂದು ಚಾಳೀಸು ಹಾಕಿಕೊಂಡಳಂತೆ. ಈ ವೇಷದಿಂದ ಮನೆಗೆ ಹೋಗಿ ಕೂಸನ್ನು ತರಬೇಕೆಂದು ಆಕೆಯ ಯೋಚನೆ, ಇದನ್ನೆಲ್ಲ ಹೇಳಿ ಆ ದಪ್ಪ ಹೆಂಗಸು ನುಡಿದಳು. “ ಹೀಗೆ ಅವಿಚಾರ ಮಾಡಬೇಡ ಎಂದು, ನಾನು ಬೇಕಾದಷ್ಟು ಹೇಳಿದೆ.

ಏನು ಹೇಳಿದರೂ ಆಕೆ ಕೇಳಲಿಲ್ಲ. ಹೆತ್ತ ಕರುಳು. ಸುಮ್ಮನೇ ಕೂಡ ಗೊಡಲಿಲ್ಲ. "

ಆಗಲೇ ಅಲ್ಲಿಂದ ನಾನು ಹೊರಟೆ. ಗೆಸ್ಟಪೋದವರಿಂದ ಬಂಧನ ಕ್ಕೊಳಗಾದರೂ ಪರವಿಲ್ಲ. ಫಿರೇಲಾಯಳಿಗೆ ಮೊದಲು ಭೆಟ್ಟಿಯಾಗಬೇಕು. ಎಂಬುದೊಂದೇ ವಿಚಾರ ಆಗ ಮನದಲ್ಲಿ ಇದ್ದಿತು. ಓಡುತ್ತ ನಮ್ಮ ಮನೇ ಬೀದಿ ಮುಟ್ಟಿದೆ. ಹಿಂಚಿಕ್ಕುವರೆಯಿಂದ ಹೇಗೋ ಆಚೆಯ ಮಗ್ಗುಲಿನ ಸಾರ್ವಜನಿಕ ಉಚ್ಚೆ ಮನೆಯಲ್ಲಿ ಹೊಕ್ಕೆನು. ಬದ್ದು ನಿಂತರೆ ಯಾರಿಗಾದರೂ ಕಂಡೇನು. ಎಂದು ಅಡ್ಡಬಿದ್ದುಕೊಂಡು ಬೀದಿಯಲ್ಲಿ ನೋಡಹತ್ತಿದೆ.

ಫಿರೇಲಾಯಳು, ನನಗೆ ಕಂಡಳು. ನಮ್ಮ ಮಂದಿರದ ಕೆಳಗಿನಿಂದ ಮೆಲ್ಲನೆ ಆಕೆ ಸಾಗಿದ್ದಳು. ಕಿಟಕಿಯಲ್ಲಿ ಇಣಿಕಿ ಹಾಕಿ ನೋಡಿದಳು. ಮೆಲ್ಲನೆ ಕಾಲು ಇಡುತ್ತ ಮುಂದೆ ಸಾಗಿದಳು. ಮೂಲೆಯವರೆಗೆ ಸಾಗಿ ಪುನಃ ತಿರುಗಿದಳು. ನಮ್ಮ ಕೊಟ್ಟಡಿ ಮುಂದೆ ಮತ್ತೆ ನಿಂತುಕೊಂಡಳು. ಮತ್ತೆ ಕಿಟಕಿಯಲ್ಲಿ ನೋಡಿದಳು. ಹತ್ತಿಪ್ಪತ್ತು ಹೆಜ್ಜೆ ಮುಂದೆ ಸಾಗಿ ಒಂದು ಚಾಳಿನ ಬಾಗಿಲದಿಂದ ಒಳಹೊಕ್ಕಳು.

ಕೂಡಲೇ ನಾನು ಅಲ್ಲಿಗೆ ಹೋದೆ. ಅವಳ ಕೈ ಹಿಡಿದು ಹೇಳಿದೆ. " ಫಿರೇಲಾಯ, ಮೊದಲು ಇಲ್ಲಿಂದ ಹೊರಡು. ನಿನಗೆ ಹುಚ್ಚು ಹಿಡಿದಿಲ್ಲ ವಷ್ಟೇ ? " ದೃಢವಾಗಿ ಆಕೆ ಹೇಳಿದಳು. " ನನ್ನ ಕೂಸನ್ನು ನಾನು ತಿರುಗಿ ತರಬೇಕಾಗಿದೆ. ಅವರು ಕಿಟಕಿಯ ಕಟ್ಟೀ ಮೇಲೆ ಕೂಸು ಮಲಗಿಸಿದ್ದಾರೆ. ಜಾನ ಅಳಹತ್ತಿದ್ದಾನೆ. "

" ನಮ್ಮ ಮನೆಯಲ್ಲಿ ಮತ್ತೆ ಯಾರಿದ್ದಾರೆ? "

" ತಿಳಿಯುವಂತಿಲ್ಲ. ಎಲ್ಲವೂ ಸ್ತಬ್ಧ. "

" ಮನೇ ಝಡತಿಗೆ ಬಂದ ಅವರು ನಿನಗೆ ಕಂಡರೇ ? "

" ಹೌದು. ಒಂದು ಮೋಟಾರಿನಲ್ಲಿ ಕುಳಿತು ಅವರು ಹೋದರು. ನಮ್ಮ ಎಲ್ಲ ಸಾಮಾನು ಅವರು ಮೋಟರಿನಲ್ಲಿ ತುಂಬಿಕೊಂಡಿದ್ದರು. "

" ಈಗ ಮನೆಯಲ್ಲಿ ಗೆಸ್ಟಪೋ ಜನ ಯಾರೂ ಇಲ್ಲವಷ್ಟೇ ? "

" ಏನೂ ತಿಳಿಯುವಂತಿಲ್ಲ. "

" ಆದಿರಲಿ. ಫಿರೇಲಾಯ, ನೀನು ಮನೆಯಲ್ಲಿ ಕಾಲಿಡಬೇಡ.

ನಿಜವಾಗಿ ಈ ತಂತ್ರ ಮಾಡಿದ್ದಾರೆ. ನಾವು ನಮ್ಮ ಕೂಸಿನ ಸಲುವಾಗಿ ಬರುತ್ತೇವೆ, ಎಂದು ಅವರು ಅಡಗಿ ಕುಳಿತಿರಬೇಕು. ನಡೆ, ನನ್ನೊಡನೆ ನೀನು ಬಂದು ಬಿಡು. ”

“ ಇಲ್ಲ. ಇಲ್ಲ. ನಾನು ಬರುವದಿಲ್ಲ. ಕಂದ ಅಳುತ್ತಿದ್ದಾನೆ. ಜಾನ ಹಸಿದಿರಬೇಕು. ” ಆಕೆ ತನ್ನ ಎರಡೂ ಹಸ್ತ ಮುಷ್ಟಿಮಾಡಿ ಹಲ್ಲು ಕಡಿಯುತ್ತ ನುಡಿದಳು. “ ಪಶು— ಶುದ್ಧ ರಾಕ್ಷಸರು. ”

ಎಷ್ಟೋ ವಿಧವಾಗಿ ನಾನು ಹೇಳಿದರೂ ಆಕೆ ಕೇಳಲಿಲ್ಲ. ನಾವಿಬ್ಬರೂ ಹೀಗೆ ಮಾತಾಡುತ್ತಿರುವದನ್ನು ಗೆಸ್ಟಪೋದವರು ಕಂಡರೆ – ಮತ್ತೇನಾದರೂ ಸಂಕಟ ಮೈಮೇಲೆ ಹಾಕಿಕೊಂಡಂತಾದೀತು. ಎಂದು ವಿಚಾರಿಸಿ ನಾನು ಹೊರಡುವದನ್ನು ನಿರ್ಧರಿಸಿದೆ. ಹೋಗುವಾಗ ಮಾತ್ರ ಫಿರೇಲಾಯಳನ್ನು ಎಚ್ಚರಿಸಿದೆ. “ ಅವಿಚಾರದಿಂದ ಹುಚ್ಚುತನದ ಸಾಹಸ ಮಾಡಬೇಡ. ” ಜೇಬಿನಲ್ಲಿದ್ದ ಹಣವನ್ನೆಲ್ಲ ಆಕೆಗೆ ಕೊಟ್ಟೆ. ಮಧ್ಯಾಹ್ನದ– ಮೂರು ಗಂಟೆಯ ಸುಮಾರಿಗೆ, ಪಟ್ಟಣದ ಮುಖ್ಯ ಗ್ರಂಥಾಲಯದಲ್ಲಿ ನನಗೆ ಭೆಟ್ಟಿಯಾಗಬೇಕೆಂದು, ನಿಶ್ಚಯಿಸಿ ನಾನು ಕಷ್ಟದಿಂದ ಆ ಸ್ಥಳದಲ್ಲಿ ಫಿರೇಲಾಯಳನ್ನು ಬಿಟ್ಟೆನು.

ಆದಿನ, ಮರು ದಿನ, ಮೂರನೇ ದಿನ–ಹೋಯಿತು. ಫಿರೇಲಾಯಳ ಭೆಟ್ಟಿಯಾಗಲಿಲ್ಲ. ತಿರುಗಿ ನಾನು ನಮ್ಮ ಮನೆಯ ಕಡೆಗೆ ಹೋಗುವದಾದರೆ– ಬಹಳ ಕಠಿಣವಿದ್ದಿತು. ಅವಳ ಸುದ್ದಿ ತಿಳಿಯುವ ಮಾರ್ಗವೇ ನನಗೆ ಕಾಣಲಿಲ್ಲ. ನಾನು ಭ್ರಮಿಷ್ಟನಂತಾದೆ.

ಕಡೆಗೆ ನಾಲ್ಕನೇ ದಿನ, ಗ್ರಂಥಾಲಯದಲ್ಲಿ ಆಕೆ ಕಂಡಳು. ಒಂದು ಮೇಜಿನ ಮುಂದೆ ಕುಳಿತು, ದೊಡ್ಡ ಚಿತ್ರಸಂಗ್ರಹದ ಒಂದು ಪುಸ್ತಕ ತಿರಹುತ್ತ ಆಕೆ ಕುಳಿತಿದ್ದಳು. ಆ ಸ್ಥಳದಲ್ಲಿ ಆಕೆ ಸುರಕ್ಷಿತಳಿರುವಳಲ್ಲ. ಎಂಬ ವಿಷಯದಲ್ಲಿ ನನ್ನ ವಿಶ್ವಾಸವೆನಿಸಲಿಲ್ಲ. ಆಕೆಯ ಕೈ ಸ್ಥಿರವಾಗಿದ್ದವು. ದೃಷ್ಟಿ ಗಂಭೀರವಾಗಿದ್ದಿತು. ಆದರೆ ಮೊಗವೆಷ್ಟು ಬಾಡಿದೆ? ಎಷ್ಟು ದೀನಳಂತೆ ಕಾಣುತ್ತಾಳೆ? ಅವಳನ್ನು ನೋಡಿ ನಾನು ಮನದಲ್ಲಿ ಅಂದುಕೊಂಡೆ. “ ಚಾಂಡಾಲಾ, ಪುನಃ ಇವಳೊಬ್ಬಳನ್ನೇ ಬಿಟ್ಟು ಎಲ್ಲಿಯೂ ಹೋಗುವದಿಲ್ಲವೆಂದು ಪ್ರತಿಜ್ಞೆ ಮಾಡು. ”

ನನ್ನ ಕಡೆಗೆ ಆಕೆ ನಕ್ಕು ನುಡಿದಳು. “ ನಾನು ಏನೊಂದೂ ಅವಿಚಾರ ಮಾಡಿಲ್ಲ ನೋಡಿದಿರಾ ? ”

ಆಕೆಯನ್ನು ನಾನು ಬಳಿಯಲ್ಲಿ ಎಳೆದುಕೊಂಡು ಕೇಳಿದೆ. “ ಎಲ್ಲ ವನ್ನೂ ನನಗೆ ಹೇಳು ನೋಡುವಾ. ”

ಆಕೆ ಹೇಳಿದ ಸಂಗತಿ ಅದ್ಭುತ ರೋಮಾಂಚಕಾರಿ ಕತೆ ಆಗಿದ್ದಿತು.

ನಮ್ಮ ಪಕ್ಷದವರಾಗದಿದ್ದರೂ ಕೆಲ ಜನ ಫಿರೇಲಾಯಳನ್ನು ಪ್ರೀತಿಸು ತ್ತಿದ್ದರು. ಇಂಥ ಹತ್ತೆಂಟು ಜನರನ್ನು ಆಕೆ ಸಹಾಯಕ್ಕೆಂದು ನೆರವಾದಳು. ಒಬ್ಬ ವ್ಯಾಪಾರಿ, ಓರ್ವ ಮೋಟರ ಡ್ರಾಯವ್ಹರ, ಒಬ್ಬ ಶಿಂಪಿಗರಾಕೆ. ಅವರೆಲ್ಲರಿಗೂ ಆಕೆ ಮಾಡಿಕೊಂಡ ವಿನಂತಿ ಒಂದೇ. ಅಲ್ಲಿ ನನ್ನ ಕೂಸು ಬಂಧನದಲ್ಲಿದೆ. ಅಲ್ಲಿಂದ ಆ ಕೂಸನ್ನು ಬಿಡಿಸಿ– ನಮ್ಮ ಮನೆಗೆ ಕರೆ ದೊಯ್ಯಿರಿ. ಆದರೆ ಹೋದವರೆಲ್ಲ ಒಳಗೇ ಅಡಗಿ ಹೋಗಬೇಕು. ಹೀಗೆ ನಡೆಯಿತು ಪ್ರಕರಣ. ನಮ್ಮ ಮನೆ ಅದೊಂದು ಹಿಂಸ್ರ ಶ್ವಪದಗಳ ಗುಹೆಯಾಗಿದ್ದಿತು. ಮನೆಯಲ್ಲಿ ಮೊದಲೇ ಅಡಗಿದ್ದ ಗೆಸ್ಟಪೋ ಜನರು ಅವರನ್ನು ಹಿಡಿದಿರಿಸಿರಬೇಕು. ಯಾಕಂದರೆ ಕಡೆಗೆ ನಮ್ಮಿಬ್ಬರಲ್ಲಿ ಒಬ್ಬರು ಬಂದೇ ಬರುತ್ತೇವೆ.

ಮೂರು ದಿನ ಹೀಗೆ ಕಳೆದು ಆ ಕೊಲೆ ಪಾತಕಿಗಳು ಬೇಸತ್ತರು. ಆಮೇಲೆ ನಮ್ಮ ಸುಸಜ್ಜಿತ ಮನೆಯ ಸಾಮಾನುಗಳನ್ನು ಅವರು ನಾಶ ಮಾಡಿದರು. ಗೋಡೆಯ ಚಿತ್ರ ಹರಿದಿದ್ದರು. ಕೈಗೆ ದೊರೆತದ್ದನೆಲ್ಲ ಎತ್ತಿ ಕೊಂಡು ಹೋಗಿಬಿಟ್ಟಿದ್ದರು. ಫಿರೇಲಾಯಳ ಕೂಸು ಬಿಡಿಸಲಿಕ್ಕೆ ಬಂದವರಿಗೆಲ್ಲ ಅರ್ಧಚಂದ್ರ ಕೊಟ್ಟು ದಬ್ಬಿದರು. ಆ ಶಿಂಪಿಗರಾಕೆ ಮಹಾ ಧಿಟ್ಟಳು. ಬರುವಾಗ ಜಾನನನ್ನು ಎತ್ತಿಕೊಂಡು ಬಂದಳು.

ಫಿರೇಲಾಯಳು ಹೇಳಿದುದೇನಂದರೆ; “ ನೀನು ನನಗೆ ಹಣಕೊಟ್ಟಿದ್ದೆ ಯಲ್ಲ. ಅದನ್ನೆಲ್ಲ ನಾನು ಆಕೆಗೆ ಕೊಟ್ಟುಬಿಟ್ಟೆ. ಮತ್ತು ಆಕೆಗೆ ಹೇಳಿದೆ. ಹೆನ್ನೋವ್ಹರ ಪಟ್ಟಣದಲ್ಲಿ ನನ್ನ ಆಪ್ತರಿದ್ದಾರೆ. ಅವರ ಕಡೆಗೆ ನನ್ನ ಕೂಸನ್ನು ಒಯ್ದು ಕೊಡು. ”

ಹೇಳುತ್ತಿರುವಾಗ ಕಂಠ ಗದ್ಗದಿತವಾಯಿತು. ಕೂಸಿನ ಅಗಲುವಿಕೆ

ಆಕೆಗೆ ಸಹನವಾಗುತ್ತಿರಲಿಲ್ಲ. ಕಾರಣ ಇದನ್ನು ಬದಲಿಸಿ ಮತ್ತೇನಾದರೂ ಮಾತಾಡಬೇಕೆಂದು, ನಮ್ಮ ಮುಂದಿನ ಕಾರ್ಯ ವರ್ಣಿಸಹತ್ತಿದೆ.

" ನೀನು ನನ್ನ ಕಾಮ್ರೇಡ. "

ಆಕೆ ಗೋಣು ಹಾಕಿದಳು. " ನಿಜ, ಮರಳಿ ಯುದ್ಧ ಭೂಮಿಗೆ ನಾವು ಧುಮುಕಬೇಕು. ನಾನು ಸಿದ್ಧಳಿರುವೆ.

೧೩

ಹಾಂಬುರ್ಗ ಕೇಂದ್ರದ ರಾಜಕೀಯ ಪ್ರಚಾರ ಶಾಖೆಯ ಪ್ರಮುಖ ವಾಲ್ಟರ ಡುಡಿನ್ನನು, ಒಂದು ದಿನ ಸಂಧ್ಯಾಕಾಲದಲ್ಲಿ ನನಗೆಂದನು. ನಡೆ, ತಿರುಗಲಿಕ್ಕೆ ಹೋಗುವಾ. ನಾವು ಸಾರ್ವಜನಿಕ ಉಪವನದಲ್ಲಿ ತಿರುಗಾಡ ಹೊರಟೆವು. ಇದು ಸಹಜ ತಿರುಗಾಟವಲ್ಲ. ಎಂದು ನನಗೆ ಲಕ್ಷ್ಯದಲ್ಲಿ ಬೇಗನೇ ಬಂದಿತು. ನಾನು ಬರ್ಲಿನಕ್ಕೆ ಹೋಗಬೇಕೆಂದು, ಮೇಲಿನಿಂದ ಹುಕುಮು ಬಂದಿತ್ತು. ಅದನ್ನು ತಿಳಿಸಲಿಕ್ಕೆ ಇದೆಲ್ಲ ನಾಟಕ. ಬರ್ಲಿನಕ್ಕೆ ಹೋದ ಮೇಲೆ ಪಕ್ಷದ ವಿಶ್ವಾಸಿಕರು ಯಾವ ವಿಳಾಸದಲ್ಲಿ ನನಗೆ ಭೆಟ್ಟಿಯಾಗುವರು. ಇದನೆಲ್ಲ ಅವನು ಹೇಳಿದನು. ಸಂಕೇತದ ನಿರೋಪ ತಿಳಿಸಿದನು. ನನ್ನನ್ನು ಬರ್ಲಿನಕ್ಕೆ ಒಬ್ಬ ಮೋಟರ ಸಾಯಕಲ್ಲಿನ ದೂತ ಮುಟ್ಟಿಸುವವನಿದ್ದ. ಅವನ ಭೆಟ್ಟಿ ಎಲ್ಲಿ, ಮುಂತಾದವುಗಳನ್ನೆಲ್ಲ ಸೂಚನೆ ಕೊಟ್ಟನು, ಆದರೆ ಬರ್ಲಿನಕ್ಕೆ ಹೋಗಿ ಮಾಡಬೇಕಾದುದನ್ನು ಮಾತ್ರ ಒಂದಕ್ಷರ ಸಹ ತಿಳಿಸಲಿಲ್ಲ.

ಫಿರೇಲಾಯಳನ್ನು ಬರ್ಲಿನಕ್ಕೆ ಕರೆದೊಯ್ದರೆ ಸಾಗಬಹುದೋ? ಕೇಳಿಬಿಡೋಣ ಎನಿಸಿತು ಒಂದು ಕ್ಷಣ. ಆದರೆ ಇಂಥ ಪ್ರಶ್ನ ಕೇಳುವದು ಪಕ್ಷದ ಶಿಸ್ತಿಗೆ ಅನುಸಾರವಾಗುತ್ತಿರಲಿಲ್ಲ. ಹಾಂಬುರ್ಗದಲ್ಲಿ ಪಕ್ಷದ ಕಾರ್ಯವನ್ನು ಫಿರೇಲಾಯಳು ಮಾಡಬೇಕು ಎಂದಿತ್ತು ಆಕೆಯ ನೌಕರಿ. ಆಕೆ ನನ್ನೊಡನೆ ಬಂದರೆ ತನ್ನ ಕಾರ್ಯ ಬಿಟ್ಟು ಬಂದಂತಾಗುತ್ತಿದ್ದಿತು. ಇಂಥ ಅಪರಾಧಕ್ಕೆ ಬಹಳ ದೊಡ್ಡ ಶಿಕ್ಷೆ. ಫಿರೇಲಾಯಳ ಸಂಬಂಧವಾಗಿ ನಾನು ವಿಚಾರಿಸಲೇ ಇಲ್ಲ.

ಗೊತ್ತು ಮಾಡಿದ ಸ್ಥಳದಲ್ಲಿ ಮೋಟರ-ಸಾಯಕಲ್ಲಿನವನನ್ನು ಕಂಡೆ. ಐದು ತಾಸುಗಳಲ್ಲಿ ಅವನು ನನ್ನನ್ನು ಬರ್ಲಿನಕ್ಕೆ ತಂದುಬಿಟ್ಟ. ಡುಡಿನ್ನ ಕೊಟ್ಟ ವಿಳಾಸ ಶೋಧ ಮಾಡಿದೆ. ಅದೊಂದು ಮೂರು ಅಂತಸ್ತಿನ ಮನೆ. ಒಳಗೆ ಹೊಕ್ಕೆ. ಮೆಟ್ಟಿಲು ಹತ್ತಿದೆ. ಬಾಗಿಲ ಮುಂದೆ ನಿಂತು ಕೊಂಡೆ– ಎದೆಯು ಹಾರುತ್ತಿದ್ದಿತು. ಬಾಗಿಲ ಮುಂದಿನ ಗಂಟೆ ಬಾರಿಸಿ ನೋಡುವಷ್ಟರಲ್ಲಿ ಒಳಗೆ ಅಪೇಕ್ಷಿತ ಮಿತ್ರರು ಭೆಟ್ಟಿಯಾಗುವರೋ, ಗೆಸ್ಟ ಪೋದ ಯಮದೂತರು ಕಾಣುವರೋ, ಯಾವುದನ್ನು ಹೇಳಬರದಂಥ ವಿಚಿತ್ರ ಪರಿಸ್ಥಿತಿ ನಮ್ಮದಿತ್ತು ಈಗ, ಮನಸ್ಸು ಗಟ್ಟಿಮಾಡಿ ಬಾಗಿಲ ಮುಂದಿನ ಗಂಟೆಯನ್ನೇನೋ ಬಾರಿಸಿ ಬಿಟ್ಟೆ. ಒಬ್ಬ ಸಣ್ಣ ಹುಡುಗ ಬಾಗಿಲು ತೆಗೆದನು. ಆದರೆ ನಾನು ಗುರುತಿನವನಲ್ಲವೆಂದು ಕಂಡಕೂಡಲೆ ಧಡಕ್ಕನೆ ಬಾಗಿಲು ಹಾಕಿಬಿಟ್ಟನು. ಒಳಗೆ ಪಪಾ– ಎಂದು ಕೂಗಿದ್ದು ನನಗೆ ಕೇಳಿಸಿತು. ಬಾಗಿಲು ತೆರೆಯಿತು. ತಲೆ ಮಾಡಿಸಿದ ಒಬ್ಬ ಗಿಡ್ಡನು ನನ್ನ ಮುಂದೆ ನಿಂತುಕೊಂಡನು. ಆಚೇಕಡೆಯ ದಿವಾಣ ಖಾನೆಯಿಂದ ಒಬ್ಬ ಹೆಂಗಸು ತಲೆ ಹಾಕಿ ನೋಡುತ್ತಿರುವದನ್ನು ನಾನು ನೋಡಿದೆ. ಅವನು ಬರಡಿ ಒತ್ತಿದ ಕೂಡಲೇ ನನ್ನ ಮೇಲೆ ಬೆಳಕೇ ಬೆಳಕಾಯಿತು. ಬಂದ ಮನುಷ್ಯ ಮಾತ್ರ ಕತ್ತಲೆಯಲ್ಲಿಯೇ ನಿಂತುಕೊಂಡು ನನ್ನನ್ನು ದಿಟ್ಟಿಸಿ ನೋಡಿ ಮಾತಾಡಿದನು.

"ನಿಮ್ಮದೇನು ಕಾರ್ಯ?"

ನಾನು ಪಾಠಮಾಡಿದಂತೆ ಸಂಕೇತದ ಶಬ್ದ ಉಚ್ಚರಿಸಿದೆ. "ನಿಮ್ಮ ಜಾಹೀರಾತು ನಾನು ಓದಿದೆ. ನಿಮ್ಮ ಬಳಿಯಲ್ಲಿ ಪೋಸ್ಟ ಟಿಕೇಟುಗಳು ಮಾರಾಟಕ್ಕಿವೆ. ಅವು ನನಗೆ ಬೇಕು."

"ನೀವು ಇದೇ ಉದ್ಯೋಗ ಮಾಡುತ್ತಿರೋ?"

"ಇಲ್ಲ. ಟಿಕೇಟು ಕೂಡಿಸುವದೆಂದರೆ ನನಗೆ ಆನಂದ." ಅವನು ಒಳಗೆ ಕರೆದನು. ಆ ಕೊಟ್ಟಡಿ ವ್ಯವಸ್ಥಿತ ರೀತಿಯಿಂದ ಶೃಂಗರಿಸಲ್ಪಟ್ಟಿತ್ತು. ನನಗೆ ಕೂಡ ಹೇಳಿ, ಒಂದು ಕಪಾಟಿನ ಕೀಲಿ ತೆಗೆದು ದೊಡ್ಡದೊಂದು ಪುಸ್ತಕ ತೆರೆದನು. ಅದರಲ್ಲಿ ಪೋಸ್ಟ ಟಿಕೇಟುಗಳಿದ್ದವು. ಬಾಗಿಲ ಮುಂದಿನ ಗಂಟೆ ಬಾರಿಸಿದರೂ, ನೀವು ಈ ಪುಸ್ತಕದ ಟಿಕೇಟು ನೋಡುತ್ತಿರುವಂತೆ

ನಟಿಸಿರಿ. ಈಗ ಯಾತರದೂ ನೇವು ಹೇಳಬರುವಂತಿಲ್ಲ. ಇಲ್ಲಿ ನೀವು ಕುಳಿತುಕೊಳ್ಳಿ. ನಾನು ಹಜಾಮತಿ ಮಾಡಿಕೊಂಡು ಬರುತ್ತೇನೆ."

ಹಜಾಮತಿ ಮಾಡಿಕೊಂಡ. ಉಡಪು ಧರಿಸಿದ. ಒಬ್ಬನೇ ಹೊರಗೆ ಹೋಗಿಬಿಟ್ಟ. ಮರಳಿ ತಾಸಿನನಂತರ ಬಂದು ನನಗೆಂದನು.

"ನಡೆಯಿರಿ ಹೋಗುವಾ. ನನ್ನೊಡನೆಯೇ ನೀವು ಬರುವಂತಿಲ್ಲ. ಹತ್ತಿಪ್ಪತ್ತು ಹೆಜ್ಜೆ ಹಿಂದಿನಿಂದ ಬರಬೇಕು. ನಾನು ಬಲಗೈ ಜೇಬಿನಲ್ಲಿ ಇಟ್ಟುಕೊಂಡರೆ ಅದೇ ಸ್ಥಳದಲ್ಲಿ ನೀವು ನಿಲ್ಲಬೇಕು. ನಿಮಗೆ ಒಬ್ಬ ತರುಣ ಹೆಂಗಸು ಕಾಣುತ್ತಾಳೆ. ಆಮೇಲೆ ಆಕೆಯ ಸಂಗಡ ಹೋಗಿರಿ. ಒಂದು ವೇಳೆ ನಾನು ಎರಡೂ ಕೈ ಜೇಬಿನಲ್ಲಿ ಹಾಕಿಕೊಂಡರೆ ನಿಲ್ಲದೇ ನೀವು ಪಲಾಯನ ಹೇಳಿಸಬೇಕು."

"ಒಳ್ಳೇದು."

ನಾವು ಹೊರಬಿದ್ದೆವು. ಎಷ್ಟೋ ಬೀದಿ- ಸಂದಿ- ಗೊಂದಿ ದಾಟಿ ಹೋದೆವು. ಕಡೆಗೆ ಆ ಗೃಹಸ್ಥ ಒಂದು ಅಂಗಡಿ ಮುಂದೆ ನಿಂತನು. ಅಂಗಡಿಯಲ್ಲಿ ಮಂಡಿಸಿದ್ದ ಸಾಮಾನು ನೋಡುವಷ್ಟರಲ್ಲಿ ಮಗ್ನನಾದ ನೇನೋ? ಮೆಲ್ಲನೆ ಬಲಗೈ ಕೋಟಿನ ಜೇಬಿನಲ್ಲಿ ಬಿತ್ತು. ಅಷ್ಟರಲ್ಲಿ ಮಗ್ಗಲಿನ ವಿಶ್ರಾಂತಿ ಗೃಹದಿಂದ ಒಬ್ಬ ತರುಣಿ ಹೊರಬಿದ್ದಳು. "ಹಲೋ, ನಾನು ನಿಮ್ಮ ದಾರಿಯನ್ನೇ ಕಾಯುತ್ತಿದ್ದೆ." ಎಂದು ನುಡಿದು ಆಕೆ ನಸುನಗುತ್ತ, ನನ್ನ ಸನಿಯಕ್ಕೆ ಬಂದು ನನ್ನ ಕೈಯಲ್ಲಿ ಕೈಹಾಕಿದಳು. ಅವಳೊಡನೆ ಬೀದಿಗಳನ್ನು ದಾಟುತ್ತ ನಾನು ಹೊರಳಿ ನೋಡಿದೆ. ಆ ಗಿಡ್ಡ ಎಲ್ಲಿಯೋ ಮಾಯವಾಗಿದ್ದ. ಗುಪ್ತ ಭೆಟ್ಟಿಯ ಈ ವಿಚಿತ್ರ ತಂತ್ರದಲ್ಲಿಯ ಅವನ ಕೆಲಸ ಮುಗಿದಿತ್ತೇನೋ?

ನನ್ನ ಕೈ ಹಿಡಿದಿರುವ ಆ ತರುಣಿ ಒಳ್ಳೇ ಹರ್ಷ ಭರದಿಂದ ಮಾತಿನ ನಾಟಕ ನಡೆಸಿದ್ದಳು. ಮಾರ್ಲಿನ ಡಿಟ್ರಿಚ, ಈ ನಟಿಯು ಎಷ್ಟು ಸುಂದರಿ, ಎಂಬ ವರ್ಣನೆ ಹೇಳುತ್ತಿದ್ದಳು ಆಕೆ. ಮಾತಾಡುತ್ತ ಹಾಗೇ ನನ್ನನ್ನು ಜಗ್ಗಿಕೊಂಡು ಒಂದು ರೆಸ್ಟಾರಂಟಿನಲ್ಲಿ ಕರೆದೊಯ್ದಳು. ಅಲ್ಲಿ ಅನೇಕ ಜನ ಬಸ್ ಕಂಡಕ್ಟರರು ಊಟ ಮಾಡುತ್ತಿದ್ದರು. ಆ ಹುಡುಗೆ ಕಾಫಿ ಮುಗಿಸಿ, ನನ್ನ ಹಸ್ತಾಂದೋಲನ ಮಾಡುತ್ತ ಹೇಳಿದಳು. "ನಿನ್ನ ಗುರು

ತಿನವನೊಬ್ಬ ಇಲ್ಲಿ ಬಂದು ನಿನಗೆ ಸಂಕೇತ ಮಾಡುವನು. ಅಲ್ಲಿಯುವರೆಗೆ ಇಲ್ಲಿಯೇ ನೀನು ಕುಳಿತುಕೋ.” ಮರುಕ್ಷಣದಲ್ಲಿ ಆಕೆ ಹೋಗಿಬಿಟ್ಟಳು.

ಕೆಲವು ವೇಳೆ ನಾನು ಒಬ್ಬನೇ ಕುಳಿತೆ. ಗಿರಾಕಿಗಳು ಬರುತ್ತಿದ್ದರು. ಹೋಗುತ್ತಿದ್ದರು. ಯಾರು ಸಂಕೇತ ಮಾಡುವರೋ ಎಂದು ಬರು ಹೋಗುವವರನ್ನೆಲ್ಲ ನಾನು ದಕ್ಷತೆಯಿಂದ ನೋಡುತ್ತಿದ್ದೆ. ಬೀದಿಯಲ್ಲಿ ಹೊರಗೆ ದೀಪ ಮಿಂಚಿದವು. ಎಲ್ಲಿಯೋ ರೇಡಿಯೋ ಆರಂಭವಾಯಿತು. ರೆಸ್ಟಾರಂಟದ ಅಡಿಗೆಮನೆಯಲ್ಲಿ, ಕಪ್ಪುಬಶಿಗಳ ಖಡಖಡಾಟ ಕೇಳಿಸಿತು. ತೆಳುಮೈಯ್ಯ ಓರ್ವ ತರುಣಿ ಒಳಗೆ ಬಂದಳು. ಆಕೆ ಕಪ್ಪು ಉಡುಪು ಹಾಕಿದ್ದಳು. ಹೊರಗೆ ಕಾಣುವ ಆಕೆಯ ಕಾಲು ಆಕೆಗೊಳ್ಳೇ ಒಪ್ಪುತಿದ್ದವು. ಆಕೆಯ ನಡಿಗೆ ಸಹ ಬಲು ಚಂದ. ಬಾಗಿಲು ಸನಿಯದ ಮೇಜಿಗೆ ಕುಳಿತು, ಚಹಾ ಮತ್ತು ‘ಸಾಲೆಡ’ ಬೇಡಿದಳು. ಆಕೆಯ ಕೊರೆದಂಥ ರೂಪ ನೋಡಿ ನಾನು ಗುರುತಿಸಿದೆ. ಆಕೆಯ ಹೆಸರು ಸಿಲಿ. ಹಿಂದೆ ನಾನು ಆಕೆಯನ್ನು ನೋಡಿದ್ದೆ. ಅನ್ಸ್ಟರ್‌ವಾಲ್ಲವೆಬರನ ವಿಶ್ವಾಸಿಕಳು ಈಕೆ. ಬರ್ಲಿನಕ್ಕೆ ನನ್ನ ಕರೆಸಿದ ಕಾರಣ ತಿಳಿದಿತು. ವಾಲವೆಬರ ಮತ್ತು ನಾನು ಭೆಟ್ಟಿಯಾಗಬೇಕಾಗಿದ್ದಿತು.

ಸಿಲಿಯು ಸಾವಕಾಶವಾಗಿ ತಿನ್ನುತ್ತಿದ್ದಳು. ಚಹಾ ಕುಡಿದು ಆಕೆ ಸಿಗಾರೇಟ ಹೊತ್ತಿಸಿದಳು. ಆಗ ಮೇಜಿನ ಮೇಲೆ ಉಪ್ಪು ಮತ್ತು ಮಸಾಲೆ ಹಾಕಿದ ಸಣ್ಣ ಸಣ್ಣ ಪಾತ್ರೆಗಳಿದ್ದವು. ಅವುಗಳನ್ನು ಕೂಡಿಸಿ ಒಂದು ಬಂಗಲೆಯನ್ನು ರಚಿಸುವ ಉದ್ಯೋಗ ಆಕೆ ಆರಂಭಿಸಿದಳು. ಲಕ್ಷ್ಯ ಪೂರ್ವಕವಾಗಿ ನಾನು ಆಕೆಯನ್ನು ನೋಡುತ್ತಿದ್ದೆ. ಮಧ್ಯದಲ್ಲಿಯೇ ಆಕೆಯ ಮೊಣಕಾಲು ತಾಕಿ ಮೇಜು ಅಲುಗಾಡಿ ಮುಗಿಯಬಂದಿದ್ದ ಬಂಗಲೇ ಬಿದ್ದುಹೋಯಿತು. ಇದಕ್ಕೇನು ಮಾಡಬೇಕು? ಎಂಬರ್ಥ ದಿಂದ ತನ್ನ ಎರಡೂ ಕೈಗಳನ್ನು ಮೇಲೆ ಎತ್ತಿದಳು. ಹಾಗೆ ಮಾಡುವಾಗ ನನ್ನ ಮೇಲೆ ದೃಷ್ಟಿ ಹಾಕಿದಳು. ಈ ಸಂಕೇತ ನನಗೆ ಎಂದು ನಾನು ತಿಳಿದೆ. ಆಕೆ ಎದ್ದಳು. ನಾನೂ ಹೊರಟು ಬಾಗಿಲಿನಲ್ಲಿ ಹಣ ಕೊಟ್ಟೆ. ಅವಳೊಡನೆ ನಡೆಯಹತ್ತಿದೆ ಆಕೆ ಒಂದು ಟ್ಯಾಕ್ಸಿ ನಿಲ್ಲಿಸಿದಳು. ನಾನೂ ಒಳಗೆ ಹತ್ತಿದೆ. ಟ್ಯಾಕ್ಸಿ ಹೋಗುತ್ತಿರುವಾಗ ಮೆಲ್ಲನೆ ಅವಳೆಂದಳು. ನಿನಗೆ

ಬೇಕಾದರೆ ಮಲಗಿಕೋ. ನಾವು ಬಹಳ ದೂರ ಹೋಗಬೇಕಾಗಿದೆ.

ವಾಲವೆಬರನು ಇರುವ ಸ್ಥಳಕ್ಕೆ ನಾವು ಬಂದು ಮುಟ್ಟಿದೆವು. ಕೂಡಲೇ ವಾಲವೆಬರನ ಭೆಟ್ಟಿಯಾಗಲಿಲ್ಲ. ನನಗೆ ವಿಶ್ರಾಂತಿ ತೆಗೆದು ಕೊಳ್ಳಲು ಹೇಳಿ, ಸಿಲಿ ವಾಲವೆಬರನಿಗೆ ನಾನು ಬಂದ ಸುದ್ದಿ ತಿಳಿಸಲು ಹೋದಳು. ಕೆಲವೇಳೆಯ ನಂತರ ಕೆಳಮನೆಯ ಬಾಗಿಲಿನಲ್ಲಿ ವಾಲವೆಬರ ನನ್ನ ದಾರಿ ಕಾಯುತ್ತಿರುವನೆಂದು ತಿಳಿದಿತು. ನಾನು ಕೆಳಗಿಳಿದೆ. ಬಾಗಿಲ ಮುಂದೆ–ಒಂದು ದಪ್ಪಾಕೃತಿ ಕಂಡಿತು. ಅದು ಬಹಳ ನಿಶ್ಚಲವಿತ್ತೆಂದು ಹೇಳಬೇಕು. ಸುಡುತ್ತಿರುವ ಸಿಗಾರೇಟಿನಿಂದ ಮಾತ್ರ ಇದು ಜೀವಂತ ಮನುಷ್ಯನ ಆಕೃತಿ ಎಂದು ಹೇಳಲು ಸಾಧ್ಯ. ಅತ್ತ ಹಿಟ್ಲರನ ಕೃಷ್ಣ ಛಾಯೆ ಬರ್ಲಿನದ ಮೇಲೆ ಬಿದ್ದಿರುವಾಗ ಅರ್ಧ ಕತ್ತಲೆಯಲ್ಲಿ ವಾಲವೆಬರ, ನನಗೆ ಭೆಟ್ಟಿಯಾದನು. ನನ್ನನ್ನು ಕಂಡ ಕೂಡಲೇ ಅವನು ಸಮಾಧಾನದ ಉಸಿರು ಬಿಟ್ಟನೇನೋ? ನಾವು ಮಾತಾಡುತ್ತ ಹೋದದ್ದು, ಉಪನಗರದ ಆಚೆಗಿರುವ ದಟ್ಟ ಅಡವಿಯ ಕಡೆಗೆ. ನಮ್ಮ ಮಾತುಕತೆ ದಾರಿಯಲ್ಲೇ ಸಾಗಿದ್ದವು.

ಮೊದಲು ಅವನು ಹಾಂಬುರ್ಗದ ಪರಿಸ್ಥಿತಿ ಎಲ್ಲ ವಿಚಾರಿಸಿಕೊಂಡು, ನುಡಿದನು.

"ನಮ್ಮ ಪಕ್ಷದ ಜನ ಗಾಬರಿಯಾಗಿ ಏಕೆ ಓಡಹತ್ತಿದ್ದಾರೋ? ನನಗೆ ತಿಳಿಯುವದಿಲ್ಲ. ಪರಿಸ್ಥಿತಿ ಏನೋ ಬಿಗಿಯಾಗಿದೆ ನಿಜ. ಆದರೆ ಇದಕ್ಕೂ ಬಿಗಿಯಾಗಿಲ್ಲವಲ್ಲ? ಎಂಬುದೇ ಆನಂದ. ನಮ್ಮ ೩೫೦ ಕಾರ್ಯಕರ್ತರ ತಲೆ ಹಾರಿದವು. ಆದರೆ ಬಂಧಿಸಲ್ಪಟ್ಟ ಮೂವತ್ತು ಸಾವಿರ ಜನರ ಪ್ರಾಣಗಳನ್ನೇ ಹಿಟ್ಲರ ತೆಗೆದಿದ್ದರೆ? ಹೀಗೆ ಹೊರಳಿ ವಿಚಾರಿಸಿ, ಧೈರ್ಯ ತಾಳಬೇಕು. ನಮ್ಮ ಪಕ್ಷಕ್ಕೆ ಗೆಸ್ಟಪೋದವರಿಂದ ಅಷ್ಟೇನೂ ಭಯವಿಲ್ಲ. ನಮ್ಮ ಜನರಲ್ಲಿ ಸೇರಿದ ಭಯವೇ ಘಾತಕ. ಅಲ್ಲಲ್ಲಿ ಪಕ್ಷದ ಪುನರ್ಘಟನೆ ಮಾಡಿ, ಹಿಟ್ಲರನಿಗೆ ಮತ್ತೆ ಎದುರಾಗಬೇಕು. ಈ ಸಮಯದಲ್ಲಿ ಆಡಿದಂತೆ ಮಾಡುವ ಧೀರರ ಅವಶ್ಯಕತೆ ಬಹಳವಾಗಿದೆ."

ಅವನು ಹಾಗೇ ಮಾತಾಡುತ್ತಿದ್ದ. ಪ್ರತಿಯೊಂದು ಮಾತು ಮುಗಿದೊಡನೆ ಅವನು ನಿಲ್ಲಬೇಕು. ನಾನು ಹು ಎಂದ ಕೂಡಲೇ ಮತ್ತೆ

ಆರಂಭಿಸಬೇಕು. ನನಗೆ ತಿಳಿದುಹೋಯಿತು. ಈಗ ನಾನು ಪಕ್ಷಕ್ಕೆ ಎಷ್ಟು ಏಕನಿಷ್ಠನಾಗುವೆನು? ಮುಖ್ಯವಾಗಿ ತಾನು ಕೊಡುವ ಆಜ್ಞೆಯನ್ನು ಪಾಲಿಸಲಿಕ್ಕೆ ಎಷ್ಟು ಸಿದ್ಧನಿರುವೆನು? ಇದನ್ನೆಲ್ಲ ಅವನು ತಿಳಿದುಕೊಳ್ಳಬೇಕಾಗಿದ್ದಿತು. ಜರ್ಮನ ಕಮ್ಯುನಿಷ್ಟರ ಹಡಗುಪಡೆಯನ್ನೆಲ್ಲ ಸ್ವಾಧೀನ ಮಾಡಿಕೊಂಡು, ತನ್ನ ಆಜ್ಞಾತತ್ಪರ ಜನರನ್ನು ಅಲ್ಲಿ ತುಂಬುವದಿತ್ತು ಅವನಿಗೆ. ಅದರಲ್ಲಿಯೂ ವಿಶೇಷವಾಗಿ ಹಾಂಬುರ್ಗ ಶಾಖೆಯ ಮುಖ್ಯ ಢುಡಿನ್ಸನನ್ನು ಕಿತ್ತಿಹಾಕಿ, ತನ್ನ ಜಾನಶಿಅರನನ್ನು ಅಲ್ಲಿ ನೇಮಿಸಬೇಕಾಗಿದ್ದಿತು. ಜಾನಶಿಅರನಿಗೆ ಸಹಾಯ ಮಾಡುವಂತೆ ನನ್ನಿಂದ ವಚನ ಪಡೆಯುವದು; ಎಲ್ಲ ಸಿದ್ಧತೆ ಮಾಡುವದು; ಪ್ರಸಂಗನೋಡಿ ಢುಡಿನ್ಸನನ್ನು ಉರುಳಿಸುವದು; ಹೀಗೆಲ್ಲ ಅವನ ತಂತ್ರವಾಗಿತ್ತು. ಅವನ ಅಭಿಪ್ರಾಯವನ್ನೆಲ್ಲ ಕೇಳಿ ಆ ಯೋಜನೆಗೆ ನಾನು ಮಾನ್ಯತೆ ಕೊಟ್ಟೆ. ನಮ್ಮ ಮಾತು ಮುಗಿದಾಗ ಅವನು ಒಂದು ಗಿಡದ ಬೊಡ್ಡೆಗೆ ಆತು ನಿಂತುಕೊಂಡಿದ್ದನು. ಸುಡುವ ಸಿಗಾರೇಟಿನ ಮಿಣಕಿನಲ್ಲಿ ಅವನ ತೀಕ್ಷ್ಣ ಕಣ್ಣುಗಳು ನನಗೆ ತೋರುತ್ತಿದ್ದುವು. ಕೆಲವು ವೇಳೆ ನಾವು ಇಬ್ಬರೂ ಸ್ತಬ್ಧವಾಗಿದ್ದೆವು. ಆಮೇಲೆ ಮುಂದೆ ಸಾಗುತ್ತ ಗೊಗ್ಗರು ದನಿಯಿಂದ ಅವನು ಕೇಳಿದನು.

" ಇಂದಿನ ಹೊಸ ಕೋಟ ನಿನಗೆ ಗೊತ್ತಿದೆಯೋ ? "

" ಹಿಟ್ಲರನ ರಾಜ ಬಳಗದಲ್ಲಿ ಅಧಿಕ ಕಾಮನೀಯ ಸ್ತ್ರೀಯಾರು ? "

" ನನಗೇನು ಗೊತ್ತು ? "

" ಆರ್ಯ ರಕ್ತದ ಮುದುಕಿ ಅಜ್ಜಿ. " ಹೀಗೆಂದು ಅವನು ಬಿದ್ದುಬಿದ್ದು ನಕ್ಕನು.

ನಾನು ಮನೆಗೆ ಬಂದರೂ ಸಹ ಅವನ ಶಬ್ದ–ಆ ವಿಚಿತ್ರ ಹಾಸ್ಯ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದವು. ವಾಲವೆಬರನ ಇಬ್ಬರು ಹಸ್ತಕರು ಚದುರಂಗದಾಟ ಸಾಗಿಸಿದ್ದರು. ಅವರೊಳಗಿನ ಒಬ್ಬನು ನನ್ನನ್ನು ನೋಡಿ ವಿಚಾರಿಸಿದನು.

" ಯಾಕೋ ಮೋರೆ ಬಾಡಿದಂತೆ ಕಾಣುವದಲ್ಲ ? "

ನಾನು ಹೇಳಿದೆ. "ನನಗೆ ಬಹಳ ನಿದ್ದೆ ಬಂದಿದೆ. ವೆಬರಸಾಹೇಬನು ಹೀಗೆ– ತಾಸುಗಟ್ಟಲೆ ಮಾತಾಡಬಹುದೆಂದು ನನ್ನ ಕಲ್ಪನೆ ಇರಲಿಲ್ಲ."

"ವಾಲವೆಬರನ ಒಂದು ಚಮತ್ಕಾರ ನಿನಗೆ ಗೊತ್ತಿಲ್ಲ." ಹೀಗೆ ಹೇಳುತ್ತ ಅವನು ನಾನು ಮಲಗುವ ಸ್ಥಳ ತೋರಿಸಿದನು. ಆ ಮನೆಯು ಇತರ ಕೊಟ್ಟಡಿಗಳಂತೆ ಅದೂ ಹಾಳು ಎನಿಸಿತು. ಆದರೆ ಹಾಸಿಗೆ ಒಳಿಗೆ ಹೋಗಿ ನೋಡುತ್ತೇನೆ. ಅಡವೀ ಗುಲಾಬಿಯು ಮರದ ಸುಗಂಧ! ನಾನು ಅವನನ್ನು ಕೇಳಿದೆ.

"ಇದೆಲ್ಲಿಯ ವಾಸನೆಯೋ ? ಏನೋ– ತಿಳಿಯದಂತಾಗುತ್ತದೆ."

ಅವನು ಸಹಜ ಹೇಳುವಂತೆ ಹೇಳಿದ. "ವಾಲವೆಬರನು ಇಲ್ಲಿ ಇರುವಾಗ ಸಿಲಿಯು ಇಲ್ಲಿಯೇ ಮಲಗಿಕೊಳ್ಳುತ್ತಾಳೆ."

* * * *

ಮುಂದೆ ಎರಡು ಮೂರು ದಿನಗಳಿಗೆ ನಾವು ಹಾಂಬುರ್ಗದ ಗಾಡಿಯಲ್ಲಿ ಕುಳಿತೆವು. ವಾಲವೆಬರ, ಜಾನಶಿಅರ, ಸಿಲಿ, ಮತ್ತು ನಾನು. ಹೀಗೆ ನಾಲ್ವರೂ ಎಕ್ಸಪ್ರೆಸ ಗಾಡಿಯಿಂದ ಹೋಗದೆ ಒಂದು ಒಡ್ಡರ ಬಂಡಿ ಪ್ಯಾಸೆಂಜರ ಗಾಡಿಯಿಂದ ಬೇಕೆಂದು ಹೊರಟೆವು. ಹಾಂಬುರ್ಗದ ದೊಡ್ಡ ನಿಲ್ದಾಣದ ಗೆಸ್ಟಪೋದವರ ಕೂಟಗಟ್ಟಿ ಇರುವದರಿಂದ ಈಚೆಗಿನ ನಿಲ್ದಾಣದ ಟಿಕೇಟು ನಾವು ಕೊಂಡಿದ್ದೆವು. ನಾನು ಮತ್ತು ವಾಲವೆಬರ ಒಂದೇ ಡಬ್ಬಿಯಲ್ಲಿ ಕುಳಿತರೂ ಆಚೆಗೆ ಅವ. ಈಚೆಗೆ ನಾನು. ಗಾಡಿಯ ಕಡೇ ಡಬ್ಬಿಯಲ್ಲಿ ಸಿಲಿ ಮತ್ತು ಜಾನಶಿಅರ. ನಾವು ನಾಲ್ವರೂ ಖೊಟ್ಟಿ ಪಾಸಪೋರ್ಟ್ ತಂದಿದ್ದೆವು.

ಬೇಸರದಿಂದ ಪ್ರವಾಸ ಸಾಗಿದ್ದಿತು. ಗಾಡಿಯಲ್ಲಿ ಗದ್ದಲ ಬಹಳ ಇತ್ತು. ಅವರಲ್ಲಿ ಬಹುಜನ ಹಳ್ಳಿಪಳ್ಳಿಯಲ್ಲಿ ಹೊಸದಾಗಿ ಸೇರಿಕೊಂಡ ಭರಾರಿ ಸಿಪಾಯರು. ಬರ್ಲಿನದಿಂದ ನಾನು ಹೊರಡುವಾಗ ನಾನು ಒಂದು ವರ್ತಮಾನಪತ್ರ ಕೊಂಡಿದ್ದೆ. ದಾರಿಯಲ್ಲಿಯ ನಿಲ್ದಾಣದಲ್ಲಿ ಗಾಡಿ ನಿಂತ ಕೂಡಲೇ ಓದುವವನಂತೆ ಅದರಿಂದ ಮೋರೆ ಮುಚ್ಚಿಕೊಳ್ಳಬೇಕು. ಲುಡ್‌ವಿಗ್ಜಲುಸ್ಟ, ಎಂಬ ಹೆಸರಿನ ನಿಲ್ದಾಣ ಸನಿಯಕ್ಕೆ ಬರಹತ್ತಿತು. ಈ ಪಟ್ಟಣಕ್ಕೆ ಸಮೀಪವಾಗಿಯೇ ಬಿಸ್ಮಾರ್ಕನ ಸಮಾಧಿ ಇತ್ತು. ಇನ್ನೇನು ?

ಹಾಂಬುರ್ಗ ಎಂಭತ್ತು ಮೈಲು. ಗಾಡಿ ಕರ್ಕಶ ಸೀಟಿ ಬಾರಿಸಿತು. ನಾನು ಬೇಗನೇ ವರ್ತಮಾನಪತ್ರ ಓದ ತೊಡಗಿ, ಗಾಡಿ ಬಿಡುವ ದಾರಿ ಕಾಯುತ್ತಿದೆ.

ಬಹಳ ವೇಳೆ ಕಳೆದರೂ ಗಾಡಿ ಬಿಡಲೇ ಇಲ್ಲ. ಅಷ್ಟರಲ್ಲಿ ಪ್ಲಾಟಫಾರ್ಮಿನಿಂದ ಒಬ್ಬ ಆಫೀಸರನು ಲಷ್ಕರೀ ದನಿಯಿಂದ ಕೂಗಿದ. "ಎಲ್ಲ ಪ್ರವಾಸಿಕರು ಕೆಳಗಿಳಿಯಿರಿ."

ಗಾಡಿಯಲ್ಲಿದ್ದ ಜನರು ಪಿಸುಗುಟ್ಟಹತ್ತಿದರು. ಕೆಲವರು ಎದ್ದು ಹೋದರು. ಕೂಡಲೇ ನಾನು ವರ್ತಮಾನಪತ್ರ ಮಡಿಸಿ ನೋಡುತ್ತೇನೆ. ಸೀಲಿಯ ಶರ್ಟಿನ ಸಿಪಾಯರು ಗಾಡಿ ಮುತ್ತಿ ಬಿಟ್ಟಿದ್ದಾರೆ. ಒಳಗೊಳಗೆ ನಾನು ಬೆದರಿದೆ. "ಈಗೇನು ಮಾಡಬೇಕು" "Farewell green earth" ಎಂಬ ಪಲ್ಲವಿಯ ಒಂದು ಕರುಣಾ ಗೀತವನ್ನು ಫಿರೇಲಾಯ್ಕಳು ಯಾವಾಗಲೂ ಹೇಳುತ್ತಿದ್ದಳು. ಅದು ನೆನಪಿಗೆ ಬಂದಿತು.

ಆ ಲಷ್ಕರೀ ಹುಕುಮಿನ ಶಬ್ದ ಪುನಃ ಕೇಳಿಸಿದವು. "ಸಬ್ ಲೋಕ ಖಾಲೀ ಉತರ ಜಾವ."

ನಾನು ಕಿಟಿಕಿಯಿಂದ ನೋಡಿದೆ. ವಾಲವೆಬರ ಇಳಿದು ಪ್ಲಾಟಫಾರ್ಮಿನ ಮೇಲೆ ನಿಂತುಕೊಂಡಿದ್ದ. ಬಾಯಲ್ಲಿ ಹಿಡಿದ ಸಿಗಾರೇಟಿಗೆ ಕಡ್ಡಿ ಹಚ್ಚಿದನು. ಬಾಯಿಂದ ಬಿಟ್ಟ ಹೊಗೆ ಗಾಳಿಯಲ್ಲಿ ಹೇಗೆ ಕೂಡಿಕೊಳ್ಳು ವದೋ ಮೋಜಿನಿಂದ ನೋಡಹತ್ತಿದನು.

ನಾನು ಕೆಳಗೆ ಜಿಗಿದು ಬೇಕೆಂತಲೇ ವಾಲವೆಬರನ ಸನಿಯದಿಂದ ಹೋಗುವಾಗ ಅವನ ಕಾಲು ತುಳಿದಂತೆ ಮಾಡಿದೆನು. ಮತ್ತು ತಲೆಯ ಮೇಲಿನ ಟೊಪ್ಪಿಗೆ ತಗೆದು, ಒಂದು ಕ್ಷಣ ಅವನ ಬಳಿಯಲ್ಲಿ ನಿಂತು ನುಡಿದೆ.

"ಕ್ಷಮಿಸಿರಿ."

ಮೆಲ್ಲನೆ ವಾಲವೆಬರ ಕಿವಿಯಲ್ಲಿ ಹೇಳಿದ. "ಗಾಬರಿಯಾದಂತೆ ತೋರಿಸಬೇಡ. ಈ ಜನಗಳಿಗೆ ಏನೂ ಗೊತ್ತಿಲ್ಲ."

ನಾನು ಕೂಡಲೇ ದೂರಾಗಿ ಗಾಡಿಯ ಹಿಮ್ಮಗ್ಗಲು ಬಂದೆ. ಲಷ್ಕರೀ ಸಿಪಾಯರು ಬಲವಾದ ಮುತ್ತಿಗೆ ಹಾಕಿದ್ದರು. ಅದರಿಂದ ಪಾರಾಗಿ ಹೋಗುವ ವಿಚಾರಮಾಡುವದು ಸಾಧ್ಯವೇ ಇರಲಿಲ್ಲ. ಕೆಲವು ಜನ ಹತ್ಯಾರೀ ಸಿಪಾಯರು ಗಾಡಿಹತ್ತಿ, ಡಬ್ಬಿಯಲ್ಲಿ ಮೂತ್ರಖಾನೆ, ಮೇಲಿನ ಫಳಿ–

ಎಲ್ಲ ನೋಡಿ ಯಾರೂ ಇಲ್ಲವೆಂದು ಕೆಳಗಿಳಿದರು. ಸಾಧ್ಯವಾದಷ್ಟು ಶಾಂತ ರೀತಿಯಿಂದ ನನ್ನ ಸ್ಥಳದಲ್ಲಿ ನಾನು ನಿಂತುಕೊಂಡೆ. ನನ್ನಿಂದ ಬಹಳ ದೂರ ಸಿಲಿ ನಿಂತದ್ದು ಕಾಣಿಸಿತು. ಒಳ್ಳೇ ಠೀವಿಯಿಂದ ಆಕೆ ಒಬ್ಬ ಲಷ್ಕರೀ ಸಿಪಾಯಿಯೊಡನೆ ಮಾತಾಡುತ್ತಿದ್ದಳು. ಮಾತಾಡುವಾಗ ಆಕೆ ತನ್ನ ತಲೆಯನ್ನು ತುಸು ಹಿಂದೆ ಬಾಗಿಸಿದ್ದಳು. ಆ ಬಿಳುಪಾದ ಕಂಠ, ಆ ನಸು ದೆರೆದ ವಕ್ಷಭಾಗ! ಸಾಕಲ್ಲ. ಸಿಪಾಯಿ ಬಾಯಿ ನೀರು ಕರೆಯುತ್ತ ಅತ್ತ ನೋಡುತ್ತಿದ್ದನು. ಜಾನಶಿಲರ ಗಾಡಿಯು ಮುಂಭಾಗಕ್ಕೆ ಹೊರಟಿದ್ದ.

ದೊಡ್ಡದನಿಯಿಂದ ಮತ್ತೊಂದು ಹುಕುಮು. "ಸಾಲುಗೊಳ್ಳಿರಿ. ನಿಮ್ಮ ಪಾಸಪೋರ್ಟು ತೋರಿಸಿರಿ."

ಪ್ಲಾಟಫಾರ್ಮಿನ ಮಧ್ಯದಲ್ಲಿ ಒಂದು ಮೇಜು ಹಾಕಿದ್ದರು. ಅದರ ಬಳಿಯಲ್ಲಿ ಗೆಸ್ಟಪೋದ ಇಬ್ಬರು ಅಧಿಕಾರಿಗಳು ಕುಳಿತು ತಪಾಸಿಗಾರಂಭಿಸಿದರು. ಪಾಳಿಯಂತೆ ಒಬ್ಬೊಬ್ಬರೇ ಮುಂದಾಗಬೇಕು. ಕಾಗದ ಪತ್ರ ತೋರಿಸಬೇಕು. ಪ್ರಶ್ನೆ ಕೇಳಿದರೆ ಉತ್ತರಿಸಬೇಕು. "ಒಳ್ಳೇದು ನಡೆ." ಎಂದಾಗ ಹೋಗಬೇಕು. ಈ ಕ್ರಮ ಸಾಗಿತು.

ಹೀಗಾಗುತ್ತ ಜಾನಶಿಲರನ ಪಾಳಿ ಬಂದಿತು. ಅವನೂ ತನ್ನ ಜೇಬಿನಿಂದ ಪಾಸಪೋರ್ಟು ತೆಗೆದು ಮೇಜಿನ ಮೇಲಿಟ್ಟನು. ತನಗೇನೂ ಭಯವಿಲ್ಲ ಎಂಬಂತೆ ಮುಗಿಲು ನೋಡಹತ್ತಿದನು. ಒಬ್ಬ ಅಧಿಕಾರಿ ವಿಚಾರಿಸಿದನು. ಆ ಶಿಲರ ಗೋಣು ಅಲ್ಲಾಡಿಸಿ "ನನಗೆ ಜರ್ಮನ ಬರುವದಿಲ್ಲ. ಇಂಗ್ರಜಿಯಲ್ಲಿ ಮಾತಾಡಿರಿ" ಎಂದು ಹೇಳಿದ.

"ಯಾವ ಹೇತುವಿನಿಂದ ನೀವು ಜರ್ಮನಿಯಲ್ಲಿ ಪ್ರವಾಸ ಮಾಡುತ್ತೀರಿ?"

"ಸುಮ್ಮನೇ, ಮೋಜಿಗೆ ದೇಶನೋಡಲಿಕ್ಕೆ."

"ಸಂಗಡ ಯಾರೂ ಇಲ್ಲವೋ ?"

"ಉಂ ಹುಂ."

"ಅಮೇರಿಕೆಯಲ್ಲಿ ನಿಮ್ಮದೇನು ಉದ್ಯೋಗ?"

"ವಾಶಿಂಗ ಕಂಪನಿ ಇರುತ್ತದೆ."

"ಹಾಂಬುರ್ಗಕ್ಕೆ ಏಕೆ ಹೋಗುತ್ತೀರಿ ?"

“ಅಲ್ಲಿ ನ್ಯೂಯಾರ್ಕಕ್ಕೆ ಹೋಗುವ ಹಡಗು ಹಿಡಿಯುತ್ತೇನೆ.”

“ನಿಮ್ಮ ಬಳಿಯಲ್ಲಿ ಹಣವೆಷ್ಟಿದೆ ?”

“ತೊಂಭತ್ತು ಮಾರ್ಕು.”

“ಸರಿ. ಹಡಗಿನ ಟಿಕೇಟು ಕೊಂಡಿರುವಂತೆ ಕಾಣುತ್ತದೆ.”

“ಹೌದು.”

“ಎಲ್ಲಿದೆ? ತೋರಿಸಿರಿ. ನೋಡುವಾ.”

“ಇಲ್ಲಿ ನನ್ನ ಬಳಿಯಲ್ಲಿ ಇಲ್ಲ. ಹಾಂಬುರ್ಗದ ಒಬ್ಬ ನನ್ನ ಗೆಳೆಯ ಕೊಂಡಿರಬಹುದು.”

“ಆ ಗೆಳೆಯನ ಹೆಸರು ಮತ್ತು ವಿಳಾಸ ಹೇಳಿರಿ.”

ಶಿಅರನು– ಬಾಯಿಗೆ ಬಂದ ಒಂದು ಹೆಸರು, ನೆನಪಾದ ಬೀದಿ ಹೇಳಿ ಬಿಟ್ಟ. ಗೆಸ್ಟಪೋ ಅಧಿಕಾರಿ ಅದನ್ನು ಬರೆದುಕೊಂಡು ಹೇಳಿದ.

“ಥ್ಯಾಂಕ ಯೂ.” ಶಿಅರ– ದೂರಾದ.

ನಾಲ್ಕೈದು ಹೆಜ್ಜೆ ದೂರಾಗಿರಲಿಕ್ಕಿಲ್ಲ. ಆ ಅಧಿಕಾರಿ ಜರ್ಮನ ಭಾಷೆಯಲ್ಲಿ ನುಡಿದ. “ಏನ್ರೀ, ನಿಮ್ಮ ಪಾಸಪೋರ್ಟು ಇಲ್ಲೇ ಉಳಿದಿತಲ್ಲ? ಇದನ್ನು ಕೇಳಿ ಶಿಅರ ಮರಳಿ ಮೇಜಿನ ಹತ್ತರ ಕೈ ಒಡ್ಡಿದ.

ಪಾಸಪೋರ್ಟು ಕೈಗಿಡುತ್ತ ಅಧಿಕಾರಿ ಮಾತಾಡಿದ. “ನಿಮಗೆ ಜರ್ಮನಿ ತಿಳಿಯುವದಿಲ್ಲ ಅಲ್ಲವೋ ?”

ಜಾನಶಿಅರ ತನ್ನ ಉಗುರು ನೋಡಿದ. ಎಣಿಸಿಕೊಂಡನೇನೋ ? “ತುಸು ತುಸು ತಿಳಿಯುತ್ತದೆ.”

ಅತ್ತಿತ್ತ ನೋಡಿ ಆ ಅಧಿಕಾರಿ ಹೇಳಿದ. “ಅಮೇರಿಕನ ಮಾತಾಡುವ ನಾಝಿಗಳು ಯಾರಾದರೂ ಉಂಟೋ ?” ಪ್ರವಾಸಿಕರ ಸಾಲಿನಿಂದ ಇಬ್ಬರು ನಾಝಿಗಳು ಬಂದರು. ಶಿಅರ ಕೈಕಾಲು ಬಿಟ್ಟ. ಮೋರೆ ಬಿಳುಪಿಟ್ಟು ಹೋಯಿತು. ನಾಝಿ ಪ್ರವಾಸಿಕರು ಅವನೊಡನೆ ಮಾತಾಡಿ ಅಧಿಕಾರಿಗೆ ಹೇಳಿದರು.

“ಇವನು ಅಮೇರಿಕನ್ನನಲ್ಲ.”

ಅಧಿಕಾರಿ ಹೇಳಿದ. “ನಿಮ್ಮನ್ನು ಬಂಧಿಸಬೇಕಾಯಿತು.”

ಇಬ್ಬರು ಲಷ್ಕರೀ ಸಿಪಾಯರು ಮುಂದಾಗಿ, ಶಿಅರನನ್ನು ಸ್ಟೇಶನ್ನದ ವೇಟಿಂಗ ರೂಮಿನ ಕಡೆಗೆ ಕರೆದೊಯ್ದರು. ಆಗ ಅವನನ್ನು ಕಂಡದ್ದೇ ಕಡೆ. ಮುಂದೆ ಕೆಲವು ದಿನಗಳಲ್ಲಿ ಅವನ ಕೊಲೆಯಾದ ಸುದ್ದಿ ಬಂತು. ಅವನ ಕೊಲೆ- ಹೇಗಾಯಿತೆಂಬುದು ಕೊಲೆಗಡಕರಿಗೇ ಗೊತ್ತು !

ಇದನ್ನೆಲ್ಲ ನೋಡಿ ನನ್ನ ಎದೆ ನಡುಗಿತು. ಮೊದಲೇ ನನ್ನ ಪಾಸ ಪೋರ್ಟ ಕೊಟ್ಟೆ. ನನ್ನ ಮುಂದಿನ ಮನುಷ್ಯನ ತಪಾಸು ನಡೆದಿತ್ತು. ಆ ಪ್ರಶ್ನೋತ್ತರಗಳನ್ನು ನಾನು ಯಂತ್ರದಂತೆ ಕೇಳುತ್ತಿದ್ದೆ. ಅವನು ದೂರಾದ. ನಾನು ಪಾಸಪೋರ್ಟ ಮೇಜಿನ ಮೇಲೆ ಇಟ್ಟೆ. ಪ್ರಶ್ನೋತ್ತರ ಆರಂಭ ವಾದ ಕೂಡಲೇ, ಯಾರು ಬಲ್ಲರು ? ನನ್ನ ಭಯ ನಷ್ಟವಾಯಿತು.

" ಪ್ರವಾಸದಲ್ಲಿ ನೀವೊಬ್ಬರೇ ಇರುವಿರಾ ? "

" ಹೌದು. "

" ಜರ್ಮನಿಗೆ ಏತಕ್ಕೆ ಬಂದಿದ್ದೀರಿ ? "

" ನಾನು ನಾವಿಕ, ಡಾಂಝಿಗ ಬಂದರದಲ್ಲಿ ಹಡಗು ಬಿಟ್ಟೆ. ಈಗ ಬೆಲ್ಜಮಕ್ಕೆ ಹೋಗಿ ಮತ್ತೊಂದು ಹಡಗಿನಲ್ಲಿ ನೌಕರಿ ಹುಡುಕುತ್ತೇನೆ. "

" ನಿಮ್ಮ ಟಿಕೇಟು ತೋರಿಸಿರಿ. "

ನನ್ನ ಟಿಕೇಟು ಮುಂದೆ ಮಾಡಿದೆ.

" ಹಿಂದೆ ಎಂದಾದರೂ ಜರ್ಮನಿಗೆ ಬಂದಿದ್ದಿರಾ ? "

" ಹಡಗಿನ ಮೇಲಿಂದ ಬಂದಿರುವದಷ್ಟೇ. "

" ಹಣವೆಷ್ಟು ? ನಿಮ್ಮ ಬಳಿಯಲ್ಲಿ ? "

" ನಾಲ್ವತ್ತುಮೂರು ಮಾರ್ಕ. "

" ನಿಮಗೆ ಜರ್ಮನ ಭಾಷೆ ಬರುವದು ಹೇಗೋ ? "

" ನನ್ನ ತಾಯಿ 'ಯುಪೆನ' ಭಾಗದವಳು. ಅಲ್ಲಿ ನಾನು ಎಷ್ಟೋ ವರ್ಷ ಇದ್ದೆನು. ವ್ಹರ್ಸಾಯ ಒಪ್ಪಂದದ ಮೊದಲು ಅದು ಜರ್ಮನಿಯ ಕಡೆ ಇತ್ತು. "

" ಓಹೋ ! ನೀವು ನಮ್ಮ ಗೆಳೆಯರು ಹಾಗಾದರೆ. "

" ಹೌದು. "

" ಒಳ್ಳೇದು. ಗಾಡಿಯಲ್ಲಿ ನೀವು ಹೋಗಬಹುದು. "

ಬಿಡುಗಡೆಯಾದೆನಪ್ಪ! ಗಾಡಿ ಡಬ್ಬಿಯ ಕಡೆಗೆ ಹೋಗುವಾಗ ಹೆಜ್ಜೆ ಬೇಗ ಬೇಗ ಬೀಳುವವೆಲ್ಲಿಯೋ? ಎಂದು ಭೀತಿಗೊಂಡೆ. ನನಗೆ ಆನಂದ ವಾದ ಸಂದೇಹ ಅವರಿಗೆ ಬಂದು ಉಪಯೋಗವಿದ್ದಿಲ್ಲ. ಸಾವಕಾಶವಾಗಿ ನಾನು ನಡೆದೆ. ಗಾಡಿ ಹತ್ತುವಾಗ ವಿಚಾರ ಬಂತು. ಇನ್ನು ವಾಲವೆಬರನ ಗತಿ? ಅವನ ಹೆಸರು ಗೆಸ್ಟಪೋದ ಕಪ್ಪುಯಾದಿಯಲ್ಲಿ ಇರಬೇಕು. ಆ ಜನ ಇವನನ್ನು ಗುರುತಿಸದೇ ಬಿಡುವರೋ? ನಾನು ನನ್ನ ಡಬ್ಬಿಯ ಕಿಟಕಿ ಮುಚ್ಚಿದೆ. ಸಣ್ಣ ಕಿಂಡಿಯಿಂದ ಹೊರಗೆ ನೋಡಿದಾಗ ಸಿಲಿಯ ವಿಚಾರಣೆ ಮುಗಿದು ಅವಳ ಬಿಡುಗಡೆಯಾಗಿತ್ತು. ಮೊದಲು ನಿಂತ ಸ್ಥಳದಲ್ಲಿಯೇ ಈಗೂ ವಾಲವೆಬರ ನಿಂತಿದ್ದ. ಹೊಗೆಯ ಫರಾಳ ನಡೆದೇ ಇತ್ತು. ಅವನ ಮುಂದಿನ ಒಬ್ಬ-ಮತ್ತೊಬ್ಬ ಅವನದೇ ಈಗ ಸರತಿ. ಏನಾಗುವದೋ ಎಂದು ಚಿಂತೆಯಿಂದ ನಾನು ನೋಡಹತ್ತಿದೆ.

ಅಷ್ಟರಲ್ಲಿ ಒಂದು ಅದ್ಭುತ ಚಮತ್ಕಾರ ಘಟಿಸಿತು. ವಾಲವೆಬರನು ಸಹಜವಾಗಿ ಸಾಲಿನಿಂದ ಈಚೆ ಬಂದ. ಅಲ್ಲೊಬ್ಬ ತರುಣ ಗೆಸ್ಟಪೋ ಅಮಲದಾರ ನಿಂತಿದ್ದ. ನಗುತ್ತ ಅವನ ಕಡೆಗೆ ವಾಲವೆಬರ ಹೋದ. ನಡೆಯುವಾಗ ಇವನು ಕುಂಟುವದೇಕೋ ನನಗೆ ತಿಳಿಯಲಿಲ್ಲ. ಆ ಅಮಲ ದಾರನ ಬಳಿಗೆ ಹೋಗಿ ತನ್ನ ಪಾಸಪೋರ್ಟ ತೋರಿಸಿದನು. ಅವ ರಿಬ್ಬರೂ ಮೋಜಿನಿಂದ ಸಂಭಾಷಣೆ ನಡೆಸಿದ್ದು ಕಾಣಿಸಿತು. ಮೇಜಿನ ಹತ್ತರವಿದ್ದ ಅಧಿಕಾರಿಗಳಿಗೆನಿಸಿರಬೇಕು. ಆ ಕುಂಟ ನಮ್ಮ ವರಿಷ್ಠರೊಡನೆ ಮಾತಾಡುತ್ತಾನೆ- ನಮಗೇಕೆ ಅವನ ವಿಚಾರದ ಪೀಡೆ? ವಾಲವೆಬರ ಮತ್ತು ಆ ಅಧಿಕಾರಿ ಏನು ಮಾತಾಡಿಕೊಂಡರೋ ಅದು ನನಗೆ ಕೇಳಿಸುವಂತಿದ್ದಿಲ್ಲ. ಆದರೆ ಅದು ಸುಖಕರವಾಗಿತ್ತು. ಇಷ್ಟು ಮಾತ್ರ ಹೇಳಬಲ್ಲೆ. ಕಡೆಗೆ ಆ ಅಧಿಕಾರಿ ವಾಲವೆಬರನ ಪಾಸಪೋರ್ಟ ಮರಳಿ ಕೊಟ್ಟು, ಒಳ್ಳೇ ಪ್ರೇಮ ದಿಂದ ಅವನ ಬೆನ್ನು ಚಪ್ಪರಿಸಿದ. ಅಲ್ಲದೇ ಡಬ್ಬಿಯವರೆಗೆ ವಾಲವೆಬರ ಮಹಾಶಯರನ್ನು ಕಳಿಸಲಿಕ್ಕೆ ಬಂದುಬಿಟ್ಟ. ಆಗ ನನಗೆ ಅವರ ಸಂಭಾಷಣೆ ಯಲ್ಲಿ ಕೆಲವು ಶಬ್ದಗಳು ಕೇಳಿದವು.

“ನಮ್ಮ ನಾಝಿ ಬಂಧುಗಳಿಗೆ ನಮಸ್ಕಾರ ಹೇಳಿ..” ವಾಲವೆಬರ ಹೇಳುತ್ತಿದ್ದ.

" ಅವಶ್ಯ, ಅವಶ್ಯ, ಹೊಸ ಜರ್ಮನಿಯು ಪರದೇಶಗಳಲ್ಲಿದ್ದ ತಮ್ಮ ನಾಝಿ ಬಂಧುಗಳನ್ನು ಎಂದೂ ಮರೆಯುವದಿಲ್ಲ. ಅಚ್ಛಾ, ನಿಮ್ಮ ಪ್ರವಾಸ ಸುಖವಾಗಲಿ. "

ಅಷ್ಟರಲ್ಲಿ, ಹೋಗಲಿ, ಎಂಬ ಲಷ್ಕರೀ ಮತ್ತೊಂದು ಹುಕುಮು. ಮೆಲ್ಲನೆ ಗಾಡಿ ಸಾಗಿತು. ಆ ತರುಣ ಅಮಲದಾರ ಲಷ್ಕರೀ ಭಂಗಿಯಿಂದ ಕಾಲು ಕೂಡಿಸಿ, ಬಲಗೈ ಮೇಲೆತ್ತಿ ಅಡ್ಡಾಗಿ ಹಿಡಿದನು. ಮತ್ತು ವಾಲವೆಬರ ನನ್ನು ಉದ್ದೇಶಿಸಿ, ಅಂದನು.

" ಹೆಲ ಹಿಟ್ಲರ ! "

ವಾಲವೆಬರ ಮರಳಿ ನುಡಿದನು. " ಹೆಲ ಹಿಟ್ಲರ ! "

ಹಾಂಬುರ್ಗಕ್ಕೆ ಮುಟ್ಟಿದಕೂಡಲೇ ವಾಲವೆಬರನು ಸಿಲಿಯನ್ನು ಕೂಡಲೇ ಬರ್ಲಿನಕ್ಕೆ ಕಳಿಸಿದನು. ಜಾನಶಿಅರನನ್ನು ಗೆಸ್ಟಪೋದವರು ಛಲಿಸುವರೆಂಬುದು ಸ್ಪಷ್ಟ. ಆ ಛಲ ಅವನೆಷ್ಟು ತಾಳುವನೆಂಬದು ಏನು- ನೇಮ? ಅವನ ಬಾಯಿಂದ ಕಬೂಲಿ ಜವಾಬು ಹೊರಬೀಳುವಷ್ಟರಲ್ಲಿಯೇ, ಅವನಿಗೆ ಗೊತ್ತು ಇರುವ, ಕೇಂದ್ರ ಮತ್ತು ಕಾರ್ಯಕರ್ತರ ವಿಳಾಸ, ಮತ್ತು ಅನೇಕ ವಿಷಯ ಇವುಗಳನ್ನೆಲ್ಲ ಬದಲಿಸಬೇಕಾಗಿತ್ತು. ವಾಲವೆಬರನು ಸಿಲಿ ಯನ್ನು ಇದಕ್ಕಾಗಿಯೇ ಕಳಿಸಿದ್ದ.

ಒಂದು ಸಂಗತಿಯ ವಿಷಯಕ್ಕೆ ಮಾತ್ರ ಮನದಲ್ಲಿ ಚುಟು ಚುಟು ಇದ್ದೇ ಇತ್ತು. ಸಂಧಿ ದೊರೆತಾಗ ವಾಲವೆಬರನನ್ನು ಕೇಳಿ ಬಿಟ್ಟೆ.

" ನೀವು ಯಾವ ಯುಕ್ತಿಯಿಂದ ವಂಚಿಸಿದಿರಿ ? "

" ಯಾರನ್ನು ? "

" ಆ ಗೆಸ್ಟಪೋ ಅಮಲದಾರನನ್ನು. ನಮ್ಮ ಗಾಡಿ ನಿಲ್ಲಿಸಿ, ತಪಾಸು ನಡೆದಿತಲ್ಲ. ಆಗ.... "

ನಗುತ್ತ ಅವನೆಂದ. " ಹೋ- ಹೋ- ಏನು ಮಾಡಿದೆ ಹೇಳಲಾ. ಸಾಲು ಬಿಟ್ಟು ನಾನು ಆ ಅಮಲದಾರನ ಬಳಿಗೆ ಹೋಗುವಾಗ ಒಳ್ಳೇ ಕುಂಟುತ್ತಲೆ ಹೋದೆ. ಅವನಿಗೆ ಹೇಳಿದೆ. ಅಯ್ಯೋ! ನನ್ನಗಂತೂ ಸಂಧಿ ವಾತದ ವ್ಯಥೆ. ಸಾಲುಗಟ್ಟಿ ತಾಸುಗಟ್ಟಲೇ ನಿಲ್ಲುವದು ಬಹಳ ತ್ರಾಸ ವಾಗುತ್ತದೆ, ನಾನು ಹಾಲಂಡದಲ್ಲಿರುವ ಜರ್ಮನ ಮನುಷ್ಯ. ಬೇಕೆಂತಲೇ

ಜರ್ಮನಿಗೆ ಬಂದಿದ್ದೆ. ನಾಝಿಗಳ ಅಮಾನುಷ ಅತ್ಯಾಚಾರಗಳನ್ನು, ವರ್ತಮಾನಪತ್ರದಲ್ಲಿ ಓದುತ್ತೇವೆ. ಆದರೆ ಅವುಗಳ ಮೇಲೆ ಎಳ್ಳಿನಷ್ಟು ಸಹ ನನ್ನ ವಿಶ್ವಾಸ ಕೂಡಲಿಲ್ಲ. ಬದ್ಮಾಷ ಜೂ ಜನರ ಪ್ರಚಾರ ಇದು, ಎಂದು ಭಾವಿಸಿದ್ದೇನೆ. ಒಳ್ಳೇದು. ಏನಿರುವದೋ ನೋಡಿಬರುವಾ ಒಮ್ಮೆ. ಎಂದು ಪ್ರವಾಸಕ್ಕೆ ಇತ್ತ ಬಂದೆ. ಇಷ್ಟು ಹೇಳಿದ ಕೂಡಲೇ ಸ್ವಾರಿ ಉಬ್ಬಿತು. ನನ್ನ ಸುಳ್ಳು ಗುಳಿಗೆ ನುಂಗಿದ ಮೊಮ್ಮಗ? ”

ನನಗೆ ನಕ್ಕು ನಕ್ಕು ಸಾಕಾಗಿ ಹೋಯಿತು.

ವಾಲವೆಬರನು ಹಾಂಬುರ್ಗಕ್ಕೆ ಬಂದಾಗಿನಿಂದ ನಮ್ಮ ಪಕ್ಷದಲ್ಲಿ ನವಚೈತನ್ಯ ಉತ್ಪನ್ನವಾಯಿತೆಂದು ನಾನು ಒಪ್ಪಲೇಬೇಕು. ನಮ್ಮ ನಾಶಕ್ಕೆ ಬೇಕಾದ ಅತ್ಯಾಚಾರೀ ಉಪಾಯ ಯೋಜಿಸಲಿಕ್ಕೆ ನಾಝಿಗಳು ಸಿದ್ಧರಿರುವಾಗ, ನಮಗೆ ಧೈರ್ಯಕೊಟ್ಟು, ನಮ್ಮ ಪಕ್ಷ ಉಳಿಸುವದು; ಮತ್ತು ಹಿಟ್ಲರನ ವಿರೋಧ ಕಾರ್ಯವನ್ನು ಸೂಚಿಸುವದು; ಇದೆಲ್ಲ ನಿಜವಾಗಿ ಕಠಿಣ ಕಾರ್ಯ. ಆದರೆ ವಾಲವೆಬರ ಸಮರ್ಥ. ಕುಶಲತನದಿಂದ, ಅದನ್ನು ಆರಂಭಿಸಿದನೆಂಬುದಕ್ಕೆ ಸಂದೇಹವೇನು? ವಾಲವೆಬರ ಹಾಂಬುರ್ಗಕ್ಕೆ ಬಂದಿದ್ದಾನೆ. ಕಮ್ಯುನಿಷ್ಟ ಸೂತ್ರ ಹಿಡಿದು ತಕ್ಕಂತೆ ಕುಣಿಸತೊಡಗಿದ್ದಾನೆ. ಎಂಬುದು ಗೆಸ್ಟಪೋದವರಿಗೆ ತಿಳಿದಿರಬೇಕು. ಅವನನ್ನು ಹಿಡಿಯುವದಕ್ಕೆ ಒಳ್ಳೇ ಯತ್ನಿಸಹತ್ತಿದರು. ಗೆಸ್ಟಪೋ ಕೈದಿನಲ್ಲಿರುವ ನಮ್ಮ ಜನರ ಅನನ್ವಿತ ಛಲ ನಡೆದಿದೆ. ಎಂಬ ಸುದ್ದಿ ಬರತೊಡಗಿದವು. “ ವಾಲವೆಬರ ಎಲ್ಲಿದ್ದಾನೆ? ಹೇಳುವೆಯೋ ಇಲ್ಲವೋ? ” ಇದೊಂದು ಪ್ರಶ್ನೆ. ಕೊರಡೆಯ ಏಟಿಗೊಮ್ಮೆ ವಿಚಾರಿಸುತ್ತಿದ್ದರಂತೆ. ಆದರೆ ವಾಲವೆಬರನ ಕಾರ್ಯಗಳೆಲ್ಲ ಬಹಳ ಗುಪ್ತವಾಗಿದ್ದವು. ಹ್ಯೂಗೋ ಮಾರ್ಕ್ಸರ, ವಾಲ್ಟರ ಡುಡಿಸ್ಸ, ಇತ್ಯಾದಿ ಪ್ರಮುಖರು ಬಂಧಿತರಾದರು. ಆದರೆ ವಾಲವೆಬರ ಸಿಕ್ಕಿರಲಿಲ್ಲ. ಅವನ ನಿರ್ಭಯ ವೃತ್ತಿ, ಕೌಶಲ್ಯ ನೋಡಿ ನಾನು ಚಕಿತನಾದೆ. ಅವನ ಸಹಿಯ ಒಂದು ಪತ್ರಿಕೆ ಮುದ್ರಿಸಿ ಲಕ್ಷಗಟ್ಟಲೆ ನಾವು ಹಂಚಿದೆವು. ಆ ಪತ್ರಿಕೆಯ ಪ್ರಾರಂಭ ವಾಕ್ಯವಿದು. “ಗೆಳೆಯರೇ! ನಮ್ಮ ಹಿಂದೆಗೆಯುವದು ಈಗ ಮುಗಿದಿದೆ. ಇನ್ನು ಹೊಸ ಹುರುಪಿನಿಂದ ನಾವು ಯುದ್ಧ ಪ್ರಾರಂಭಿಸಬೇಕಾಗಿದೆ. ಈ ಯುದ್ಧಕ್ಕೆ ಸೈನ್ಯ

ಬೇಕು. ಅದು ನಿಮ್ಮಲ್ಲಿಯೇ ನಿರ್ಮಾಣವಾಗಬೇಕು. . . . . ''

ವಾಲವೆಬರನ ಈ ಘೋಷಣೆ ಓದಿ, ಒಂದುಕಡೆ ನನಗೆ ಕೌತುಕವೆನಿಸಿದುದು ನಿಜ; ಆದರೆ ಭಯವೂ ಒಂದು ಇತ್ತು. ಇದೆಲ್ಲ ಉದ್ಯೋಗ ಅಕಾಲದಲ್ಲಿ ನಡೆದಿರುವದರಿಂದ, ಇದರ ಪರ್ಯವಸಾನ – ಆತ್ಮಘಾತದಲ್ಲಿ!

ನನ್ನ ಭೀತಿ ನಿಜವಾಯಿತು.

ವಾಲವೆಬರನ ಹೊಸ ಹುರುಪಿನ ಹಸೀಬರಹ ಇಷ್ಟು ಆಯಿತು. ನಮ್ಮ ಪಕ್ಷದಲ್ಲಿ ಉಳಿದಿರುವ ಎಷ್ಟೋ ಸಾವಿರ ಜನ ಗೆಸ್ಟಪೋ ಜೇಲಿನಲ್ಲಿ ಹೋಗಿಬಿದ್ದರು!

## ೧೪

ಸುತ್ತುಮುತ್ತಲು ಬೆಂಕಿ ಉರಿಯುತ್ತಿರುವಾಗ, ಧೈರ್ಯಗುಂದದೇ, ನಿರಾಶರಾಗದೇ, ಸಾಧ್ಯವೆನಿಸಿದಷ್ಟನ್ನು ಮಾಡುತ್ತಿರುವದು ಕ್ರಾಂತಿಕಾರ ಸ್ವೀಕರಿಸಿದ ವ್ರತ. ಅದಕ್ಕನುಸಾರವಾಗಿ ನನ್ನ ಕಾರ್ಯ ನಡೆದಿತ್ತು. ಆ ಕಠಿಣ ಪರಿಸ್ಥಿತಿಯಲ್ಲಿ ಸಹ ಒಂದು ಗುಪ್ತ ಸ್ಥಳದಲ್ಲಿ ಮುದ್ರಣ ಶಾಲೆ ನಡೆಸಿದ್ದೆ. ಅಲ್ಲಿ ಪತ್ರಿಕೆ ಮುದ್ರಿಸುತ್ತಿದ್ದೆವು. ಈ ಸಾಹಸದಲ್ಲಿ ಇನ್ನಿಬ್ಬರು ಸಹಕಾರಿಗಳು. ಒಬ್ಬನು ರುಮಾನಿಯಾದ ಅಲೆಕ್ಸಾಂಡರ ಪೋಪೋವ್ಹಿಕ್ಸ. ಇನ್ನೊಬ್ಬಳು ನನ್ನ ಫಿರೇಲಾಯ.

ನಮ್ಮ ಮುದ್ರಣ ಶಾಲೆ ಇದ್ದ ಮಂದಿರದ ಕಿಟಕಿಗಳ ಪರದೆಗಳಿಗೆ ಡಾಂಬರು ಬಳಿದಿದ್ದೆವು. ಯಂತ್ರದ ಸಪ್ಪಳ ಹೊರಗೆ ಕೇಳಿಸಬಾರದೆಂದು ಬಿರುಕುಗಳಿಗೆಲ್ಲ ಅರಿವೆ ಹಾಕಿ ಮುಚ್ಚಿದ್ದೆವು. ಇಂಥ ಗಾಳಿಯಾಡದ, ಕತ್ತಲೆಯ ಕಠಿಣ ಗುಹೆಯಲ್ಲಿ, ನನ್ನ ಫಿರೇಲಾಯಳು ಕೆಲಸ ಮಾಡುವುದನ್ನು ನೋಡಿ, ನನ್ನ ಅಂತಃಕರಣ ತುಂಬಿಬರಬೇಕು. ಈಗ ಇಪ್ಪತ್ತಾರು ವರ್ಷ ಆಕೆಗೆ, ಜೀವನ ರಸದಿಂದ ತುಂಬಿ ತುಳುಕುವ, ಜೀವನಕ್ಕೆ ಬೇಕೆನಿಸುವ ವಿವಿಧ ವಸ್ತುಗಳ ಸಮ್ಮೋಹ ತಾಳುವ– ಓರ್ವ ಕೋಮಲ ಕಿಶೋರಿ! ಸುತ್ತುವರಿಯುವ ಸಂಕಟ ಸ್ಥಳದಲ್ಲಿ ಆಕೆ ಶೋಭಿಸುವದಿಲ್ಲ. ಪಕ್ಷದ ಎಂಮೇಲಿರುವ ಅಭಿಮಾನದಿಂದ ಆಕೆಯು ಕಾರ್ಯ ಸಾಗಿದ್ದಿತೇ? ಅಲ್ಲ, ನನಗೆ ತಿಳಿಯುತ್ತಿತ್ತು. ನನ್ನ ಮೇಲಿನ ಅಪೂರ್ವ ಪ್ರೇಮದಿಂದ ಇದನ್ನು

ಸಹಿಸುತ್ತಿದ್ದಳಷ್ಟೇ. ಪ್ರೇಮಕ್ಕಾಗಿ ಮಾಡಿದ ಉಳಿದ ಎಲ್ಲ ವಿಷಯ ತ್ಯಾಗ!

ನನ್ನ ವಿಚಾರದ ಕಲ್ಪನೆ ಆಕೆಗಿರಲಿಕ್ಕಿಲ್ಲ. ಆಕೆ ಮತ್ತು ಅಲೆಕ್ಝಾಂಡರ ಮುದ್ರಣ ಯಂತ್ರದ ಬಳಿ ನಿಲ್ಲಬೇಕು. ಪತ್ರಿಕೆಯ ಪ್ರತಿಗಳನ್ನು ಭರದಿಂದ ಹೊರತೆಗೆಯಬೇಕು. ನೂರು ಪತ್ರಿಕೆ ಹೊರಬಿದ್ದ ಕೂಡಲೇ ಅಲೆಕ್ಝಾಂಡರ ಹೇಳುತ್ತಿದ್ದ.

"ಓಹೋ? ಕಾಮ್ರೇಡ ಫಿರೇಲಾಯ! ಇನ್ನು ಈ ಪತ್ರಿಕೆಗಳಿಗೆ ನಿನ್ನ ಆಶೀರ್ವಾದ ಕೊಟ್ಟು, ಹೋಗಿ, ದೂರ ಸಂಚಾರ ಮಾಡಿರಿ." ಎಂದು ಹೇಳು.

ಫಿರೇಲಾಯಳು ಆ ಪತ್ರಿಕೆಯ ಮೇಲೆ ಕೈ ಆಡಿಸುತ್ತ ಹೇಳುವಳು. "ಹೋಗಿ ದೂರ ಸಂಚಾರ ಮಾಡಿರಿ!"

ಆಮೇಲೆ ಅಲೆಕ್ಝಾಂಡರ ಸಮಾಧಾನ ಉಸಿರುಗರೆಯಬೇಕು. ಪುನಃ ಅದೇ ಕ್ರಮ.

ಮನದಲ್ಲಿ ಬೆದರುತ್ತಿದ್ದ ಸಂಕಟ ಕಡೆಗೊಮ್ಮೆ ಬಂದಿತು. ಗೆಸ್ಟಪೋ ಜನರು ಆಗುಪ್ತ ಮುದ್ರಣ ಶಾಲೆ ಮುತ್ತಿಬಿಟ್ಟರು.

ಆಗ ನಾನು ಅಲ್ಲಿರಲಿಲ್ಲ. ಹೇಗೆ ಮುತ್ತಿದರೆಂಬುದು ಮುಂದೆ ನನಗೆ ತಿಳಿದಿತು.

ಒಂದು ದಿನ ಬೆಳಗಿನ ನಾಲ್ಕು ಗಂಟೆಯ ವೇಳೆ. ನಮ್ಮ ಮುದ್ರಣ ಶಾಲೆ ಇದ್ದ ಬೀದಿಯ ಪಹರೆಯವ ಟೆಲಿಫೋನು ಮಾಡಿ ಗೆಸ್ಟಪೋಕ್ಕೆ ತಿಳಿಸಿದ.

"ಒಬ್ಬ ಮುದುಕಿ ಹೇಳುತ್ತಾಳೆ. ನಮ್ಮ ಮನೆಯ ಮಗ್ಗುಲಲ್ಲಿ ಏನೋ ಗರ ಗರ ದನಿ ಕೇಳಬರುತ್ತದೆ. ಇದರಿಂದ ನನ್ನ ನಿದ್ರೆ ಕೆಡುವದು."

ಅರ್ಧ ತಾಸಿನಲ್ಲಿಯೇ ಗೆಸ್ಟಪೋದ ಮೋಟರು ಬಂದಿತು. ಇಬ್ಬರು ಗಾಡಿಯಿಂದ ಜಿಗಿದರು. ತಿಳಿಸಿದ ಪಹರೆಯವನ ಕೂಡ ತುಸು ಮಾತಾಡಿ ಅಂತಸ್ತಿನ ಮೆಟ್ಟಲು ಏರಹತ್ತಿದರು.

ಅಲೆಕ್ಝಾಂಡರ ಈ ಗಡಬಿಡಿಯನ್ನು ಮೊದಲೇ ತಿಳಿದನು. ಕೂಡಲೇ ಯಂತ್ರ ನಿಲ್ಲಿಸಿದನು. ಬಳಿಯಲ್ಲಿದ್ದ ಫಿರೇಲಾಯಳೆಂದಳು. "ಇದೇನೋ ಅಲೆಕ್ಝಾಂಡರ?" ಅಷ್ಟರಲ್ಲಿ ಬಾಗಿಲು ಬಡಿದ ಸಪ್ಪಳವಾಯಿತು.

ಬೆದರಿ ಫಿರೇಲಾಯಳು ಸ್ತಬ್ಧಳಾಗಿ ನಿಂತುಬಿಟ್ಟಳು. ಅಲೆಕ್ಝಾಂಡರನು ಮಾತ್ರ ಹೀಗೆ ಸಂಕಟ ಬಂದರೆ ಹೇಗೆ? ಎಂಬುದನ್ನು ಮೊದಲೇ ನಿರ್ಧರಿಸಿದ್ದ. ಫಿರೇಲಾಯಳನ್ನು ಎಳೆಯುತ್ತ ಹಿಮ್ಮಗ್ಗಲಿನ ಬಾಗಿಲ ಬಳಿ ಒಂದ. ಕೀಲಿ– ತೆರೆದು ಮೆಟ್ಟಲು ತೋರಿಸಿ ಹೇಳಿದ. " ಹುಂ ಓಡು. "

" ನೀನು "

" ಇಲ್ಲಿ ನನ್ನ ಕೆಲಸವಿದೆ. " ಎಂದವನೇ ಆಕೆಯನ್ನು ದೂಡಿ, ಬಾಗಿಲು ಇಕ್ಕಿಕೊಂಡನು.

ತನ್ನ ಬೂಟು ತೆಗೆದು ಮೆಟ್ಟಲು ಅವಸರದಿಂದ ಇಳಿದಳು. ಕೆಳಗೆ ಆಕೆ ಮುಟ್ಟುವಷ್ಟರಲ್ಲಿ ನಮ್ಮ ಮುದ್ರಣ ಶಾಲೆಯ ಬಾಗಿಲು ಮುರಿದ ಸಪ್ಪಳವಾಯಿತು.

ಇತ್ತ ಅಲೆಕ್ಝಾಂಡರ ಸಾಧ್ಯವಾದಷ್ಟು ಬಗೆಹರಿಸಿದ್ದ. ಕೆಲವು ಮಹತ್ವದ ವಿಳಾಸ ಹರಿದು ಬಾಯಲ್ಲಿ ತುಂಬಿಕೊಂಡಿದ್ದ. ಯಾವುದೋ ಒಂದು ಕಿಟಕಿ ತೆರೆದು ಆತನು ಚಪ್ಪರದ ಮೇಲೆ ಆಡರಿಹೋಗಿದ್ದ. ಗೆಸ್ಟಪೋ ಜನರು ನನ್ನ ಬೆನ್ನುಹತ್ತುವರು. ಫಿರೇಲಾಯಳಿಗೆ ಓಡಲಿಕ್ಕೆ ಅವಕಾಶ ದೊರೆಯುವದು; ಎಂದು ಅವನ ತರ್ಕ. ಚಪ್ಪರದ ಮೇಲೆ ಜಾರುತ್ತ ಅವನು ಮುಂದೆ ಸಾಗಿದ್ದನು. ನಾಲ್ಕೈದು ಯಾರ್ಡು ಮುಂದೆ ಸರಿದರೆ ಕೆಳಗಿಳಿಯುವದು ಸುಲಭವಾಗಿತ್ತು.

ಅಷ್ಟರಲ್ಲಿ ಗೆಸ್ಟಪೋದ ಒಬ್ಬನು ಆ ಕಿಟಕಿಯಲ್ಲಿ ಇಣಕಿ ಮೇಲೆ ನೋಡಿದನು. ವಿದ್ಯುತ್ಪ್ರಕಾಶ ಅವನ ಮೇಲೆ ಕೆಡವಿಬಿಟ್ಟನು. ಅಲೆಕ್ಝಾಂಡರನು ಚಪ್ಪರದಲ್ಲಿ ಬಿದ್ದುಕೊಂಡು ಮರೆಯಾಗುವ ಪ್ರಯತ್ನ ನಡೆಯಿಸಿದನು. ಗೆಸ್ಟಪೋದ ಮನುಷ್ಯ ಬೊಬ್ಬಿರಿದ. " ಸುಮ್ಮನೆ ತಿರುಗು. "

ಅಲೆಕ್ಝಾಂಡರ ಕದಲಲಿಲ್ಲ.

" ಸುಮ್ಮನೇ ತಿರುಗುವಿಯೋ? ಗುಂಡು ಹಾಕಲೋ? "

ಹೀಗೆ– ನನ್ನ ಓರ್ವ ವಿಶ್ವಾಸಿಕ ಸಾಹಸೀ ಮಿತ್ರ ಗೆಸ್ಟಪೋ ಬಂದಿಯಾದ! ನಮ್ಮ ಪಕ್ಷದಿಂದ ಬೀಳುವ ಸಾವಿರಾರು ಬಲಿಯಲ್ಲಿ ಇದೂ ಒಂದು?

* * * *

ಬೇಗನೆ ಮುಂದೆ ನನ್ನ - ಮತ್ತು ಫಿರೇಲಾಯಳ ಅಗಲುವಿಕೆ ಸಂಭವಿ

ಸಿತು. ಎಷ್ಟೋ ದಿನ ನಮ್ಮಿಬ್ಬರ ಭೆಟ್ಟಿಯೇ ಆಗಲಿಲ್ಲ. ನಮ್ಮಂಥ ಎಷ್ಟೋ ಪ್ರೇಮೀ ಜೀವಿಗಳ ವಿರಹ ನಾನು ನೋಡಿದ್ದೆ. ಆದೇ ಸರತಿ ನನಗೆ ಬಂದಿತು. ಫಿರೀಲಾಯಳನ್ನು ಬರ್ಲಿನಕ್ಕೆ ಕಳಿಸಿದರು. ಆಕೆಗೆ ಏನು ಕಾರ್ಯ ಒಪ್ಪಿಸಿದೆ? ಇರುವ ಸ್ಥಳವೆಲ್ಲಿ? ಇದಾವುದನ್ನೂ ನನಗೆ ಹೇಳಬಾರದೆಂದು ಹುಕುಮು. ಬರ್ಲಿನಕ್ಕೆ ಆಕೆ ಹೊರಡುವಾಗ ನಿರೋಪ ತೆಗೆದುಕೊಳ್ಳುವದು ಸಹ ಸಾಧ್ಯವಾಗಲಿಲ್ಲ.

ಆಕೆ ಹೋದ ಎರಡು ದಿನಗಳಲ್ಲಿಯೇ ನಾನು ಕೋಪನಹೆಗನಕ್ಕೆ ಹೋಗಬೇಕೆಂದು ಹುಕುಮು ಬಂದಿತು. ಅಲ್ಲಿಯ ನನ್ನ ಕಾರ್ಯ ಒಳ್ಳೇ ಚಮತ್ಕಾರಿಕವಾಗಿತ್ತು. ನಮ್ಮ ಪಕ್ಷದ ನಾವಿಕ ವಿಭಾಗದ ಪ್ರಮುಖ ಆಲ್ಬರ್ಟ ವಾಲ್ಟರನು ಗೆಸ್ಟಪೋ ಬಂದಿಯಾಗಿದ್ದ. ಅವನ ಸಂಗ್ರಹದಲ್ಲಿದ್ದ, "ISH" ದ ಎಲ್ಲ ಗುಪ್ತ ಕಾಗದಗಳನ್ನು ಬೇಗನೇ ಸ್ಥಳಾಂತರಿಸಿ ಒಂದು ಸುರಕ್ಷಿತ ಸ್ಥಳಕ್ಕೊಯ್ಯುವದು ಅವಶ್ಯಕವಾಗಿತ್ತು. ವಾಲ್ಟರನ ತಾಯಿಯಿಂದ ಅವುಗಳನ್ನೆಲ್ಲ ನಾನು ಪಡೆಯಬೇಕು. ಹಾಂಬುರ್ಗದಿಂದ ಹೊರಡುವ 'ಬಾಯುರಾ' ಹಡಗಿನಿಂದ ಕೋಪನಹೆಗನಕ್ಕೆ ಹೋಗಬೇಕು-ಹೀಗಿತ್ತು ಆ ಯೋಜನೆ.

ಆಗಲೇ ನಾನು ವಾಲ್ಟರನ ತಾಯಿಕಡೆಗೆ ಹೋದೆ. ಒಳ್ಳೇ ಹಣ್ಣು ಹಣ್ಣು ಮುದುಕೆ ಆಕೆ. ಆದರೆ– ಯುದ್ಧದ ಹುಮ್ಮಸ ಹೋಗಿರಲಿಲ್ಲ. ನಾನು ಬೇಡಿದ ಕಾಗದಗಳ ಮಹತ್ವ ಆಕೆಗೆ ತಿಳಿದಿತ್ತು. ಅವರಲ್ಲಿ ಬರೆದ ಸಾವಿರಾರು ಪರದೇಶಿಯ ಹಡಗುಗಳ ಮಾಹಿತಿಯನ್ನು ತಮ್ಮ ಹುಡುಗ ಎಷ್ಟು ಪರಿಶ್ರಮದಿಂದ ದೊರಕಿಸಿದ್ದಾನೆ. ಇದನ್ನೆಲ್ಲ ವರ್ಣಿಸಹತ್ತಿದಳು ಆ ತಾಯಿ. ಕಣ್ಣೀರು ತುಂಬಿದವು. ವಾಲ್ಟರನು ಆಕೆಯ ಏಕಮಾತ್ರ ಪುತ್ರ !

ಆ ಕಾಗದ-ಪತ್ರಗಳ ಪೆಟ್ಟಿಗೆ ತೆಗೆದುಕೊಂಡು ಬಾಯುರಾ ಹಡಗು ಏರಿದೆ. ಆ ಪ್ರವಾಸ ಸುಸೂತ್ರವಾಯಿತು. ಜರ್ಮನಿಯಲ್ಲಿ ಸತತ ಮೃತ್ಯು ಭೀತಿಯಿಂದ ಕಳೆದ ದಿನ, ಆಮೇಲೆ ಓಡುವ ದಿನ ಹಡಗಿನಲ್ಲಿ ಈ ಪ್ರಶಾಂತ ದಿನ. ಈ ಶಾಂತತೆ ಮೊದಲು ನನಗೆ ನಿಜವೆನಿಸಲಿಲ್ಲ. ಮನದಲಿ [illegible] ಬೇಕು. ನಾನು ಜಾಗ್ರತೆಯಲ್ಲಿರುವೆನೋ? ಕನಸಿನಲ್ಲಿಯೋ? ಕೋಪನ

ಹೆಗನ ಬಂದರ ಬಂದಿತು. ನಾನು ಕೆಳಗಿಳಿದೆ. ಅಲ್ಲಿಯ ಪ್ರಮುಖ ಕಾರ್ಯ ಕರ್ತ ರಿಚರ್ಡ ಜೆಸಸೆನನ ಲಠ್ಠ ಆಕೃತಿ ಸ್ವಾಗತಕ್ಕೆ ಬಂದಿತ್ತು, ಆಗ ನಾನು ತಿಳಿದೆ. ನಾನು ಕನಸಿಸಲ್ಲಿ ಇಲ್ಲ!

ಕೋಪನಹೆಗನದಲ್ಲಿಯ ನನ್ನ ಕಾರ್ಯ ಮುಗಿದಕೂಡಲೇ – ನಾನು ಸ್ವೀಡನಕ್ಕೆ ಹೋದೆ. ಅಲ್ಲಿ ನಾವಿಕರ ಸಂಪು ನಡೆಯುವದಿತ್ತು. ಅದನ್ನು ಪ್ರಚಂಡವಾಗಿ ನಡೆಸುವ ಕಾರ್ಯ ನನಗೆ ಒಪ್ಪಿಸಿದ್ದರು.

ಆದರಂತೆ ನಾನು ಅಲ್ಲಿಗೆ ಹೋಗಿ ನನ್ನ ಕಾರ್ಯದಲ್ಲಿ ಅಪೂರ್ವ ಯಶ ದೊರಕಿಸಿಕೊಂಡೆ. ಡಿಮಿಟ್ರಾಫನು ಬಂದಿಯಾದ ಮೇಲೆ ಅವನ ಸ್ಥಳದಲ್ಲಿ ಬಂದ ಸರ್ವಾಧಿಕಾರಿ 'ಉಲರಿಶನು' ನು ನನ್ನ ಸಲುವಾಗಿ ಪತ್ರ ಬರೆದು ಅಭಿನಂದಿಸಿದನು. "ನೀನು ಬಹು ದೊಡ್ಡ ಕಾರ್ಯ ಮಾಡಿದೆ. ಶಾಬಾಸ! ಕಾಮ್ರೇಡ."

ಸ್ವೀಡನದಿಂದ ನಾರ್ವೆಗೆ ಹೋದೆ. ಇಲ್ಲಿ ಮಾಡಬೇಕಾದ ಕಾರ್ಯ ಮಹತ್ವದ್ದಿತ್ತು. ಹಿಟ್ಲರನು ಯಾವ ಧೋರಣದಿಂದ ಪರದೇಶಗಳಲ್ಲಿ ಚುಂಚು ಪ್ರವೇಶ ಮಾಡುತ್ತಿದ್ದನೋ, ಅದು ತುಸು ದಿನಗಳಲ್ಲಿ ಸಫಲವಾಗುವದಿತ್ತು. ನಾನು ಅದಕ್ಕೆ ವಿಘ್ನ ಉಂಟುಮಾಡಬೇಕಾಗಿದ್ದಿತು. ಜರ್ಮನಿಯ ಘಟನೆಗಳೆಲ್ಲ ಬಹುತರವಾಗಿ ಲಷ್ಕರೀ ಸ್ವರೂಪದವು. ಯುದ್ಧದ ಮುಖ್ಯ ಲಕ್ಷ್ಯಸ್ಥಾನ ರಶಿಯಾ. ಇದನ್ನು ನಾವು ತಿಳಿದಿದ್ದೆವು. ನಾರ್ವೆ ದೇಶದಲ್ಲಿ ಸಮುದ್ರ ದಂಡೆ ಮೇಲಿದ್ದ 'ನಾರ್ವಿಕ' ಊರು ಯುದ್ಧದ ದೃಷ್ಟಿಯಿಂದ ಒಳ್ಳೇ ಮಹತ್ವದ್ದು. ಇಲ್ಲಿ ಕಬ್ಬಿಣದ ದೊಡ್ಡ ದೊಡ್ಡ ಖನಿಗಳಿದ್ದವು. ದೀರ್ಘಾವಧಿ ಯುದ್ಧ ನಡೆದರೆ, ಕಬ್ಬಿಣದ ವಿಪುಲ ಸಂಗ್ರಹ ಬೇಕು ಎಂಬುದನ್ನು ಹಿಟ್ಲರ ತಿಳಿದಿದ್ದ. ಅದಕಾಗಿಯೇ ನಾರ್ವಿಕದ ಸುತ್ತೆಲ್ಲ ತನ್ನ ಸತ್ತೆಯನ್ನು ಸ್ಥಾಪಿಸುವದಕ್ಕೆ ಅವನ ಪ್ರಯತ್ನ. ಇದಕ್ಕೆ ವಿಘ್ನ ತಂದೊಡ್ಡುವದು ನಮ್ಮ ಕಾರ್ಯ. ನಾರ್ವಿಕ ಬಂದರದಲ್ಲಿರುವ ನಮ್ಮ ಕಮ್ಯುನಿಷ್ಟ ಪಕ್ಷವನ್ನು ಒಳ್ಳೇ ಸಂಘಟಿಸಿದರೆ– ಪ್ರಸಂಗದಲ್ಲಿ– ನಾರ್ವಿಕ ಬಂದರ– ರೇಲ್ವೆ ಬೀದಿ ಇವುಗಳನೆಲ್ಲ ರಶಿಯದ ಸೈನ್ಯ ವ್ಯಾಪಿಸಲಿಕ್ಕೆ ಸಾಧ್ಯವಿತ್ತು. ಈ ನಮ್ಮ ತಂತ್ರ ಹಿಟ್ಲರನಿಗೆ ಸ್ಪಷ್ಟ ತಿಳಿದಾಗ

ಅವನು ಮೆತ್ತಗಾಗುತ್ತಿದ್ದ. ಹೀಗೆಲ್ಲ ವಿಚಾರಿಸಿ ನಾನು ಕಾರ್ಯ ಸಾಗಿಸ ಬೇಕಾಗಿದ್ದಿತು.

ನಾನು ಮೊದಲು 'ಆಸ್ಲೋ' ಕ್ಕೆ ಹೋಗಿ ಅಲ್ಲಿ ಡಾ. ಹಾಲವ್ಹೋರ್ಸನನ ಭೆಟ್ಟಿಯಾದೆನು. ಈ ಸ್ವಾರಿ ಎಂದರೆ ನಮ್ಮ ಪಕ್ಷದಲ್ಲಿ ದೊಡ್ಡ ಆಸಾಮಿ. ನಾನು ಹೋದಾಗ ಡಾಕ್ಟರ ಸಾಹೇಬರು ಮೇಜಿನ ಮೇಲೆ ವ್ಹಿಸ್ಕಿಯ ಒಂದು ದೊಡ್ಡ ಬುದ್ದಲಿಕೆ ಇಟ್ಟುಕೊಂಡು, ನಾರ್ವೆ ದೇಶದ ರೇಲ್ವೆ ಲಾಯಿನಗಳ ನಕಾಶದ ಅಭ್ಯಾಸ ನಡೆಸಿದ್ದರು.

ನಾನು ಬಂದ ಕಾರ್ಯ ಅವರಿಗೆ ಗೊತ್ತಿದ್ದಿತು. ನಾರ್ವಿಕ ವಿಭಾಗದಲ್ಲಿ ಮಾರ್ಟಿನ ಜೇಲವುಸ, ಎಂಬ ಹೆಸರಿನ ಕಾರ್ಯಕರ್ತನು ಈಗ ಕಾರ್ಯ ಮಾಡುತ್ತಿದ್ದನು. ಅವನಿಗೆ ಸಹಾಯ ಮಾಡಬೇಕೆಂದು ಡಾಕ್ಟರರು ಹೇಳಿದರು. ಮತ್ತು ಉಪಯುಕ್ತವೆನಿಸಿದ ಎಷ್ಟೋ ರಿಪೋರ್ಟು, ಮತ್ತು ಕಾಗದಪತ್ರಗಳನ್ನು ನನಗೆ ಕೊಟ್ಟರು. ಕಾಗದಗಳ ಒಂದೊಂದು ಪುಡಕೆಯ ಮೇಲೆ ಬೇರೆ ಬೇರೆ ರೋಗಗಳ ಹೆಸರು ಬರೆದಿದ್ದರು. ಮೇಲಿನ ಹೆಸರು ನೋಡಿ ಯಾರಿಗಾದರೂ ಎನಿಸಬೇಕು. ಡಾಕ್ಟರ ಮಹಾಶಯರು ಬರೆದ ರೋಗಚಿಕಿತ್ಸೆಯ ನಿಬಂಧಗಳಿವು. ಇದನ್ನು ನೋಡಿ ಅವನ ಕುಶಲತನದ ವಿಷಯಕ್ಕೆ ನಾನು ಕೇಳಿದುದು ನಿಜವೆಂದು ಖಾತ್ರಿ ಆಯಿತು.

ಕಿಟಿ ಆಂಡ್ರೆಸೆನ ಎಂಬ ಹೆಸರಿನ ತರುಣಿ ಡಾ. ಹಾಲವ್ಹೋರ್ಸನರ ವಿಶ್ವಾಸಿಕಳು. ನನ್ನ ಗುರುತು ಮಾಡಿಕೊಡುವದಕ್ಕೆ ಫೋನಿನಿಂದ ಆಕೆಯನ್ನು ಕರೆದರು. ಆಕೆಗೆ ಒಳಗೆ ಬಂದುದು ಓಡಿಬಂದು ಸೇರಿಕೊಳ್ಳುವಂತೆ ಕಂಡಿತು. ಒಳ್ಳೇ ಮಾಟಾದ ಮೈಕಟ್ಟಿನ ಆಕೆಯನ್ನು ನೋಡಿದರೆ, ಇದೊಂದು ಆರೋಗ್ಯದ ಸುಂದರ ಮಾದರಿ. ಎನ್ನುವ ಹಾಗಿತ್ತು. ನನ್ನೊಡನೆ ಹಸ್ತಾಂದೋಲನ ಮಾಡುತ್ತ ಉತ್ಸಾಹದಿಂದ ಆಕೆ ನುಡಿದಳು.

"ಏನು ನಾವಿಕಸಾಹೇಬರೇ! ತಾವು ನಾರ್ವಿಕಕ್ಕೆ ಹೋಗುವವರೋ? ಸರಿ. ನನ್ನನ್ನೂ ಕರೆದುಕೊಂಡುಹೋಗಿ. ಇಲ್ಲಿ ನನಗೆ ಬೇಸರಬಂದಿದೆ. ಜೀವ ಕೊಡಬೇಕೆಂದು ಅನಿಸುವದು ನೋಡಿ."

ನಗುತ್ತ ನಾನೆಂದೆ. "ಕ್ಷಮಿಸು. ನನ್ನ ಹತ್ತರ ಹಣವಿಲ್ಲ. ನಿನ್ನನ್ನು ಹೇಗೆ ಕರೆದೊಯ್ಯಲಿ?"

ನಾರ್ವಿಕದಲ್ಲಿ ಬಹಳ ದಿನ ನಾನು ಇರುವದಕ್ಕೆ ಸಾಧ್ಯವಾಗಲಿಲ್ಲ. ನಾಝಿಗಳ ಹಸ್ತಕರು ನಾನು ಇಲ್ಲಿ ಬಂದಿರುವಂತೆ ರಿಪೋರ್ಟ್ ಮಾಡಿರಬಹುದು. ಪೋಲೀಸರು ನನ್ನನ್ನು ಹಿಡಿಯಬಹುದೆಂಬ ಖಾತ್ರಿ ನನಗಾಯಿತು. ಅಂದಮೇಲೆ ಪುನಃ ಆಸ್ಲೋಕ್ಕೆ ಹೋಗುವದನ್ನು ನಾನು ನಿಶ್ಚಯಿಸಿದೆ. ಆದರೆ ಆಸ್ಲೋ ನಿಲ್ದಾಣದಿಂದ ನಾನು ಹೊರಬೀಳುವಷ್ಟರಲ್ಲಿ ನನ್ನ ಹಿಂದೆ ಯಾರೋ ಬೆನ್ನು ಹತ್ತಿರುವರೆಂದು ಸಂಶಯಬಂತು. ಬೇಗ ಬೇಗ ನಡೆದು ಎರಡು ಮೂರು ಸಂದಿ ದಾಟಿದ ಮೇಲೆ 'ಸಿಟಿ ಹಾಟೆಲ' ಎಂದು ಬೋರ್ಡು ಕಂಡಪನೇ ಆ ಮಂದಿರದಲ್ಲಿ ಸೇರಿಕೊಂಡೆ. ಒಳಗೆ ಹೆಜ್ಜೆ ಇಡುವಷ್ಟರಲ್ಲಿ ಬೆನ್ನುಹತ್ತಿದ ಜನ ಅಲ್ಲಿಗೇ ಬಂದರು. ಒಂದು ಟ್ಯಾಕ್ಸಿಯಲ್ಲಿ ನನ್ನನ್ನು ಕೂಡಿಸಿ ಪೋಲೀಸ ಠಾಣೆಗೆ ಕರೆದೊಯ್ದರು. ವರಿಷ್ಠ ಅಮಲದಾರನ ಮುಂದೆ ನಾನು ನಿಂತೆ. ಆವನೆಂದ. "ಕುಳಿತುಕೊಳ್ಳಿ."

ನಾನು ಕುಳಿತೆ. ಮತ್ತು ಎಚ್ಚರದಿಂದ ಉತ್ತರಕೊಡಬೇಕೆಂದು ಮನದಲ್ಲಿ ನಿಶ್ಚಯಿಸಿದೆ.

ಆ ಅಮಲದಾರ ಕೇಳಿದನು.

"ನಾರ್ವೇಜಿಯನರೆನಿಸುವ ನಾವು, ಅತಿಥಿಗಳಿಗೆ ಯೋಗ್ಯವೆನಿಸುವಷ್ಟು ಸತ್ಕಾರ ಮಾಡುತ್ತೇವೆ. ಆದೇಕೋ ನೀವು ತ್ರಾಸು ತಂದುಕೊಂಡಿರಿ. ಇದು ಯೋಗ್ಯವೋ ?

ನಾನಂದೆ. "ನೀವು ಹೇಳುವದು, ನನಗಂತೂ ತಿಳಿಯುವದಿಲ್ಲ."

"ತಿಳಿಯಲಿಕ್ಕೇಬೇಕು. ಸಮುಸಿಂಗನನ್ನು ನೀವು ಗುರುತಿಸುವಿರಲ್ಲವೇ?"

"ಯಾರು ?"

"ಆರ್ಥರ ಸಮುಸಿಂಗ."

"ಛೇ."

ಒಂದು ಕಾಗದ ಸುರುಳಿಯಿಂದ ಸಮುಸಿಂಗನ ಫೋಟೋ ತೆಗೆದು ನನಗೆ ತೋರಿಸುತ್ತ ಆವನೆಂದ. "ಓಡಿಹೋಗಲಿಕ್ಕೆ ಇವನಿಗೆ ನೀವೇ ಸಹಾಯ ಮಾಡಿದಿರಲ್ಲವೇ? ಈಗ ಅವನೆಲ್ಲಿ?"

"ಇವನ ಗುರುತು ನನಗೆಷ್ಟೂ ಇಲ್ಲ."

“ ನಾರ್ವಿಕದಲ್ಲಿ ನೀವೇನು ಮಾಡುತ್ತಿದ್ದಿರಿ? ”

“ ನಾನು ನಾರ್ವಿಕಕ್ಕೆ ಎಂದೂ ಹೋಗಿಲ್ಲ. ”

“ ನಾರ್ವೇ ದೇಶಕ್ಕೆ ಬಂದಕಾರಣ? ”

“ ಸುಮ್ಮನೇ ಪ್ರವಾಸಕ್ಕೆ. ನಿಮ್ಮ ನಾರ್ವೇ ದೇಶ ಬಹಳ ಸುಂದರವಾಗಿದೆ. ”

ನನ್ನ ಮಾತುಕೇಳಿ ಅವನು ಸಂತಾಪದಿಂದ ಮಾತಾಡಿದನು. “ ಸರಿ. ಹೀಗೆ ಒಳ್ಳೇ ಮಾತಿನಲ್ಲಿ ಅರ್ಥವಿಲ್ಲವೆಂದು ಕಾಣುತ್ತದೆ. ನಾನು ಹೇಳುವದನ್ನು ಲಕ್ಷ್ಯವಿಟ್ಟು ಕೇಳು. ನೀನು ಯಾರು ಎಂಬುದು ನಮಗೆ ಸಂಪೂರ್ಣ ಗೊತ್ತು. ಜರ್ಮನ ಪೋಲೀಸರು ನಿನ್ನನ್ನು ಹಿಡಿಯಬೇಕೆಂದಿದ್ದಾರೆ. ಇದು ಸಹ ತಿಳಿದಿದೆ. ಬೇಕಾಯದೇಶೀರ ಚಳುವಳಿ ಮಾಡಲಿಕ್ಕೆ ನೀನು ಇಲ್ಲಿ ಬಂದಿರುವಿ. ನಿನ್ನನ್ನು ಸೀಮೆಯಾಚೆ ದಾಟಿಸುವೆವು. ನಮಗೆ ಎಲ್ಲ ಸಂಗತಿ ತಿಳಿಸಿದರೆ ಮಾತ್ರ, ನೀನು ಇಷ್ಟಪಡುವ ದೇಶಕ್ಕೆ ಕಳಿಸಬಹುದು. ಅಲ್ಲದ ಸಲ್ಲದ ಉತ್ತರಕೊಟ್ಟರೆ ನೆಟ್ಟಗೆ ಜರ್ಮನಿ. ಅಲ್ಲಿ ನಿನಗೆ ಬಡಿಸಿಟ್ಟ ಎಡೆ, ನಮಗಿಂತಲೂ ನಿನಗೆ ಹೆಚ್ಚು ಗೊತ್ತು. ”

ನಾನಂದೆ. “ ಒಳ್ಳೇದು. ನಿಮಗೇನುಬೇಕೋ ಕೇಳಿಕೊಳ್ಳಿ. ”

“ ಈಗ ಹೇಗೆ ಮಾತಾಡಿದೆ. ನಾರ್ವೇ ದೇಶಕ್ಕೆ ಏಕೆ ಬಂದೆ? ಹೇಳು ನೋಡುವಾ. ಯಾರ ಭೆಟ್ಟಿ ?

“ ನಾನು ಬಂದದ್ದು ದೇಶ ನೋಡಲಿಕ್ಕೆ. ಆದರೆ ಮನಸ್ಸಿನ ನಿಜವಾದ ಉದ್ದೇಶ, ನಾನು ಪ್ರೀತಿಸುವ ಹುಡುಗೆಯನ್ನು ಭೆಟ್ಟಿಯಾಗುವದು. ”

“ ಯಾರು ಆ ಹುಡುಗೆ ?”

“ ಕಿಟಿ ಅಂಡ್ರೆಸೇನ. ”

“ ವಿಳಾಸ? ”

“ ನಂಬರು ಇಪ್ಪತ್ತಾರು. ಸೆಂಟಿ ಹಾಲವಾರ್ಡ. ”

ಆ ಅಮಲದಾರ ನುಡಿದ. “ ಹುಂ ಏನು ಗುಳಿಗೆ ಮಾತಾಡುವಿಯೋ? ಒಬ್ಬ ಹುಡುಗೆಗೆ ಭೆಟ್ಟಿಯಾಗಲಿಕ್ಕೆಂದು ಇಲ್ಲಿಗೆ ಬಂದೆಯೋ? ಈ ಕಟಿ ಪಿಟಿ ಯಾರು ಆಕೆ? ”

"ಅವಳು ಓರ್ವ ಪ್ರತಿಷ್ಠಿತ ಸ್ತ್ರೀ. ಇದಕ್ಕಿಂತ ಹೆಚ್ಚಿನ ಮಾಹಿತಿ ನಾನು ಹೇಳಲಿಕ್ಕೆ ಬರುವಂತಿಲ್ಲ. ಆಕೆಯದೇ ಇಚ್ಛೆ ಇದ್ದರೆ ಆಕೆ ಹೇಳ ಬಹುದು." "ನೋಡುವಾ. ಹೋ....ನಿಜವೇನೋ? ಕಾಮಿಂಟರ್ನ್‌ದ ಪಗಾರೀ ಪ್ರಚಾರಕನಿರುವದಿಲ್ಲವೇ? ನೀನು."

"ಏನು?"

ತಾಸುಗಟ್ಟಲೆ ಈ ರೀತಿ ಪ್ರಶ್ನೋತ್ತರ ನಡೆದಿದ್ದವು. ತೌಡು ಕುಟ್ಟಿದಂತೆ. ಕಡೆಗೆ ಮೇಜಿನಮೇಲೆ ಮುಷ್ಟಿ ಅಪ್ಪಳಿಸಿ ಆ ಅಮಲದಾರ ಹೇಳಿದನು. "ಸಾಕು, ನಿನ್ನ ಸಂಗಡ ಬೇರೆ ಭಾಷೆಯಿಂದ ಮಾತಾಡಬೇಕು."

ಸಿಪಾಯರನ್ನು ಕೂಗಿದನು. ಮರುಕ್ಷಣದಲ್ಲಿ ಮುಂಗೈಗೆ ಬೇಡಿ ಬಂದವು. ಜೇಲಿನಲ್ಲಿ ಹೋಗಿ ನಾನು ಬಿದ್ದುಕೊಂಡೆ.

ಆ ಇಕ್ಕಟ್ಟಿನ ಕೊಟ್ಟಡಿಯಲ್ಲಿ ಶತಪಥ ಮಾಡುತ್ತಿರುವಾಗ ಕಳೆದ ಎಷ್ಟೋ ದಿವಸಗಳ ಚಿತ್ರಪಟ ಕಣ್ಣುಮುಂದೆ ಹಾದುಹೋಯಿತು. ನಾನು ಪೋಲೀಸರ ಅತಿಥಿಯಾದದ್ದು ಹದಿಮೂರನೇ ಸಾರೆ. ಇಲ್ಲಿಯ ಪೋಲೀಸರು ನನ್ನನ್ನು ಗೆಸ್ಟಪೋದವರಿಗೆ ಒಪ್ಪಿಸುವರಲ್ಲ! ಎಂದು ತಲೆ ತಿರುಗಹತ್ತಿತು. ನನಗಿಂತ ಮೊದಲು ಈ ಕೊಟ್ಟಡಿಯಲ್ಲಿದ್ದ ಕೈದಿ, ಹೋಗುವಾಗ ಸಣ್ಣದೊಂದು ಚೂರಿ ಇಟ್ಟಿರುವನೇನೋ? ಎಂದು ಅತ್ತಿತ್ತ ಶೋಧಿಸಿದೆ. ಮನದಲ್ಲಿ ಒಂದೇಸಮನೆ ವಿಚಾರ. "ಬಂದಿಯಾಗಿ ಜರ್ಮನಿಗೆ ಮರಳಿ ನಾನು ಹೋಗಬಾರದು! ಎಂದೂ ಇಲ್ಲ."

ಕಣ್ಣಮುಂದೆ ಫಿರೇಲಾಯಳ ಮೂರ್ತಿ ಕಟ್ಟಿತು. ವಿಸ್ತಾರವಾದ ಸಮುದ್ರದ ಮೇಲೆ ಠೀವಿಯಿಂದ ಸಾಗುವ ಹಡಗಿನ ಚಿತ್ರ ತೇಲಹತ್ತಿತು. ಕ್ಷಣಮಾತ್ರ ಮನಸ್ಸಿನಲ್ಲಿ ಬಂತು. ಎಷ್ಟು ಬೇರೆ, ಎಷ್ಟು ಸುಖದ ಆಯುಷ್ಯ ನನ್ನದಾಗುತ್ತಿತ್ತು!

ಸಂಧ್ಯಾಕಾಲದ ಏಳು ಗಂಟೆಗೆ ಕೀಲಿ ತೆರೆದು, ವಾರ್ಡರ ಬಂದನು. ಅವನ ಬೆನ್ನಹಿಂದೆ ಮತ್ತೊಬ್ಬ ಕೈದಿ. ಅವನ ಕೈಯಲ್ಲಿ ಒಳ್ಳೇ ಶುಭ್ರ ಅರಿವೆ ಮುಚ್ಚಿದ ತಾಟು ಇತ್ತು. ಅದನ್ನು ಮೇಜಿನ ಮೇಲೆ ಇಡಿಸಿ ವಾರ್ಡರನು ನನಗೆ ಹೇಳಿದನು. "ಎದುರಿನ ಅಂಗಡಿಯಿಂದ ಯಾರೋ ನಿಮ್ಮ ಸ್ನೇಹಿಗಳು ಈ ಊಟ ಕಳಿಸಿದ್ದಾರೆ."

ಅವನು ಹೊರಟು ಹೋದನಂತರ ವಿಚಾರ ಮಾಡಿದೆ. ಈ ಸ್ನೇಹಿಗಳು ಯಾರಾಗಿರಬಹುದು? ಸರಿ. ಪೋಲೀಸರು ಕಿಟಿ ಅಂಡ್ರೆಸೆನಳನ್ನು ತಪಾಸು ಮಾಡಿರಬಹುದು. ಆಕೆ ನಾನು ಜೇಲಿಗೆ ಬಿದ್ದ ಸಂಗತಿ ಡಾ. ಹಾಲವ್ಹೊರ್ಸೇನನಿಗೆ ಹೇಳಿರಬಹುದು. ಊಟದ ಯಾವುದೋ ಪದಾರ್ಥದಲ್ಲಿ ನನಗಾಗಿ ಒಂದು ಸಣ್ಣ ಚೀಟಿ ಇಟ್ಟಿರಬೇಕು. ಎಂದು ಭಾವಿಸಿ, ಪ್ರತಿಯೊಂದು ಪದಾರ್ಥ ನೋಡಿದೆನು. ಕಡೆಗೆ 'ಪುಡಿಂಗ'ದಲ್ಲಿ ಒಂದು ಚೀಟಿ ಸಿಕ್ಕಿತು. ಕಾಗದದ ಮೇಲೆ ಟಾಯಿಪು. "ಪ್ರಿಯಮಿತ್ರಾ! ಎಲ್ಲಾ ಪದಾರ್ಥ ತಿಂದು ಬಿಡು, ಕಿಟಿ ಬೇಗನೆ ನಿನ್ನ ಭೆಟ್ಟಿಯಾಗುವಳು."

ನಂತರ ಆ ಪದಾರ್ಥಗಳನ್ನೆಲ್ಲ ನುಂಗಿ ನೀರು ಕುಡಿದೆ. ಆದರೆ ಊಟ ಮುಗಿದ ಕೂಡಲೆ ನನಗೆ ಮಬ್ಬು ಹಿಡಿದಂತಾಯಿತು. ಒಂಭತ್ತು ಗಂಟೆಗೆ ಜ್ವರ ಬಂದುಬಿಟ್ಟವು. ಡಾಕ್ಟರ ಹಾಲವ್ಹೊರ್ಸೇನನು ಅನ್ನದಲ್ಲಿ ಏನಾದರೂ ರಸಾಯನ ಕೂಡಿಸಿ ಕಳಿಸಿರಬೇಕು. ಕಣ್ಣು ಬಹಳ ಉರಿಯಹತ್ತಿದವು. ಮೈ ನರಗಳೆಲ್ಲ ಜಗ್ಗಿಕೊಂಡಂತಾಗಿ ನಿತ್ರಾಣವಾಯಿತು. ಕಣ್ಣಿಗೆ ಕತ್ತಲು ಗವಿದಂತಾಗಿ ಏನೋ ಭಯಂಕರವೆನಿಸಹತ್ತಿತು. ನಾನು ಬೊಬ್ಬೆಕುಟ್ಟ ಹತ್ತಿದೆ. "ಡಾಕ್ಟರರನ್ನು ಕರೆಸಿರಿ. ನಾನು ಸಾಯುತ್ತೇನೆ." ಹೀಗೆ ವಾರ್ಡರನಿಗೆ ಹೇಳಿದೆ. ಮೊದಲು ಅವನು ಲಕ್ಷಿಸಲೇ ಇಲ್ಲ. ಆ ಮೇಲೆ ಅವನಿಗೂ ಎನಿಸರಬೇಕು. ಈ ಲಕ್ಷಣವೇನೋ ಸರಿಯಾಗಿಲ್ಲ. ಹೋಗಿ ಡಾಕ್ಟರನನ್ನು ಕರೆದು ತಂದ.

ಈ ಡಾಕ್ಟರರೆಂದರೆ ಮತ್ತಾರೂ ಅಲ್ಲ. ಹಾಲವ್ಹೊರ್ಸೇನ. ಅವನು ನನ್ನ ನಾಡಿಹಿಡಿದು ನೋಡಿದನು. ಮತ್ತು ಜೇಲಿನ ಅಧಿಕಾರಿಗಳಿಗೆ ಬೈಯ್ಯಲಾರಂಭಿಸಿದನು.

"ಇವರೇನು ಅಮಲದಾರರೋ? ದನಗಾಹಿಗಳೋ? ಬುದ್ಧಿ ಎಲ್ಲಿಟ್ಟಿರುವರೋ ಮಕ್ಕಳು. ಇಂಥ ಜೇನೆಯುವನನ್ನು ಜೇಲಿನಲ್ಲಿಡಲಿಕ್ಕೆ ನಾಚಿಕೆ ಬರುವದಿಲ್ಲವೋ! ಇವರಿಗೆ...."

ಅವನು ನನ್ನ ಕಡೆಗೆ ನೋಡಿ ಎಡಗಣ್ಣು ಚಿವುಟಿದನು. ನನ್ನ ಬಾಯಲ್ಲಿ ಥರ್ಮಾಮೀಟರು ಇಟ್ಟನು. ಅಂಗಿ ಗುಂಡಿಗಳನ್ನೆಲ್ಲ ಬಿಚ್ಚಿ, ಎದೆಮೇಲೆ ಸ್ಟೆಥಾಸ್ಕೋಪು ಊರಿದನು. ವಾರ್ಡರನಿಗೆ ಹುಕುಮು.

"ಏ, ತಣ್ಣೀರು ತೆಗೆದುಕೊಂಡು ಬಾ. ಏಕದಮ ಥಂಡಾ ಲಾವ."

ಅವನು ಹೋದ ಕೂಡಲೇ, ಜೇಬಿನಿಂದ ಒಂದು ಕಡ್ಡಿ ಪೆಟ್ಟಿಗೆ ತೆಗೆದು ನನ್ನ ಹೊದಿಕೆಯ ಕೆಳಕ್ಕೆ ಸರಿಸಿದನು. ವಿಚಾರಿಸಿದನು. "ನಾನು ಹೇಳುವದನ್ನು ತಿಳಿಯುವಷ್ಟು ಎಚ್ಚರದಿಂದಿರುವೆಯೋ! ಇಲ್ಲವೋ?"

ನನಗೆ ಬಹಳ ಜಾಡ್ಯವೆನಿಸುತ್ತಿತ್ತು. ಗೋಣು ಹಾಕಿದೆ.

ಕಿವಿಯಲ್ಲಿ ಡಾಕ್ಟರ ಹೇಳಿದನು. "ಗಾಬರಿಯಾಗಬೇಡ. ನಿನ್ನ ಬಿಡುಗಡೆಗೆ ಈ ಯುಕ್ತಿಮಾಡಿದೆ. ಆ ಕಡ್ಡಿಪೆಟ್ಟಿಗೆಯಲ್ಲಿ ಪುಡಿ ಇದೆ. ಅದನ್ನು ನಾಳೆ ಬೆಳಗಿನಲ್ಲಿ ತೆಗೆದುಕೋ. ಆಗ ಬಹಳ ಬೆವರು ಬರುವದು. ನಂತರ ನನ್ನ ಸರ್ವಾಂಗವೆಲ್ಲ ಉರಿಯುವದೆಂದು ಸೋಗು ನಡಿಸು."

ಅಷ್ಟರಲ್ಲಿ ವಾರ್ಡರ ನೀರು ತಂದ. ಡಾಕ್ಟರಸಂಗಡ ಕಿಟಿಯೂ ಬಂದಿದ್ದಳು. ಆಕೆ ನೀರಿನ ಗ್ಲಾಸು ಬಾಯಿಗೆ ಹಿಡಿದಳು. ವಾರ್ಡರನಿಗೆ ಕೇಳಿಸುವಂತೆ, ದೊಡ್ಡದನಿಯಿಂದ ನನ್ನ ಪ್ರಿಯಾ! ನನ್ನ ರಾಜಾ! ಎಂದು ಹೇಳುತ್ತ ಬೆನ್ನಮೇಲೆ ಕೈ ಆಡಿಸಿದಳು. ಕಡೆಗಂತೂ ಪಟ-ಪಟನೆ ಮುದ್ದಿಕ್ಕಿ ಬಿಟ್ಟಳು. ಡಾಕ್ಟರ ಸಂಗಡ ಹೋಗುವಾಗ ಅಳುತ್ತಲೇ ಹೊರಬಿದ್ದಳು.

ಮರುದಿನ ನನ್ನನ್ನು ಕಚೇರಿಗೆ ಒಯ್ದರು. ನಾನು ಭಯಂಕರ ಅಜಾರಿ ಎಂಬ ನಾಟಕವಂತೂ ನಡೆಸೇ ಇತ್ತು. ಆದರೆ ಇನ್ನೊಮ್ಮೆ ತಪಾಸು ಮಾಡಬೇಕೆಂದು ಅವರು ಯೋಚಿಸಿದ್ದರೇನೋ?

ಮುಖ್ಯಾಧಿಕಾರಿ ಕೇಳಿದನು. "ಈಗ ಪ್ರಕೃತಿ ಹೇಗಿದೆ?"

"ಸರಿಯಾಗಿಲ್ಲ."

ಅವನು ಭುಜಹಾರಿಸಿ- ತಾನೇ ಏನೋ ಗುಣಗುಟ್ಟಿದ. ಮತ್ತೊಬ್ಬ ತರುಣ ಅಮಲದಾರ ಬಳಿಯ ಕುರ್ಚಿಯ ಮೇಲೆ ಕುಳಿತಿದ್ದ. ಅವನ ಕಡೆಗೆ ಎಡಗೈ ತೋರಿಸಿ, ಹೇಳಿದನು." ನಿನ್ನ ತಪಾಸಿಗೆ ಇವರು ಸ್ಟಾಕಹೋಮು ದಿಂದ ಬೇಕೆಂತಲೇ ಬಂದಿದ್ದಾರೆ. ಇವರು ಸ್ವೀಡನ ಪೋಲೀಸು ಖಾತೆಯವರು."

ನಾನಂದೆ. "ಇದಂತೂ ನಾರ್ವೇ ದೇಶ."

"ಹೌದು. ನಾರ್ವೆ, ಸ್ವೀಡನ, ಮತ್ತು ಡೆನ್ಮಾರ್ಕ, ಈ ಮೂರು ದೇಶದ ಪೋಲೀಸ ಖಾತೆಗಳು ಸಹಕಾರದಿಂದ ಸಾಗುತ್ತವೆ. ನೀನು

ನಮ್ಮ ದೇಶದಲ್ಲಿದ್ದರೂ, ನಿನ್ನನ್ನು ತಪಾಸುಮಾಡುವ ಹಕ್ಕು ಇವರಿಗೆ ಉಂಟು. ''

ಸ್ವೀಡನದಿಂದ ಬಂದ ಅಧಿಕಾರಿ ನನ್ನನ್ನು ನೋಡಿ ನಕ್ಕ. ಸಿಗಾರೇಟಿನ ಡಬ್ಬಿ ನನ್ನ ಮುಂದೆ ಮಾಡಿದ. ನಾನು ಬೇಡವೆಂದು ಹೇಳಿದೆ. ಅವನು ಕುರ್ಚಿಯ ಮೇಲೆ ಹಿಂದೆ ಬಾಗಿ, ಒಂದು ನೋಟಬುಕ್ಕು ತೆರೆದು ನುಡಿದನು.

''ಸ್ವೀಡನದಲ್ಲಿ ಕೆಲವು ವಿಚಿತ್ರ ಪ್ರಕಾರಗಳು ಇದೀಗ ಘಟಿಸಿದವು. ಅದರ ವಿಷಯಕ್ಕೆ ನಿಮ್ಮ ಅಭಿಪ್ರಾಯ ನಮ್ಮ ಸರಕಾರಕ್ಕೆ ಬೇಕಾಗಿದೆ. ಗೊಏಟಬರ್ಗ, ಮತ್ತು ಸ್ಟಾಕಹೋಮುಗಳಲ್ಲಿ ಈಗ ಸುಡುವಿಕೆ ನಡೆದಿತು. ಜೇಲ ಎಂಬ ಹೆಸರಿನ ಹಡಗಿನಿಂದ ಕೆಲವು ಪ್ರವಾಶಿಕರು ಓಡಿಸಲ್ಪಟ್ಟರು. ಇದೆಲ್ಲದರ ತಳಕ್ಕೆ ಯಾರು ಇರಬೇಕೆಂದು ನಿಮ್ಮ ಅಭಿಪ್ರಾಯ ? ''

ನಾನಂದೆ. ''ನಿಮ್ಮ ಸ್ವೀಡನ ದೇಶದ ಮಾಹಿತಿ ನನಗಿಲ್ಲ. ''

''ಬಹಳವಿರಲಿಕ್ಕಿಲ್ಲ. ಆದರೆ ನನಗೆ ಚೆನ್ನಾಗಿದೆ. ಸೋವ್ಹಿಯೆಟ ಸರಕಾರದ ಪ್ರಚಾರ ಖಾತೆಯು ನಮ್ಮ ದೇಶದಲ್ಲಿ ಈಗ ನಡೆಸಿರುವ ಉದ್ಯೋಗದ ವಿಷಯಕ್ಕೆ ನಿಮ್ಮಿಂದ ಕೆಲವು ಮಾಹಿತಿ ದೊರೆಯುವದೆಂದು ನನ್ನ ವಿಶ್ವಾಸ. ಆ ಮಾಹಿತಿ ನೀವು ಕೊಟ್ಟರೆ ನಮ್ಮ ಸರಕಾರವು ನಿಮಗೆ ದೊಡ್ಡ ಇನಾಮು ಕೊಡುವದು. ''

ನಾನಂದೆ. ''ಸುದ್ದಿಗಳನ್ನು ಮಾರುವ ಉದ್ಯೋಗ ನಾನು ಮಾಡುವದಿಲ್ಲ. ''

''ಸರಿ, ನೀವು ಸ್ವೀಡನಕ್ಕೆ ಬಂದಿರಲಿಲ್ಲವೇ ? ''

''ಇತ್ತ ನಾರ್ವೇಕ್ಕೆ ಬಂದಾಗ ಸ್ವೀಡನದಲ್ಲಿ ಹಾದು ಬಂದೆ ಅಷ್ಟೇ. ''

''ಗೊಏಟಬರ್ಗ ಬಂದರದಲ್ಲಿ ನೀವು ಗುಪ್ತವಾಗಿ ಇರಲಿಲ್ಲವೋ ? ''

''ಎಂದೂ ಇಲ್ಲ. ನಾನು ಗುಪ್ತವಾಗಿ ಇರುವ ಕಾರಣ ? ''

''ಕಮ್ಯುನಿಷ್ಟ ಸರಕಾರದ ಪಗಾರೀ ನೌಕರರಲ್ಲವೋ ನೀವು ? ''

''ಅಲ್ಲ. ''

ಇದನ್ನೆಲ್ಲ ಕೇಳಿ ಸ್ಥಾನಿಕ ಪೋಲೀಸರ ಮುಖ್ಯನು ಕೂಗಿದ. ''ಇರು ವಿ.

ನಮ್ಮ ಬಳಿಯಲ್ಲಿ ಸಾಕಷ್ಟು ಆಧಾರಗಳಿವೆ. ದೇಶದ್ರೋಹದ ಆರೋಪಕ್ಕಾಗಿ ಜರ್ಮನ ಪೋಲಿಸರು ನಿನ್ನನ್ನು ಹಿಡಿಯುವ ಹೊಂಚು ಹಾಕಿದ್ದಾರೆ. ''

ನಾನು ಬೇಗನೆ ಉತ್ತರಿಸಿದೆ. "ಹಾಗಾದರೆ ಅವರ ಸ್ವಾಧೀನ ಮಾಡಿರಲ್ಲ? ತಮ್ಮ ದೇಶದ ಪೋಲೀಸ ಖಾತೆಯು ಜರ್ಮನ ಗೆಸ್ಟಪೋ ದವರ ಕೈಗೊಂಬೆಯಾದುದನ್ನು ನೋಡಿ, ನಾರ್ವೆಯ ಸ್ವಾತಂತ್ರ್ಯ ಪ್ರಿಯ ಜನರು ಆನಂದಪಡುತ್ತಾರೆ. ''

ಇದನ್ನು ಕೇಳಿ ಮುಖ್ಯಾಧಿಕಾರಿ ಭುಜಹಾರಿಸಿ, ಮಾತಾಡಿದನು.

" ಹುಂ ! ಈ ಗೃಹಸ್ಥನೊಡನೆ ಮಾತಿನಲ್ಲಿ ಹೇಳಿ ಕಳೆದು ಅರ್ಥವಿಲ್ಲ. ನಿಜವಾಗಿ ಎಂದರೆ ಇವನ ವ್ಯವಸ್ಥೆ ಮೆತ್ತಗೆ ಮಾಡಬೇಕು. ಆದರೆ ದುರ್ದೈವ. ಹಾಗೇನೂ ಮಾಡ ಬರುವಂತಿಲ್ಲ. ''

ಇಷ್ಟರಲ್ಲಿ ಧಡಕ್ಕನೇ ಬಾಗಿಲು ತೆರೆದು ಕಿಟಿ ಅಂಡ್ರೆಸೇನಳು ಒಳಗೆ ಬಂದಳು. ಅಲ್ಲಿದ್ದ ಅಮಲದಾರರನ್ನು ಲಕ್ಷಿಸದೇ ಒಂದು ಕುರ್ಚಿ ಎಳೆದು ಕೊಂಡು ಅದರ ಮೇಲೆ ಕೂಡುತ್ತ ನನ್ನ ಕೊರಳಿಗೆ ಕೈ ಇಕ್ಕಿ ಅಳುತ್ತ ನುಡಿದಳು. " ಏನಾಯಿತು ನನ್ನ ಪ್ರಿಯಕರನ ಅವಸ್ಥೆ. ನಿನಗಿಷ್ಟು ಬೇನೆ ಎಂಬುದು ಇವರಿಗೆ ಹೇಗೆ ತಿಳಿಯದು ? ನಿನ್ನ ಕೈ ಕೊಡು ನನ್ನ ಕೈಯ್ಯಲ್ಲಿ· ಹುಂ ಹೀಗೆ.... ''

ಮುಖ್ಯಾಧಿಕಾರಿ ಆಕೆಗೆ ನುಡಿದನು. " ಏನಮ್ಮ, ನಿಮ್ಮ ಹಿತದ ಮಾತು ಹೇಳುತ್ತೇನೆ, ಕೇಳುವಿರಾ ? ಇವನು ಭಯಂಕರ ಮನುಷ್ಯನಿದ್ದಾನೆ. ಇವನ ಬೆನ್ನು ಹತ್ತಬೇಡಿ. ಇವನಿಂದ ನಿಮಗೆ ಸುಖವಾಗಲಿಕ್ಕಿಲ್ಲ. ನಿಮ್ಮನ್ನಗಲಿ ಇವನು ಹೊರಟು ಹೋಗಬಹುದು. ''

ಕಿಟಿ ವಿಕಟಹಾಸ್ಯ ಮಾಡಿದಳು. ನನ್ನನ್ನು ಬಿಗಿದಪ್ಪಿ ಅಧಿಕಾರಿಗಂದಳು. " ನಿಮ್ಮ ಮಾತಿಗೆ ಬಹಳ ನಗೆ ಬರುವದು. ಇವನನ್ನು ನಾನು ಬಹಳ ದಿನಗಳಿಂದ ಗುರುತಿಸುತ್ತೇನೆ. ಇವನು ಭಯಂಕರನೇ ? ಒಳ್ಳೆಯವ! ಇವನಂಥ ಒಳ್ಳೇ ತರುಣ ಡೆನ್ಮಾರ್ಕ–ನಾರ್ವೆ–ಅಥವಾ ಬೇರೆ ಯಾವ ದೇಶಗಳಲ್ಲಿಯೂ ನನಗೆ ಕಾಣಲಿಲ್ಲ. ಇವನನ್ನು ಏಕೆ ಛಲಿಸುತ್ತೀರಿ ? ಇವನು ಎಷ್ಟು ಅಜಾರಿ ಇದ್ದಾನೆ. ಕಾಣುವದಿಲ್ಲವೋ ? ನಿಲ್ಲಿ. ನಾನು ನೆಟ್ಟಗೆ ರಾಜೇಸಾಹೇಬರಿಗೆ ಫೋನು ಮಾಡುತ್ತೇನೆ. ಅಂದರೆ ಅವರು

ನಿಮಗೆ ಹೇಳುತ್ತಾರೆ. ಚೋರರು, ದರೋಡೆಖೋರರು, ಕೊಲೆಪಾತಕಿಗಳು, ಇಂಥವರನ್ನು ಹಿಡಿಯಲಿಕ್ಕಿದೆ, ಪೋಲೀಸು ಖಾತೆ. ನನ್ನಂಥ ಹಡುಗೆಯರ ಪ್ರಿಯಕರನ ಛಲಮಾಡಲಿಕ್ಕಲ್ಲ!''

ಆ ಅಧಿಕಾರಿ ತಣ್ಣಗಾದ. ನನ್ನ ಕೊಟ್ಟಡಿಗೆ ಪುನಃ ಒಯ್ಯಲಿಕ್ಕೆ ವಾರ್ಡರನಿಗೆ ಹುಕುಮಾಯಿತು.

ನನ್ನ ಕೈಯಲ್ಲಿ ಕೈಹಾಕಿ ಕಿಟಿ ಕೊಟ್ಟಡಿಯವರೆಗೆ ಬಂದು, ವಾರ್ಡರನಿಗೆ ವಸಕ್ಕನೆ ವೈಮೇಲೆ ಹೋಗಿ ಹೇಳಿದಳು.

"ಇವನನ್ನು ಇನ್ನೊಂದು ದಿನ ಇಲ್ಲಿಟ್ಟು ನೋಡಿರಿ. ಆಮೇಲೆ ನಿಮಗೆ ತೋರಿಸುತ್ತೇನೆ. ನನ್ನ ರಂಭಾಟವನ್ನಾದರೂ ನೋಡಿ ಒಮ್ಮೆ. ಎಲ್ಲಾ ವರ್ತಮಾನಪತ್ರಗಳಲ್ಲಿ ಬರೆಸುತ್ತೇನೆ. ಏನೆಂದು ತಿಳಿದಿದ್ದೀರಿ..''

ಹೀಗೇನೋ ಬಡಬಡಿಸುತ್ತ ಆಕೆ ಹೋದಳು. ನಾನು ಕೋಣೆ ಸೇರಿದೆ. ಜೇಲಿನಲ್ಲಿರುವ ಜನರಷ್ಟೇ ನಾನೂ ಆಶ್ಚರ್ಯಚಕಿತನಾಗಿದ್ದೆ.

೧೫

ಡಾ. ಹಾಲವ್ರೊರ್ಸೇನನ ಹೇಳಿಕೆಯಂತೆ, ಬೆಳಗಿನಲ್ಲಿ ಆ ಪುಡಿಯನ್ನು ನಾನು ತೆಗೆದುಕೊಂಡೆ. ಆದರ ಪರಿಣಾಮ ತುಸು ವೇಳೆಯಲ್ಲಿಯೇ ಕಂಡು ಬಂತು. ತಲೆ ಸಿಡಿದು ಬೀಳುವಂತಾಯಿತು. ತಿರುಗಹತ್ತಿತು. ಕಾರವಾದ ನೀರು ಕಾರಿಕೊಳ್ಳಹತ್ತಿದೆ. ತುಸು ವೇಳೆಯಲ್ಲಿ ಸ್ನಾನಮಾಡಿದಂತೆ ಬೆವರು ಬಂತು. ಉಸಿರುಗಟ್ಟಿದಂತಾಗಹತ್ತಿತು. ಆ ವೇದನೆ ತಾಳುವದಾಗಲಿಲ್ಲ. ಮನಸ್ಸಿನಲ್ಲಿ ಡಾಕ್ಟರನಿಗೆ ಬೈದುಕೊಂಡೆ. ಮತ್ತು "ನನ್ನ ಪ್ರಾಣ ಹೋಗಹತ್ತಿದೆ. ಡಾಕ್ಟರನನ್ನು ಕರೆಯಿರಿ." ಎಂದು ಒದರಿದೆ.

ಡಾ. ಹಾಲವ್ರೊರ್ಸೇನ ಮತ್ತೆ ಬಂದ. ಬಂದವನೇ ಜೇಲಿನ ಡಾಕ್ಟರನಿಗೆ ಫೋನು ಮಾಡಿದ. ಅವನೂ ಬಂದ. ಇಬ್ಬರೂ ನನ್ನ ತಪಾಸು ಜೋರಾಗಿ ನಡೆಸಿದರು. ಬೇಕೆಂತಲೇ ನಾನು ಹೆಚ್ಚು ಒದರುವವ. ಬಹಳ ಕೆಮ್ಮಹತ್ತಿದೆ. ಕಾಲು ಮಡಿಸಿಕೊಂಡೆ. ದುಡು, ದುಡು ಹೊರಳಾಡಲಿಕ್ಕೆ ಸಹ ಕಮ್ಮಿ ಮಾಡಲಿಲ್ಲ. ಜೇಲಿನ ಡಾಕ್ಟರ ಹತಬುದ್ಧನಾಗಿ ಹೋದ.

ಹಾಲವ್ಪೊರ್ಸೇನನಿಗೆ ಹೇಳಿದನು. "ಲಕ್ಷಣ ಮಾತ್ರ ಚನ್ನಾಗಿ ಕಾಣುವದಿಲ್ಲ. ಏನು ಮಾಡಬೇಕು? ಈಗ."

ಗಂಭೀರವಾಗಿ ಹಾಲವ್ಪೊರ್ಸೇನ ಹೇಳಿದ. "ಇವನ ವಿಶೇಷ ಕಾಳಜಿ ಮಾಡಬೇಕು. ಇದಂತೂ ಸ್ಪಷ್ಟ. ನಾನು ಇವನನ್ನು ನನ್ನ ಕಡೆಗೆ ಒಯ್ಯಲಿಕ್ಕೆ ಸಿದ್ಧನಿದ್ದೇನೆ. ಆದರೆ ಇಲ್ಲಿಂದ ಇವನನ್ನು ಸ್ಥಳ ಬಿಡಿಸಬೇಕಾದರೆ ನಿಮ್ಮ ಸ್ಪೆಶಲ ಸರ್ಟಿಫಿಕೇಟು ಬೇಕು. ಅದನಷ್ಟು ಬರೆದುಕೊಡಿ, ಆಯಿತು."

ಅವನು ಒಂದೇ ಮಾತಿಗೆ ಒಪ್ಪಿಕೊಂಡ. ಅವನು ಬರೆಯುತ್ತಿರುವಾಗ ನಾನು ಮತ್ತಷ್ಟು, ಹುಚ್ಚಾ–ಪಚ್ಚಾ ದನಿತೆಗೆದು, ಸಾಧ್ಯವಾದಷ್ಟು ಕೂಗಿಕೊಳ್ಳುತ್ತಿದ್ದೆ. ಸರ್ಟಿಫಿಕೇಟು ಸಿದ್ಧವಾದ ನಂತರ, ಅವರಿಬ್ಬರೂ ನನಗೆ ಉಡುಪು ತೊಡಿಸಿದರು. ಕೈಹಿಡಿದು ಕೊಟ್ಟಡಿಯ ಹೊರಗೆ ತಂದರು. ಹಾಗೇ ಜೇಲಿನ ಆವಾರದಿಂದ ಗೇಟಿನವರೆಗೆ ಸಾಗಿಸಿದರು. ಅಲ್ಲಿ ಡಾ. ಹಾಲವ್ಪೊರ್ಸೇನನ ಮೋಟಾರು ನಿಂತುಕೊಂಡಿತ್ತು. ನಾವು ಒಳಗೆ ಕುಳಿತ ಕೂಡಲೇ, ಗಾಡಿ ವೇಗದಿಂದ ಸಾಗಿತು. ಒಮ್ಮೆಲೇ ಗುಪ್ತ ಧನ ಸಿಕ್ಕಂತೆ ವಿಜಯ ಹರ್ಷಗಳಿಂದ ಡಾಕ್ಟರು ಮಾತಾಡಹತ್ತಿದರು.

ನಾನು ವಿಚಾರಿಸಿದೆ. "ನನಗೆ ಕೊಟ್ಟದ್ದಿರಲ್ಲ. ಆ ಭಯಂಕರ ಪುಡಿ ಯಾತರದು?"

"ಆ ಔಷಧದ ಹೆಸರು. 'ಇಪೇಕಾಕ' ದಕ್ಷಿಣ ಅಮೇರಿಕೆಯ ಅಡವೀ ಜನರಿಗೆ ಮೊದಲು ಅದು ಗೊತ್ತಾಯಿತು. ಬಹಳ ಉಪಯುಕ್ತ ಔಷಧ. ಅಲ್ಲವೇ?"

"ಆ ಔಷಧದಿಂದ ಬರುವ ರೋಗದ ಹೆಸರೇನು?"

"ಅಂದಿನಾ ಪೆಕ್ಟೋರಿಸ್ ಎಂದು ಹೇಳುತ್ತಾರೆ."

"ಒಳ್ಳೇದು. ಮುಂದೆ ನಾನು ಏನು ಮಾಡಬೇಕು?"

ಹಾಲವ್ಪೊರ್ಸೇನ ದೊಡ್ಡದಾಗಿ ನಕ್ಕುಬಿಟ್ಟ. "ಇದು ಸ್ವತಂತ್ರ ನಾರ್ವೇ ದೇಶವಪ್ಪಾ. ಸುಮ್ಮನೇ ಏಕೆ ಚಿಂತಿಸುವೆ? ಸರಳವಾಗಿ ನಿನ್ನ ಬಿಡುಗಡೆ ಮಾಡುತ್ತೇನೆ ಮಾತ್ರ ಸೂರ್ಯೋದಯದ ಮೊದಲೇ ನೀನು ಹಾದಿ ಹಿಡಿಯಬೇಕು. ನಿನಗೆ ಒಂದು ಮಾತು ಹೇಳಲೋ? ಎಂದಾದರೂ

ಲಗ್ನದ ವಿಚಾರ ಮಾಡಿದರೆ, ಯಾವಳ ಅಣ್ಣ ಡಿಟೆಕ್ಟಿವ್ನಿರುವನೋ ಅಂಥ ಹುಡುಗೆಯನ್ನು ಆರಿಸಿಕೊ ಅಂ. ಇದಿಷ್ಟು ಮದ್ಯಕುಡಿ– ಅಂದರೆ ಆರಾಮ ವೆನಿಸುವದು.''

ಚಿಂತಿತನಾಗಿ ನಾನಂದೆ. ''ನಿಮ್ಮ ಮೇಲೆ ಏನಾದರೂ ಸಂಕಟ ಬಂದರೆ?''

"ಅದನ್ನು ನಾನು ನೋಡಿಕೊಳ್ಳುತ್ತೇನೆ.''

ಪಟ್ಟಣದಿಂದ ಬಹಳ ಅಂತರದಲ್ಲಿದ್ದ ಒಬ್ಬ ವಿಶ್ವಸ್ತನ ಮನೆಗೆ ಡಾಕ್ಟರು ನನ್ನ ಕರೆದೊಯ್ದರು. ಅಲ್ಲಿ ಮೊದಲೇ ಕಿಟಿಯು ನನ್ನ ದಾರಿ ಕಾಯುತ್ತಿದ್ದಳು. ಆಕೆ ಒಳ್ಳೇ ಸವಿ ಅಡಿಗೆ ಸಿದ್ಧಮಾಡಿದ್ದಳು. ಟೋಕೆ ಎಂಬ ಹೆಸರಿನ ಉಚ್ಚಮದ್ಯವನ್ನು ನಾವು ಕುಡಿದೆವು. ಊಟಮಾಡಿ ಹರಟೆಕೊಚ್ಚುತ್ತ ಕುಳಿತೆವು. ಹಿಂದೆ ನಾನು ಹಾಲಿವುಡ್ಡಿನಲ್ಲಿ ಬಹಳ ದಿನ ಕಳೆದದ್ದು–ಹಾಲವ್ಹೋರ್ಸನಿಗೆ ಗೊತ್ತಿದ್ದಿತು. ಕಳ್ಳತನಮಾಡುವ ನಾವಿಕನ ವೇಷಹಾಕಿ ನಾನು ಹೇಗೆ ಕ್ಯಾಮರಾದ ಮುಂದೆ ಕುಣಿದೆ. ಎಂಬುದನ್ನು ನಾನು ವರ್ಣಿಸಲೇ ಬೇಕೆಂದು ಡಾಕ್ಟರು ಆಗ್ರಹಪಡಿಸಿದರು. ನನ್ನ ವರ್ಣನೆ ಕೇಳಿ ಕಿಟಿಯಂತೂ ನನ್ನನ್ನಪ್ಪಿ ನಗಹತ್ತಿದಳು. ಡಾಕ್ಟರರಿಗೂ ಒಳ್ಳೇ ವಿನೋದವಾಯಿತು. ಅವನೆಂದನು. "ಎಂದಾದರೂ ಹಾಲಿವುಡ್ಡಿಗೆ ಹೋಗಿ ಚಿತ್ರಪಟದಲ್ಲಿ ಕೆಲಸ ಮಾಡುವ ಗುಪ್ತ ಮಹತ್ವಾಕಾಂಕ್ಷೆ ನಿನಗಿದೆ ಯಪ್ಪಾ!'' ಇದನ್ನು ಕೇಳಿ– ವಾ. ವಾ. ಶಾಬಾಸ, ಎಂದು ಕಿಟಿ ಇನ್ನಿಷ್ಟು ನಕ್ಕಳು.

ಬೆಳಗಾದ ಮೇಲೆ ಡಾಕ್ಟರನು ಒಬ್ಬ ಫೋಟೋಗ್ರಾಫರನ ಕಡೆಗೆ ಕರೆದೊಯ್ದು ನನ್ನ ಫೋಟೋ ತೆಗೆಸಿದರು. ಏನೋ ಯುಕ್ತಿಮಾಡಿ ಕಿಟಿಯು ಹಳೆಯದೊಂದು ಡ್ಯಾನಿಸ ಪಾಸಪೋರ್ಟಿನ ಮೇಲಿದ್ದ ಮೂಲ ಫೋಟೋ ತೆಗೆದು, ಆ ಸ್ಥಳದಲ್ಲಿ ನನ್ನ ಫೋಟೋ ಕೂಡಿಸಿದಳು. ಒಂಭತ್ತು ಗಂಟೆಗೆ ನಾವೆಲ್ಲರೂ ಬಂದರಕ್ಕೆ ಹೋದೆವು. ಡಾಕ್ಟರನು ನನ್ನ ಕೈಯ್ಯಲ್ಲಿ ಟಿಕೇಟು ಕೊಟ್ಟ. ಅದು ಫರ್ಸ್ಟಕ್ಲಾಸಿನದು. ನಿರೋಪ ಕೊಡುವದಕ್ಕಾಗಿ ಡಾಕ್ಟರ ಮತ್ತು ಕಿಟಿ ಇವರು ಮೇಲೆ ಕೆಬಿನದವರೆಗೆ ಬಂದರು. ಹಡಗಿನ ಭೊಂಗಾ ಕೂಗಿದಾಗ ಅವರಿಳಿಯಬೇಕಾಯಿತು. ನನ್ನ ಕೈಹಿಡಿದು ಕಿಟಿ ಹೇಳಿದಳು.

"ನೀನು ನನ್ನ ಮುತ್ತಿಡುವದಿಲ್ಲವೋ ? ಮುತ್ತಿಡಲೇ ಬೇಕು."

ಆಕೆ ಮೊಗವೆತ್ತಿದಳು. ನಾನು ಚುಂಬಿಸಿದೆ. ಇದು ನಾಟಕವಲ್ಲ. ನಿಜವಾದ ಪ್ರೇಮದಿಂದ.

ಎರಡು ದಿನಗಳ ನಂತರ ನಾನು ಅಂಟ್ವೆರ್ಪಕ್ಕೆ ಸುಖರೂಪ ಮುಟ್ಟಿದೆ. ಆಗ ಮೇ ತಿಂಗಳು.

ಡಾಕ್ಟರನು ಅಂಟನನಿಗೆ ತಾರು ಮಾಡಿದ್ದರಿಂದ ನನ್ನನ್ನು ಕರೆದೊಯ್ಯಲಿಕ್ಕೆ ಅಂಟನ ಬಂದಿದ್ದ. ನಾನು ಭೆಟ್ಟಿಯಾದ ಕೂಡಲೇ ಅವನೆಂದ.

"ಕಾಮ್ರೇಡ ಅರ್ಮಾಟಿನ ನಿನ್ನನ್ನು ನೆನೆಸುವನೋ ?"

"ಭಲೆ, ಇದನ್ನೇನು ವಿಚಾರಿಸುವೆ ?"

"ಅವನು ಇಲ್ಲಿಯೇ ಇದ್ದಾನೆ. ನಿನಗೆ ಭೆಟ್ಟಿಯಾಗಬಹುದು. ಆದರೆ ಒಂದು ಮಾತ್ರ ಲಕ್ಷದಲ್ಲಿಡು. ಅಂಟ್ವೆರ್ಪ ಪಟ್ಟಣದಲ್ಲಿ ಗೆಸ್ಟಪೋ ಹೇರರು ಸುಳಿದಾಡಹತ್ತಿದ್ದಾರೆ !"

ರಾತ್ರಿಯ ಊಟವನ್ನು ನಾನು ಅರ್ಮಾಟಿನನೊಡನೆ ಮಾಡಿದೆನು. ತುಸು ದಿನಗಳ ಮೊದಲು ಬಹಳ ಯತ್ನದಿಂದ ಪಾರಾಗಿ ಅವನು ಜರ್ಮನಿಯಿಂದ ಇತ್ತಬಂದಿದ್ದ. ಜರ್ಮನಿಯಲ್ಲಿ ನಮ್ಮಿಬ್ಬರ ಗುರುತಿನ ಎಷ್ಟೋ ಕಾರ್ಯಕರ್ತರ ಛಲ ನಡೆದ ರೀತಿಯನ್ನು ಅವನ ಬಾಯಿಂದ ಕೇಳಿ ನನ್ನ ರಕ್ತ ಅಟ್ಟಿಸಿಹೋಯಿತು. ಒಮ್ಮೆಲೇ ನಾನು ಕೇಳಿದೆ. "ಫಿರೇಲಾಯಳ ಸುದ್ದಿ ನಿನಗೇನಾದರೂ."

ಅವನೆಂದ. "ಒಂದು ರೀತಿಯಿಂದ ಅವಳ ಸುದೈವ. ಕಾಮ್ರೇಡ ರೆಪೆನಬೆರ್ಜರನ ಕೈಕೆಳಗೆ ಅವಳ ನೇಮಕವಾಗಿದೆ."

ಅದನ್ನು ಕೇಳಿದಾಗ ಮೈ ನವಿರೆದ್ದಿತು. ಕಾರಣವೆಂದರೆ ನಮ್ಮ ಪಕ್ಷದ ಲಷ್ಕರೀ ಸುದ್ದಿಖಾತೆಯಲ್ಲಿ ರೆಪೆನಬೆರ್ಜರನು ಡಾಯರೆಕ್ಟರ. ಆ ಖಾತೆಯ ಮೇಲೆ ಗೆಸ್ಟಪೋದ ವಕ್ರದೃಷ್ಟಿ. ಆ ಖಾತೆಯವರು ಯಾರಾದರೂ ಸಿಕ್ಕರೆ ಅವರ ಪ್ರಾಣಾಂತಿಕ ಛಲವಾಗುತ್ತಿತ್ತು. ಇತ್ಯಾದಿ ವಿಷಯ ನಾನು ತುಂಬಾ ಬಲ್ಲೆ. ನನಗೆ ಫಿರೇಲಾಯಳ ಸುದ್ದಿ ತಿಳಿದುದೇನೋ ನಿಜ. ಇನ್ನಿಷ್ಟು ಚಿಂತೆಗೆ ಕಾರಣವಾಯಿತು.

ಅಂಟ್ವರ್ಪದಲ್ಲಿ ಕೆಲವು ದಿನವಿದ್ದು ನಾನು ಪ್ಯಾರಿಸಕ್ಕೆ ಹೋದೆ. ಅಲ್ಲಿ ಫ್ಯಾಸಿಝಮದ ವಿರುದ್ಧ ಒಂದು ಜಾಗತಿಕ ದೊಡ್ಡ ಪರಿಷತ್ತು ಕಾಮಿಂಟರ್ನದ ಪರವಾಗಿ ಕೂಡುವದಿತ್ತು. ಆದಕ್ಕೆ ISHದ ಹಾಂಬುರ್ಗ ಪ್ರತಿನಿಧಿ ಎಂದು ಹೋಗಬೇಕಾಗಿ ನನಗೆ ಹುಕುಮು ಬಂದಿತ್ತು. ಹಿಂದೆ ಇಂಥದೇ ಒಂದು ಪರಿಷತ್ತಿನ ಸಂಗತಿ ನಾನು ವರ್ಣಿಸಿದ್ದೇನೆ. ಅದೇ ಮಾದರಿಯದೇ ಇದು. ಇರಲಿ. ಈ ಪರಿಷತ್ತಿನಿಂದ ನನಗೆ ಸ್ವತಃ ಒಂದು ಲಾಭವಾಯಿತು. ಪರಿಷತ್ತಿಗೆ ಬಂದ ಓರ್ವ ಪ್ರತಿನಿಧಿಯಿಂದ ಫಿರೇಲಾಯಳ ವಿಷಯ ಇನ್ನಿಷ್ಟು ತಿಳಿಯಿತು. ಗೆಸ್ಟಪೋ ಜನರು ಆಕೆಯ ಪಾಳತಿಯನ್ನಿಟ್ಟಿದ್ದರು. ಬರ್ಲಿನದಿಂದ ಆಕೆಯನ್ನು ಡ್ರೆಸಡೆನಕ್ಕೆ ಕಳಿಸಿದ್ದರು. ಅಲ್ಲಿಯ ಕೇಂದ್ರವನ್ನು ಮುತ್ತುವರೆಂದು ತಿಳಿದ ಕೂಡಲೆ ಆಕೆ ಸ್ಟೆಟಿನಕ್ಕೆ ಹೋಗಿದ್ದಳು. ಆ ಪ್ರತಿನಿಧಿಯಿಂದ ಆಕೆಯ ಸಂಪೂರ್ಣ ವಿಳಾಸ ಸಹ ತಿಳಿಯಿತು.

ಕೂಡಲೇ ನಾನು ಕ್ಷೇಮ ಸಮಾಚಾರದ ನಾಲ್ಕು ಸಾಲು ಬರೆದು ಪತ್ರ ಹಾಕಿದೆ. ಉತ್ತರಕ್ಕೆ ನಾಲ್ಕು ದಿನ ದಾರಿಕಾಯುವದು ಅಸಹ್ಯವೆನಿಸಿತು. ಕಡೆಗೆ ನನಗೆ ಅತ್ಯಂತ ಪ್ರಿಯವೆನಿಸುವ ಆ ಗುರುತಿನ ಅಕ್ಷರವಿದ್ದ ಒಂದು ಲಕ್ಕೋಟೆ ಬಂದಿತು. ಫಿರೇಲಾಯ ಬರೆದಿದ್ದಳು. "..ಜಾನ, ನನ್ನ ಪ್ರಿಯಕರಾ, ನನ್ನನ್ನು ಬಿಡಿಸಿಕೋ!...."

ಅದನ್ನು ಓದಿದ ಕೂಡಲೇ ನಾನು ಅತ್ತು ಬಿಟ್ಟೆ. ಜೇಬಿನಲ್ಲಿ ಇದ್ದು ಬಿದ್ದ ಹಣವನ್ನೆಲ್ಲ ತಾರಿನಿಂದ ಆಕೆಗೆ ಕಳಿಸಿದೆ. ಆಕೆಯನ್ನು ಇತ್ತ ಹೇಗೆ ಕರೆಸಬೇಕು ಎಂದು ವಿಚಾರಿಸಹತ್ತಿದೆ.

ಫಿರೇಲಾಯಳನ್ನು ಇತ್ತ ಕರೆಸಬೇಕಾದರೆ, ಹತ್ತುವ ಹಣವನ್ನು ಪಕ್ಷದವರು ಕೊಡಲೇಬೇಕೆಂದು ನನ್ನ ಅಭಿಪ್ರಾಯ. ಆದರೆ ವರಿಷ್ಠರು ಯಾರೂ ನನ್ನ ಬೇಡಿಕೆ ಮನ್ನಿಸಲಿಲ್ಲ. ಎಲ್ಲರ ಉತ್ತರ ಒಂದೇ. "ನಿಮ್ಮ ಗಂಡ ಹೆಂಡತಿ ಸಂಬಂಧ ಖಾಸಗೀ ಸ್ವರೂಪದ್ದು. ಪಕ್ಷವು ಖಾಸಗೀ ಸಂಬಂಧ ಲಕ್ಷಿಸುವದಿಲ್ಲ.

ಆ ಉತ್ತರ ಕೇಳಿ ನಾನು ಓಕರಿಸಿದೆ. ಇತ್ತ ನಾನು ಫಿರೇಲಾಯಳಿಗೆ ಭೆಟ್ಟಿಯಾಗಲು ವ್ಯಾಕುಲನಿರುವಾಗ, ನನಗೆ ಮತ್ತೆ ಕಾರ್ಯದ ಹುಕುಮು

ಕೊಟ್ಟ ಕೂಡಲೆ ನನಗೆ ಸಂತಾಪ ತಡೆಯುವದಾಗಲಿಲ್ಲ. "ಸದ್ಯಕ್ಕೆ ನಾನು ಯಾವ ಕಾರ್ಯ ಮಾಡಲಿಕ್ಕೂ ಸಾಧ್ಯವಿಲ್ಲ." ಎಂದು ಉತ್ತರಿಸಿದೆ.

ಈ ಉತ್ತರದಿಂದ ಫಿರೇಲಾಯಳನ್ನು ಕರೆತರುವ ಪ್ರಶ್ನವೇನೂ ಬಿಡಿಸಲಿಲ್ಲ. ಹಣ ಎಲ್ಲಿಂದ ತರಬೇಕೆಂಬುದು ನನಗೆ ತಿಳಿಯಲಿಲ್ಲ.

ಕಡೆಗೆ ಬಂದರದಲ್ಲಿರುವ ನಾವಿಕರ ಬಳಿಯಲ್ಲಿ ಸಹಾಯ ಕೇಳಬೇಕೆಂದು ನಾನು ಯೋಚಿಸಿದೆ. ಅವರಲ್ಲಿನ ಅನೇಕರಿಗೆ ಫಿರೇಲಾಯಳ ಗೊತ್ತು ಇದ್ದಿತು. ಆಕೆಯ ಮೇಲೆ ಶೃದ್ಧೆಯೂ ಇತ್ತು. ಅವಳ ಸಲುವಾಗಿ ಅವರು ವಂತಿಗೆ ಕೂಡಿಸುವರೆಂದು ನಾನು ತಿಳಿದೆ. ಈ ಕಲ್ಪನೆ ನಿಜವಾಯಿತು. ನಾನು ಹೋಗುವದೇ ತಡ. ವಂತಿಗೆ ಕೂಡಹತ್ತಿತು. ಇಪ್ಪತ್ತುನಾಲ್ಕು ತಾಸುಗಳಲ್ಲಿ ನಾಲ್ಕುನೂರು ನಾಣ್ಯ ಕೈಗೆ ಬಂದವು. ಅವರಲ್ಲಿನ ಬಿರಝಿನ್ಸನೆಂಬವನನ್ನು ಕರೆದುಕೊಂಡು ನಾನು ಹೊರಟೆ. ಜರ್ಮನಿಯ ಸೀಮೆಯವರೆಗೆ ಇಬ್ಬರೂ ಸಾಗಿ ಮುಂದೆ ಬಿರಝಿನ್ಸ ಒಬ್ಬನೇ ಹೋದನು.

ಕೋಲೋನದಿಂದ ಬರುವ ಪ್ರತಿಯೊಂದು ಗುಡಿಯನ್ನು ನಾನು ನೋಡಬೇಕು. ನಿರಾಶೆಯಾದ ಕೂಡಲೇ ಭ್ರಮಿಷ್ಟನಂತೆ ಕಾಡು ತಿರುಗಬೇಕು. ಹಗಲು ಮುಗಿದ ಕೂಡಲೇ ರಾತ್ರಿಗಾಡಿಯ ಆಶೆ. ರಾತ್ರಿ ಮುಗಿದ ಕೂಡಲೇ ಹಗಲು ಗಾಡಿಯಕಡೆ ಕಣ್ಣಿಡಬೇಕು. ಹೀಗೆ ಮೂರು ನಾಲ್ಕು ದಿನ ಕಳೆದವು. ನನಗೆ ಹುಚ್ಚು ಹಿಡಿಯುವದೇನೋ ಎನಿಸಿತು.

ಒಂದು ದಿನ ನನ್ನ ಕಣ್ಣಿಗೆ ಹಬ್ಬವಾಯಿತು. ಗಾಡಿಯು ಬಂದು ನಿಲ್ದಾಣದಲ್ಲಿ ನಿಂತ ಕೂಡಲೇ ಬಿರಝಿನ್ಸನು ಕೆಳಗಿಳಿದನು. ಅವನ ಬದಿಯಲ್ಲಿ ಫಿರೇಲಾಯಳು ಸಾಗುತ್ತಿರುವದನ್ನು ನೋಡಿದೆ. ಆಕೆ ಕೆಂಪು ಚಿಕ್ಕೆಯ ಬಿಳಿಯ ಝುಗಾ ಹಾಕಿದ್ದಳು. ಕೈಯಲ್ಲಿ ಬಣ್ಣದ ಪಾಕೀಟು ಜೋಲಾಡುತ್ತಿದ್ದಿತು! ನಾನಂದೆ. ಫಿರೇಲಾಯ, ಎಂದು ಕೂಗಬೇಕು. ಓಡುತ್ತ ಹೋಗಬೇಕು. ಆದರೆ ಪ್ರಯತ್ನಪೂರ್ವಕವಾಗಿ ಸಹಿಸಿ, ಅವರಿಗೆ ಮುಂದೆ ಹೋಗಬಿಟ್ಟೆ. ಅವರು ನಿಲ್ದಾಣದಾಟಿದರು. ನಾನು ಹಿಂದೆ ಹೊರಟೆ. ಊರ ಬಳಿಯ ಅಡವಿ ಬಂದ ಕೂಡಲೇ ಮಾತ್ರ, ನಾನು ವೇಗವಾಗಿ ಮುಂದಾದೆ. ಬಿರಝಿನ್ಸನು ನಾಯಿಕೊಡೆ ಹುಡುಕುವ

ನೆವದಿಂದ ದೂರ ಹೋದನು. ನಾನು– ಮತ್ತು ಫಿರೇಲಾಯ ಇಬ್ಬರೇ ಉಳಿದೆವು. ಮೂರು ಸಂಜೆಯ ಮಂದ ಪ್ರಕಾಶದಲ್ಲಿ ಆ ಬೀಜವೃಕ್ಷದ ಕೆಳಗೆ ನಾವು ಒಬ್ಬರನೊಬ್ಬರು ಪ್ರೇಮದಿಂದ ಆಲಿಂಗಿಸಿದೆವು. ನನ್ನ ಫಿರೇಲಾಯಳ ಕಣ್ಣು ಕೂಡಿದವು. ಅಹಾ! ಬೆಳದಿಂಗಳಿನಂತೆ ಆಕೆಯ ಕಣ್ಣು ಹೊಳೆಯುತ್ತಿದ್ದವು !

ನನ್ನ ಭುಜದ ಮೇಲೆ ಒರಗುತ್ತ ಆಕೆ ನುಡಿದಳು. " ಭೆಟ್ಟಿಯಾದೆ ಕಡೆಗೊಮ್ಮೆ. ನನಗೆ ಎಷ್ಟು ಆನಂದವಾಯಿತು? ಇನ್ನು ನನ್ನನ್ನು ಬಿಟ್ಟು, ನಿನ್ನನ್ನು ದೂರ ಹೋಗಗೊಡಿಸುವದಿಲ್ಲ ಎಂದೂ."

ಆ ಎಲ್ಲ ರಾತ್ರಿಯನ್ನು ಕಾಡುದಾರಿ ತುಳಿಯುತ್ತಲೇ ಸಾಗಿದೆವು. ಬಿರಝಿನ್ಸನು ನಮ್ಮ ಮುಂದೆ ನಡೆದಿದ್ದ. ಬೆಳಗಿನ ಸಮೂರಕ್ಕೆ ಒಂದು ಊರ ಒಳಿಯಲ್ಲಿ ಬಂದೆವು. ಆಗ ನಿಂತು ಅವನು ಹೇಳಿದ.

" ಇನ್ನು ಮೇಲೆ ಸುಖದಿಂದ ನೀವು ಇರಲಿಕ್ಕೆ ಸಾಧ್ಯ. ನಾವು ಈಗ ಬೆಲ್ಜಮಕ್ಕೆ ಬಂದಿದ್ದೇವೆ."

ಶಾಂತ ಸುಖದ ಆಯುಷ್ಯ ಪುನಃ ನಮಗೆ ಲಭಿಸಿತು. ಅಂಟ್ವರ್ಪಕ್ಕೆ ಹೋಗಿಬಂದು ಮನೆಯನ್ನು ಬಾಡಿಗೆ ಗೊತ್ತುಮಾಡಿ ಸಂಸಾರ ನಡೆಸಿದೆವು. ಪರಸ್ಪರ ಸಹವಾಸದಲ್ಲಿ ಹೊರಜಗತ್ತಿನ ಉಪಾಧಿಗಳನ್ನೆಲ್ಲ ಮರೆತೆವೆಂದರೂ ಸರಿಯೆ.

ಆದರೆ ಪುನಃ ಕಾರ್ಯ ಕೈಕೊಳ್ಳುವ ವಿಷಯದಲ್ಲಿ ವರಿಷ್ಠರಿಂದ ಅವಸರದ ಹುಕುಮು ಬರುತ್ತಿದ್ದವು. ಅವುಗಳನ್ನು ಎಷ್ಟು ದಿನ ದುರ್ಲಕ್ಷಿಸಲಾದೀತು ? ಎಂಟು ಹತ್ತು ದಿನಗಳಾದಕೂಡಲೆ ನಾನಂದೆ. " ನಾವು ಪ್ಯಾರಿಸಕ್ಕೆ ಹೋಗಬೇಕಾಗುವದು."

ಆನಂದದಿಂದ ಆಕೆ ಹೇಳಿದಳು. " ಸರಿ ಒಳ್ಳೆಯದೇ. ಪ್ಯಾರಿಸ ಪಟ್ಟಣ ನೋಡಬೇಕೆಂದು ಎಷ್ಟೋ ದಿನಗಳಿಂದ ನನ್ನ ಮನಸ್ಸಿನಲ್ಲಿದೆ."

ನಾವು ಕಾಲು ನಡಿಗೆಯಿಂದ ಹೊರಟೆವು. ಗಾಡಿಯಿಂದ ಪ್ರವಾಸ ಮಾಡಲಿಕ್ಕೆ ಫಿರೇಲಾಯಳಲ್ಲಿ ಪಾಸಪೋರ್ಟ ಎಲ್ಲಿತ್ತು? ಪ್ಯಾರಿಸಕ್ಕೆ ಮುಟ್ಟಿದಕೂಡಲೇ ಅಲ್ಲಿಯ ವಾಲ್ಟರ ಗಿನ್ಸಬರ್ಗನು, ಅವಳಿಗಾಗಿ ಒಂದು

ಖೊಟ್ಟಿ ಪಾಸಪೋರ್ಟ್ ದೊರಕಿಸಿದನು. ಅದರಲ್ಲಿ ಆಕೆಯ ಹೆಸರು.. "ಜೀನೆಟ ಲಾಗ್ವಿನಯೆ" ಎಂದು ಬರೆದಿತ್ತು.

ಫ್ರಾನ್ಸ್, ಬೆಲ್ಜಿಯಮ ಮತ್ತು ಹಾಲಂಡ ಈ ದೇಶಗಳಲ್ಲಿ ತಿರುಗುತ್ತ ನಾವು ಎರಡು ತಿಂಗಳು ಕಳೆದೆವು. ಪುನಃ ಬಂದದ್ದು ಪಾರಿಸಕ್ಕೆ. ಲಹಾವರೆಯಲ್ಲಿ ಎಮ್. ಕಾನ್ಸನ ಮನೆಯಲ್ಲಿ ನಾವು ಇರುವಾಗ ಜರ್ಮನಿಯಿಂದ ಭಯಂಕರ ಸುದ್ದಿ ಬಂದಿತು. ಹಿಟ್ಲರನು ಅತ್ಯಂತ ತಿರಸ್ಕರಣೀಯ ಹತ್ಯಾಕಾಂಡ ಪ್ರಾರಂಭಿಸಿದ್ದನು. ೧೯೩೩ರ ಅಗಸ್ಟ ತಿಂಗಳಿನ ಮೊದಲ ತಾರೀಖಿಗೆ ಕೆಲಸಗಾರ ಮುಂದಾಳುಗಳಲ್ಲಿ, ಹರ್ಮಾನಲ್ಯುಏಟಗೆನ್ಸ್, ಬ್ರೂಸೋಟೆಶ, ವಾಲ್ಫ, ಮೊಏಲೇರ ಮೊದಲಾದವರಿಗೆ ಆಲ್ಟೋನಾ ಉಪನಗರದಲ್ಲಿ ಫಾಶೀ ಕೊಟ್ಟಿದ್ದನು! ಇವರೆಲ್ಲರು ನನ್ನ ಗೆಳೆಯರು. ಹಾಗೇ ಫಿರೇಲಾಯಳಿಗೂ. ಬ್ರೆಸ್ಲೋ, ಬರ್ಲಿನ ಮುಂತಾದ ನಗರಗಳಲ್ಲಿ ಕೂಡಲೇ ನಿರ್ಣಯಕೊಡುವ ಕೋರ್ಟುಗಳನ್ನು ಹಿಟ್ಲರ ಸ್ಥಾಪಿಸಿದ್ದ. ದೇಹಾಂತ ಶಾಸನದ ಕಾರಖಾನೆಗಳೇ ಅವು. ಈ ಅತ್ಯಾಚಾರದ ಸುದ್ದಿ ಕೇಳಿ ಹೊಟ್ಟೆಯ ಕರುಳಿನ ಮರಣದಿಂದ ಆಗುವ ತೀವ್ರ ದುಃಖವೇ ನಮಗಾಯಿತು. ಆ ದು:ಖ ಸಂತಾಪದ ಭರದಲ್ಲಿ ಫಿರೇಲಾಯಳು ಒಂದು ಹಿಟ್ಲರನ ವ್ಯಂಗ ಚಿತ್ರ ತೆಗೆದಳು. ಆ ಚಿತ್ರದಲ್ಲಿ ಹಿಟ್ಲರನ ಒಂದು ಕೈಯಲ್ಲಿ ಕೊಡಲಿ, ಮತ್ತೊಂದು ಕೈಯಲ್ಲಿ ಹರ್ಮಾನನ ತಲೆ. ಕೆಳಭಾಗದಲ್ಲಿ ಹರ್ಮಾನನ ಡಿಂಭ! ಅದರ ಕೆಳಗೆ ಒಂದು ಪ್ರಸಿದ್ಧ ಕ್ರಾಂತಿ ಗೀತದ ಮೂರು ಚರಣ ಆಕೆ ಬರೆದಿದ್ದಳು. "ಈ ದಿನದ ಸ್ಮೃತಿ ಯಾರಿಗಿರುವದಿಲ್ಲವೋ, ಈ ರಕ್ತ ಸಮ್ಮಾರ್ಜನದ ಸೇಡು ತೀರಿಸಿಕೊಳ್ಳಲಿಕ್ಕೆ ಯಾರು ಪ್ರತಿಜ್ಞೆ ಮಾಡುವದಿಲ್ಲವೋ, ಅವರಿಗೆ ಶತಧಾ ಧಿಕ್ಕಾರ!

ನಾನು ಆ ಚಿತ್ರವನ್ನು ನೋಡಹತ್ತಿದಾಗ ಮೆಲ್ಲನೆ ನುಡಿದಳು.

"ಒಂದು ಕಾಲದಲ್ಲಿ, ಸುಂದರ ವಸ್ತುಗಳ ಸುಂದರ ಚಿತ್ರ ತೆಗೆಯುವ ಉತ್ಸಾಹ ನನಗಿತ್ತು. ಅದು ಈಗ ನಷ್ಟವಾಯಿತು!"

ಅಗಸ್ಟ ತಿಂಗಳಿನಲ್ಲಿ ಒಂದು ದಿನ ಸಾಯಂಕಾಲ ಅರ್ನ್ಸ್ಟ ವಾಲವೆಬರನು ಪಾರಿಸಕ್ಕೆ ಬಂದ. ಮುಂಚಿತ ಸೂಚನೇ ಕೊಡದೇ ಮುಗಿಲಿನಿಂದ ಇಳಿಯುವಂತೆ ಪ್ರಕಟನಾದ. ಪಕ್ಷದ ಜನರಿಗೆ ಅವನ ಬರುವಿಕೆ

ಯಿಂದ ಆನಂದವೆನಿಸಲಿಲ್ಲ. ಹದ್ದು ಕಂಡ ಕೋಳಿ ಮರಿಗಳಂತೆ ಕೆಲವರ ಅವಸ್ಥೆಯಾಯಿತು. ಪ್ಯಾರಿಸದ ಕೇಂದ್ರ ಕಚೇರಿಯ ಈಗಿನ ಅಧಿಕಾರೀ ವರ್ಗವೆಂದರೆ ಜರ್ಮನಿಯಿಂದ ಬೇಸತ್ತು ಬಂದು ಸ್ವಾಸ್ಥ್ಯ ಪಡೆಯಲಿಕ್ಕೆ, ದೊಡ್ಡ, ದೊಡ್ಡ ಸ್ಥಳ ಹಿಡಿದುಕೊಂಡವರು. ವಾಲವೆಬರನು ಈ ಸುಖ ಭೋಗಿಸಗೊಡುವದಿಲ್ಲ. ಎಂದು ಸಹಜವಾಗಿ ಅವರಿಗೆ ಭೀತಿಹುಟ್ಟಿತು. ವಾಲವೆಬರನೇನೋ ಬಂದ. ಆದಕ್ಕೆ ಉಪಾಯವಿಲ್ಲ. ಇನ್ನು ಏನಾದರೂ ಯುಕ್ತಿಮಾಡಿ, ಈ ಪೀಡೆ ಹೊತ್ತುಹಾಕಬೇಕು. ಎಂದು ವಿಚಾರಿಸಿ ಅವರು ಉದ್ಯೋಗ ನಡೆಸಿದರು.

ಪ್ಯಾರಿಸಕ್ಕೆ ವಾಲವೆಬರ ಬಂದದ್ದು, ವರಿಷ್ಠರಿಂದ ಏನೋ ಯೋಜನೆ ತಿಳಿದುಕೊಂಡು, ಅದನ್ನು ಅಮಲುಬಜಾವಣೆ ಮಾಡಲಿಕ್ಕೆ. ಅದಕ್ಕೆ ಅವನು ಹಿಂದೆಮುಂದೆ ನೋಡುವವನಲ್ಲ. ಒಂದು ದಿನ ಸಾಯಂಕಾಲ ನಾನು ಫಿರೇಲಾಯ ಮತ್ತು ವಾಲವೆಬರ ಒಂದು ವಿಶ್ರಾಂತಿಗೃಹದಲ್ಲಿ ಮಾತಾಡುತ್ತ ಕುಳಿತಿರುವಾಗ ವಾಲವೆಬರ ಹೇಳಿದನು.

"ಊರೂರು ತಿರುಗುತ್ತಿರುವ ನನಗೆ ಎಲ್ಲಿಯ ಪರಿಸ್ಥಿತಿ ಹೇಗೆ ಎಂಬುದು ಗೊತ್ತಾಗಿದೆ. ಈ ಪಾರಿಸ ಬಹು ಬೆಲೆಯುಳ್ಳ ಸ್ಥಳ. ಇಲ್ಲಿ ಎಂಟು ದಿನದಲ್ಲಿ ನಾನು ಕಲಿತಬುದ್ಧಿ, ಜರ್ಮನಿಯಲ್ಲಿ ಮೂರು ವರ್ಷ ಕಳೆದರೂ ಬರಲಿಕ್ಕಿಲ್ಲ. ಅತ್ತ ಜರ್ಮನಿಯಲ್ಲಿ ನಮ್ಮ ಕಾಮ್ರೇಡರು ಹಸಿವೆ ಯಿಂದ ಸಾಯುತ್ತಾರೆ. ಅಥವಾ ಶತ್ರುಗಳ ಛಲದಿಂದಾದರೂ ಸಾಯು ತ್ತಾರೆ. ಇಲ್ಲಿ ನೋಡುತ್ತೇನೆ. ಖಾನಾ-ಪೀನಾ-ಮಜಾ ಕರನಾ. ಹೀಗೆ ವರ್ತಿಸುವ ಉಂಡಾಡಿಗರೇ ಪಕ್ಷದಲ್ಲಿ ತುಂಬಿಕೊಂಡಿದ್ದಾರೆ. ಇದನೆಲ್ಲ ನಾನು ನಡೆಯಗೊಡುವದಿಲ್ಲ. ಒಬ್ಬೊಬ್ಬ ಉಂಡಾಡಿಗನ ಮುಸುಕಿ ಬಿಗಿದು ಜರ್ಮನಿಗೆ ದಬ್ಬಿಕೊಡುತ್ತೇನೆ ನಾನು...."

ಹೀಗೆಲ್ಲ ಅವನು ಮಾತಾಡಹತ್ತಿದನು. ಮಾಲೋಟಾಫ, ಪಿಅಟ ನಿಟ್ಷುಕೀ ಮುಂತಾದ ದೊಡ್ಡ ದೊಡ್ಡ ಬಂಡೆಗಳ ವಿಷಯಕ್ಕೆ ಇರುವ ತನ್ನ ಮತವನ್ನೂ ಸರಳವಾಗಿ ಅವನು ಹೇಳಿದ. ತಾನು ವಿಚಾರಿಸಿಕೊಂಡಿದ್ದ ಕಾರ್ಯಕ್ರಮ ನೆರವೇರಿಸಲಿಕ್ಕೆ, ವಿಶೇಷ ವಿಶ್ವಾಸಿಕರೆಂದು ಯಾರನ್ನು ಆರಿ

ಸಿದ್ದನೋ ಅವರ ಹೆಸರುಗಳನ್ನು ಹೇಳಿಬಿಟ್ಟ. ಹೆಸರು ಹೇಳುತ್ತಿರುವಾಗ ಫಿರೇಲಾಯಳ ಕಡೆಗೆ ತಿರುಗಿ ಮಾತಾಡಿದನು.

“ನಾನು ಕೋಪನಹೆಗನಕ್ಕೆ ಹೋಗುವಾಗ ನೀನು ನನ್ನೊಡನೆ ಬರಬೇಕಾಗುವದು. ನಿನ್ನನ್ನು ಕರೆದುಕೊಂಡು ಹೋಗಬೇಕೆಂದು ನಾನು ನಿಶ್ಚಯಿಸಿದ್ದೇನೆ.”

ನನ್ನನ್ನು ಬಿಟ್ಟು ಹೋಗುವ ಇಚ್ಛೆ ಆಕೆಗಿರಲಿಲ್ಲ. ಗುಣುಗುಟ್ಟ ಹತ್ತಿದ್ದನ್ನು ಕಂಡು ವಾಲವೆಬರ ಹೇಳಿದನು. “ಅವನು ನಮ್ಮ ಹಿಂದೆ ಬರುವಂತೆ ನಾನು ವ್ಯವಸ್ಥೆ ಮಾಡಿದ್ದೇನೆ.”

ವಾಲವೆಬರನ ಕೈಕೆಳಗೆ ಫಿರೇಲಾಯಳು ಕೆಲಸ ಮಾಡುವ ವಿಚಾರ ನನಗೆ ಸುಖಕರವೆನಿಸುವದು ಶಕ್ಯವಿರಲಿಲ್ಲ. ಅವಳ–ನನ್ನ ವಿಯೋಗದ ಸಿದ್ಧತೆಯೇ ಇದು. ಆ ವಿಯೋಗ ಎಂಥ ದುಃಖದಾಯಕವೆಂಬುದು ನಮ್ಮಿಬ್ಬರಿಗೂ ತಿಳಿದಿತ್ತು. ಆದರೆ ವಾಲವೆಬರನಿಗೆ ಬೇಡವೆಂದು ಹೇಳಲು ಧೈರ್ಯವಾರಿಗೆ? ಅವನು ಹೇಳಿದ್ದೇ ವೇದ ಪ್ರಮಾಣ, ಅವನ ಮಾತಿಗೆ ಅಷ್ಟು ಮರ್ಯಾದೆ. ಸುಮ್ಮನಿರುವದೇ ಸರಿ.

ಮೂರು ದಿನಗಳಲ್ಲಿ ಹೊರಟು ಕೋಪನಹೆಗನಕ್ಕೆ ಬರುವಂತೆ ಲೇಖೀ ಹುಕುಮು ಫಿರೇಲಾಯಳ ಕೈಯಲ್ಲಿ ಬಂತು. ಆಕೆ ಹೋದಳು. ವಾಲವೆಬರ ವಿಮಾನದಿಂದ ಹೋದನು. ಸಪ್ಟಂಬರ ತಿಂಗಳಲ್ಲಿ ಯುದ್ಧ ವಿರೋಧಿ ಜಾಗತಿಕ ತರುಣ ಪರಿಷತ್ತು, ಪ್ಯಾರಿಸದಲ್ಲಿ ಕೂಡುವದಿದ್ದ ಕಾರಣ ನಾನು ಹಿಂದೆ ಉಳಿದುಕೊಂಡೆ.

ಈ ಪರಿಷತ್ತು ಮುಗಿಯುತ್ತ ಬಂದಾಗ, ನನಗೊಂದು ಆನಂದವಾರ್ತೆ ತಿಳಿಯಿತು. ಕಮ್ಯುನಿಷ್ಟ ಪಕ್ಷದ ನಾವಿಕ ವಿಭಾಗ ಪ್ರಚಾರ ಖಾತೆಯ ಮುಖ್ಯ ಅಲ್ಬರ್ಟ ವಾಲ್ಟರ ಗೆಸ್ಟಪೋ ಜನರ ಕೈಯಲ್ಲಿ ಸಿಕ್ಕನಂತರ ಆ ಸ್ಥಳಕ್ಕೆ ಬಂದ ಅಧಿಕಾರಿ ಪರಿಷತ್ತಿನಲ್ಲಿ ಭೆಟ್ಟಿಯಾದ. ಅವನು ಹೇಳಿದುದೇನಂದರೆ, ತಾನಿದ್ದ ಸ್ಥಳದಿಂದ ಬೇಗನೆ ಅವನ ವರ್ಗವಾಗುವದು. ಆ ಸ್ಥಳಕ್ಕೆ ನನ್ನನ್ನು ನೇಮಿಸಿಕೊಳ್ಳುವಂತೆ ಮಾಲೋಟಾಫನ ಕಡೆಗೆ ಒಳ್ಳೇ ಶಿಫಾರಸು ಮಾಡಿ ತಾನು ಒರೆದಿದ್ದನಂತೆ. ಅವನು ರಶಿಯಕ್ಕೆ ಹೋಗುವವ

ನಿದ್ದ. ನನ್ನನ್ನು ನೇಮಿಸುವದಕ್ಕೆ ಪ್ರತ್ಯಕ್ಷ ಮಾಲೋಟಾಫನ ಬಳಿಯಲ್ಲಿ ಹೇಳುವವನಿದ್ದ !

ಇದನ್ನು ಕೇಳಿ ನನಗೆ ಹರ್ಷವಾದದ್ದು ಸಹಜ. ನಾವಿಕರಲ್ಲಿ ಪ್ರಚಾರ ಮಾಡುವದೆಂದರೆ– ಮೊದಲಿನಿಂದ ನನ್ನ ವಿಶೇಷ ಪ್ರೀತಿ. ಈಗ ಆಲ್ಬರ್ಟ ವಾಲ್ಟರನ ಸ್ಥಳ ದೊರೆತರೆ ನಾನು ಸ್ವತಂತ್ರನಾಗುತ್ತಿದ್ದೆ. ವಾಲ್ಟರ ಬಂದಿಯಾದಾಗಿನಿಂದ ಆ ಸ್ಥಳದ ಅಧಿಕಾರಿಗೆ ಪ್ರಚಾರಕ್ಕೆಂದು ತಿಂಗಳಿಗೆ ಕೊಡುವ ಹಣ ನಾಲ್ವತ್ತು, ನಾಲ್ವತ್ತೈದುಸಾವಿರವಾಗುತ್ತಿತ್ತು. ಇದೊಂದೇ ಸಂಗತಿಯಿಂದ ಆ ಸ್ಥಳದ ಮಹತ್ವ ಗೊತ್ತಾಗಬಹುದು.

ಆನಂದದಿಂದ ಹಾಟೆಲಕ್ಕೆ ಬಂದೆ. ನನಗೆ ದೊರೆತ ಸೂಚನೆ–ಮತ್ತು ಪ್ರವಾಸದ ಸಿದ್ಧತೆ ಇವುಗಳ ಮೇಳ ಹಾಕುವದೇ ನನ್ನ ವಿಚಾರವಾಗಿದ್ದಿತು. ಕೋಪನಹೆಗನಕ್ಕೆ ಹೋಗಿ ಮೊದಲು ರಿಚರ್ಡ ಜೇನಸೆನನ ಭೆಟ್ಟಿಯಾಗಬೇಕು. ಅವನಿಂದ ಪ್ರವಾಸಕ್ಕಾಗಿ ಹೊಸ ಪಾಸಪೋರ್ಟ ಪಡೆಯಬೇಕು. ಮುಂದೆ ಪಿಆಟನಿಟ್ಝಕಿಯ ಭೆಟ್ಟಿಗೆ ಮಾಸ್ಕೋಕ್ಕೆ ಹೋಗಬೇಕು. ಹೀಗೆಲ್ಲಾ ಕಾರ್ಯಕ್ರಮವಿತ್ತು.

ಮಿತ್ರಮಂಡಳಿಯ ನಿರೋಪ ತಕ್ಕೊಂಡು ನಾನು ಆಮಸ್ಟರಡಾಮ ಎಕ್ಸಪ್ರೆಸದಿಂದ ಹೊರಟೆ. ಹಾಲಂಡದ ವಿಮಾನ ನಿಲ್ದಾಣದಲ್ಲಿ ಜಿ. ಪಿ. ಯು. ದ ಒಬ್ಬ ಏಜಂಟ ಕೂಡಿದನು. ಕಾಫಿ ವ್ಯಾಪಾರದ ಸೋಗಿನಿಂದ ಆವನು ನಮ್ಮ ಪಕ್ಷದ ಗುಪ್ತಕಾರ್ಯ ಮಾಡುತ್ತಿದ್ದನು. ರಿಚರ್ಡ ಜೇನಸೆನನಿಗೆ ಕೊಡುವದಕ್ಕೆಂದು ನೆದರ್ಲಂಡ ಸರಕಾರ ಮುದ್ರೆಯ, ಹನ್ನೆರಡು ಕೋರಾ ಪಾಸಪೋರ್ಟಗಳನ್ನು ಅವನು ನನ್ನ ಸ್ವಾಧೀನ ಪಡಿಸಿದ. ಆಗ ಹಡಗಿನ ಅಥವಾ ಗಾಡಿಯ ಪ್ರವಾಸಿಕರ ತಪಾಸು ಕಸ್ಟಮುದವರಿಂದ ಬಹಳ ಜೋರಾಗಿ ನಡೆಯುತ್ತಿದ್ದಿತು. ಆ ಮಾನದಿಂದ ವಿಮಾನ ಪ್ರವಾಸಿಕರ ತಪಾಸು ಏನೂ ಅಲ್ಲ. ನಾವು ಇದರ ಲಾಭ ಪಡೆಯುತ್ತಿದ್ದೆವು. ಈ ಪಾಸಪೋರ್ಟಗಳನ್ನು ನಾನು ಜೇಬಿನಲ್ಲಿ ವ್ಯವಸ್ಥಿತವಾಗಿ ಇಟ್ಟೆನೋ ಇಲ್ಲವೋ, ವಿಮಾನಚಕ್ರ ತಿರುಗಿತು. ಹುಡಿ ಎದ್ದಿತು. ವಿಮಾನ ಹಾರಿ ಮಾರ್ಗ ಹಿಡಿದಿತು. ಕೆಳಗೆ ಬಾಗಿ ನಾನು ನೋಡಿದಾಗ ಸಣ್ಣ ಸಣ್ಣ 'ಫ್ರಿಜಿಯನ'' ನಡುಗಡ್ಡೆಗಳು ಹಿಂದಾಗುತ್ತಿದ್ದವು. ನಾರ್ಥಸೀಯ ಹಸಿರು, ಬಿಳಿ ನೀರಿನ

ಮನೋಹರ ನೋಟ ವಿಸ್ತರಿಸಿತ್ತು. ಬಲಕ್ಕೆ ಭಯದಾಯಕ ಜರ್ಮನಿಯ ದಂಡೆ. ಮುಂದೆ ಸ್ವಾಗತಕ್ಕಾಗಿ ಸಜ್ಜಾದ ಮಿತ್ರನಂತೆ ತೋರುವ ಜೆಟಲಂಡದ, ದಂಡೆ.

ಕೋಪನಹೆಗನಕ್ಕೆ ಮುಟ್ಟಿದ ಕೂಡಲೇ ನಾನು ಜೇನಸೆನನ ಮನೆಗೆ ಹೋದೆನು. ಅವನ ಸೆಕ್ರೆಟರಿಯು ಕೆಲಸ ಮಾಡುತ್ತಿದ್ದ ಒಬ್ಬ ತರುಣಿ ಅವನ ಗುಪ್ತ ಕಚೇರಿಯ ವಿಳಾಸ ತಿಳಿಸಿ, ಅಲ್ಲಿ ಹೋಗಲು ತಿಳಿಸಿದಳು. 'ನಂಬರ ೧೮' ಟಾಲ್ಡಬಾಡಗಾಡ. ಹೀಗಿತ್ತು ಆ ವಿಳಾಸ. ಖೊಟ್ಟಿ ಪಾಸಪೋರ್ಟ ಸಿದ್ಧಗೊಳಿಸುವ ನಮ್ಮ ಪಕ್ಷದ ಕೇಂದ್ರ ಅದು. ಜೇನಸೆನ ಭೆಟ್ಟಿಯಾದ. ಸಂಗಡ ತಂದ ಕೋರಾ ಪಾಸಪೋರ್ಟ ಅವನ ಸ್ವಾಧೀನ ಪಡಿಸಿದೆ. ಆ ಮಾತು ಈ ಮಾತು ನಡೆದ ಮೇಲೆ ನಾನು ಹೇಳಿದೆ.

''ಸೋವ್ಹಿಯಟ ಕಾನ್ಸುಲನನ್ನು ಭೆಟ್ಟಿ ಮಾಡಿಸು. ಅಂದರೆ— ನಾನು ಮಾಸ್ಕೋಕ್ಕೆ ಹೇಗೆ ಹೋಗಬೇಕು, ಎಂದು ಹೋಗಬೇಕು ಇದನ್ನೆಲ್ಲ ವಿಚಾರಿಸಿಕೊಳ್ಳುವೆನು.''

ಜೇನಸೆನ ಅಂದನು. "ನೀನು ಮಾಸ್ಕೋಕ್ಕೆ ಹೋಗುವದೆಲ್ಲಿದೆ?"

ಆಶ್ಚರ್ಯದಿಂದ ನಾನು ನೋಡಹತ್ತಿದ ಕೂಡಲೆ ಅವನೆಂದ.

''ಈಗ ವಾಲವೆಬರ ಮತ್ತು ನಿನ್ನ ಭೆಟ್ಟಿಯಲ್ಲಿ, ತಾನೇ ಎಲ್ಲ ತಿಳಿಯುವದು'' ನಾನಂದೆ. ''ನಾನು ಮಾಸ್ಕೋಕ್ಕೆ ಹೋಗಿ ಪಿಅಟ ನಿಟ್ಸ್ಕಿಯ ಭೆಟ್ಟಿಯಾಗಬೇಕೆಂದು ಸ್ವಚ್ಛ ಹುಕುಮಿನಲ್ಲಿದೆಯಲ್ಲ!''

''ಅದರಲ್ಲೇನು? ಅದು ರದ್ದು. ನಿನ್ನ ಪ್ರಶ್ನೆಯ ವಿಚಾರಕ್ಕೆ ಕಾಮ್ರೆಡ ಕುಸಿನೆನ, ಮತ್ತು ಬೆಲಾಕೂನ ಇವರು ಮಾಸ್ಕೋದಿಂದ ಇಲ್ಲಿಗೆ ಬಂದಿದ್ದಾರೆ. ಅವರಿಂದ ಏನೆಂಬುದು ಇಲ್ಲಿಯೇ ನಿನಗೆ ತಿಳಿಯುವದು.

ಅವನ ಮಾತು ಚಮತ್ಕಾರವೆನಿಸಿತು. ನಾನು ಆಶ್ಚರ್ಯವನ್ನೇನೂ ಮಾತಾಡಿ ತೋರಿಸಲಿಲ್ಲ. ಆದರೆ ಮನದಲ್ಲಿ ಮಾತ್ರ ಅನೇಕ ಶಂಕೆಗಳು ಉದ್ಭವಿಸಿದವು. ಅದರಲ್ಲಿ ಮುಖ್ಯವಾದುದೆಂದರೆ ನಾನು ಮಾಸ್ಕೋಕ್ಕೆ ಹೋಗಬಾರದೆಂದು ಕಾರಭಾರ ವಾಲವೆಬರ ಮಾಡುತ್ತಿರಲಿಕ್ಕಿಲ್ಲವಷ್ಟೇ? ನನ್ನ ಕಾರ್ಯತತ್ಪರತೆ ಅವನಿಗರಿಯದ್ದಲ್ಲ. ಆದರೆ ನನ್ನದು ಆಜ್ಞಾಧಾರಕ ಗುಲಾಮವೃತ್ತಿಯಲ್ಲ. ಇದನ್ನು ಆತ ತಿಳಿಯತೊಡಗಿದ್ದ.

ಹಾಗೇ ಮೂರು ದಿನ ಕಳೆದವು. ಮುಖ್ಯ ಕಚೇರಿಯಿಂದ ಕರೆ ಬರುವದೆಂದು ನಾನು ದಾರಿ ನೋಡಹತ್ತಿದೆ. ತಡವಾದಂತೆ ಹೆಚ್ಚು ಗೊಂದಲದಲ್ಲಿ ಸಿಲುಕಿಕೊಂಡೆ. ಆದರೂ ಸಂಶಯ ಬದಿಗಿಟ್ಟು ಶಾಂತವಿರುವದೆಂದು ನಾನು ನಿರ್ಧರಿಸಿದೆನು.

ಕಾರಣವೆಂದರೆ– ನಾನು–ಮತ್ತು ಫಿರೇಲಾಯಳು ಪುನಃ ಕೂಡಿದ್ದೆವು.

ಆಕೆ ಸಮುದ್ರ ದಂಡೆಯ ಮೇಲಿನ ಒಂದು ಮನೆ ಹಿಡಿದು ಸಂಸಾರ ಹೂಡಿದ್ದಳು. ಆ ಮನೆಯ ಮುಂದೆ ನಿಂತುಕೊಂಡರೆ ಮುಂದೆ ಸಮುದ್ರ ದಂಡೆಯ ಮನೋಹರ ನೋಟ, ದೂರ ಆಚೆಗೆ ಬಾಲ್ಟಿಕ ಸಮುದ್ರದ ವಿಸ್ತಾರ ಕಣ್ಣಿಗೆ ಬೀಳುತ್ತಿದ್ದಿತು.

ಡೆನ್ಮಾರ್ಕ ಹಾಗೂ ಸ್ವೀಡನದಿಂದ ಬರುವ ಗುಪ್ತ ಪ್ರಚಾರ ಸಾಹಿತ್ಯಗಳನ್ನು ಹಡಗಿನಿಂದ ಜರ್ಮನಿಗೆ ಕಳಿಸುವ ಕಾರ್ಯ– ವಾಲವೆಬರನು ಆಕೆಗೆ ಒಪ್ಪಿಸಿದ್ದ. ಅದನ್ನು ಮಾಡುವದರಲ್ಲಿ ಆಕೆ ಹಗಲಿರಳು ಮಗ್ನಳಾಗಿರುತ್ತಿದ್ದಳು. ಆದರೂ ಮೊಗದ ಮೇಲೆ ಯಾವಾಗಲೂ ಇರುವ ಉಲ್ಲಾಸ ಮಾತ್ರ ಕಾಣುತ್ತಿರಲಿಲ್ಲ. ಜರ್ಮನಿಯಲ್ಲಿ ನಡೆದ ಛಲದ ಸುದ್ದಿಗಳು ನಿತ್ಯ ತಿಳಿಯುತ್ತಿರುವದರಿಂದ ಆಕೆಯಲ್ಲಿ ಅಂತಃಕರಣ ತಳಮಳಿಸುತ್ತಿರಬೇಕು. ಸ್ವಭಾವದಲ್ಲಿ ನಿರಾಶೆ– ಒಂದುತರದ ವೈರಾಗ್ಯ ಹುಟ್ಟಿದಂತೆ ನನಗೆ ಕಂಡು ಬಂದಿತು. ಪಕ್ಷದ ಕಾರ್ಯಕ್ಕೆಂದು ತನ್ನ ಜೀವನದ ದಿಶೆ ಆಕೆ ತಿರುಗಿಸಿದ್ದಳು. ಆ ಮೊದಲಿನ ಜೀವನ ಬಹಳ ಹಿಂದಾಗಿತ್ತು. ಪುನಃ ಅದರ ಕಡೆ ತಿರುಗಬೇಕೆಂದರೂ ಶಕ್ಯವಿರಲಿಲ್ಲ. ಈಗ ಅಂಗೀಕೃತ ಕಾರ್ಯವನ್ನೇ, ಕಡೆಗಳಿಗೆಯವರೆಗೆ ಮಾಡುವದೊಂದೇ ಮಾರ್ಗ ಆಕೆಗೆ ಉಳಿದಿತ್ತು..! ”

ನಾಲ್ಕನೇ ದಿನ ಜೇನಸೆನನ ಮಗ ಮಾರ್ಟಿನ ನನ್ನ ಕಡೆಗೆ ಬಂದು ಹೇಳಿದ. “ ಮುಖ್ಯ ಕಚೇರಿಯ ಕಡೆಗೆ ನಿಮ್ಮನ್ನು ಕರೆದೊಯ್ಯಲು ನಾನು ಬಂದಿದ್ದೇನೆ. ”

ಅವನೊಡನೆ ನಾನು ಹೊರಟೆ. ಮಾತಿಗೆ ಮಾತು ಹೊರಟಾಗ ದಾರಿಯಲ್ಲಿ ಅವನೆಂದ.

“ ನಿಮಗೆ ಗೊತ್ತಿರುವದೋ ? ನಿಮ್ಮ ಸಂಬಂಧಿಕವಾಗಿ ದೊಡ್ಡವಾಗ್ಯುದ್ಧ ಸಾಗಿದೆ. ”

" ವಾಗ್ಯುದ್ಧ? ಹಾಗಂದರೆ ಏನು ? "

" ನಿಮ್ಮ ಕಾರ್ಯ ನಿರ್ಧರಿಸುವ ಅಧಿಕಾರ ಯಾರಿಗೆ ? ಎಂಬ ವಿಷಯ ದಲ್ಲಿ ವಾಗ್ಯುದ್ಧ. ಅಂತರರಾಷ್ಟ್ರೀಯ ಖಾತೆಯ ಅಭಿಪ್ರಾಯವೆಂದರೆ ನಾವಿಕ ಪ್ರಚಾರದ ಸ್ಥಳಕ್ಕೆ ನಿಮ್ಮ ವಿನಾ ಯೋಗ್ಯರಿಲ್ಲ, ಎಂದು. ಅದರಂತೆ ನಿಮ್ಮ ನೇಮಕವಾಗುವದಿತ್ತು. ಆದರೆ ವಾಲವೆಬರನು ಅಡ್ಡಿ ಯಾದ. ನಿಮ್ಮನ್ನು ಜರ್ಮನಿಗೆ ಕಳಿಸಬೇಕೆಂದು ಅವನ ಅಭಿಪ್ರಾಯ ವಾಗಿದೆ. ಹೀಗೆಲ್ಲ ನಡೆದಿದೆ.

" ಹೀಗೇನು? ನಿರ್ಣಯವಾಯಿತೋ? ಕಡೆಗೆ. "

" ಯಾವದು ? "

" ಹೆಚ್ಚು ಜೋರು ಯಾರದು ? "

" ಅರ್ಥಾತ್ ವಾಲವೆಬರ. "

ಆ ಹರಕುಬಾಯಿಂದ ಅನೇಕ ವಿಷಯ ತಿಳಿದವೆನ್ನಬಹುದು. ನಾನು ಹೆಚ್ಚು ಮಾತಾಡಲಿಲ್ಲ. ದಾರಿಯಲ್ಲಿ ಒಂದು ಮನೆಮುಂದೆ ನಾವು ನಿಲ್ಲಬೇಕಾಯಿತು. ಮಾರ್ಟಿನ ಒಳಗೆ ಹೋಗಿ ಒಬ್ಬ ಹೆಂಗಸನ್ನು ಕರೆ ತಂದನು. ಆಕೆ ಸುಮಾರು ನಾಲ್ವತ್ತು ವರ್ಷದಾಕೆ ಇರಬಹುದು. ನಡೆಯು ವಾಗ ಆಕೆ ತುಸು ಕುಂಟಬೇಕು. ಮೋರೆಯ ಕಳೆ ಮಾತ್ರ ಬುದ್ಧಿವಂತರದು. ಕೋಪನಹೆಗನದ ಮುಖ್ಯ ಮಧ್ಯವರ್ತಿ ತಾರ ಆಫೀಸಿನಲ್ಲಿ ನೌಕರಳು— ಅವಳು. ಗುಪ್ತವಾಗಿ ನಮ್ಮ ಪಕ್ಷದ ಕಾರ್ಯಮಾಡುವದೂ ಸರಿಯೇ. ಇವಳ ಹೆಸರು ಪಿಟ್ರಾಪಿಟರಸನ್, ಅವಳ ನನ್ನ ಗುರುತು ಮಾಡಿಕೊಟ್ಟು ಮಾರ್ಟಿನ ಹೋಗಿಬಿಟ್ಟ. ಕೂಡಲೇ ಆಕೆ ನನ್ನ ಕೈಯಲ್ಲಿ ತನ್ನ ಕೈಯಿತ್ತು ಸಹಜ ಮಾತಾಡಿದಳು.

" ಹವೆ ಎಷ್ಟು ಚನ್ನಾಗಿದೆ. ನಡೆಯಿರಿ. ನಾವು ತಿರುಗಾಡಿ ಬರುವಾ. "

ಉಪವನದಲ್ಲಿ ತಿರುಗಾಡುತ್ತ, ಆಚೇ ಬೀದಿಗೆ ಹೋಗಿ ಸಮುದ್ರ ತೀರಕ್ಕೆ ಬಂದೆವು. ಸೂರ್ಯ ಪ್ರಕಾಶದಿಂದ ಸಮುದ್ರ ಲಹರಿ ಮಿಂಚು ತ್ತಿದ್ದವು. ದೂರ ಅಂತರದಲ್ಲಿ ಸಣ್ಣ ಸಣ್ಣ ನಡುಗಡ್ಡೆಗಳು ಶಾಂತವಾಗಿ ಕುಳಿತಿರುವದೇನೋ, ಎನ್ನುವ ಹಾಗಿತ್ತು. ಈ ಶೋಭೆ ನೋಡುತ್ತ ದಂಡೆಗೆ

ಬಂದಾಗ ಅಲ್ಲೊಂದು ಮೋಟರಲಾಂಚ ನಮ್ಮ ಹಾದಿ ನೋಡುತ್ತಿದ್ದಿತು. ಒಳಗೆ ಹತ್ತಿ ನೋಡುತ್ತೇನೆ. ಮೊದಲೇ ಕುಸಿನೆನ; ಹಾಗೂ ವಾಲವೆಬರ ಬಂದು ಕುಳಿತು ಬಿಟ್ಟಿದ್ದಾರೆ.

ಮಂದಗತಿಯಿಂದ ಅದು ಸಾಗಿರುವಾಗ, ನಡುನಡುವೆ ನಮ್ಮ ಮಾತು ನಡೆದವು. ಕುಸಿನೆನನು ನನ್ನೊಡನೆ ಮಾತಾಡುತ್ತಿದ್ದುದು ಬಾಯಲ್ಲಿ ಗುಣು ಗುಟ್ಟಿದಂತೆ. ಆ ಹರಕು ಮುರುಕು ಮಾತಿನಿಂದ ನನ್ನ ಮೇಲೆ ಏನು ಪರಿಣಾಮವಾಗುವದೋ ಎಂದು ವಾಲವೆಬರನು ತಟಸ್ಥನಂತೆ ಪರೀಕ್ಷಿಸು ತ್ತಿದ್ದನು. ನನ್ನ ವಿಷಯಕ್ಕೆ ಇಬ್ಬರೂ ಕೂಡಿ ಮೊದಲೇ ನಿರ್ಣಯಿಸಿ ಕೊಂಡಿರಬೇಕು; ಎಂದು ಕುಸಿನೆನನ ಮಾತಿನಿಂದ ಕಂಡಿತು. ಅವನು ಹೇಳಿ ದನು. "ನೀನು ಮಾಸ್ಕೋಕ್ಕೆ ಹೋಗದೇ ಜರ್ಮನಿಗೆ ಹೋಗಬೇಕು. ಆಲ್ಬರ್ಟ ವಾಲ್ಟರನ ಸ್ಥಳಕ್ಕೆ ಈಗ ಯಾರನ್ನೂ ನೇಮಿಸದೇ ವಾಲವೆಬರನೇ ಆ ಕಾರ್ಯ ನೋಡುತ್ತಿರಬೇಕೆಂದು ನಾವು ಯೋಚಿಸಿದ್ದೇವೆ."

ನನ್ನ ವಿಷಯದ ನಿರ್ಣಯ ಹೀಗಿದ್ದಿತಲ್ಲವೇ ?

ಅದನ್ನು ಕೇಳಿ ಶಕ್ಯವಾದಷ್ಟು ನಿರ್ವಿಕಾರನಾಗಿದ್ದೆ. ಒಂದು ಶಬ್ದ ವನ್ನೂ ಉಚ್ಚರಿಸಲಿಲ್ಲ. ಮನದಲ್ಲಿ ಮಾತ್ರ ವಿಚಾರದ ತಾಂಡವವೆದ್ದಿತ್ತು.

ನಾನಿಲ್ಲದಾಗ ವಾಲವೆಬರನು ತಂತ್ರಮಾಡಿದ್ದ. ನನ್ನಂಥ ಎಷ್ಟೋ ಕಾರ್ಯಕರ್ತರು ಸ್ವಾರ್ಥಿಗಳಾದ ವರಿಷ್ಠರಿಂದ, ಹೀಗೇ ಹಾನಿಗೊಳಗಾಗು ತ್ತಿದ್ದರು. ನನಗೂ ಈ ಪಾಳಿ ಬಂದೀತು- ಎಂದು ತಿಳಿದಿರಲಿಲ್ಲ ಅಷ್ಟೆ. ವಾಲವೆಬರನ ಕಣ್ಣಿನಲ್ಲಿ ನಾನು ಚುಚ್ಚುವ ಕಾರಣ ನನಗೆ ಗೊತ್ತಿದ್ದಿತು. ಅವನ ಧೋರಣದ ಎಷ್ಟೋ ಸಂಗತಿ ನನಗೆ ಒಪ್ಪಿಗೆಯಾಗುವಂತೆ ಇರಲಿಲ್ಲ. ಅವನ ನನ್ನ ದೃಷ್ಟಿಕೋನವೇ ಬೇರೆ. ಕಮ್ಯುನಿಸ್ಟ ಪಕ್ಷದ ಧೋರಣೆ ಅಂತರರಾಷ್ಟ್ರೀಯವಿರಬೇಕು. ಎಂದು ಹೇಳುವವ ನಾನು. ವಾಲವೆಬರ ನಿಗೋ ಜರ್ಮನಿಯು ವಿನಾ ಇನ್ನೇನೂ ಕಾಣುತ್ತಿರಲಿಲ್ಲ. ದ್ರವ್ಯವಷ್ಟೇ ಅಲ್ಲ. ಮನುಷ್ಯಬಲ ಸಹಿತ ಜರ್ಮನಿಯ ರಾಜಕಾರಣದಲ್ಲಿ ವೆಚ್ಚವಾದರೂ ಪರ ವಿಲ್ಲವೆಂದು ವರ್ತಿಸುವ ನೀತಿ ಅವನದು. ಇನ್ನೂ ವಿಶೇಷವೆಂದರೆ- ವಾಲ್ಟರನ ಸ್ಥಳ ನನಗೆ ಸಿಕ್ಕರೆ ೪೦-೫೫ ಸಾವಿರ ಡಾಲರು, ನನ್ನ ಕೈಯಲ್ಲಿ ಬರುವದಿಲ್ಲ. ಎಂದು ಹೊಟ್ಟೆನೋವು ಅವನಿಗಾಗಿತ್ತು. ಅವು ತನ್ನ ಕೈಗೆ

ಬರಬೇಕೆಂದು ಅವನ ಆಶೆ. ನಾನು ದೂರಾಗದೆ ಇದು ಹೇಗೆ ಸಾಧಿಸುವದು? ಆದಕೆಂದು ನನ್ನನ್ನು ಜರ್ಮನಿಗೆ ಕಳಿಸುವ ಕಾರಭಾರ ಅವನು ಮಾಡತೊಡಗಿದ್ದ.

ವಾಲವೆಬರ ನನಗೆ ಹೇಳಹತ್ತಿದ. "ನಿನ್ನ ಪ್ರಶ್ನೆಯ ವಿಚಾರ ತುಸು ಕಠಿಣವಿತ್ತು. ಕಡೆಗೆ ನಾವು ವಿಚಾರಿಸಿದ್ದೇನೆಂದರೆ– ನಿನ್ನ ಮೂಲ ಸಭಾಸದತ್ವ ಜರ್ಮನ ಗುಂಪಿನದು. ಮಾಸ್ಕೋಕ್ಕೆ ಅವಶ್ಯವೆನಿಸಿದರೆ ಜರ್ಮನ ಪಾರ್ಟಿಯಿಂದ ನಿನ್ನನ್ನು ಪ್ರತ್ಯೇಕಿಸಿ ಕರೆಸಬಹುದು. ಆಗ ನೀನು ಹೋಗಲೂ ಬಹುದು."

ರೀ ಎಳೆಯುತ್ತ ಕುಸಿನೆನ ಮಾತಾಡಿದ. "ಹುಂ. ಅನೇಕ ವಿಚಾರ ಮಾಡಿದ ನಂತರ, ನಮ್ಮ ಖಾತ್ರಿ ಎನಿಸಿತು. ಜರ್ಮನಿಯ ಕಾರ್ಯ ನೋಡಲಿಕ್ಕೆ ನಿನಗಿಂತ ಯೋಗ್ಯರು ಯಾರೂ ಕಾಣಲಿಲ್ಲ. ನಿನಗೆ ಜರ್ಮನಿಗೆ ಹೋಗು ಎಂದರೆ ಸಾಕು. ಆನಂದದಿಂದ ನೀನು ಒಪ್ಪಿಕೊಳ್ಳುವೆ. ಎಂಬುದು ನಮಗೆ ಅರಿಯದ ವಿಷಯವಲ್ಲ. ನಿಜವಾದ ವೀರರಿಗೆ ಎಲ್ಲಿ ಹೋಗಿ ಯುದ್ಧ ಮಾಡುವದು ಭೂಷಣ? ಎಲ್ಲಿ ಸಂಕಟ ಹೆಚ್ಚೋ, ಅಲ್ಲಿ, ಹೌದೇ!"

ಅಹಾ ಎಂಥ ಸವಿಮಾತು? ಫಿನಲಂಡದಲ್ಲಿ ಕ್ರಾಂತಿಯಾಗಿ ಅದು ಕ್ರೂರತನದಿಂದ ಹತ್ತಿಕ್ಕಲ್ಪಟ್ಟಾಗ, ಇದೇ ಕುಸಿನೆನ ಸ್ವದೇಶಬಿಟ್ಟು ಓಡಿ ಹೋಗಿದ್ದ. ವೀರವೃತ್ತಿಯ ಗಾನ ಮಾಡುವ ನೀನು ಆ ಕಾಲದಲ್ಲಿ ನಿನ್ನ ದೇಶವನ್ನು ಏಕೆ ನೋಡಲಿಲ್ಲವಪ್ಪ? ಹೀಗೆ ಪ್ರಶ್ನ ಮಾಡಿ ಬಿಡೋಣ ಅವನಿಗೆ ಎನಿಸಿತು. ತೀವ್ರನೇ ಇಂಥ ಮಾತಿನಲ್ಲಿ ಅರ್ಥವಿಲ್ಲ ಎಂದುಕೊಂಡೆ. ಒಪ್ಪಿಗೆಯಿಂದ ಗೋಣುಹಾಕಿ ನಾನಂದೆ.

"ಒಳ್ಳೇದು ಜರ್ಮನಿಗೆ ಹೋಗಲಿಕ್ಕೆ ನಾನು ಸಿದ್ಧನಿದ್ದೇನೆ."

"ನಿನಗೆ ಭಯುವೆನಿಸುವದೋ?"

"ಭಯ? ಉಂ ಹುಂ."

ಇಲ್ಲಿಂದ ಹೊರಡುವ ಮೊದಲು ನಿನಗೆ ಎಂಟುದಿನ ರಜೆ. ಜರ್ಮನಿಯಲ್ಲಿ ಆರು ತಿಂಗಳು ಕೆಲಸಮಾಡಿ ಇಲ್ಲಿಗೆ ಬಂದೆ ಎಂದರೆ– ಜಂಗೀ ನಿನ್ನ ಸ್ವಾಗತದ ಸಿದ್ಧತೆ ಮಾಡುವೆವು.

ಇದನ್ನು ಕೇಳಿದಾಗ ಮಾತ್ರ ನಾನು ಸಂತಾಪದಿಂದ ಹೇಳಿದೆ. “ನಾನೊಂದು ಹುಚ್ಚು ಎಂದು ನೀವು ತಿಳಿಯುವಿರೋ? ಕಮ್ಯುನಿಸ್ಟ ಪಕ್ಷದ ಗುಪ್ತಕಾರ್ಯ ಮಾಡುವವ, ಜರ್ಮನಿಯಲ್ಲಿ ಆರು ತಿಂಗಳು ಜೀವಂತ ನಾಗಿರುವದಿಲ್ಲ. ಇದು ನಿಮಗೂ ಗೊತ್ತು. ನೆಟ್ಟಗೆ ಮೃತ್ಯು ಮುಖದಲ್ಲಿ ನನ್ನನ್ನು ಕಳಿಸುತ್ತೀರಿ. ನಾನು ಹೋಗುತ್ತೇನೆ. ಸುಮ್ಮನೆ ದೊಡ್ಡ ಮಾತು ಏತಕ್ಕೆ ಬೇಕು?”

ವಾಲವೆಬರ ಗದ್ದರಿಸಿದನು. “ಅದೇನು ಮಹಾ! ನಾವೆಲ್ಲ ಮೃತ್ಯು ದ್ವಾರದಲ್ಲಿ ನಿಂತೇ ಇರುವೆವು. ಅದನೇನು ಹೇಳುವೆ? ನಮಗೆ ಮರಣ ಸುಲಭ. ಜೀವನ ಬಹು ಕಠಿಣ.”

“ಹುಂ......ಮರಣ ಸುಲಭ....” ನಾನಂದೆ.

ಮುಂದೆ ಬಹಳ ಹೊತ್ತು ಯಾರೂ ಮಾತಾಡಲಿಲ್ಲ.

ಆ ಸ್ತಬ್ಧತೆ ಮುರಿದು ಕುಸಿನೆನ ಅಂದನು. “ನೀನು ಹೇಗೆ ಹೋಗಬೇಕು? ಏನು ಕಾರ್ಯ ಅಲ್ಲಿ ಮಾಡಬೇಕು? ಇದನ್ನೆಲ್ಲ ನಾನು ಈಗ ಹೇಳುತ್ತೇನೆ.

* * * *

ನನ್ನ ಎಂಟು ದಿನದ ರಜೆ ಹಾ–ಹಾ. ಎನ್ನುವಷ್ಟರಲ್ಲಿ ತೀರಿತು. ಈ ದಿವಸಗಳನ್ನು ನಾನು ಚಕ್ಕಂದವಾಗಿ ಕಳೆಯಲಿಲ್ಲ. ಸ್ವೀಡನದಲ್ಲಿ ಹೋಗಿ ನಾನು ಸಂಪು, ಮಾಡಿಸಿದ್ದು ಮಾಸ್ಕೋದ ಲಾಸಾಫಸ್ಕಿಯ ಕಿವಿವರೆಗೆ ಮುಟ್ಟಿತ್ತು. ಅವನು ಒಂದು ಪತ್ರಿಕೆಯಲ್ಲಿ ನನ್ನ ಪ್ರಶಂಸೆಮಾಡಿ, ಆ ಸಂಪಿನ ವಿಸ್ತೃತ ವೃತ್ತಾಂತ ನಾನು ಬರೆಯಬೇಕು, ಎಂದು ಇಚ್ಛೆ ತೋರಿಸಿದ್ದ. ಇದನ್ನು ಬರೆಯಲಿಕ್ಕೆ ನಾನು ಎರಡು ದಿನ ಕಳೆದೆ. ಕೆಲವು ದಿವಸಗಳ ನಂತರ, The Lesson of The Swedish Shipping strike ಎಂಬ ಹೆಸರಿನಿಂದ ಈ ವೃತ್ತಾಂತದ ಪುಸ್ತಕ ಪ್ರಸಿದ್ಧವಾಯಿತು. ಇದಲ್ಲದೆ ಮಾಸ್ಕೋ ಬರ್ಲಿನದ ನಡುವೆ ಸಾಗಿದ ಕೆಲವು ಗುಪ್ತ ಪತ್ರಗಳ ಭಾಷಾಂತರ ವನ್ನೂ ನಾನು ಮಾಡಿದೆ. ಭಾಷಾಂತರಿಸುವಾಗ ಒಂದು ವಿಚಾರ ಒಂದೇ ಸಮನೇ ಬರುತ್ತಿದ್ದಿತು. ದುನಿಯಾ ಝುಕತೀ ಹೈ. ಝುಕಾನೆವಾಲಾ ಚಾಹಿಯೆ. ಇದು ಹೇಗೆಂಬುದನ್ನು ಹೇಳುತ್ತೇನೆ.

ಡಿಮಿಟ್ರಾಫನ ಖಟ್ಲೆ ನಡೆದಿತ್ತು. "ರಿಸ್ಟಾಗದ ಬೆಂಕಿಯ ಖಟ್ಲೆ, ಎಂದು ಮುಂದೆ ಆಪು ಪತ್ರಿಕೆಗಳಲ್ಲಿ ಪ್ರಸಿದ್ಧವಾಯಿತು. ಈ ಖಟ್ಲೆ ನಡೆದಾಗ ಸರಕಾರೀ ಸಾಕ್ಷಿದಾರರ ಉಲಟ ತಪಾಸಣೆಯಲ್ಲಿ, ಡಿಮಿಟ್ರಾಫನು ತುಂಬಿದ ಕೋರ್ಟಿನಲ್ಲಿ ಗೋರಿಂಗ-ಮತ್ತು ಗೋಬೆಲ್ಸರ ಸಾರೋದ್ಧಾರ ಮಾಡಿ ಬಿಟ್ಟನು. ಅಲ್ಲದೆ ನಾಝೀ ಪಕ್ಷಕ್ಕೆ ಮನವಾರೆ ಬೈದನು. ಈ ಅಪೂರ್ವ ಧೈರ್ಯಕ್ಕೆ ವರ್ತಮಾನ ಪತ್ರಿಕೆಯಲ್ಲಿ ಅದೆಷ್ಟು ಸ್ತುತಿ? ಆದರೆ ಇದರ ಹಿಂದಿನ ಒಳಗುಟ್ಟು ಬೇರೆ. ಪತ್ರಿಕೆಗಳ ಕೈ ಆ ಗುಪ್ತ ಗುಹೆಯವರೆಗೆ ಚಾಚಲಿಲ್ಲ. ಅದಕಾಗಿ ಆ ಗುಪ್ತ, ಜಗತ್ತಿಗೆ ತಿಳಿಯಲೇ ಇಲ್ಲ; ಈ ಪತ್ರವ್ಯವಹಾರ ನಡೆದಾಗ ಮಾತ್ರ ಸ್ಪಷ್ಟ ತಿಳಿದು ಬಂದಿತು. ಡಿಮಿಟ್ರಾಫನ ಆ ಖಟ್ಲೆ, ಅವನ ಧೀರೋದಾತ್ತಭಾಷಣ, ಇದೆಲ್ಲ ಸ್ಟಾಲಿನ ಮತ್ತು ಹಿಟ್ಲರ ಇವರು ಸಿದ್ಧಗೊಳಿಸಿದ ಒಂದು ನಾಟಕ!

ಗೆಸ್ಟಪೋದವರು ಡಿಮಿಟ್ರಾಫನನ್ನು ಬಂಧಿಸಿ ಛಳಿಸಹತ್ತಿದರು. ಆಳ್ಳಿದೆಯ ಡಿಮಿಟ್ರಾಫ ಕಾರ್ಯಕರ್ತರ ಹೆಸರು ಹೇಳಹತ್ತಿದ. ಅವರೆಲ್ಲರ ಬಲಿ ಬೀಳಹತ್ತಿದವು. ಬಹಳವೇನು? ತನಗೆ ಆಶ್ರಯ ಕೊಟ್ಟಿದ್ದ ಯಾರೋ ದಂಪತಿಗಳ ಹೆಸರು ಸಹ ಹೇಳಿದ ಬಹಾದ್ದರ. ಅವರು ಆತ್ಮಹತ್ಯೆಯ ಪ್ರಯತ್ನಮಾಡಿದರು. ಡಿಮಿಟ್ರಾಫನ ಅಂಗವಸ್ತ್ರ ಆಸಿಕ್ಸ್ಯುವಗೆಯ ಬಲಿ ಆದಳು, ಅವನ ಹೆಂಡತಿಯ ಅವಸ್ಥೆ ಸಹ ಹಾಗೇ.

ಹೀಗೆ ಅನಪೇಕ್ಷಿತ ಪ್ರಕಾರ ನಡೆದಾಗ ಮಾಸ್ಕೋ ಬೆದರಿರಬೇಕು. ಇನ್ನು ಮುಂದೆ ಯಾರ ಯಾರ, ಹೆಸರು ಹೊರಬೀಳುವವೋ ಏನೋ? ಡಿಮಿಟ್ರಾಫನ ಬಿಡುಗಡೆ ಆಗಬೇಕೆಂದು ಮಾಸ್ಕೋ ಬಯಸಿತು. ಡಿಮಿಟ್ರಾಫನ ಜೀವ ಅಮೌಲ್ಯನೆಂದೇನೂ ಅಲ್ಲ. ಕಾಮಿಂಟರ್ನದ ಅಂತಸ್ಥ ವಿಪುಲ ರಾಡಿ, ಅವನಿಂದ ಗೆಸ್ಟಪೋದವರಿಗೆ ತಿಳಿಯುವದಲ್ಲ. ಎಂದು. ಇದೇ ಕಾರಣದಿಂದ ಮಾಸ್ಕೋ-ಮತ್ತು ಬರ್ಲಿನ ಸಂಧಾನವಾಯಿತು. ಡಿಮಿಟ್ರಾಫನಿಗೆ ಹೆಚ್ಚು ಉಪದ್ರವ ಕೊಡಬಾರದು. ಅವನಿಗೆ ಬದಲಾಗಿ ಜೀ. ಪಿ. ಯು. ದ ವಶದಲ್ಲಿದ್ದ ನಾಝೀ ಕಾರ್ಯಕರ್ತರನ್ನು ಬಿಡಬೇಕು. ಹೀಗೆ ಮಾತುಕತೆ ಮುಗಿದ ನಂತರ ರೀತಿಯಂತೆ ಆ ಖಟ್ಲೆಯು ತಮಾಷೆ ಲಾಯಿಪ ಝಕ್ಕದ ರಂಗಭೂಮಿಯಮೇಲೆ ಸಾಗಿತು! ಖಟ್ಲೆ ನಡೆದಾಗ ಡಿಮಿಟ್ರಾಫ

ಗೆಸ್ಟಪೋ ಕೈದಿ ನಿಜ. ಆದರೆ ಅವನ ವ್ಯವಸ್ಥೆಯಲ್ಲಿ ರಾಜಶಾಹೀ ಥಾಟು. ಗೆಸ್ಟಪೋದ ಕೈಯಲ್ಲಿ ಸಿಕ್ಕ ನಮ್ಮ ಸಣ್ಣ-ಸಣ್ಣ ಕಾರ್ಯಕರ್ತರು ಪಾಪಿ! ಕೊರಡೆ ಪೆಟ್ಟು ತಿನಬೇಕು. ವೀರರಾದರೆ ಗುಂಡಿನಿಂದ ಪ್ರಾಣ ನೀಗಬೇಕು !

* * * *

ಇರಲಿ, ಜರ್ಮನಿಗೆ ಹೋಗುವ ನನ್ನ ಸಿದ್ಧತೆ ಮುಗಿದಿತ್ತು. ಈಗ ಜರ್ಮನಿಯ ನಕಾಶದ ವಿನಾ ನನ್ನ ದೃಷ್ಟಿಯಲ್ಲಿ ಏನೂ ಇರಲಿಲ್ಲ. ಪಟ್ಟಣ, ಬಂದರ- ರೇಲ್ವೆ ರಸ್ತೆ. ಯಾರಿಗೆ ಭೆಟ್ಟಿಯಾಗಿ ನಾನು ಕಾರ್ಯಮಾಡ ಬೇಕಾಗಿತ್ತೋ, ಅವರ ನಿಜ ಹೆಸರು. ಖೊಟ್ಟಿ ಹೆಸರು. ನಿಜ-ಸುಳ್ಳು ವಿಳಾಸ ಇವುಗಳನೆಲ್ಲ ನಾನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಅಥವಾ ಪಾಠ ಮಾಡುತ್ತಿದ್ದೆ. ಒಬ್ಬ ಯಾವನಾದರೂ ಕಾರ್ಯಕರ್ತನ ಹೆಸರು ಹೇಳಿ ವಾಲವೆಬರ ಅನ್ನುತ್ತಿದ್ದ. “ಈ ವ್ಯಕ್ತಿ ಜೀವಂತನಾಗಿರುವನೋ, ಸತ್ತಿರುವನೋ- ಸರಿಯಾಗಿ ತಿಳಿದಿಲ್ಲ. ನೀನೇ ಅದನ್ನು ವಿಚಾರಿಸಿಕೊಳ್ಳ ಬೇಕು.”

ಗೆಸ್ಟಪೋದವರ ಕಣ್ಣು ತಪ್ಪಿಸಿ ನಾನು ಜರ್ಮನಿ ಪ್ರವೇಶಿಸಬೇಕಾ ಗಿದ್ದಿತು. ಅದರ ಸಿದ್ಧತೆ ಬಹಳ ಗುಪ್ತವಾಗಿ ನಡೆದಿತ್ತು. ಜೇನಸೇನನು ನನಗೆ ಎರಡು ಖೊಟ್ಟಿ ಪಾಸಪೋರ್ಟ ಕೊಟ್ಟ. ಒಂದು ಡ್ಯಾನಿಶ ಸರಕಾರದ್ದು. ಇನ್ನೊಂದು ಬ್ರಿಟಿಶ. ಅದರಲ್ಲಿ ನನ್ನ ಹೆಸರು ‘ರಾಬರ್ಟ ವ್ಹಿಯಿಲಮ್ಸ್, ಎಂದಿತ್ತು. ಮತ್ತು ಸರಜಾನಸಾಯಮನ್ನರ ಸಹಿ ಇದ್ದಿತು. ಹನ್ನೆರಡುಸಾವಿರ ಡಾಲರು ನನ್ನ ಕೈಗೆ ಬಂದವು. ಇದರಲ್ಲಿಯ ಅರ್ಧ, ಪಕ್ಷದ ಕಾರ್ಯ ಮುಗಿಸಲಿಕ್ಕೆ, ಅರ್ಧ ಮೂರು ತಿಂಗಳ ಪಗಾರ.

ಕಡೆಗೆ ಹೊರಡುವ ದಿನ,—ಫಿರೇಲಾಯಳ ನಿರೋಪ ಪಡೆಯಬೇಕಾದ ಗಳಿಗೆ ಬಂದಿತು. ಆಕೆ ನುಡಿದಳು.

“ಇನ್ನು ನೀನು ಎಂದೂ ತಿರುಗಿಬರುವದಿಲ್ಲ. ಜರ್ಮನಿಗೆ ಹೋದ್ಧ ವರು....” ಮುಂದೆ ಮಾತಾಡುವದಾಗಲಿಲ್ಲ. ಕಪೋಲದ ಮೇಲೆ ಅಶ್ರು ಬಿಂದುಗಳು- ಉದುರಿದವು.

ನಂತರ ಕಣ್ಣೀರು ಒರೆಸಿಕೊಂಡು ಧೈರ್ಯದಿಂದ ಮಾತಾಡಹತ್ತಿದಳು. ಒಂದು ಹಾಟೆಲದಲ್ಲಿ ಶಾಂತವಾಗಿ ನಾವು ಊಟ ತೀರಿಸಿದೆವು. ನಾನು ಫಿರೇಲಾಯಳ ಕೊಟ್ಟಡಿಯಲ್ಲಿ ಹೋದೆ. ಆಕೆ ಅಲ್ಲಿ ಎಲ್ಲ ಕಡೆಗೂ ಹೂ- ಹರವಿದ್ದಳು. ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡು ಬಿಟ್ಟಳು. ಕಡೆಯ ಆ ಭೆಟ್ಟಿಯಲ್ಲಿ ಎಷ್ಟು ಉತ್ಕಟತೆಯಿಂದ, ತನ್ನ ಸರ್ವಸ್ವ ಪುರುಷನಿಗೆ ಕೊಡುವ ಸ್ತ್ರೀಗೆ ಸಾಧ್ಯವೋ, ಅದನ್ನೆಲ್ಲ ಕೊಟ್ಟುಬಿಡಲು ಆಕೆ ಯೋಚಿಸಿ ಕೊಂಡಿದ್ದಳೋ ಕಾಣೆ!....

ಬೆಳಗಿನ ಹತ್ತು ಗಂಟೆಗೆ ನನ್ನನ್ನು ಕರೆದೊಯ್ಯಲಿಕ್ಕೆ ಜೇನಸೆನನ ಮನುಷ್ಯ ಬಂದು ಬಹಳ ಕಷ್ಟದಿಂದ ಮನಸ್ಸನ್ನು ಗಟ್ಟಿಮಾಡಿ ಫಿರೇಲಾಯಳ ಕೋಮಲ ಕರಪಾಶ ನಾನು ದೂರ ಮಾಡಿದೆ. ನನ್ನನ್ನು ಕಳಿಸ ಬರಲು ಸಹ ಆಕೆಗೆ ಒಪ್ಪಿಗೆ ಇರಲಿಲ್ಲ. ದೂರಾಗಿ ನಾನು ನುಡಿದೆ.. ಬರುತ್ತೇನೆ. ಆಕೆ ಕಣ್ಣೀರು ಬರಗೊಡಿಸಲಿಲ್ಲ. ತನ್ನ ಪ್ರೇಮದ ಜಾನಪದಗೀತ ಹಾಡ ತೊಡಗಿದಳು. Farewell, Green- Earth!.... "

ಆಕೆ ಮೊದಲು ಚರಣ ನುಡಿದಳೋ ಇಲ್ಲವೋ ಕಂಠ ಸದ್ಗದಿತ ವಾಯಿತು!

೧೭

ನೋಡಿದತ್ತ ಘನಾಂಧಃಕಾರ, ಮಳೆಯೋ ಮುಸಲಾಧಾರ. ಸುತ್ತು ಕಡೆ ದಟ್ಟಡವಿ. ಅಲ್ಲಲ್ಲಿ ಕಾಲು ಇಳಿಯತ್ತಿರುವ ಭೂಮಿ. ಎತ್ತ ಹೋಗ ಬೇಕು? ನಿಂತಲ್ಲಿ ನಿಂತುಕೊಂಡರೆ ಭಯ. ಮುಂದೆ ಕಾಲುಕಿತ್ತಿಟ್ಟರೆ ಸಂಕಟ. ಹಿಂದೇನೋ? ಮುಂದೇನೋ?

ಜರ್ಮನಿಗೆ ಮುಟ್ಟಿದ ಮೇಲೆ ನಾನು ಯಾವ ಪರಿಸ್ಥಿತಿಯಲ್ಲಿ ಕಾರ್ಯ ಮಾಡಹತ್ತಿದೆನೋ, ಅದರ ವರ್ಣನೆ ಮೇಲಿನಂತೇ ಏನಾದರೂ ಮಾಡ ಬೇಕಾಗುವದು!

ಕಳೆದ ವಸಂತ ಋತುವಿನಲ್ಲಿ ನಡೆದ ಗೆಸ್ಟಪೋದ ಕೊಲೆಗಡಿಕತನ ಈಗ ತಣ್ಣಗಾಗಿತ್ತು. ಕೈಗೆ ಸಿಕ್ಕವರನ್ನು ಕೊಲ್ಲುವ ಕುರುಡ ದಬ್ಬಾಳಿಕೆ ಅದು. ಈಗ ಆ ಧೋರಣವಿರಲಿಲ್ಲ. ಆರಿಸಿ ಈಗ ಬೇಟೆಯಾಡುವ ಕಾರ್ಯ

ಕ್ರಮ ನಡೆದಿತ್ತು. ಹಿಂದೆ ನಡೆದ ಬೊಬ್ಬಾಟ, ಕೂಗಾಟಗಳೂ ಇದ್ದಿಲ್ಲ. ಈಗಿನದೆಲ್ಲಾ ಸುಮ್ಮನೆ ಮೌನದಿಂದ. ಗುರಿತಪ್ಪದಂತೆ. ಹೊಸ ರೀತಿಯಿಂದ ಹಿಂದಿನಗಿಂತಲೂ ಭಯಪ್ರದ ಸ್ವರೂಪ ಗೆಸ್ಟಪೋಕ್ಕೆ ಪ್ರಾಪ್ತವಾಗಿದ್ದಿತು. ಇವರ ಕಣ್ಣು ತಪ್ಪಿಸಿ ಇದ್ದುಕೊಂಡು, ಕಾರ್ಯ ಮಾಡುವದೆಂದರೆ ಎಷ್ಟು ಕಠಿಣ?

ಹಾಂಬುರ್ಗದಲ್ಲಿಯೇ ಇದ್ದುಕೊಂಡು ಕಾರ್ಯ ನಡೆಸುವಂತಿರಲಿಲ್ಲ. ಬರ್ಲಿನ, ಬ್ರೆಮೆನ, ಲ್ಯೂಬೆಕ, ಎಮ್ಡೆನ ಹೀಗೆ ಬೇರೆ ಬೇರೆ ಊರು ತಿರುಗಿ ಪಕ್ಷದ ಪುನರ್ಘಟನೆ ಮಾಡುವ ಅವಶ್ಯವಿದ್ದಿತು. ಹಳೇ ಕಾರ್ಯಕರ್ತರ ಭೆಟ್ಟಿಯಾಗಬೇಕೆಂದರೆ, ಅವರೆಲ್ಲಿದ್ದರು? ಅವರೆಲ್ಲ ಬಲಿಯಾಗಿ ಹೋಗಿರಬೇಕು. ಅಥವಾ ಜೇಲಿನಲ್ಲಿರಬೇಕು. ದೇಶಗೇಡಾಗಿ ಹೋಗಿರಬೇಕು. ಬಹಳವೇನು? ಹಳೆಯ ಕಾರ್ಯಕರ್ತರ ಭೆಟ್ಟಿಯಾಗಿ ಅವರನ್ನೆಲ್ಲ ಒತ್ತಟ್ಟಿಗೆ ತರುವ ಆಶೆ ತಾಳುವದರಲ್ಲಿ ಅರ್ಥವಿಲ್ಲ. ಎಂದು ಬೇಗನೆ ತಿಳಿದು ಬಂದಿತು. ಇನ್ನು ಹೊಸ ಜನರನ್ನು ಕಲೆಹಾಕಿ ಅವರ ಮೇಲೆ ವಿಶ್ವಾಸವಿಡುವದು ಇಷ್ಟವಲ್ಲ. ಇಂಥ ಇರುಕಿನಲ್ಲಿ ಮಾರ್ಗದೊರೆತಂತೆ ನಾನು ಸಾಗಿದ್ದೆ.

ನಾನು ಕಾರ್ಯನಿರತನಾದದ್ದು ಯಶದ ಖಾತ್ರಿಯಿಂದಲ್ಲ. ಅಂತರಂಗದಿಂದ ಹೊರಚಿಮ್ಮುವ ತೀವ್ರದ್ವೇಷ ಸುಮ್ಮನೆ ಕೂಡ ಗೊಡಿಸುವದಿಲ್ಲ ಎಂದು! ಗೆಸ್ಟಪೋ ಜನರ ಕೈಯಲ್ಲಿ ನನ್ನಂಥವರು ಸಿಕ್ಕರೆ, ಅವರ ಗತಿ ಏನಾಗುವದು. ಇದು ನನಗೆ ಗೊತ್ತಿದ್ದಿತು. ಫಾಶಿಯ ಮೇಲೆ ತೆಗೆದ ಅನೇಕ ಕಾಮ್ರೇಡರ ಅನಾರುಂಡ ಕೆಂಪು ಚಿತ್ರಗಳನ್ನು ನಾನು ನೋಡಿದ್ದೆ. ಆ ಚಿತ್ರ ಕಣ್ಣು ಮುಂದಿಟ್ಟುಕೊಂಡೇ ಕಾರ್ಯ ಮಾಡಬೇಕಾಗಿತ್ತು. ಅದೂ ಯಾವವೃತ್ತಿಯಿಂದ? ಸಂಕಟಗಳಿಂದ ಬಗ್ಗುವಂತಿಲ್ಲ. ತಡೆಗಳನ್ನು ಲೆಕ್ಕಿಸುವಂತಿಲ್ಲ!

ರಾತ್ರಿಯಲ್ಲಿ ನಿದ್ರೆಯ ಮಟ್ಟಿಗೆ, ಶಾಂತಸ್ಥಳ ಎಲ್ಲಿ ಸಿಕ್ಕೀತು? ಎಂಬುದು ಸಹ ನಿತ್ಯ ವಿಚಾರಿಸುವ ಪ್ರಶ್ನವಾಗಿತ್ತು. ವಿಶ್ವಾಸಿಕ ಸಹಕಾರಿಗಳ ಮನೆ ಉಳಿದಿರಲಿಲ್ಲ. ಹೊಸ ಮಿತ್ರರ ಮನೆ ವಿಶ್ವಾಸಕ್ಕೆ ಅರ್ಹವೆನಿಸುವಂತಿಲ್ಲ. ಮನೆ-ಮನೆಗೆ ಗೆಸ್ಟಪೋದ ತಪಾಸಣೆ. ನಾಝಿ ವಿರೋಧಿಗಳಿಗೆ ಆಶ್ರಯಕೊಡುವದೆಂದರೆ ಮಹಾಪರಾಧ. ಯಾರು ಫಿತೂರಿ ಆಗು

ವರೋ? ಏನೋ? ನಾನು ಜರ್ಮನಿಗೆ ಬಂದು ಎರಡು ತಿಂಗಳಾಗಿದ್ದವು. ಒಂದೇ ಹಾಸಿಗೆಯ ಮೇಲೆ ನಾನು ಎರಡು ಸಾರೆ ಮಲಗಿದ ಸ್ಮರಣವಿಲ್ಲ, ರಾತ್ರಿ ಎಲ್ಲ ಉದ್ಯೋಗ–ಕಾರಸ್ಥಾನಗಳಲ್ಲಿ ಕಳೆಯುವದು. ಬೆಳಗಾದ ಕೂಡಲೆ ದಣಿದ ಶರೀರ ಎಲ್ಲಿಡಬೇಕು? ಎಂದು ವಿಚಾರಿಸುವದು; ಒಂದು ಸಾರೆ ಪಕ್ಷದ ಹೊಸ ಸಭಾಸದರಲ್ಲಿ ಮಲಗಬೇಕು. ಒಮ್ಮೆ– ಸಂದಿಗೊಂದಿಯ ಅಂಗಡಿ ಮಳಿಗೆಯಲ್ಲಿ ಬೀಳಬೇಕು. ಮತ್ತೊಮ್ಮೆ ಒಂದು ಚರ್ಚು ಆಶ್ರಯಕ್ಕೆ ಹುಡುಕಬೇಕು. ಎಲ್ಲಕ್ಕಿಂತ ಸಂರಕ್ಷಿತ ಸ್ಥಳವೆಂದರೆ ಪಾತರದಾಕೆಯ ಮನೆ. ಈ ಕಸಬುಗಾರ್ತಿಯರು ನಾಝಿಗಳನ್ನು ಮನಃಪೂರ್ವಕ ದ್ವೇಷಿಸುತ್ತಿದ್ದರು. ಕಾರಣವೆಂದರೆ ನಾಝೀ ಸಿಪಾಯರು, ಉಳಿದ ಗಿರಾಕಿಗಳಿಗಿಂತ ಹೆಚ್ಚು ಸಾರೆ ಇವರಲ್ಲಿ ಬರುತ್ತಿದ್ದರು. ಹಣ ಕೊಡದೆ ದಾಂಡಿಗತನಮಾಡಿ ಠೀವಿಯಿಂದ ಹೋಗಿಬಿಡುತ್ತಿದ್ದರು!

ಇಂಥ ವಿಲಕ್ಷಣ ಪರಿಸ್ಥಿತಿಯಲ್ಲಿಯೂ ಕೈಗೆ ಕೈಕೊಟ್ಟು– ಕಾರ್ಯ ಮಾಡುತ್ತಿರುವವರಲ್ಲಿ 'ಸಿಲಿ' ಒಬ್ಬಳು. ವಾಲವೆಬರನು ಕೋಪನಹೆಗನದಿಂದ ನನ್ನನ್ನು ಇಲ್ಲಿ ಕಳಿಸಿದಾಗ, ಸಹಾಯಕ್ಕೆಂದು ಸಿಲಿಯನ್ನೂ ಕಳಿಸಿದ್ದ. ಆಕೆಯ ಜಾಣ್ಮೆ, ಸಾಹಸ ವಿಲಕ್ಷಣವಾಗಿದ್ದವು. ಮಿತ್ರರಾರು? ಶತ್ರುಗಳಾರು? ಎಂಬುದನ್ನು ನೋಡಿದೊಡನೆ ಆಕೆ ಗೊತ್ತುಹಿಡಿಯುತ್ತಿದ್ದಳು. ಗೆಸ್ಟಪೋದವರಿಗೆ ಇನ್ನೂ ಆಕೆಯ ಹೆಸರು ತಿಳಿದಿರಲಿಲ್ಲ. ಹೀಗಾಗಿ ಅವಳ ಉಪಯೋಗ ನನಗೆ ಬಹಳವಾಗುತ್ತಿದ್ದಿತು. ಒಂದು ಫ್ಯಾಶನೇಬಲ ಹಾಟೆಲದಲ್ಲಿ ಆಕೆಯ ವಸತಿ. ಸಂಚಾರಮಾಡುವಾಗ ಆಕೆಯ ಉಡಪು– ಥಾಟು ನೋಡಿದರೆ ಇವಳಾವಳೋ ದೊಡ್ಡ ಸ್ತ್ರೀ ಎಂದಿರಬೇಕು. ನನ್ನ ಸಂತೋಷಕ್ಕೆ ಅವಳು ಯಾವಾಗಲೂ ತತ್ಪರಳು. ಆಕೆಯ ಮೈಮಾಟ, ಮೊಗದಲ್ಲಿಯ ಮುಗ್ಧ ಸರಲಭಾವ ನೋಡಿದ ಸಮಯದಲ್ಲಿ, ಪ್ಯಾರಿಸದ ಚಿತ್ರ ಮಂದಿರದಲ್ಲಿಯ 'ಡ್ಯಾನಾ'ಳ ನೆನಪಾಗುತ್ತಿದ್ದಿತು. ಆದರೆ ಒಂದು ಆಶ್ಚರ್ಯ. ವಾಲವೆಬರನ ವಿಶ್ವಸ್ತಳೂ, ಕಾಮಸಖಿಯೂ ಆಗಿ ಎಷ್ಟೋ ವರ್ಷ ಕಾರ್ಯ ಮಾಡಿದ ಇವಳನ್ನು ಈ ಸಂಕಟದಲ್ಲಿ ಅವನು ಏಕೆ ದೂಡಿರಬಹುದು? ಈ ಪ್ರಶ್ನೆಯನ್ನು ಸಿಲಿಗೆ ಮಾಡುವದು ಪ್ರಶಸ್ತವೆನಿಸಲಿಲ್ಲ, ಒಂದು ದಿನ ಮಾತಿನಲ್ಲಿ ಆಕೆಯೇ ಹೇಳಿಬಿಟ್ಟಳು. ಆಕೆಯನ್ನೇನೋ ಈಗ ಹದ್ದುಪಾರು ಮಾಡಿದ್ದನಂತೆ.

ಆಶ್ಚರ್ಯದಿಂದ ನಾನಂದೆ. ಹದ್ದುಪಾರು! ಅದೇಕೆ?"

"ಅದನ್ನೇ ಹೇಳುತ್ತೇನೆ. ವಾಲವೆಬರನು ಪ್ಯಾರಿಸಕ್ಕೆ ಹೋದಾಗ, ಪೋಲಂಡದ ಒಬ್ಬ ಹುಡುಗೆಗೆ ಆಶ್ರಯ ಕೊಟ್ಟಿದ್ದನು. ಮುರಳಿ ಕೋಪನ ಹೆಗನಕ್ಕೆ ಬಂದ. ನನ್ನ ಜೊತೆಗೆ ಇದ್ದುಬಿಟ್ಟ. ಅವನಿಗೆ ಬರುತ್ತಿರುವ ಕೆಲವು ಪತ್ರಗಳಿಗೆ ಅತ್ತರಿನ ವಾಸನೆ ಬರುತ್ತಿದ್ದಿತು. ಅದರ ಮೇಲಿನ ಅಕ್ಷರಗಳು ಹೆಂಗಸಿನವೆಂದು ಕಾಣಬೇಕು. ಪೋಲಿಶ, ಭಾಷೆಯಲ್ಲಿ ಅವಿರುತ್ತಿದ್ದುವಾದ ಕಾರಣ ನನಗೆ ಓದಲಿಕ್ಕೆ ಬರುತ್ತಿರಲಿಲ್ಲ. ಇಷ್ಟುಮಾತ್ರ ನನಗೆ ತಿಳಿದಿತು. ಇಲ್ಲಿ ಏನೋ ಗುಪ್ತವಿದೆ. ವಾಲವೆಬರನ ಮೇಲೆ ನಾನು ಬಹಳ ಸಿಟ್ಟಾದೆನು. ಅವನು ಆ ಸಂಗತಿಯನ್ನು ವಿನೋದಮಾಡಿ ಬಿಟ್ಟನು. ಮತ್ತು ಸರಕಾರಕ್ಕೆ ಸಂಶಯ ಬರಬಾರದೆಂದು ಪಕ್ಷದ ಕೆಲವು ಪತ್ರಗಳಿಗೆ ಅತ್ತರು ಹಚ್ಚಿ ಕಳಿಸಬೇಕಾಗುವದೆಂದು ತಿಳಿಸಿಕೊಟ್ಟನು. ಆದರೆ ಅದೆಲ್ಲ ಸುಳ್ಳು ಎಂದು ನಾನು ಭಾವಿಸಿದೆ. ನನಗೆ ಬಹಳ ದುಃಖವಾಯಿತು. ನಾನು ಆ ಪತ್ರ ಕದ್ದು, ಪೋಲೀಶ ತಿಳಿಯುವ ಒಬ್ಬ ಮಿತ್ರನಿಂದ ಓದಿಸಿಕೊಂಡೆ. ಪ್ರೇಮದಿಂದ ಸ್ವೈರಿಣಿಯಾದ ಒಬ್ಬ ಹುಚ್ಚು ಮುಂಡೆಯ ಪತ್ರಗಳವು. ನಾನು ಜೋರಾಗಿ ಜಗಳ ಹೂಡಿದೆ...."

"ಸರಿ. ಅದಕಾಗಿಯೋ ಇಲ್ಲಿ ರವಾನಿಸಿದ್ದಾನೆ."

"ಹುಂ. ಅವನಿಗೆ ಅನಿಸಿರಬಹುದು. ನಾನು ಅಳುತ್ತೇನೆ. ಅವನ ಕಾಲು ಕಟ್ಟಿಕೊಳ್ಳುತ್ತೇನೆ. ಹೇಗಾದರೂ ಆಶ್ರಯಕೊಡು, ಎಂದು ಬೇಡಿಕೊಳ್ಳುತ್ತೇನೆ. ಛೀ! ಅವನಿಗೆ ನನ್ನ ಪರಿಚಯವಾಗಿರಲಿಲ್ಲ. ಹೋಗೆಂದ ಕೂಡಲೇ ಇಲ್ಲಿಗೆ ಬಂದೇ ಬಿಟ್ಟೆ."

"ಇನ್ನೇನು ನಿನ್ನ ಪಾಲಿಗೆ ದುಃಖವೇ ಸರಿ."

"ನಿಯಮವೇನು? ಅದರಿಂದಲೂ ಕದಾಚಿತ್ ಸುಖ ನಿರ್ಮಾಣವಾದೀತು."

"ಹುಚ್ಚೀ! ಸುಮ್ಮನೆ ಆತ್ಮವಂಚನೆ ಮಾಡಿಕೊಳ್ಳಬೇಡ."

ಆಗ ಸಂಧ್ಯಾಕಾಲ. ಒಂದು ಮದ್ಯಗೃಹದ ಮೂಲೆಯಲ್ಲಿ ನಾವು ಕುಳಿತಿದ್ದೆವು. ಮೇಜಿನ ಮೇಲೆ ಮೊಳಕೈಯೂರಿ ಆಕೆ ಬಾಗಿದಳು. ಅಂತಃಕರಣದಲ್ಲಿ ಇರುವದನ್ನೇ ಹೇಳಹತ್ತಿದಳು.

"ನಾನು ಆತ್ಮವಂಚನೆ ಮಾಡಿಕೊಳ್ಳುವದಿಲ್ಲ. ನನ್ನ ಪರಿಸ್ಥಿತಿಯ ಸ್ಪಷ್ಟ ಕಲ್ಪನೆ ನನಗುಂಟು. ನನ್ನ ಅವಸ್ಥೆ ಎಂದರೆ ಒಬ್ಬ ಕೈದೀ. ನನ್ನೊಬ್ಬಳದೇ ಅಲ್ಲ. ನನ್ನದು ನಿನ್ನದು—ಅಥವಾ ನಮ್ಮೆಲ್ಲರದು! ಎರಡೂ ಮಗ್ಗಲು ದೊಡ್ಡ ಗೋಡೆ ಇರುವ ಬಾಗಿಲಿಲ್ಲದ ಇರುಕಿನ ಬೀದಿಯಲ್ಲಿ ನಾವು ಸಿಕ್ಕಿಕೊಂಡಿದ್ದೇವೆ. ಮನಸ್ಸಿನಿಂದ ಶರೀರದಿಂದ ಸಹ! ಈ ಬೀದಿಯ ಹೆಸರೇ 'ಪಕ್ಷದ ಶಿಸ್ತು!' 'ಪಕ್ಷದ ಶಿಸ್ತು!' ಯಾವ ಅಧಮ ಈ ಶಬ್ದ ಮೊದಲು ಹುಡುಕಿದನೋ ಯಾರು ಬಲ್ಲರು?

"ಸಿಲೀ, ನಾನು ತಪ್ಪಿದೆ. ಶಿಸ್ತು ಬೇಕು. ಶಿಸ್ತು ಇಲ್ಲದೆ ಪಕ್ಷ ಹೇಗೆ ಬದುಕೀತು?"

ಆಕೆ ತನ್ನ ಮದ್ಯದ ಪೇಲೆ ಮೇಲೆತ್ತಿ ನುಡಿದಳು. "ಪಕ್ಷಕ್ಕೆ ದೀರ್ಘಾಯುಷ್ಯ ಕೋರುತ್ತೇನೆ ನಾನು. ಆದರೆ ಪಕ್ಷದಂತೆ ನನಗೂ ಜೀವಂತವಿರುವ ಇಚ್ಛೆ. ಇದು ಯಾವ ಪ್ರಾಣಿಗೂ ಇರಬೇಕಾದುದೇ. ಆದರೆ ನಮ್ಮ ಪಾಲಿಗೆ ಬೇಸರದ ಹೊಲಸು ಆಯುಷ್ಯ ಬಂದಿದೆ. ಬೆಳಗಾದಿತೆಂದರೆ ಮನದಲ್ಲಿ ಜಪಿಸಬೇಕು. ಕದಾಚಿತ್ ಇದೇ ನಮ್ಮ ಜೀವಿತದ ಕಡೇದಿನವಿರಬಹುದು."

ಈ ವಿಷಯ ಬೆಳೆಸುವದರಲ್ಲಿ ಅರ್ಥವಿಲ್ಲ ಎಂದು ನಾನು ಹೇಳಿದೆ. "ಒಳ್ಳೇದು. ನಾನು ಇನ್ನು ಹೋಗಬೇಕು. ಹತ್ತು ಗಂಟೆಗೆ ಒಂದು ಸಭೆ ಇದೆ."

ಆಕೆ ಶಾಂತಳಾಗಿ ಕೇಳಿದಳು. "ಈ ದಿನ ರಾತ್ರಿ ನನ್ನ ಕಡೆಗೆ ಬರುವಿಯಾ?"

"ಹನ್ನೆರಡರ ಮೊದಲೇ ನನ್ನ ಬಿಡುಗಡೆ ಇಲ್ಲ.

"ಆಗಲೇ ಬಾ. ಪರವಿಲ್ಲ. ನನ್ನ ಕೊಟ್ಟಡಿಯ ನಂಬರು ಹದಿನಾರು."

ಆಕೆಯ ನಿರೋಪ ಕೊಂಡು ನಾನು ಹೋದೆ. ಆಕೆ ಇರುವ ಹಾಟೆಲದಲ್ಲಿ ನಾನು ಸೇರುವದೆಂದರೆ ಹೇಳಿಕೇಳಿ ಸಂಕಟ ಕರೆದಂತೆ, ಇದನ್ನು ಸಿಲಿಯೂ ಬಲ್ಲಳು. ಆದರೂ ಬರುವದಕ್ಕೆ ಮೃದುವಾಗಿ ಹೇಳಿದಳಲ್ಲ? ಬೀದಿಯಿಂದ ಸಾಗುವಾಗ ವಿಚಾರಿಸುತ್ತಿದ್ದೆ. ಸಿಲಿಯ ಧೈರ್ಯಗುಂದಿತೇ? ಆಕೆ ನಿರಾಶಳಾದಳೇ?....

† † † †

ಹಳೇ ಕಾರ್ಯಕರ್ತರ ಸ್ಥಳ ಶೋಧಿಸಿ, ಅವರನ್ನು ಗಂಟು ಹಾಕಿಕೊಡುವ ವಿಷಯದಲ್ಲಿ ಸಿಲಿಯ ಸಹಾಯ ಬಹಳ. ಮಾರ್ಟಿನ ಹಾಲಸ್ಕಾಯಿನ ಎಂಬ ಹೆಸರಿನ ಅತ್ಯಂತ ವಿಶ್ವಾಸಿಕ ಕಾರ್ಯಕರ್ತನ ಶೋಧವನ್ನು ನಾನು ಬಹಳ ಮಾಡಿದೆ. ಏನಾದರೂ ಗೊತ್ತು ಹತ್ತಲಿಲ್ಲ. ನವಂಬರ ೨೯ನೇ ತಾರೀಖಿನಿಂದ ಸಿಲಿಯು ಅವನ ಗೊತ್ತು ಹಚ್ಚಿ, ಮರುದಿನ ರಾತ್ರಿ ಬೊಟ್ಯಾನಿಕಲ ಹಾರ್ಡನ ಎಂಬ ಹೆಸರಿನ ಸಾರ್ವಜನಿಕ ಉದ್ಯಾನದಲ್ಲಿ ನಾನು ಭೆಟ್ಟಿಯಾಗಬೇಕೆಂದು ಹೇಳಿದಳು.

ತಾರೀಖು ಮೂವತ್ತನೇ ನವಂಬರದ ರಾತ್ರಿ ಕಗ್ಗತ್ತಲೆಯದು. ನಾರ್ಥಸೀಯ ಮೇಲಿಂದ ಬೀಸುವ ತಂಗಾಳಿ ಮೈ ಮುದುಡಿಸುತ್ತಿದ್ದಿತು. ಸಿಲಿ, ಮತ್ತು ನಾನು ಹೊರಟೆವು. ೮ ಗಂಟೆಗೆ ಮೂರು ಮಿನಿಟು ಕಮ್ಮಿ ಇರುವಾಗ ನಾವು ಉದ್ಯಾನದಲ್ಲಿ ಹೊಕ್ಕೆವು. ಆ ದಿನ ಕೋಪನಹೆಗನದಿಂದ ಬಂದ 'ಜೋಲಂಥಾ' ಹಡಗಿನಿಂದ ಬರ್ಮಾ ಇಸ್ಟರ, ಮತ್ತು ಓಟೋ, ಎಂಬ ಕಾರ್ಯಕರ್ತರು ಬಂದು ಇಳಿದಿದ್ದರು. ವರಿಷ್ಠರಿಂದ ಅವರು ಹುಕುಮು ತಂದಿರಬೇಕು. ಅವರ ನಮ್ಮ ಭೆಟ್ಟಿ ಎಂಟು ಗಂಟೆಗೆ ಆಗಬೇಕಾಗಿದ್ದಿತು. ನಂತರ ಎಂಟೂವರೆಗೆ ಮಾರ್ಟಿನ ಹಾಲಸ್ಕಾಯನ ಭೆಟ್ಟಿಯಾಗುವವಿದ್ದ.

ನಿರ್ಧರಿಸಿದಂತೆ ಇವೆಲ್ಲ ಮುಗಿದವು. ನಮ್ಮ ಮಾತುಕತೆ ತೀರಿದವು. ಯಾರಿಗೂ ಸಂಶಯವೆನಿಸಬಾರದೆಂದು ಬೇರೆ ಬೇರೆ ದಿಕ್ಕಿನಿಂದ ನಾವು ಮನೆಗೆ ಹೊರಟೆವು.

ಉದ್ಯಾನದಿಂದ ಹೊರಬಿದ್ದ ಕೂಡಲೇ ಪಟ್ಟಣದ ಸುತ್ತಲಿರುವ ಖಂದಕದ ಮಗ್ಗಲಿನ ಬೀದಿಯನ್ನು ನಾನು ಹಿಡಿದೆನು. ಆಗ ಮನಸ್ಸಿನಲ್ಲಿ ಮರುದಿನ ಏನು-ಮಾಡಬೇಕೆಂದು ವಿಚಾರ ನಡೆದಿತ್ತು. ನಿಜವಾಗಿ ಎಂದರೆ ಆಗ ನಾನು ಬಹಳ ದಣಿದಿದ್ದೆ. ವಿಶ್ರಾಂತಿ ಹೇಗೆ ಸಿಕ್ಕೀತು, ಎಂಬ ಹಾಗೆ ಆಗಿದ್ದಿತು. ನನ್ನ ಸಮಾಗಮ ಸುಖಕ್ಕೆ, ಉತ್ಸುಕತೆ ತೋರುವ ಸಿಲಿಯ ವಿಷಯಕ್ಕೆ ಅಸಂಬದ್ಧ ವಿಚಾರ ಮನದಲ್ಲಿ ಸುಳಿದು ಹೋದವು. ಅಷ್ಟರಲ್ಲಿ ಫಿರೇಲಾಯ ನೆನಪಿಗೆ ಬಂದುಬಿಟ್ಟಳು. ಆಕೆ ನನ್ನ ಮೇಲೆ ಮಾಡುವ ಪ್ರೀತಿ, ಭಗ್ನವಾದ ಆಕೆಯ ಮನೀಷೆ, ಆಕೆಯ ಧೈರ್ಯ, ಇವುಗಳ ತೀವ್ರ

ಸ್ಮರಣವಾಯಿತು. ರೇ ರೇ! ನನ್ನಿಂದ ದೂರವಾಗಿದ್ದ ಅವಳು, ಈ ಸಮಯದಲ್ಲಿ ಒಬ್ಬಳೇ ಏನು ಮಾಡುತ್ತಿರಬಹುದು?....

ಮುಗಿಲಿನಲ್ಲಿ ಮೋಡಗಳು ಮುಸುಕಿದವು. ಎರಡೂ ಬದಿಯ ದೀಪಗಳ ಮಂದ ಅರಿಸಿಣ ಬಣ್ಣದ ಪ್ರಕಾಶ ನೋಡಿ, ಮನದಲ್ಲಿ ಅನಿಸುತ್ತಿದ್ದಿತು. ಕತ್ತಲೆಯದೊಂದು ವಿಸ್ತಾರ ಸಮುದ್ರ. ಅದರ ಮೇಲೆ ಬೀದಿಯ ಪ್ರಕಾಶಿತ ಭಾಗದ, ಸಣ್ಣ-ಪುಟ್ಟ ನಡುಗಡ್ಡೆ ತೇಲಹತ್ತಿವೆ. ಒಬ್ಬರೊಬ್ಬರ ಟೊಂಕಕ್ಕೆ ಕೈಯ ಕೋನುಲ ಪಾಣಹಾಕಿಕೊಂಡು, ನನ್ನ ಮುಂದೆ ಸಾಗಿರುವ ಒಂದು ಜೋಡಿ, ಅಲ್ಲಿದ್ದ ಸಂದಿಯಲ್ಲಿ ಹೊರಳಿ ಮರೆಯಾಯಿತು. ಓರ್ವ ಪುಷ್ಟನಿತಂಬದ ಸ್ತ್ರೀ ಭರ್ರನೆ ಹತ್ತರ ಹಾದುಹೋಗಿ ಒಂದು ಮನೆ ಸೇರಿಕೊಂಡಳು. ಬೀದಿ ಹಾಳು ಸುರಿಯುತ್ತಿದ್ದಿತು. ಪ್ರತಿನಿತ್ಯ ಸಂಕಟಗಳಲ್ಲಿ ಸಂಚರಿಸುವ ನನ್ನಂಥವರಿಗೆ ಜನರಿಂದ ತುಂಬಿದ ಬೀದಿ ನಿರ್ಭಯವೆನಿಸುವದು. ಸುತ್ತು ಮುತ್ತು ಯಾರೂ ಇಲ್ಲದಾದರೆ ಸಾವಿರಾರು ಶಂಕೆ ಮನದಲ್ಲಿ ಬರುವದುಂಟು. ಹಿಂದಿನಿಂದ ಬರುವ ಮೋಟರಿನ ದೀಪ ಪ್ರಕಾಶ ಮೈಮೇಲೆ ಬಿದ್ದಿತ್ತು. ಆ ಮೋಟರಿನ ವೇಗ ಕಮ್ಮಿಯಾಗಹತ್ತಿದೆ; ಎಂದು ಸಂದೇಹವೆನಿಸಿತು. ನನ್ನನ್ನು ನೋಡಿ ಅದನ್ನು ನಿಲ್ಲಿಸುವರೋ ಏನು? ಒಮ್ಮೆನಿಸಿತು. ಭರ್ರನೆ ಮುಂದೆಹೋಗಿ ಒಂದು ಮನೆಯಲ್ಲಿ ಸೇರಬೇಕು. ಮೋಟರು ಮುಂದೆ ಹೋಗಲಿ. ಮತ್ತೆ ಮನದಲ್ಲಿ ಬಂತು. ಚಿಃ! ಸುಮ್ಮನೆ ಏಕೆ ಗಾಬರಿ! ಕಲ್ಪನೆಯುದೇ ಇದೊಂದು ಆಟ. ಎಂದುಕೊಂಡು ನನ್ನ ಹೆಜ್ಜೆ, ಭರ ಭರ ಬಿದ್ದಹಾಗೆನಿಸದಂತೆ ನಾನು ಬೇಕೆಂದು ಯತ್ನಿಸಿದೆನು.

ಮರುಕ್ಷಣದಲ್ಲಿಯೇ ಕಂಡು ಬಂದಿತು. ಅದು ನನ್ನ ಕಲ್ಪನೆಯ ಆಟವಲ್ಲ. ಸನಿಯಕ್ಕೆ ಬಂದಕೂಡಲೇ ಮೋಟರು ಬ್ರೆಕ್ಕುಹಾಕಿ, ಗಾಡಿ ನಿಲ್ಲಿಸಿದರು. ಯಾರೋ ಕೂಗಿದರು.

“ನಿಲ್ಲು.”

ನಾನು ಕೂಡಲೇ ತಿರುಗಿ ನೋಡಿ ಓಡಹತ್ತಿದೆ. ಈಗ ಎಲ್ಲಿ ಸಿಕ್ಕ ಮನೆಯಲ್ಲಿ ಸೇರಿಕೊಳ್ಳಬೇಕೆಂದಿದ್ದೆ. ಮೆಟ್ಟಲುಹತ್ತಿ, ಚಪ್ಪರವೇರಬೇಕು ಬೆನ್ನುಹತ್ತಿದ ವ್ಯಕ್ತಿಗೆ ಗುಂಡು ಹಾಕಬೇಕು. ಆದರೆ ನಾನು ಓಡಿ ಹೋದ

ಬಾಗಿಲು ತೆರೆದಿರಲಿಲ್ಲ. ಮಾರ್ಗ ಕುಂಠಿಸಿತು. ಮೋಟರಿನಲ್ಲಿದ್ದವರು ಜಿಗಿದುಬಂದು ನನ್ನನ್ನು ಹಿಡಿದು, ಪಿಸ್ತೂಲು ತೋರಿಸಿದರು.

ಒಬ್ಬನೆಂದ. "ಕೈ ಮೇಲೆ ಮಾಡು."

ಮತ್ತೊಬ್ಬನೆಂದ "ಇಲ್ಲಿಂದ ಅಲುಗಾಡಿದರೆ ಗುಂಡು ಬಿದ್ದೀತು."

ಕೈ ಮೇಲೆಮಾಡಿ ಸುಮ್ಮನೆ ನಿಂತುಬಿಟ್ಟೆ. ಅವರಲ್ಲೊಬ್ಬ ಪಿಸ್ತೂಲು ಎತ್ತಿ ಅದರ ತುದಿಯನ್ನು ನನ್ನ ಹಲ್ಲುಗಳಿಗೆ ಹಚ್ಚಿದ. ಬೇರೊಬ್ಬ ನನ್ನ ಸರ್ವಾಂಗ ಝಡತಿ ಮಾಡಿದ. ದೊರೆತದ್ದನೆಲ್ಲ ತನ್ನ ಜೇಬಿನಲ್ಲಿ ತುರುಕಿಕೊಂಡ. ನನ್ನ ಮುಂಗೈಗೆ ಬೇಡಿ ಹಾಕಿ, ದೊಡ್ಡ ದಿಗ್ವಿಜಯ ಮಾಡಿದಂತೆ, ಹಾಸ್ಯಮಾಡಿ ಆನಂದೋದ್ಗಾರ ತೆಗೆದರು.

ಪೋಲೀಸಚೌಕಿಗೆ ನನ್ನನ್ನು ಕರೆದೊಯ್ದರು. ಕಾಲಿಸಿಂದ ಒಂದು ಕುರ್ಚಿ ದೂಡಿ 'ಕೊಡು' ಎಂದರು. ನನಗಿಂತ ಮೊದಲು ಹಿಡಿದುತಂದ ಇಬ್ಬರು ವೇಶ್ಯೆಯರು ಅಲ್ಲಿರುವಂತೆ ಕಂಡಿತು. ಅವರನ್ನು ಒಳಕೋಣೆಗೆ ದಬ್ಬಿದರು. ಯುನಿಫಾರ್ಮು ಹಾಕಿಕೊಂಡ ಬಹಳ ಜನ ಅಲ್ಲಿರಬೇಕು. ಅವರು ಕುಳಿತು ಡೆಸ್ಕಿನ ಮೇಲೆ ಬರೆಯುತ್ತಿದ್ದರು. ಅವರೇನೂ ನನ್ನನ್ನು ಲಕ್ಷಿಸಿದಂತೆ ಕಾಣಲಿಲ್ಲ. ನನ್ನನ್ನು ಹಿಡಿದುತಂದ ಮೂವರ, ಬಡಾಯಿ ಏನೋದಕ್ಕೆ ಎಣೆ ಇರಲಿಲ್ಲ. ಅವರು ತಮ್ಮ ಓವ್ಹರ ಕೋಟು ತೆಗೆದು, ಅದರಲ್ಲಿಯ ಪಿಸ್ತೂಲು ಇಜಾರದಲ್ಲಿ ಹಾಕಿಕೊಂಡರು. ಮತ್ತು ಡೆಸ್ಕಿನ ಮೇಲೆ ಕಾಲು ಕೈಚಾಚಿ ಬಿದ್ದುಕೊಂಡು ಸಿಗಾರೇಟು ಹೊತ್ತಿಸಿದರು.

ನನ್ನ ಮನಸ್ಸು ಒಂದು ವಿಧದ ಚಮತ್ಕಾರಿಕ ಬಧಿರವಾಗಿದ್ದಿತು. ಸುತ್ತಲಿದ್ದ ಸಣ್ಣ-ಪುಟ್ಟ ವಸ್ತುಗಳು ಕಾಣುತ್ತಿದ್ದರೂ, ಅವುಗಳ ಯೋಗದಿಂದ ಮನಸ್ಸಿನ ಮೇಲೆ ಪರಿಣಾಮ, ಎಷ್ಟೂ ಉಂಟಾಗುತ್ತಿರಲಿಲ್ಲ. ಅಲ್ಪಾವಧಿಯಲ್ಲಿ ನನ್ನ ಹಾಡು ಏನಾಗುವದು! ಇದೆಲ್ಲ ಸ್ಪಷ್ಟಕಾಣತೊಗಿತು. ಆ ಕಲ್ಪನೆ ಮನದಲ್ಲಿ ಬಂದರೂ, ನನ್ನ ವಿಚಾರಕ್ಕೆ ಗತಿ ದೊರೆಯುತ್ತಿರಲಿಲ್ಲ ನನ್ನನ್ನು ಈಗ ಅವರು ಹಿಡಿದೇ ಇಲ್ಲ. ಬೇರೊಬ್ಬನನ್ನು ಹಿಡಿದಿದ್ದಾರೆ ಅದರಲ್ಲಿ ನಾನು ಓರ್ವ ಸಾಕ್ಷಿ ಇರುವೆ!

ವಿಚಾರ ಮಾಬೇಕೆಂದು ಜೋರಾಗಿ ಯತ್ನಿಸಿದೆ. ಆಗ ನಿರ್ಧರಿಸಿದ ಮುಖ್ಯ ವಿಷಯ ಇಷ್ಟು. ಅವರಿಗೆ ಬೇಕಾದ ಮಾಹಿತಿಯ ಚಕಾರ ಶಬ್ದ

ಬಾಯಿಂದ ಬರಗೊಡಲಿಕ್ಕಿಲ್ಲ. ಹಸಿದ ಹುಲಿಯ ಪಂಜರದಲ್ಲಿ ಹಾಕಿದ ಮನುಷ್ಯನಿಗಿಂತ ನನ್ನ ಅವಸ್ಥೆ ಹೆಚ್ಚು ಭಯಂಕರವಿದ್ದಿತು. ಅವನಿಗೆ ಕದಾಚಿತ್ ಮರಣ ಕೂಡಲೇ ಬರಬಹುದು. ನನಗೆ ಹಾಗೆ ಬರುವಂತಿರಲಿಲ್ಲ. ಸ್ವತಃದ ಪ್ರಾಣಘಾತ ಮಾಡಿಕೊಳ್ಳುವ ಸಾಧನ ನಾನು ಹುಡುಕಬೇಕಾಗಿತ್ತು; ಅದು ಸಿಗುವವರೆಗೆ ಒಂದಕ್ಷರ ಕೂಡ ಬಾಯಿಂದ ಹೊರಬೀಳಿಸುವಂತಿರಲಿಲ್ಲ. ಈಗ ನನಗೆ ಸಾವು ನಿಶ್ಚಿತ. ಆದರೆ ನನ್ನ ಮರಣದಿಂದ ಕಾರ್ಯ ಮಾತ್ರ ಜೀವಂತ. ಆ ಕಾರ್ಯದ ವಿಘಾತ—ಆಗುವಂತೆ ಏನೂ ಉಚ್ಚರಿಸಲಿಕ್ಕಿಲ್ಲ. ಜೀವ ಹೋದರೂ ಅಷ್ಟೇ..ಆದರೆ....

"ನಿನಗೊಂದು ಸಿಗಾರೇಟ ಬೇಕೇನೋ!"

ಆ ಪ್ರಶ್ನೆ ಕೇಳಿ ನಾನು ಜಾಗ್ರತನಾದೆ. ಗೋಣು ಹಾಕಿದೆ. ನನ್ನನ್ನು ಹಿಡಿದು ತಂದವರಲ್ಲಿ ಒಬ್ಬ ಸಿಗಾರೇಟು ಬಾಯಲ್ಲಿ ಇಟ್ಟನು. ತುಟಿ ಆರಿದ್ದರಿಂದ, ನಾನು ಸಿಗಾರೇಟು ಹಿಡಿದಿದ್ದೇನೆ ಎಂಬುದು ನನಗೇ ತಿಳಿಯುತ್ತಿರಲಿಲ್ಲ. ಅದಕ್ಕೆ ಕಡ್ಡಿ ಹಚ್ಚಿದನು. ನಾನು ಹೊಟ್ಟೆಬಾರನಂತೆ ಹೊಗೆ ಫರಾಳ ಮಾಡಿಬಿಟ್ಟೆ. ಹೊಗೆ ಕವಿದುದರಿಂದ ಕಣ್ಣು ಉರಿಯಹತ್ತಿದವು. ಕಣ್ಣು ತಿಕ್ಕಲಿಕ್ಕೆ ಕೈ ಅಲುಗಾಡಿದವು. ಅಲ್ಲಿ ಭಾರವಾದ ಬೇಡಿ. ಆ ಮಹಾರಾಯನಿಗೆ ಅದು ಕಂಡಿರಬೇಕು. ಬಾಯಿಂದ ಸಿಗಾರೇಟು ಕಿತ್ತಿ, ಡೆಸ್ಕಿನ ಮೇಲಿಟ್ಟ. ತುಸು ವೇಳೆಯ ನಂತರ ಪುನಃ ಬಾಯಲ್ಲಿ ತುರುಕಿದ.

ಅವನೆಂದ. "ನಾವು ಎಷ್ಟು ಸಭ್ಯ ಜನರಿದ್ದೇವೆ. ನೋಡಿದೆಯಾ?"

ಅದನ್ನು ಕೇಳಿ ಉಳಿದ ಇಬ್ಬರು ಹಲ್ಲು ಕಿರಿದರು. ಉಳಿದವರು—ನಿರ್ಲಜ್ಜರಂತೆ ಮೇಲೆ ತಲೆ ಎತ್ತಿ ನೋಡಿದರು.

ನಾನು ಬಂಧಿತನಾದಂತೆ ಸಿಲಿ. ಬವರ್ಾ ಇಸ್ಟರ, ಹಾಲಸ್ವಾಯಿನ—ಇವರೂ ಸಿಕ್ಕರೋ?....ನಾವು ಉದ್ಯಾನದಲ್ಲಿ ಕೂಡುವದು ಮೊದಲೇ ಗೆಸ್ಟಪೋದವರಿಗೆ ತಿಳಿದಿತ್ತೇನೋ?....ನನ್ನ ವಿಶ್ವಸ್ಥರಲ್ಲಿ ಯಾರು ಈ ಫಿತೂರಿಯ ಕೆಲಸ ಮಾಡಿದ್ದರು?..ಹೀಗೆಲ್ಲ ಯೋಚಿಸಿದೆ.

ನನ್ನನ್ನು ಹಿಡಿದು ತಂದವರಲ್ಲಿ ಒಬ್ಬ ಟೆಲಿಫೋನಿನ ಹತ್ತರ ಹೋದನು. ಅವನು ಅಂಕಿ ತಿರುಗಿಸಹತ್ತಿದನು. ಕೂಡಲೆ ನನಗೆ ತಿಳಿದಿತು. ಗೆಸ್ಟಪೋದ ಮುಖ್ಯ ಠಾಣೆಯ ನಂಬರು ತಿರುಗಿಸಿರಬೇಕು. ಕಾರಣ

ವೆಂದರೆ ಎಷ್ಟೋ ಸಾರೆ ನಾನೇ ಆ ನಂಬರು ತಿರುಗಿಸಿ ಗೆಸ್ಟಪೋದವರಿಗೆ ಸುಳ್ಳು ಸದ್ದಿ ಕೊಟ್ಟದ್ದೆ.

ಫೋನಿನಲ್ಲಿ ಅವನು ಮಾತಾಡಹತ್ತಿದ.

“ ಇನ್ಸಪೆಕ್ಟರ ಕ್ರಾವುಸರೇನು?.. ಒಳ್ಳೇದು. ಹೋ. ಹೋ. ಅವನೇ. ಅವನನ್ನೇ ಹಿಡಿದಿದ್ದೇವೆ. ಇಲ್ಲ. ಅವನೇನು ದಾಂಡಿಗತನ ಮಾಡ ಲಿಲ್ಲ....ಕೂಡಲೇ ತರಬೇಕೆನ್ನುವಿರೋ? ಅಚ್ಛಾ. ಹೊರಟೆವು.... ಹಾಂ. ಹೆಲ ಹಿಟ್ಲರ!....

ನನ್ನನ್ನು ಎಬ್ಬಿಸಿ ಹೊರಗೆ ಮೋಟರಿನಲ್ಲಿ ಕುಳ್ಳಿರಿಸಿದರು. ಇಬ್ಬರು ನನ್ನ ಎಡಬಲಕ್ಕೆ, ಕೈಯೊಳಗಿನ ಅವರ ಪಿಸ್ತೂಲು ನನ್ನ ಪಾರ್ಶ್ವಭಾಗಗಳಿಗೆ. ತುಸು ವೇಳೆಯಲ್ಲಿ ನಮ್ಮ ಗಾಡಿ ಮುಖ್ಯ ಠಾಣೆಯ ಭವ್ಯಮಂದಿರ ಸೇರಿತು. ಗೇಟಿನ ಪಹರೆಯವರು ಹೆಲ ಹಿಟ್ಲರನ ಸಲಾಮು ಕೊಟ್ಟರು. ಆವಾರದಲ್ಲಿ ಅಸಂಖ್ಯ ಮೋಟರುಗಾಡಿಗಳಿದ್ದವು. ಮೇಲಿನ ಅಂತಸ್ತಿನಲ್ಲಿ ಸ್ವಚ್ಛ ದೀಪ ಪ್ರಕಾಶವಿರುವದು ಕಿಟಕಿಗಳಿಂದಲೇ ನನಗೆ ತೋರಿತು. ನೆರೆಯ ಚರ್ಚಿನ ಗಂಟೆ ಒಂದು, ಎರಡು..ಹನ್ನೊಂದು ಬಾರಿಸಿತು.

ಗಾಡಿ ನಿಂತಕೂಡಲೇ ಗೆಸ್ಟಪೋ ಜನರು ಜಿಗಿದು ನನ್ನನ್ನು ಕೆಳಗಿಳಿಸಿ ದರು. ಒಬ್ಬನು ಕಿವಿಯ ಹತ್ತಿರ, ಬಾಯಿ ತಂದು ಹೇಳಿದನು “ ಇನ್ನು ಮೇಲೆ ನಿನ್ನ ಚರ್ಮ ಸುಲಿಯುತ್ತಾರೆ, ನೋಡು. ”

ನಾನು ಏನು ಉತ್ತರಿಸಬೇಕು? ಮನದಲ್ಲಿ ಒಂದೇ ವಿಚಾರ ಗಟ್ಟಿ ಮಾಡಿಕೊಂಡೆ. “ ಒಂದಕ್ಷರ ಕೂಡ ಉಚ್ಚರಿಸುವಂತಿಲ್ಲ. ಪಕ್ಷದ ವಿಶ್ವಾಸ ಘಾತ, ಘೋರ ದುಷ್ಕೃತ್ಯವೆಂದು ತಿಳಿಯಲ್ಪಡುವದು. ಅದು ನನ್ನ ಕೈಯಿಂದ ಘಟಿಸಿ ಉಪಯೋಗವಿಲ್ಲ. ಮರಣವೇನು ಮಹಾ? ನನಗಿಂತ ಮೊದಲು ಎಷ್ಟೋ ಜನ ಸತ್ತಿದ್ದಾರೆ. ಧೀರನಾಗಿರುವದೇ ಪಕ್ಷದ ಸೇವಾ....”

“ ಏಯ್, ಚಲೋ. ”

ಒಬ್ಬನು ಮುಂದೆ ಹಾದಿ ತೋರಿಸುವವ. ಉಳಿದವರು ನನ್ನ ಹಿಂದೆ ಬರುವವರು.

ಹೋಗಬೇಕಾದರೆ ಎಷ್ಟು ದಿವಾಣಖಾನೆ. ಆ ತಿರುಗುಮುರುಗು ತಿರುವಿನದಾರಿ. ಸಶಸ್ತ್ರ ಪಹರೆಯವರೆಷ್ಟು ಜನ. ಒಂದು ಮೆಟ್ಟಿನ ಕೆಳಭಾಗಕ್ಕೆ ನಾವು ಬಂದೆವು. ಮೇಲಿನಿಂದ ಇಬ್ಬರು ದುಡು, ದುಡು ಕೆಳಗೆ ಉರುಳಿದರು. ಒಬ್ಬ ಸಿಪಾಯಿ ಕೋರಡೆ ಹಿಡಿದುಕೊಂಡು ಅವರ ಹಿಂದೆ ಬಂದನು. ಅವನು ಬೊಬ್ಬಿರಿಯುತ್ತ ಅಂದನು. “ ಹುಂ– ಜಲದೀ, ಔರ ಜಲದೀ ” ಮತ್ತೊಂದು ದಿವಾಣ ಖಾನೆಯಲ್ಲಿ ೨೦–೨೫ ಜನರನ್ನು ಗೋಡೆ ಕಡೆ ಮುಖ ತಿರುಗಿಸಿ ನಿಲ್ಲಿಸಿದ್ದರು. ಅವರ ಮೇಲಿನ ಕಾವಲುಗಾರ, ಆ ಜನರಲ್ಲಿ ಒಬ್ಬ ಮುದುಕನ ಕುತ್ತಿಗೆ ಹಿಡಿದು, ಏಕ-ದೋ, ಎಂದು ಹೇಳುತ್ತ ಅವನ ತಲೆ ಗೋಡೆಗೆ ಅಪ್ಪಳಿಸುತ್ತಿದ್ದ. ಮತ್ತೊಂದು ಸ್ಥಳದಲ್ಲಿ ಒಬ್ಬ ಲಠ್ಠ ಹೆಂಗಸು ನೆಲದ ಮೇಲೆ ಬಿದ್ದುಕೊಂಡಿದ್ದಳು. ಏಳಬೇಕೆಂದು ಆಕೆ ಯತ್ನಿಸುತ್ತಿದ್ದಳೇನೋ? ಎಡಬಲಕ್ಕೆ ಇಬ್ಬರು ಪಹರೆಯವರು ತಂತಿ ಹತ್ತದ ಸ್ವರದಿಂದ ಒದರುತ್ತಿದ್ದರು. “ ಏಳು, ಏಳು! ನಿನ್ನ ಎಲವು ಪಕ್ಕಾಪುಡಿ ಮಾಡುತ್ತೇವೆ. ಏನು ತಿಳಿದಿರುವೆ? ಇಷ್ಟರಲ್ಲಿ ಯಾರೋ ಚಿಟ್ಟನೆ ಚೀರಿಕೊಂಡರೆಂದು ತಿರುಗಿ ನೋಡಬೇಕಾಯಿತು. ಒಬ್ಬ ಫ್ಯಾಶನೇಬಲ ಗೃಹಸ್ಥನನ್ನು ಬಗ್ಗಿಸಿ ಕುದುರೆಮಾಡಿ ಒಬ್ಬ ಸೈನಿಕ ಮೇಲೆ ಕುಳಿತು ಹೇಳುತ್ತಿದ್ದ. ಹುಂ– ಒದರು. “ ನಾನು ಜ್ಯೂ ಇದ್ದೇನೆ. ಹರಾಮಖೋರ, ಬದಮಾಷ ಜ್ಯೂ ಇದ್ದೇನೆ. ”

ನಾವು ಆರನೇ ಅಂತಸ್ತು ಹತ್ತಿದೆವು. ಅಲ್ಲಿ ಮಾತ್ರ ಸ್ಮಶಾನ ಶಾಂತಿ. ನೆಲದ ಮೇಲೆ ಜಮಖಾನೆ ಹಾಸಿದ್ದರು. ಗೋಡೆಗೆ ಹಚ್ಚಿದ್ದ ಹೊಸ ಬಣ್ಣದ ನಾತ ಉಗ್ಗುತ್ತಿತ್ತು.

“ ಬಸ್, ಇಲ್ಲಿಯೇ ನಿಲ್ಲು. ”

ಒಂದು ಗಟ್ಟಿಮುಟ್ಟ ಬಾಗಿಲ ಮುಂದೆ ನಾನು ನಿಂತೆ. ಬಾಗಿಲ ಎರಡೂ ಮಗ್ಗಲು ಸಶಸ್ತ್ರ ಪಹರೆಯವರು ಕಪ್ಪುಬಣ್ಣದ ಸಮವಸ್ತ್ರ ಹಾಕಿಕೊಂಡ್ಡು ನಿಂತಿದ್ದರು. ಚೂಪಾದ ಟೊಪ್ಪಿಗೆಯ ಮೇಲೆ ಅವರಿಗೆ ಎರಡು ಎಲುವಿನ ಚಿಹ್ನ. ನನ್ನ ಸಂಗಡ ಬಂದವರಲ್ಲೊಬ್ಬ, ಬಾಗಿಲ ಮುಂದಿನ ಗಂಟೆ ಬಾರಿಸಿದ. ಬಾಗಿಲು ತೆರೆದ ಕೂಡಲೆ ನನ್ನನ್ನು ಒಳಗೆ ದಬ್ಬಿದರೆ, ನಾನು ಹೊರಳಿ ಧಡಾರೆಂದು ಬಿದ್ದು ಬಿಟ್ಟೆ. “ ಓಹೋ. ವಾಹವಾ ” ಎಂಬ ಶಬ್ದ

ಕೇಳಿಸಿದವು. ಸುತ್ತು ಮುತ್ತು ನೋಡಲುಯತ್ನಿಸಿದೆ. ದೀಪದ ಪ್ರಕಾಶ ದಿಂದ ಕಣ್ಣು ಕುಕ್ಕಿದವು. ಕಣ್ಣು ಉಜ್ಜಿ ನೋಡಿದಾಗ ಸಾದಾ ಉಡುಪಿನ ಎಷ್ಟೋ ಗೆಸ್ಟಪೋ ಜನ ನನ್ನನ್ನು ಸುತ್ತುಗಟ್ಟಿ ನಿಂತುಕೊಂಡಿದ್ದಾರೆ. ನನ್ನನ್ನು ನೋಡಿ ಚಪ್ಪಳೆ ಹಾಕಿ ಅವರು ನಗಬೇಕು. ಕೂಗಿಕೊಳ್ಳಬೇಕು. ಅವರ ಬಾಯಲ್ಲಿರುವ ಸಿಗಾರೇಟುಗಳ ಹೊಗೆ ಕೋಣೆಯಲ್ಲಿ ಎಲ್ಲ ಕಡೆ ತುಂಬಿ ಹೋಗಿದ್ದಿತು. ಕೋಣೆ ಮಾತ್ರ ಒಳ್ಳೇ ದೊಡ್ಡದು. ಅಲಂಕಾರದ ಸಾಮಾನು ಗಳು ಯಾವವೂ ಅಲ್ಲಿ ಕಾಣಲಿಲ್ಲ. ಇರುವವೆಂದರೆ ಗೋಡೆಯ ಮೇಲೆ ದೊಡ್ಡ ದೊಡ್ಡ. ನಕಾಶ, ಮತ್ತು ಪೋಸ್ಟರ್....

ಯಾರೋ ಕರ್ಕಶವಾಗಿ ಮಾತಾಡಿದರು. "ಏಳು–ಕಾಲೂರಿ ನೆಟ್ಟಗೆ ನಿಲ್ಲು."

ಹೇಗೋ ಎಂತೋ ನಾನು ಎದ್ದು ನಿಂತೆ!

ನನ್ನ ಹಿಂದೆ–ಮುಂದೆ ಎಡಬಲಕ್ಕೆ ಎತ್ತನೋಡಿವರೂ ಕ್ರೌರ್ಯದಿಂದ ನನ್ನನ್ನು ನೋಡುತ್ತಿರುವ ಮುಖಗಳು. ಮದೋನ್ಮತ್ತ ಕರ್ಕಶ ಹುಂಕಾರ ಎಲ್ಲಾ ನಿಟ್ಟಿನಿಂದ ಕೇಳಬಂದಿತು. ಗೆಸ್ಟಪೋದ ಈ ದುರ್ಗದಲ್ಲಿ ಸಿಕ್ಕ ನಾಝೀ ಶತ್ರುಗಳ ಅವಸ್ಥೆ, ಶಾರ್ಕ ಮೀನುಗಳ ಹಿಂಡಿನಲ್ಲಿ ಸಿಕ್ಕ ಈಸುವವ ನಂತೆ. ನನಗೆ ಇದನೆಲ್ಲ ಕಂಡು ಆಶ್ಚರ್ಯವೆನಿಸಲಿಲ್ಲ. ಕಾರಣವಿಷ್ಟೇ, ಈ ಛಲಯಂತ್ರ ಗೃಹದವರ್ಣನೆ ನನ್ನ ಕೇಳಿಕೆಯದು. ಯಾರೋ ಹೇಳಿದರು. ಅದಕಾಗಿ ನಾಝಿಗಳು ಬೆಳಗಿನಲ್ಲಿ ಅಕಸ್ಮಾತ್ ಹಾಸಿಗೆಯಿಂದ ಎಳೆದು ತಂದರು. ಇಂಥ ನಿರಪರಾಧಿ ಮನುಷ್ಯನೇನೂ ನಾನಲ್ಲ. ಹಿಟ್ಲರನ ಸತ್ತೆಯನ್ನು ಉರುಳಿಸಲಿಕ್ಕೆ ಸಾಧ್ಯವೆನಿಸಿದ ಸಾಧನಗಳನ್ನು ಉಪಯೋಗಿಸಿ ಕೊಂಡು ಯುದ್ಧಸಾಗಿಸಿದ ಸಮಾಧಾನವೊಂದು ಮನಸ್ಸಿಗಿತ್ತು. ಕ್ರಾಂತಿ ಗೆಂದು ನಾನು ಯುದ್ಧ ಮಾಡಿದ್ದೆ. ಆ ಕ್ರಾಂತಿಯ ವಿಷಯಕ್ಕೆ ನಿಷ್ಠಾ ಮತ್ತು ಶ್ರದ್ಧಾ, ಈಕ್ಷಣದಲ್ಲಿಯೂ ನನ್ನ ಮನದಲ್ಲಿ ದೃಢವಾಗಿದ್ದವು......

ಒಮ್ಮೆಲೇ ಯಾರೋ ಮುಷ್ಟಿಗೈಯಿಂದ ಜೋರಾಗಿ, ಮೋರೆಯ ಮೇಲೆ ಪ್ರಹಾರ ಮಾಡಿದರು. ಹಿಂದಿನಿಂದ ಮತ್ತೊಬ್ಬರು ದಬ್ಬಿಕೊಟ್ಟರು. ನಾನು ಮುಕ್ಕರಿಸಿಬಿದ್ದೆನು. ಕೂಡಲೇ ಯಾರೋ ದರ ದರ ಎಳೆದು ನಿಲ್ಲಿಸಿ, ಗೋಡೆಯ ಕಡೆಗೆ ದೂಡಿಕೊಟ್ಟರು. ಒಬ್ಬನು ಮೊಣಕಾಲಿನಿಂದ ಹೊಟ್ಟೆಗೆ

ತಿಪಿದನು. ಅವನ ತಲೆ ಬೋಳಾಗಿತ್ತು. ಇಷ್ಟೇ ನನಗೆ ಕಂಡಿತು. ಮತ್ತೊಬ್ಬನು ಕಪಾಳದಮೇಲೆ ಪ್ರಹಾರ ಮಾಡಿದನು. ತಾಳದೇ ನೆಲಕ್ಕೆ ಬಿದ್ದುಬಿಟ್ಟೆ. ಯಾರೋ ಎಬ್ಬಿಸಿ ಕೋಣೆಯ ಮಧ್ಯಭಾಗಕ್ಕೆ ತಂದು ನಿಲ್ಲಿಸಿದರು.

ಉಳಿದವರಿಗೆ ಹುಕುಮಾಯಿತು. "ಹುಂ ಬಸ ಬಸ. ಬಿಡಿರಿ ಅವನನ್ನು."

ಅಷ್ಟರಲ್ಲಿ ಒಬ್ಬ ಅಧಿಕಾರಿ ಬಂದನು. ಅವನು ಗಿಡ್ಡನಾದರೂ ಲಠ್ಠ ಮುಟ್ಟನಾಗಿದ್ದ. ಕಣ್ಣು ಒಳಸೇರಿದಂತಾಗಿದ್ದು ಕಪ್ಪಾಗಿದ್ದವು. ಅದೇ ತಾನೆ ಇಸ್ತ್ರಿ ಮಾಡಿದ ಉಡುಪು ಮೈಮೇಲಿದ್ದಿತು. ಕೈಬೊಟ್ಟಿಗೊಂದು ಉಂಗುರವಿತ್ತು. ಕೂದಲಿಗೆ ಸುಗಂಧ ಎಣ್ಣೆ ಹಚ್ಚಿಕೊಂಡಿದ್ದನೇನೋ? ವಾಸನೆ ಬರುತ್ತಿದ್ದಿತು.

ಅವನು ಒಳಗೆ ಬಂದಕೂಡಲೇ, ಎಲ್ಲರೂ ದೂರಾಗಿ ಸುಮ್ಮನೆ ನಿಂತರು. ಯಾರೋ ಕುರ್ಚಿ ತಂದು ನನ್ನಿಂದ ಎಂಟು ಹತ್ತು ಮೊಳ ದೂರ ಹಾಕಿದರು. ಅದರಮೇಲೆ ಆ ಅಧಿಕಾರಿ ಕುಳಿತು ಬಿರುಗಣ್ಣಿನಿಂದ ನನ್ನನ್ನು ನೋಡ ಹತ್ತಿದನು. ಅವನ ಒಂದು ಮಗ್ಗಲಿಗೆ ಒಬ್ಬ ಪಹರೆಯುವ ಬಂದುನಿಂತ. ಕೈಯಲ್ಲಿ ಸುಮಾರು ಆರು ಫೂಟಿನ ಚಬಕವೊಂದನ್ನು ಅವನು ಹಿಡಿದಿದ್ದನು. ಸನಿಯದಲ್ಲೇ ಒಬ್ಬ ಹುಡುಗೆ, ಒಂದು ಬಿಳೀ ಕಾಗದದ ಪುಸ್ತಕ, ಒಂದು ಪೆನ್ಸಿಲು ಹಿಡಿದುನಿಂತಿದ್ದಳು.

ಆ ಅಧಿಕಾರಿ ನನ್ನನ್ನು ನೋಡಿ ಅಂದನು. "ಈಗ ನಾವು ನಿನ್ನ ಚರ್ಮ ಸುಲಿಸುತ್ತೇವೆ."

ಆ ಹುಡುಗೆ ನಕ್ಕಳು. ಹಲ್ಲು ಸುಂದರವಾಗಿ ಕಂಡವು. ಆಕೆಯ ಮೈಕಟ್ಟು ದೊಡ್ಡದೆಂದು ಹೇಳಬೇಕು. ಕಣ್ಣು ಕಪ್ಪಾಗಿದ್ದು ದುಂಡಗಿದ್ದವು. ಕೂದಲು ಬಲುದಟ್ಟ. ಆಕೆ ಕೈಕಟ್ಟಿಕೊಂಡು ನಿಂತಿರುವದರಿಂದ ಆ ಕೈಗಳ ಮೇಲೆ, ಅವಳ ಪರಿಪುಷ್ಟ ಪಕ್ಷಭಾಗ ಆಶ್ರಯಸಿಕೊಂಡಂತೆ ಆಗಿದ್ದಿತು. ಅವಳನ್ನು ನಾನು ಗುರುತಿಸಿದೆ. ಒಬ್ಬ ಶ್ರೀಮಂತ ಜಮೀನುದಾರನ ಹುಡುಗೆ ಆಕೆ. ಅವಳ ಹೆಸರು 'ಹರ್ಥಾ ಜೇನ್ಸ'

ನನ್ನನ್ನು ನೋಡಿ ಹಾಸ್ಯದಿಂದ ಹೇಳಿದಳು. “ಓಹೋ! ಒಳ್ಳೇ ಶತಂದಲ್ಲಿ ಇರುವೆಯಲ್ಲವೆ?”

ಒಂದು ವರ್ಷದ ಮೊದಲು ಈಕೆ ನಮ್ಮ ಕಮ್ಯುನಿಷ್ಟ ಪಕ್ಷದವಳು. ಒಬ್ಬ ವಿಶ್ವಸ್ತ ಕಾರ್ಯಕರ್ತಳೆಂದು ಲೌಕಿಕ ಬೇರೆ. ಪಕ್ಷದ ಎಷ್ಟೋ ಗುಪ್ತ ಕಾಗದಪತ್ರ ಇವಳ ಸ್ವಾಧೀನದಲ್ಲಿ. ಹೀಗಿರುವವಾಗ ಫಿತೂರಿ ಆದಳು. ಆಕೆ ಕೊಟ್ಟ ಮಾಹಿತಿಯಿಂದ ನಮ್ಮ ಅನೇಕ ಗುಪ್ತಸ್ಥಳ ಮುತ್ತಲ್ಪಟ್ಟವು. ಎಷ್ಟೋ ಕಾರ್ಯಕರ್ತರು ನಾಝೀ ಬಂದಿಶಾಲೆ ಸೇರಿದರು. ಹಿಂದಿನಿಂದ ನಮಗೆ ತಿಳಿದಿತು. ಎಷ್ಟೋ ವರ್ಷಗಳಿಂದ ಆಕೆ ಹಿಟ್ಲರನ ತೈನಾತಿಯ ಗುಪ್ತ ಹೇರಳಿದ್ದಳು. ಕಳೆದ ಮೇ ತಿಂಗಳಿನಿಂದ ಜಿ. ಪಿ. ಯು. ದ ಕಪ್ಪು ಯಾದಿಯಲ್ಲಿ ಆಕೆಯ ಹೆಸರು ಬಂದಿತ್ತು. ಆಕೆ ಸಿಕ್ಕಲ್ಲಿ ಹಿಡಿಯಬೇಕು. ಇಲ್ಲವೇ ಮುಗಿಸಬೇಕು. ಎಂದು ಗುಪ್ತ ಹುಕುಮು ಇತ್ತು........”

ಇದೆಲ್ಲ ನೆನಪಾಗಿ ನಾನು ತಿರಸ್ಕಾರದಿಂದ ಆಕೆಯನ್ನು ನೋಡಿದೆ. ನನ್ನ ತುಚ್ಛತೆಯ ದೃಷ್ಟಿ ನೋಡಿದಾಗ ಮಾತ್ರ ಆಕೆಯ ಮೊಗದಮೇಲಿನ ಹಾಸ್ಯ ಅಡಗಿತು. ಹಃ ಎಂದು ನಿಟ್ಟುಸಿರೆಳೆದಂತೆ ಕಾಣಿಸಿತು.

ಕುರ್ಚಿಯಮೇಲೆ ಕುಳಿತ ಅಧಿಕಾರಿ ನನ್ನನ್ನುದ್ದೇಶಿಸಿ ಮಾತಾಡಿದನು. “ನನ್ನ ಹೆಸರು ಇನ್ಸಪೆಕ್ಟರ ಕ್ರಾವುಸ. ನನ್ನೊಡನೆ ಸರಿಯಾಗಿ ಒಳ್ಳೇ ಮಾತಾಡುವಿಯಾ?”

“ಹುಂ”

“ಒಂದು ನೆನಪಿಡು. ಸುಳ್ಳು ಮಾತಾಡಿದರೆ ಪ್ರಾಣ ಕಳಕೊಳ್ಳುವೆ. ತಿಳಿಯಿತೇ?

“ತಿಳಿಯಿತು.”

“ರಾತ್ರಿ ಬೋಟಾನಿಕಲ ಗಾರ್ಡನದಲ್ಲಿ ಯಾರ ಭೆಟ್ಟಿಗೆಂದು ನೀನು ಹೋಗಿದ್ದೆ?

“ಯಾರದೂ ಇಲ್ಲ. ಉದ್ಯಾನದಲ್ಲಿ ಸಹಜ ತಿರುಗಲಿಕ್ಕೆ ಹೋಗಿದ್ದೆ.”

“ಜರ್ಮನಿಗೆ ನಿನ್ನನ್ನು ಯಾರು ಕಳಿಸಿದ್ದಾರೆ?”

“ನಾನೇ ಬಂದೆ.”

" ನೀನು ಇರುವದೆಲ್ಲಿ?

" ಈ ದಿನವೇ ಮೂರನೇ ಪ್ರಹರದಲ್ಲಿ ಹಾಂಬುರ್ಗಕ್ಕೆ ಬಂದಿದ್ದೇನೆ. ಎಲ್ಲಿಯಾದರೂ ಹಾಟೇಲದಲ್ಲಿ ಕೋಣೆ ಹಿಡಿಯುವವನಿದ್ದೆ."

ಇನ್ಸಪೆಕ್ಟರರು ಗುರುಗುರು ಮಾತಾಡುತ್ತ ಹೇಳಿದರು. "ನಾನು ನಿನಗೆ ಮೂರು ಪ್ರಶ್ನೆ ಕೇಳಿದೆನು. ನೀನು ಮೂರು ಉತ್ತರಕೊಟ್ಟೆ. ಅವೆಲ್ಲ ಸುಳ್ಳು."

ನಾನು ಸ್ತಬ್ಧನಿದ್ದೆ. ಕಾಲು ಲಟಪಟಿಸಿದವು. ಕಂಪನ ನಿಲ್ಲ ಬೇಕೆಂದು ಯತ್ನಿಸಿದರೆ ಯತ್ನ ಸಾಗಲಿಲ್ಲ. ಕ್ರಾವುಸ ಮುಂದೆ ವಿಚಾರಿಸಿದನು.

" ದೋಸ್ತ, ನಿಜ ಹೇಳು. ವಾಲವೆಬರ ಎಲ್ಲಿದ್ದಾನೆ?

" ನನಗೆ ಗೊತ್ತಿಲ್ಲ."

" ವಾಲವೆಬರನನ್ನು ನೀನು ಗುರುತಿಸುವದಿಲ್ಲವೇ?"

" ಅವನ ಹೆಸರನ್ನು ಮಾತ್ರ ಕೇಳಿದ್ದೇನೆ. ನನಗೆಂದೂ ಅವನ ಭೆಟ್ಟಿ ಇಲ್ಲ."

" ನಿನ್ನ ಜೇಬಿನಲ್ಲಿ ದೊರೆತ ಆ ಡ್ಯಾನಿಶ ಪಾಸಪೋರ್ಟು ಯಾರು ಕೊಟ್ಟರು?"

" ಅಂಟ್ವರ್ಪದ ಕಾನ್ಸನನಿಗೆ ಭೆಟ್ಟಿಯಾಗಿ ನಾನು ಜರ್ಮನ ಪಾಸ ಪೋರ್ಟು ಕೇಳಿದೆ. ಅವನು ಕೊಡಲಿಲ್ಲ. ಅದಕ್ಕಾಗಿ ಒಬ್ಬ ಪ್ರವಾಸಿಕ ನಿಂದ ಡ್ಯಾನಿಶ ಪಾಸಪೋರ್ಟು ಕೊಂಡೆ."

" ನಿನ್ನ ಸಹಕಾರಿಗಳು ಯಾರು ಯಾರು? ಅವರು ಎಲ್ಲಿದ್ದಾರೆ?"

" ನನ್ನ ಸಹಕಾರಿಗಳು ಯಾರೂ ಇಲ್ಲ."

ಇನ್ಸಪೆಕ್ಟರ ತ್ವೇಷ ಹತ್ತಿಕ್ಕಿ ಶಾಂತರೀತಿಯಿಂದ ಅಂದನು. "ಹೀಗೋ ನಿನ್ನ ವೈಟುಸುಲಿದು ಎಲ್ಲ ಸಂಗತಿ ನಾನು ತಿಳಿಯಬಹುದು. ಎಷ್ಟೋ ದಿನಗಳ ನಿನ್ನ ಕಾರ್ಯದ ತಪಶೀಲು ನಮ್ಮ ಬಳಿಯಲ್ಲಿದೆ...."

ಅವನು ಹಠಾತ್ ಜೇನ್ನಳಿಗೆ ಸಂಕೇತ ಮಾಡಿದನು. ಕೂಡಲೆ ಆಕೆ ನೆರೆಯ ಕಚೇರಿಗೆ ಹೋದಳು. ಒಂದು ಫಾಯಿಲು ತೆಗೆದುಕೊಂಡು ತಿರುಗಿಬಂದಳು. ಅದನ್ನು ತೆಗೆದುಕೊಂಡು ಕ್ರಾವುಸ ಓದತೊಡಗಿದಾಗ

ನಾನು ಆಶ್ಚರ್ಯಚಕಿತನಾದೆ. ೧೯೨೩ ರಿಂದ ನನ್ನ ಎಲ್ಲ ಕಾರ್ಯಗಳ ಯಾದಿ ಅದರಲ್ಲಿದ್ದಿತ್ತು.

ಫಾಯಿಲು ದೂರ ಸರಿಸುತ್ತ ನನಗೆ ಕ್ರಾವ್ಹಸ ಹೇಳಿದನು. "ನಮಗೆ ಎಲ್ಲ ಸಂಗತಿ ಗೊತ್ತಿರುವದೆಂಬುದು ನಿನ್ನ ಲಕ್ಷದಲ್ಲಿ ಬಂದಿರಬೇಕು. ಆದರೆ ಅದೆಲ್ಲ ನಿನ್ನ ಬಾಯಿಂದ ಬರಬೇಕು. ನಮಗೆ ಬೇಕಾದ ಕಬೂಲಿ ಜವಾಬು ನೀನು ಹೇಳಿದರೆ ಎಷ್ಟೂ ನಿನಗೆ ತೊಂದರೆಯಾಗುವದಿಲ್ಲ. ನಿನ್ನ ಹಿತದ ಮಾತು ಹೇಳುತ್ತೇನೆ. ನಾನು ವಿಚಾರಿಸಿದುದಕ್ಕೆ ವಿವೇಕದಿಂದ ಉತ್ತರ ಕೊಡುವೆಯೋ?

"ಕೊಡುತ್ತೇನೆ."

"ರಾತ್ರಿ ಒಬ್ಬ ಹುಡುಗೆಯ ಸಂಗಡ ನೀನು ತಿರುಗುತ್ತಿದ್ದೆಯಲ್ಲ. ಆಕೆ ಯಾರು?"

"ಎಲ್ಲಿಯ ಹುಡುಗೆ?"

"ನಿನಗೆ ಗೊತ್ತಿದೆ.— ಎತ್ತರ, ಕಪ್ಪು ಕೂದಲು ಒಳ್ಳೇ ಫ್ಯಾಶನೇಬಲ ಪೋಷಾಕು ಮಾಡಿದಾಕೆ."

"ಇಂಥವಳ ಗುರುತು ನನಗಿಲ್ಲ."

"ನಿಜವಾಗಿ?"

"ಹೌದು."

ಇನ್ಸಪೆಕ್ಟರ ಹರ್ಥಾ ಜೇನ್ಸ್ಳ ಕಡೆಗೆ ತಿರುಗಿಹೇಳಿದನು. "ಆಕೆಯನ್ನು ಒಳಗೆ ಕರೆದುಕೊಂಡು ಬಾ."

ಹರ್ಥಾ ಜೇನ್ಸ್ಳು ಖಡ ಖಡ ಬೂಟು ಸಪ್ಪಳ ಮಾಡುತ್ತ, ಬಾಯಿಂದ ಸಿಳ್ಳುಹಾಕುತ್ತ ಹೋದಳು.

ಮರುಕ್ಷಣದಲ್ಲಿ ತಿರುಗಿಬಂದಳು.

ಆಕೆಯೊಡನೆ ಸಿಲಿ ಇದ್ದಳು.

## ೧೭

ಸಿಲಿಯು ಒಳಗೆಬರುವದನ್ನು ನೋಡಿದಾಗಲೇ ನನಗೆ ಪೆಟ್ಟುಬಿದ್ದಂತಾಯಿತು. ನನ್ನಂತೇ ಉದ್ಯಾನದಿಂದ ಹೊರಬಿದ್ದ ಕೂಡಲೆ ಇವಳನ್ನು ಹಿಡಿದಿರ

ಬೇಕು. ಸಿಲಿಯು ಮುಖಬಾಡಿತ್ತು. ಕಣ್ಣುಗಳಂತೂ ಎಷ್ಟೋರಾತ್ರಿ ಜಾಗರಣೆ ಮಾಡಿದಂತೆ ಕಾಣುತ್ತಿದ್ದವು.

ಅವಳಕಡೆಗೆ ನೋಡಿ ಕ್ರಾವುಸನು ಉಪಹಾಸದಿಂದ ನಗುತ್ತ ನುಡಿದನು. "ಹುಡುಗೆ ಪಕ್ಕಾ ಏನೋ ನಿಜವೇ. ನಿನ್ನ ಆರಿಸುವಿಕೆ ಉಚ್ಚ ಪ್ರತಿಯದು. ಒಪ್ಪಿದೆ."

ಆಗ ಸಿಲಿಯು ನನ್ನನ್ನು ಬಿರುಗಣ್ಣಿನಿಂದ ನೋಡಿದ ಅರ್ಥವೇನಂದರೆ ನಾನು ಆಕೆಯ ಕಣ್ಮುಂದೆ ನಿಂತುಕೊಂಡಿದ್ದೇನೆ ಎಂಬುದು ಅವಳಿಗೆ ನಿಜವೆನಿಸದಂತಾಗಿರಬಹುದು. ಆಗ ಅವಳ ತುಟಿಯ ಬಣ್ಣವೆಲ್ಲ ಇಳಿದಿತ್ತು. ಸುಮ್ಮನೇ ಮನಸ್ಸಿನಲ್ಲಿ ಹುದುಗಿಸಿಕೊಂಡ ತ್ವೇಷದಿಂದ ಸುಮ್ಮನೆ ತುಟಿ ಮಿಸುಕುತ್ತಿದ್ದವು ಅಷ್ಟೆ. ನಮ್ಮಿಬ್ಬರ ದಿಟ್ಟಿ ಕೂಡಿದಾಗ, ಪರಸ್ಪರರನ್ನು ಗುರುತಿಸುತ್ತೇವೆ. ಎಂದು ನಾವೇನೂ ತೋರಗೊಡಲಿಲ್ಲ.

ಕ್ರಾವುಸ ನನಗೆ ವಿಚಾರಿಸಿದ. "ಈಗ ಹೇಳು. ಇವಳನ್ನು ನೀನು ಗುರುತಿಸುವಿಯಷ್ಟೇ ?

"ಇಲ್ಲ."

ಹಲ್ಲುಕಡಿಯುತ್ತ ಅಂದನು. "ಇಲ್ಲವೋ? ನೋಡು. ಚನ್ನಾಗಿ ನೋಡು ಆಕೆಯನ್ನು. ನಾವು ಈಕೆಯ ಸಮಾಚಾರ ತೆಗೆದುಕೊಳ್ಳ ಹತ್ತಿದರೆ ಈ ಮೋರೆಯ ನೀರು ಬಹಳ ವೇಳೆ ಉಳಿಯುವದಿಲ್ಲ. ಅದಕ್ಕಾಗಿ ಹೇಳುತ್ತೇನೆ. ಚನ್ನಾಗಿ ನೋಡಿಕೋ. ಮತ್ತು ಹೇಳು. ಈಕೆಯ ಗುರುತು ನಿನಗೆ ಇಲ್ಲವೋ ?"

ಅಷ್ಟರಲ್ಲಿ ಸಿಲಿಯ ಹಾಗೂ ನನ್ನ ದೃಷ್ಟಿ ಒಂದಾದವು. ಅದರಲ್ಲಿ ಅಭಿಪ್ರಾಯವಿತ್ತು. "ಇವರಿಗೇನೂ ಹೇಳುವಂತಿಲ್ಲ."

ನಾನು ಇನ್ಸಪೆಕ್ಟರ ಕ್ರಾವುಸನಕಡೆ ತಿರುಗಿಹೇಳಿದೆನು." ಇಲ್ಲ. ಇವಳನ್ನು ನಾನು ಗುರುತಿಸುವದಿಲ್ಲ."

ಆವನು ಚಟಕ್ಕನೆ ಸಿಲಿಯ ಕುತ್ತಿಗೆಹಿಡಿದು ವಿಚಾರಿಸಿದನು. " ಗೃಹಸ್ಥನನ್ನು ನೀನು ಗುರುತಿಸುವಿಯೋ ?"

ದೃಢಸ್ವರದಿಂದ ಸಿಲಿ ಹೇಳಿದಳು. "ಎಂದೂ ನಾನು ಇವನನ್ನು ಕಂಡಿಲ್ಲ."

ಇದನ್ನು ಕೇಳಿ ಮಾತ್ರ ಕ್ರಾವುಸ ಕೈಎತ್ತಿದ. ಒಂದರಹಿಂದೆ ಒಂದು ನಾಲ್ಕೈದೇಟು ಸಿಲಿಗೆ ಕೊಟ್ಟ. ಸಿಲಿ ಚಿಟ್ಟನೆ ಚೀರಿದಳು.

ಕ್ರಾವುಸ ವಿಚಾರಿಸಿದನು. "ಈಗ ಹೇಳು ಇವನನ್ನು ಗುರುತಿಸುವೆಯಾ?"

ಸಿಲಿಯ ಮಂದ-ಮತ್ತು ನಿಶ್ಚಯದ ಸ್ವರ ಕೇಳಿಸಿತು. "ಇಲ್ಲ. ಇವನನ್ನು ಗುರುತಿಸುವದಿಲ್ಲ."

ತ್ವೇಷದಿಂದ ಕ್ರಾವುಸ ಆಕೆಯನ್ನು ನೋಡಿ ಮಾತಾಡಿದನು. "ಈಗ ಇಷ್ಟೇ ಸಾಕು. ಇವಳನ್ನು ಒಯ್ಯಿರಿ."

ಹರ್ಥಾ ಜೇನ್ಸಳು ಅವಳನ್ನು ದೂಡುತ್ತ ಬೇರೆ ಕೋಣೆಗೆ ಒಯ್ದಳು. ನಡುವಿನ ಬಾಗಿಲು ತೆರೆದಕಾರಣ. ಒಬ್ಬ ಎಲುವಿನ ಖಂಡೇರಾಯ ಪಹರೆಯವನು, ಸಿಲಿಯನ್ನು ಕುರ್ಚಿಯಮೇಲೆ ಕೂಡು ಎಂದು ದಬ್ಬಿಕೊಟ್ಟದ್ದು ಕಾಣಿಸಿತು. ಅವಳ ಮುಖದಲ್ಲಿ ಅತೀವ ನಿರಾಶೆಯ ಚಿಹ್ನಗಳು ಇಷ್ಟು ಅಂತರದಿಂದಲೂ, ಕಾಣಬಹುದಿತ್ತು.

ಮನೆಯಲ್ಲಿ ಹರಟೆ ಕೊಚ್ಚುವಾಗ ವೀರಶ್ರೀ. ನಿಯಮನಿಷ್ಠತನಗಳ ಮಾತು ಆಡುತ್ತೇವೆ. ಅವು ಎಷ್ಟು ಹುಚ್ಚುತನದವು! ಈಗ ನನಗೆನಿಸುತ್ತಿದ್ದಿತು. ಕಾಲಬುಡಕ್ಕಿದ್ದ ಭೂಮಿ ಇಬ್ಭಾಗವಾಗಿ ನನ್ನನ್ನು ಹೊಟ್ಟೆಯಲ್ಲಿ ತೆಗೆದುಕೊಂಡರೆ ಎಷ್ಟು ಒಳಿತು. ಕ್ರಾವುಸನು ಎರಡು ಹೆಜ್ಜೆ ಮುಂದೆ ಸರಿದು— ಸನಿಯದಲ್ಲೆ ಬಂದುನಿಂತುಕೊಂಡನು. ಈಗ ಅವನು ಮೊಂಡ ಕೋರಡೆ ಕೈಯಲ್ಲಿ ತೆಗೆದುಕೊಂಡಿದ್ದ. ಕೋರಡೆಯು ಹುರಿ ನೀರಿನಲ್ಲಿ ತೋಯಿಸಿತ್ತು. ಹಸಿ ಕೋರಡೆಪೆಟ್ಟು ಬಹು ಭಯಂಕರ. ಆ ಕೋರಡೆಯನ್ನೇ ನಾನು ನೋಡುತ್ತಿದ್ದೆ. ನೀರಿನ ಒಂದು ಹನಿ ಅದರ ತುದಿಗೆ ಇಳಿಯುತ್ತ ಬಂದಿತು. ಕೆಲ ವೇಳೆ ನಡುಗಿ ಪಟಕ್ಕನೆ ಬಿದ್ದು ಹೋಯಿತು.

ಕ್ರಾವುಸ ವಿಚಾರಿಸಿದನು. "ಆ ಹುಡುಗಿ ಯಾರು? ಹೇಳು.

ಉತ್ತರಕೊಡದೇ ನಾನು ತಲೆ ಕೆಳಗೆ ಮಾಡಿದೆ.

ಕೂಡಲೇ ಕೋರಡೆ ಛಟಾಯಿಸಿದನು. ನನ್ನ ಮೋರೆಯಮೇಲೆ ಯಾರೋ ಕುದಿಯುವ ನೀರು ಉಗ್ಗಿದಂತಾಯಿತು.

ಸುತ್ತಲಿದ್ದ ಜನ ಬಿದ್ದು ಬಿದ್ದು ನಕ್ಕರು.

ಹರ್ಥಾರ್ ಜೇಸ್ಸಳೆಂದಳು. "ಸರಿಯಾಯಿತು."

ಕ್ರಾವುಸ ಪುನಃ ಕೇಳಿದ. "ಆ ಹುಡುಗಿ ಯಾರು ?"

"ನನಗೆ ಗೊತ್ತು....ಇಲ್ಲ."

ಪುನಃ ಕೋರಡೆಪೆಟ್ಟು ಈ ಕಿವಿಯಿಂದ ಆ ಕಿವಿಯವರೆಗೆ ಯಾವುದೋ ತೀಕ್ಷ್ಣಧಾರೆಯ ಶಸ್ತ್ರ ಒಡಿದಂತಾಯಿತು. ಕಣ್ಣಿಗೆ ಕತ್ತಲೆ ಕವಿದಿತು. ತಲೆಯಲ್ಲಿ ಚೂರಿ ತೆಗೆದುಕೊಂಡು ಇರಿದಂತಾಯಿತು. ನನ್ನ ಬಿರಸು ಹೋಯಿತು. ಕಾಲು ನಡುಗಿದವು. ಮತ್ತು ಬಾಯಿಂದ ನರಳುವ ಸ್ವರ ಹೊರಬಿದ್ದಿತು.

"ಈಗಾದರೂ ಹೇಳು. ಆ ಹುಡುಗೆಯ ಹೆಸರು."

"ನನಗೆ ಹೇಳಲು ಗೊತ್ತಿಲ್ಲ..ನಾನು ಅವಳನ್ನು ಗುರುತಿಸುವದಿಲ್ಲ."

ಕ್ರಾವುಸನ ಮುಖಮುದ್ರೆ ಸಂತಾಪದಿಂದ ಉಗ್ರವಾಗಿತ್ತು. ಖಡ ಖಡ, ನನ್ನ ಮೋರೆಯಮೇಲೆ ಕೋರಡೆ ಪೆಟ್ಟು ಹಾಕಿದ. ನನ್ನ ಮೋರೆ ಎಲ್ಲ ಛಿದ್ರವಾಗುವದೆಂದೆನಿಸಿತು. ಮೋರೆ ಮುಚ್ಚಿಕೊಳ್ಳಲಿಕ್ಕೆ ಕೈಮೇಲೆ ಮಾಡಲು ಯತ್ನಿಸಿದೆ. ಕೈಬೇಡಿ ಝಣಕ್ಕನೆ ಧ್ವನಿ ಮಾಡಿದವು. ನಾನು ಚೀರಿಕೊಂಡೆ.

"ಆ ಹುಡುಗೆ ಯಾರು? ಈಗಾದರೂ ಹೇಳುವೆಯೋ ?"

ಅಸಹ್ಯ ವೇದನೆಯಿಂದ ನಾನು ಎಚ್ಚರಪಟ್ಟಿದ್ದೆ. ಒಮ್ಮೆಲೇ ಗೋಡೆಯ ಸಿಟ್ಟಿಗೆ ಓಡಿದೆ, ಆದರೆ ಎರಡು–ಮೂರು ಜನ ನನ್ನನ್ನು ಹಿಡಿದು ಮೊದಲ ಸ್ಥಳದಲ್ಲಿಯೇ ನಿಲ್ಲಿಸಿದರು.

"ಆಕೆ ಯಾವ ಹುಡುಗೆ? ಅವಳ ಹೆಸರೇನು ?"

"ಆಕೆ....ಆಕೆ...."

"ಹುಂ ಹೇಳು. ಹೇಳು. ಹೇಳಿಬಿಡು."

ಆಗ ನನಗೇನೂ ತಿಳಿಯುತ್ತಿರಲಿಲ್ಲ.

ಕ್ರಾವುಸ ಗದ್ದರಿಸಿದನು. ಆ ಹುಡುಗೆಯಾರು? ಹೇಳು. ಇಲ್ಲವಾದರೆ ನಿನ್ನ ಎಲುಬು ಮುರಿಯುತ್ತೇನೆ ನೋಡು."

ನಾನು ಓಡುತ್ತ ಹೇಳಿದೆ. "ಆಕೆ ಗಾಡಿಯಲ್ಲಿ ಭೆಟ್ಟಿಯಾದಳು."

"ಯಾವ ಗಾಡಿ?"

"ನಾನು ಕೋಪನಹೆಗನದಿಂದ ಬಂದ ಗಾಡಿ."

ಆಗ ನನ್ನ ಕೈಹಿಡಿದವನು ಬಿಟ್ಟಂತೆ ತೋರಿತು.

ಕ್ರಾವುಸನೆಂದ. "ಹಾ ಹಾ ಪ್ರವಾಸದ ಕತೆ ಹೇಳಹತ್ತಿದೆ. ಎಷ್ಟು ಬಾರದೇ. ಭಲೆ, ಕೋಪನಹೆಗನದಿಂದ ನೀನು ಇಲ್ಲಿಗೆ ಬಂದೆ ಏನು?"

"ಹೌದು."

"ಈ ಹುಡುಗೆ ನಿನ್ನ ಡಬ್ಬಿಯಲ್ಲೇ ಇದ್ದಳೋ? ನಿನಗೆ ಸಹಾಯ ಮಾಡಲಿಕ್ಕೆಂದು ಕಾಮಿಂಟರ್ನದವರು ಕಳಿಸಿದ್ದರಲ್ಲವೇ?"

"ಆಕೆ ಗಾಡಿಯಲ್ಲಿ ಇದ್ದಳು ಅಷ್ಟೇ. ಕಾಮಿಂಟರ್ನಕ್ಕೆ ಆಕೆಯ ಸಂಬಂಧವಿರಲಿಲ್ಲ."

"ನಿನ್ನದು ಮಾತ್ರ ಇತ್ತು."

"ಇಲ್ಲ."

"ಹಾಗಾದರೆ ನಿನಗೆ ಹೇಗೆ ಭೆಟ್ಟಿಯಾದಳು ಹೇಳು."

"ಆಕೆ ನನ್ನ ಮುಂದಿನ ಬಾಕಿನ ಮೇಲೆ ಕುಳಿತಿದ್ದಳು. ನನ್ನ ಒಳಿಯಲ್ಲಿ ಸಿಗಾರೇಟು ಬೇಡಿದಾಗ ಗುರುತು ಆಯಿತು.

"ಇದು ಎಂದಿನ ಮಾತು?"

"ನಿನ್ನೆಯದು."

"ಈದಿನ ನೀನು ಗಾರ್ಡನಕ್ಕೆ ಕರೆದುಕೊಂಡು ಹೋದುದೇಕೆ?

"ಸುಮ್ಮನೇ.."

ಕ್ರಾವುಸನೆಂದ. "ನೀವಿಬ್ಬರೂ ಕೂಡಿಕೊಂಡು ಗೊತ್ತುಮಾಡಿಕೊಂಡ ಸುಳ್ಳು ಗುಳಿಗೆ ಇವು. ನೀನು ನಿನ್ನೆ ಬಂದುದು ಸುಳ್ಳು. ಎಷ್ಟೋ ವಾರಗಳ ಹಿಂದೆ ನೀನು ಜರ್ಮನಿಗೆ ಬಂದಿರುತ್ತಿ. ಬರ್ಲಿನ ಮತ್ತು ಹಾಂಬುರ್ಗದ ಸಿಪಾಯರು ನಿನ್ನ ಮೇಲೆ ಪಾಳತಿ ಇಟ್ಟಿದ್ದರು. ತೋಟದಲ್ಲಿ ನೀವು ಮೂರು ಜನರಿದ್ದಿರಿ. ನಾಝೀ ಸರಕಾರದ ವಿರುದ್ಧ ಅಸಂತೋಷ ಹರಡುವ ನಿಮ್ಮದೊಂದು ಗುಂಪಿಗೆ, ಗುಂಪೇ ಇರುತ್ತದೆ. ನಮ್ಮಲ್ಲಿ. ರಿಪೋರ್ಟ ಇಲ್ಲವೆಂದು ನೀನು ತಿಳಿಯುವೆಯೋ? ಏನು.

ನಾನು ಸುಮ್ಮನಿದ್ದೆ.

" ವಾಲವೆಬರನು ಸಧ್ಯಕ್ಕೆ ಕೋಪನಹೆಗನದಲ್ಲಿ ಇರುವನೋ ? "

" ನನಗೆ ಗೊತ್ತಿಲ್ಲ. ವಾಲವೆಬರನ ಗುರುತು ನನಗೆ ಇಲ್ಲ. "

" ಜರ್ಮನಿಯಲ್ಲಿ ನೀನು ಯಾವ ಕೆಲಸಕ್ಕೆಂದು ಬಂದದ್ದು ? ವಾಲವೆಬರನ ಹುಕುಮು ನಿನಗೆ ಏನಿತ್ತು ?

" ವಾಲವೆಬರನು ನನಗೆ ಯಾವ ಹುಕುಮುನ್ನೂ ಕೊಟ್ಟಿಲ್ಲ. ಅವನ ನನ್ನ ಗುರುತು ಇಲ್ಲ. "

" ನಿನಗೆ ಸಿಗಾರೇಟ ಬೇಕೋ ? "

" ಬೇಕು. "

ಸಿಗಾರೇಟು ಕೊಟ್ಟ. ನಾನು ಸೇದಹತ್ತಿದಕೂಡಲೇ ಮಿತ್ರತ್ವದ ಆವಿರ್ಭಾವ ತಂದುಕೊಂಡು ಹೆಗಲಮೇಲೆ ಕೈಹಾಕಿ ಮಾತಾಡಿದನು. "ನನ್ನ ಮಾತು ಕೇಳು. ನಮ್ಮಿಬ್ಬರಲ್ಲಿ ಗೆಳೆತನ ಕೂಡಲು ಸಾಧ್ಯವದೆ. ನಿನ್ನ ಕತೆ ಮುಗಿದಿತೆಂಬುದು ಸ್ಪಷ್ಟ ಕಾಣಹತ್ತಿದೆ. ನಮ್ಮ ಕೈಯ್ಯಲ್ಲಿ ಮನುಷ್ಯ ಸಿಕ್ಕನೆಂದರೆ, ಅವನ ಮುಂದೆ ಎರಡು ಮಾರ್ಗ ಇರುವವು. ಒಂದರಲ್ಲಿ ಸುಖ, ಇನ್ನೊಂದರಲ್ಲಿ ದುಃಖ. ದುಃಖದ ಮಾರ್ಗ ಹಿಡಿದರೆ ಅದಕ್ಕೇನೂ ಕೊಡಬೇಕಾಗಿಲ್ಲ. ಸುಖದ ಮಾರ್ಗಕ್ಕೆ ಬೆಲೆ ಕೊಡಬೇಕು. ಎಂದರೆ ನಿಮ್ಮ ಕಾಮಿಂಟರ್ನದ ಎಲ್ಲಾ ಮಾಹಿತಿ ಹೇಳಬೇಕು. ನೀನು ಕಾಮಿಂಟರ್ನ ದಲ್ಲಿ ಬಹುದಿನ ನೌಕರ. ಹೇಳಿದರೆ ನಿನಗೆ ದುಃಖವಿಲ್ಲ. ಇಲ್ಲವಾದರೆ ನಿನ್ನ ಪಾಡು ದೇವರು ಬಲ್ಲ. "

ನನ್ನ ಬಾಯಲ್ಲಿ ಸಿಗಾರೇಟಿರುವದು ಪಥ್ಯಕರವೆನಿಸಿತು. ವಿಚಾರಕ್ಕೆ ವೇಳೆ ದೊರೆತಂತಾಯಿತು. ನನ್ನ ವೈಯಕ್ತಿಕ ಸುಖ-ದುಃಖ ವಿಚಾರ ಉಳಿಯಲಿಲ್ಲ. ವ್ಯಕ್ತಿ ನಷ್ಟವಾದರೂ ನಡೆದೀತು. ಪಕ್ಷ ಚಿರಸ್ಥಾಯಿ ಯಾಗಬೇಕು. ಇದನ್ನೇ ಮನಸ್ಸು ದೃಢಮಾಡಿಕೊಂಡಿತ್ತು. ಛಲಕ್ಕಂಜಿ ಪಕ್ಷದ ಘಾತಮಾಡಿದೆ; ಎಂದು ನನ್ನ ದುಷ್ಕೀರ್ತಿ ಆಗಿ ಪ್ರಯೋಜನವಿಲ್ಲ! ಬಾಯಿಂದ ಏನೂ ಬರುವಂತಿಲ್ಲ!....

ಹಠಾರ್ ಜೇಸ್ಸಳು ಕಾಲುಕೆರೆದುಕೊಂಡು ಕ್ರಾವುಸನಿಗೆ ಕೇಳಿದಳು. " ನಾವು ತಡೆದಕಾರಣವೇನು ? "

ಕ್ರ್ಯಾವುಸನೆಂದ. "ನಾನು ಹೇಳಿದುದನ್ನು ವಿಚಾರ ಮಾಡಿಕೊಂಡೆಯೋ?"

"ನಾನಂದೆ." "ನನಗೆ ಗೊತ್ತಿಲ್ಲದ್ದನ್ನು ನಾನು ಹೇಳುವದು ಶಕ್ಯವೇ ಇಲ್ಲ."

ಇನ್ನೂ ನಾನು ಪೂರ ಹೇಳಿರಲಿಕ್ಕಿಲ್ಲ. ಮೋರೆಯಮೇಲೆ ಛಟಾರನೆ ಕೋರಡೆ ಪೆಟ್ಟುಬಿದ್ದಿತು.

"ನಿನ್ನನ್ನು ಜರ್ಮನಿಗೆ ಅಟ್ಟಿದವರಾರು ಹೇಳು."

"ಯಾರೂ ಅಟ್ಟಿಲ್ಲ."

"ಹಾಗಾದರೆ ಬಂದುದೇಕೆ? ನಾವು ಹಿಡಿಯಲಿಕ್ಕೆ ಸಿದ್ಧರಿದ್ದೇವೆ. ಎಂಬುದು ನಿನಗೆ ಗೊತ್ತಿದ್ದಿತು. ಮತ್ತೆ ಬೇರೆ ಖೊಟ್ಟಿ ಪಾಸಪೋರ್ಟ್ ಏಕೆ ಬಂದೆ?"

"ನನ್ನ ಹುಡುಗನ ಶೋಧಮಾಡಲಿಕ್ಕೆ ನಾನು ಬಂದೆ."

ಹರ್ಥಾ ಜೇಸ್ಸ ನಗುತ್ತ ಹೇಳಿದಳು. "ನಿನ್ನ ಮಗನು ಸುಖರೂಪವಾಗಿದ್ದಾನೆ. ನಿನ್ನ ಹೆಂಡತಿ ಒಂದು ಸರಕಾರದ ಸ್ವಾಧೀನವಾದರೆ ಮಾತ್ರ ಎಲ್ಲರ ಭೆಟ್ಟಿ."

"ನೀನು ತುಸು ಸುಮ್ಮನಿರು." ಎಂದು ಆಕೆಯನ್ನು ಬೆದರಿಸಿ, ಕ್ರ್ಯಾವುಸ ನನ್ನನ್ನು ವಿಚಾರಿಸಿದನು. "ನೀನು ನಿನ್ನ ಹುಡುಗನ ಸಲುವಾಗಿ ಇಲ್ಲಿಗೆ ಬಂದೆ ಎಂಬುದು ಪಕ್ಕಾ ಸುಳ್ಳು. ಬರ್ನಾ ಇಸ್ಟರನದೂ ನಿನ್ನದೂ ಏನು ಸಂಬಂಧ? ಒಳ್ಳೇ ಮಾತಿನಿಂದ ಹೇಳು. ಅವನನ್ನು ನಾವು ಹಿಡಿದಿದ್ದೇವೆ. ಅವನಿಂದ ಎಲ್ಲ ಮಾಹಿತಿ ತಿಳಿದುಹೋಗಿದೆ."

ಇದನ್ನು ಕೇಳಿ ಎದೆಗೆ ಮತ್ತೊಂದು ಪೆಟ್ಟು ಬಿದ್ದಹಾಗಾಯಿತು. ಬರ್ನಾರ್ ಇಸ್ಟರನೆಂದರೆ ಅವನೊಬ್ಬ ದಪ್ಪ-ಲಕ್ಕರಾಕ್ಷಸ. ಅವನನ್ನು ಹಿಡಿದಿರಬಹುದೇ?

"ಹೇಳು ಬರ್ನಾರ್ ಇಸ್ಟರನಿಗೆ ಎಂದು ಭೆಟ್ಟಿಯಾಗಿದ್ದಿ?"

"ಆರು ತಿಂಗಳಾಯಿತು. ಅವನ ದರ್ಶನವಿಲ್ಲ."

"ಹೀಗೋ? ಅವನು ಹೇಳುತ್ತಾನೆ; ತೋಟದಲ್ಲಿ ತುಸು ವೇಳೆಯ ಮೇಲೆ ನೀನು ಭೆಟ್ಟಿಯಾಗಿ ಹಣಕೊಟ್ಟೆಯಂತೆ."

" ಶಕ್ಯವೇ ಇಲ್ಲ. "

" ತೋರಿಸುತ್ತೇನೆ. " ಹೀಗೆಂದು ಇನ್ಸಪೆಕ್ಟರ ಕ್ರಾವುಸ ಹೊರಗೆಲ್ಲಿಯೋ ಹೋದ. ಸುತ್ತಲೂ ನೆರೆದ ಗೆಸ್ಟಪೋ ಜನ ಅಲ್ಲದ-ಸಲ್ಲದ ಬೈಗಳ ಮಳೆ ನನ್ನ ಮೇಲೆ ಕರೆಯಹತ್ತಿದರು. ಹರ್ಥಾ ಜೇನ್ಸಳು ನನ್ನ ಮುಂದೆ ಬಂದು ಕುರ್ಚಿಯಲ್ಲಿ ಕುಳಿತಾಕೆ ನಗುತ್ತ ನನಗೆಂದಳು. " ಹಿಂದಿನ ಕಾಲ ಈಗ ಉಳಿದಿಲ್ಲ. ನೀನು ಇಲ್ಲಿ ಭೆಟ್ಟಿಯಾದುದಕ್ಕೆ ಆನಂದವಾಯಿತು."

ಆಚೆಯ ಒಂದು ಬಾಗಿಲು ಧಡಕ್ಕನೆ ತೆರೆಯಿತು. ಯಾರೋ ವಚ್ಚಿರಬಹುದು. ಬರ್ನಾರ್ ಇಸ್ಟರ ಒಂದು ಬಿದ್ದ. ಸಾವರಿಸಿ ಎದ್ದು ನಿಂತ. ಕಲ್ಲುಬಂಡೆಹಾಗಿದ್ದ ಅವನ ಎದೆ ಹಾರುತ್ತಿರಬೇಕು. ಕ್ರಾವುಸ ಮರಳಿ ಬಂದವನೇ ಅವನನ್ನು ಕೇಳಿದ.

" ಏ. ನೀನು ಮಾತಾಡುವ ಅವಶ್ಯವಿಲ್ಲ. ನಾನು ಪ್ರಶ್ನ ಕೇಳುತ್ತೇನೆ. ನೀನು ತಲೆಹಾಕಿ ಹೌದು, ಅಲ್ಲವೆಂದು ಹೇಳುತ್ತಿರು.

ಬರ್ನಾರ್ ಇಸ್ಟರನ ಅರ್ಧ ಮೈಮೇಲೆ ಬಟ್ಟೆಗಳಿರಲಿಲ್ಲ. ಮುಖದ ಮೇಲೆ ಬಾಸುಂಡೆ ಕಾಣುತ್ತಿದ್ದವು. ಬೆನ್ನು-ಹೊಟ್ಟೆಗಳ ಮೇಲೆ ಕಪ್ಪು ನೀಲಿ ಬಾಸುಂಡೆ ಬರೆಕೊಟ್ಟಂತಿದ್ದವು. ಅಲ್ಲಲ್ಲಿ ನೆತ್ತರು ಹೊರಟಿತ್ತು. ಇಜಾರು, ಬೂಟುಗಳ ಮೇಲೆ ರಕ್ತದ ಸಿಡಕು ಒಣಗಿಹೋಗಿದ್ದವು.

ಕ್ರಾವುಸ ಅವನನ್ನು ಕೇಳಿದ. " ತೋಟದಲ್ಲಿ ನಿಮಗೆ ಭೆಟ್ಟಿಯಾದವನು ಇವನೇ ಅಲ್ಲವೇ ? "

ಬರ್ನಾರ್ ಇಸ್ಟರ ಸುಮ್ಮನಿದ್ದ.

" ನೀನು ಇಲ್ಲಿ ಬರೆದುಕೊಟ್ಟ ಕಬೂಲಿ ಜವಾಬು ನಿಜವೆಂದು ಹೇಳಿಬಿಡು. "

ಒಮ್ಮೆಲೇ ಜಿಗಿದು ಬರ್ನಾರ್ ಇಸ್ಟರನು ಬಳಿಯಲ್ಲಿದ್ದವನ ಕುತ್ತಿಗೆ ಹಿಸುಕಿದನು. ಒಂದು ಭಯಂಕರ ಹಿಂಸ್ರ ಶ್ವಾಪದದಂತೆ ಗರ್ಜಿಸಿ, ಅವನು ಚೊಬ್ಬಿರಿದನು. " ಏ ಕುತ್ತೇಕಿ ಅವಲಾದ! "

ಹಿಡಿಯಿರಿ! ಹಿಡಿಯಿರಿ. ಎಂದು ಕೋಲಾಹಲವೆದ್ದಿತು. ಎಲ್ಲರು ಮುತ್ತಿಗೆ ಹಾಕಿದರು. ಕ್ರಾವುಸ ಹುಕುಮು ಕೊಟ್ಟನು. " ಎಳೆಯಿರಿ, ಹೊರಗೆ ಎಳೆಯಿರಿ. ಪುನಃ ನ್ಯೈ ಮೆತ್ತಗೆ ಮಾಡಿರಿ. "

ಸಿಂಹದಂತೆ ಬರ್ಮಾ ಇಸ್ಟರ ಗುದ್ದಾಡಿದನು. ಪಹರೆಯವರಲ್ಲಿ ಗುಂಡು ಹಾಕಬೇಕೆಂದು ಒಬ್ಬನು ಪಿಸ್ತೂಲ ತೆಗೆದನು. ಕ್ರಾವುಸ ಬೇಡ ವೆಂದು ಸಂಜ್ಞೆಮಾಡಲು ಅವನು ಬಿಟ್ಟ. ನಾಲ್ಕು ಜನರು ಅವನನ್ನು ಹಿಡಿದಿದ್ದರೂ, ಅವನು ಗುದ್ದುಮುರಿಗೆ ಹಾಕಿದನು. ಕಡೆಗೊಬ್ಬನು ಬಿದ್ದು ಕೊಂಡಿರುವ ಅವನ ಕುತ್ತಿಗೆ ಮೇಲೆ ಬೂಟುಗಾಲು ಹೇರಿದಾಗ, ಅವನ ಗೊಂದಲ ನಿಂತುಕೊಂಡಿತು. ಈಗ ಹರ್ಥಾ ಜೇನ್ಸಳ ಹಾಸ್ಯ ಅಡಗಿದ್ದಿತು. ಇನ್ಸಪೆಕ್ಟರ ಕ್ರಾವುಸನು ತಬ್ಬಿಬ್ಬಾಗಿದ್ದ. ಒಬ್ಬನು ನನ್ನನ್ನು ಸಹ ಗಟ್ಟಿಯಾಗಿ ಹಿಡಿದಿದ್ದನು. ಹುಚ್ಚನಂತೆ ನಾನು ಅದನ್ನೆಲ್ಲ ನೋಡುವದರ ವಿನಾ ಇನ್ನೇನು ಮಾಡುವಹಾಗಿದ್ದೆ!

ಬರ್ಮಾ ಇಸ್ಟರನನ್ನು ಎಳೆದುಕೊಂಡು ಹೋದರು. ಬಾಗಿಲು ಮುಟ್ಟು ವಷ್ಟರಲ್ಲಿ ಅವನು ಕಣ್ಣುತೆರೆದು, ಒಮ್ಮೆಲೇ ಎಲ್ಲರನ್ನೂ ದೂಡಿದ. ಓಡುತ್ತ ಅಲ್ಲಿದ್ದ ಒಂದು ಕಿಟಕಿಯ ಸನಿಯಕ್ಕೆ ಹೋಗಿ ಹಾರಿಕೊಂಡ. ಕಾಜು ಕೂಡಿಸಿದ ಬಾಗಿಲು ಕಟಕಟ ಮುರಿದುಹೋಯಿತು. ಆರು ಅಂತಸ್ತಿನ ಕೆಳಗೆ ಬರ್ಮಾ ಇಸ್ಟರ ಜಿಗಿದಿದ್ದ!

ಅವನಿಗೆ ಬೆನ್ನುಹತ್ತಲು ಎಷ್ಟೋ ಜನ ಓಡಿದರು. ಕ್ರಾವುಸ ಒಂದೇ ಸಮನೆ ಹುಕುಮು ಕೊಡಹತ್ತಿದ್ದ. ಹರ್ಥಾ ಜೇನ್ಸಳು, ಫೋನಿನಿಂದ ಎಲ್ಲ ಪೋಲೀಸ ಠಾಣೆಗಳಿಗೆ ವರದಿಕೊಡಹತ್ತಿದಳು....

* * * * *

ಎಲ್ಲ ಶಾಂತತೆಯಾದಮೇಲೆ ಕ್ರಾವುಸ ನನ್ನ ಕಡೆ ತಿರುಗಿ ಅಂದನು.

"ನಿನ್ನ ಹೆಂಡತಿ ಎಲ್ಲಿದ್ದಾಳೆ? ನಿನ್ನೊಡನೆ ಆಕೆ ಜರ್ಮನಿಗೆ ಬಂದಿರುವಳೋ?"

"ಇಲ್ಲ. ಆಕೆ ಪಾರಿಸದಲ್ಲಿದ್ದಾಳೆ."

"ಕೋಪನಹೆಗನದಲ್ಲಿ ಇಲ್ಲವೇ?"

"ಇಲ್ಲ. ಪಾರಿಸದಲ್ಲಿದ್ದಾಳೆ."

"ನೀನು ತಪ್ಪುವೆ. ನಮ್ಮ ಜನರು ಕೋಪನಹೆಗನದಲ್ಲಿ ಫೋಟೋ ತೆಗೆದುಕೊಂಡದ್ದು, ನಮ್ಮ ಬಳಿಯಲ್ಲಿದೆ."

"ಹೌದು. ಕೋಪನಹೆಗನದಲ್ಲಿದ್ದಾಳೆ."

" ಆಕೆ ಅಲ್ಲಿ ಏನು ಮಾಡುತ್ತಾಳೆ ? "

" ನಾನು ಬಿಟ್ಟುಬಂದಾಗ ಆಕೆ ಉದ್ಯೋಗ ಹುಡುಕುತ್ತಿದ್ದಳು. ಮುಂದಿನದೇನೋ ನನಗೆ ಗೊತ್ತಿಲ್ಲ.

" ನಮಗೆ ಗೊತ್ತಿದೆ. "

ಪಕ್ಷದ ಯಾವ ಕೆಲಸ ಫಿರೇಲಾಯಳಕಡೆಗಿತ್ತೋ, ಅದರ ಯಥಾಸ್ಥಿತ ವರ್ಣನೆ, ಅವನು ಮಾಡಿದನು. ಕೇಳಿ ನಾನು ಸ್ತಂಭಿತನಾದೆ. ಆದರೆ ಆಶ್ಚರ್ಯ ತೋರಿಸಿದೆ ಹೇಳಿದೆನು.

" ನಿಮ್ಮ ಮಾಹಿತಿ ತಪ್ಪು. ನನ್ನ ಹೆಂಡತಿ ಕ್ರಾಂತಿಕಾರಳಲ್ಲ. "

" ಹಾಗಾದರೆ ಜರ್ಮನಿಗೆ ಬರಲು ಆಕೆಗೆ ಏಕೆ ಭಯ ? ಕೋಪನ ಹೇಗನದಲ್ಲಿ ಎಲ್ಲಿರುತ್ತಾಳೆ ? "

" ನನಗೆ ಗೊತ್ತಿಲ್ಲ. "

ಮೋರೆಯಮೇಲೆ ಪೆಟ್ಟುಬಿದ್ದಿತು. ಬರೆಕೊಟ್ಟ ಹಾಗಾಯಿತು.

" ಫಿರೇಲಾಯಳ ವಿಳಾಸ ಹೇಳು. ಮಾತಾಡು. "

" ನನಗೆ ಗೊತ್ತಿಲ್ಲ. "

ಪುನಃ ಕೋರಡೆಪೆಟ್ಟು ! ಗಾಳಿಯಲ್ಲಾದ ಸಪ್ಪಳ ಕಡ ಕಡವೆಂದು ಕೇಳುವದಷ್ಟೇ. ಕೊರಳು ಮೋರೆ ಇಲ್ಲೆಲ್ಲ ಒಂದು ಹಾವು ಸುತ್ತಿ, ಅಲ್ಲಲ್ಲಿ ಧ್ವಂಶಮಾಡಿದಂತೆ ವೇದನೆಯಾಗಿರಬೇಕು. ಕಾಲು ನಡುಗಿ ಸರಳುತ್ತ ಹಾ ಎಂದು ನೆಲಕ್ಕೆ ಬಿದ್ದೆನು. ತಲೆ ಫರಸುಗಲ್ಲಿನ ಮೇಲೆ ಅಪ್ಪಳಿಸಿತು. ಕಣ್ಣು ಮುಚ್ಚಿಕೊಂಡೆ. ನನ್ನ ಪ್ರಾಣ ಇನ್ನೂ ಹೋಗಿಲ್ಲವೆಂಬುದು, ಒಂದು ಆಶ್ಚರ್ಯವೆನಿಸಿತು.

ಕ್ರಾವುಸ ವಿಚಾರಿಸಿದನು. " ಈಗಾದರೂ ಫಿರೇಲಾಯಳ ವಿಳಾಸ ಹೇಳುವೆಯೋ ? "

ಕೋಪನಹೆಗನದಲ್ಲಿ ನೆನಪಿಗೆಬಂದ ಒಂದು ಬೀದಿಯ ಹೆಸರು ಹೇಳಿದೆ.

" ಮನೆ ನಂಬರು ? "

ಬಾಯಿಗೆ ಬಂದಷ್ಟು ಅದನ್ನೂ ಹೇಳಿಬಿಟ್ಟೆ.

" ಒಳ್ಳೇದು. ಈಗ ನನ್ನ ಮೊದಲ ಪ್ರಶ್ನೆಗೆ ಉತ್ತರಕೊಡುವೆಯೋ ? ನಿನ್ನನ್ನು ಜರ್ಮನಿಗೆ ಯಾರು ಕಳಿಸಿದರು ? "

"ಯಾರೂ ಇಲ್ಲ. ನನ್ನ ಹುಡುಗನ ಶೋಧಮಾಡಲಿಕ್ಕೆ ನಾನೇ ಬಂದೆ."

"ಹೇಗೋ? ಈಗ ನಿನಗೆ ಒಳ್ಳೇ ಪೆಟ್ಟು ಹಾಕಬೇಕು." ಎಂದು ಸನಿಯದಲ್ಲಿದ್ದ ಕೋರಡೆಯವನಿಗೆ ಹುಕುಮು ಕೊಟ್ಟನು. "ಮೂವತ್ತು ಫಟಕೀ ಹೊಡೆ. ಸಧ್ಯಕ್ಕೆ ಅಷ್ಟೇ ಸಾಕು."

ತನ್ನ ಕೈ ಜೇಬಿನಲ್ಲಿಟ್ಟುಕೊಂಡು ಆವನು ಹೊರಟುಹೋದನು. ಹರ್ಥಾಜೇನ್ನ ಸಹ ಹೋದಳು. ಹೋಗ ಹೋಗುತ್ತ ಬಾಗಿಲದಲ್ಲಿ ನಿಂತು, ಮೂಗು ಮುರಿದು ಹಾಸ್ಯಮಾಡಿದಳು.

ದಣಿದ ನನ್ನ ಮನಸ್ಸಿನಲ್ಲಿ ವಿಚಾರವೆದ್ದಿತು. "ಮೊದಲನೇ ಒಂದೆರಡು ಫಟಕಿಯಲ್ಲಿಯೇ ನನ್ನ ಎಚ್ಚರದಪ್ಪಿದರೆ ಸರಿಯಾಗುವದು. ಎಂದರೆ– ನನ್ನ ಬಾಯಿಂದ ಅವರಿಗೆ ಬೇಕಾದ ಶಬ್ದಗಳೇ ಹೊರಡುವದಿಲ್ಲ."

ನಾನೇನೂ ಬೆದರಿದ್ದಿಲ್ಲ. ತಣ್ಣಗಿದ್ದೆ. ಕೊನೆಯ ಗಳಿಗೆಯೇ ಬಂದಿತ್ತು.

ಗೆಸ್ಟಪೋದವರು ಇಬ್ಬರು ಮುಂದಾದರು. ನನ್ನ ಮೈಮೇಲಿನ ಅರಿವೆಗಳನ್ನು ಎಳೆದರು. ಒಂದು ಮೇಜಿನಮೇಲೆ ಬೋರಲಾಗಿ ಮಲಗಿಸಿ, ಕೈಕಾಲು ಕಟ್ಟಿಬಿಟ್ಟರು. ಏಕೋ, ಬೆನ್ನಮೇಲೆ ಒದ್ದೆ ಟಾವೆಲ ಹಾಕಿದರು.

ಯಾರೋ ಒದರಿ ಕೇಳಿದರು. "ನಿನ್ನ ಸಹಕಾರಿಗಳ ಹೆಸರು, ವಿಳಾಸ. ಈಗಾದರೂ ಹೇಳುವೆಯೋ, ಇಲ್ಲವೋ?"

ನಾನು ಮಾತೇ ಆಡಲಿಲ್ಲ.

"ವಿಚಾರಮಾಡು. ಐದು ಹೆಸರು ಹೇಳಿದರೆ ಅಷ್ಟೇಸಾಕು. ಕಡೆಯ ಹತ್ತು ಸೆಕಂದು ನಿನಗೆ ಕೊಡುತ್ತೇವೆ.

ಸ್ವತಃ ನಾನೆಂದುಕೊಂಡೆ. "ಮನಸ್ಸಿನಲ್ಲಿ ವಿಚಾರಗಳನ್ನೇ ಬರಗೊಡಿಸುವದಿಲ್ಲ?" ಎಂದು.

ಹತ್ತು ಸೇಕಂದಾದಮೇಲೆ ಹುಕುಮು. "ಹುಂ ಮಾರೋ."

ಹವೆಯಲ್ಲಿ ಛಟಲ್ಲೆಂದ ಸಪ್ಪಳಮಾತ್ರ ಕೇಳಿಸಿತು. ಕಣ್ಣು ಗಟ್ಟಿ ಮುಚ್ಚಿಕೊಂಡೆ. ಮರುಕ್ಷಣದಲ್ಲಿ ಮೈಮೇಲೆ ಪ್ರಹಾರ. ವೇದನೆ ಅಸಹ್ಯವಾಗಿ ನಾನು ಒದ್ದಾಡಹತ್ತಿದೆ.

ಯಾರೋ ಎಣಿಸಹತ್ತಿದರು. “ ಒಂದು!....”

“ ಇಪ್ಪತ್ತೊಂದು....ಇಪ್ಪತ್ತೆರಡು....ಇಪ್ಪತ್ಮೂರು.

ಈಗ ವೇದನೆಯು ಪರಮಾವಧಿ. ಘಟಕೀ ಹೊಡೆಯುವವರ ಶಬ್ದ ಫರಸುಗಲ್ಲಿನ ಮೇಲಾಗುವ ಬೂಟಿನ ಸಪ್ಪಳ, ಇಷ್ಟೇ ಕೇಳುತ್ತಿದ್ದವು ಇಸರಮೇಲಿಂದ ನಾನು ಎಚ್ಚರಡಪ್ಪಿರಲಿಲ್ಲವೆಂದು ನಾನು ತಿಳಿದೆ. ಎಲ್ಲಿಯೋ ವೇಗವಾಗಿ ನಾನು ಸಾಗಿದಂತಾಗಿತ್ತು.

ಮುಂದಿನ ಘಟಕಿಯ ಹೊತ್ತಿಗೆ ನಾನು ಎಚ್ಚರದಪ್ಪಿರಬಹುದು.

ಎಚ್ಚರಬಂದಾಗ ನನ್ನ ತಲೆಮೇಲೆ ತಣ್ಣೀರಿನ ಚಿಮುಕು ಹಾಕುತ್ತಿರುವ ರೆಂದು ನಾನು ತಿಳಿದೆ. ಕೆಲವು ವೇಳೆಯನಂತರ ನಾನು ಸಾಕಷ್ಟು ಜಾಗ್ರತ ನಾದೆನು.

ಇನ್ಸಪೆಕ್ಟರ ಕ್ರಾವುಸ ಮರಳಿಬಂದಂತೆ ಕಾಣಿಸಿತು. ಹಿಂದಿನಿಂದ ಹರ್ಥಾ ಜೇನ್ಸ ಸಹ. ತನ್ನೊಡನೆ ಆಕೆ ಸಣ್ಣದೊಂದು ಟಾಯಿಪರಾಯಿಟರ ತಂದಿದ್ದಳು. ಕ್ರಾವುಸನು ಮೇಜಿನ ಸುತ್ತಲು ಪ್ರದಕ್ಷಿಣೆಹಾಕಿ ನನ್ನ ಮುಂದೆ ನಿಂತು ಅಂದನು. “ ಹೇಗಿದೆ?”

ಕ್ಷಣತಡೆದು ನಾನಂದೆ. “ ನೆಟ್ಟಗೆ. ”

ಒಬ್ಬ ಪಹರೆಯವನು ಸಣ್ಣ ಮೇಜೊಂದನ್ನು ತಂದಿಟ್ಟನು. ಹರ್ಥಾ ಜೇನ್ಸಳು ಅದರ ಮೇಲೆ ಟಾಯಿಪರಾಯಿಟರು ಇಟ್ಟು ಹೇಳಿದಳು.

“ ನಾನು ಸಿದ್ಧ. ”

ಕ್ರಾವುಸ ಹೇಳಹತ್ತಿದ. ಹರ್ಥಾ ಜೇನ್ಸಳ ಬೊಟ್ಟು ಟಾಯಿಪ ರಾಯಿಟರದಮೇಲೆ ಕುಣಿಯಹತ್ತಿದವು. ನನ್ನ ಹೆಸರು ಹುಟ್ಟಿದೂರು ತಾರೀಖು ತಂದೆತಾಯಿಗಳ ವೃತ್ತಾಂತ, ತಾರುಣ್ಯದ ಸಂಗತಿ, ಇಂದಿನ ವರೆಗೆ ಭೋಗಿಸಿದ ಶಿಕ್ಷೆ, ಇತ್ಯಾದಿ ಓದಿಹೇಳಿದನು. ಮುಂದೆ ಅವನು ಹೇಳಿರುವದೇನಂದರೆ—

“ ಕಾಮಿಂಟರ್ನದ ತೈನಾತಿಯಲ್ಲಿದ್ದು ದೇಶದ್ರೋಹದ ಕಾರ್ಯ ಮಾಡುತ್ತಿರುವ ಸಂಶಯದಿಂದ ತಾರೀಖು ೩೦ ನವಂಬರ ೧೯೩೩ ಹಗಲು ಹಾಂಬುರ್ಗದ ಬೋಟಾನಿಕಲ ಗಾರ್ಡನ್ನದ ಹತ್ತರ ಹಿಡಿಯಲ್ಪಟ್ಟ. ಮೇಲಿನ

ವರ್ಣನೆಯುಳ್ಳ ಆರೋಪಿ ತನ್ನ ಖುಷಿಯಿಂದ, ವ ಅಕ್ಕಲಹುಷಾರಿಯಿಂದ ಇವತ್ತಿನದಿವಸ ಮುಂದಿನ ಜವಾಬು ಬರೆದುಕೊಡುತ್ತಾನೆ.''

ಆಮೇಲೆ ಕ್ರಾವುಸ ನನ್ನ ಕಡೆಗೆ ಹೊರಳಿ ಹೇಳಿದನು. '' ಇನ್ನು ಮುಂದಿನ ಮಜಕೂರು ನೀನು ಹೇಳಬೇಕು. ಹೇಳುವೆಯೋ? ಇಲ್ಲವೋ?''

'' ಹೇಳುತ್ತೇನೆ. ''

''ಕಾಮಿಂಟರ್ನದವರು; ನಿನಗೊಪ್ಪಿಸಿದ ಮೊದಲಕೆಲಸ ಏನು? ಮತ್ತು ಅದರ ಮಿತಿ? ''

ಇದನ್ನು ಕೇಳುವಾಗ ಕೋರಡೆಯ ತುದಿಯಿಂದ ಪ್ರತಿಶಬ್ದಕ್ಕೂ ಬೆನ್ನಿಗೆ ತಿವಿಯುತ್ತಿದ್ದ

ನಾನಂದೆ. '' ಕಾಮಿಂಟರ್ನದವರು ನನ್ನನ್ನು ಕಳಿಸಿಲ್ಲ. ನಾನೇ ಒಂದದ್ದು.... ''

ಕ್ರಾವುಸ ಹಥ್ಥಾ ಜೇನ್ಸನಿಗೆ ಹೇಳಹತ್ತಿದ. '' ಹಿಟ್ಲರನ ಸತ್ತೆಯನ್ನು ನಾಶಮಾಡುವ ಹೇತುವಿನಿಂದ, ಕಾಮಿಂಟರ್ನದ ಪಗಾರೀ ಪ್ರಚಾರಕನೆಂದು, ಆರೋಪಿಯು ಜರ್ಮನಿಗೆ ಬಂದು, ಅದನ್ನು ಒಪ್ಪುವದಿಲ್ಲ. ಜರ್ಮನ ಸರಕಾರದ ವಿಷಯಕ್ಕೆ ಎಷ್ಟು ದ್ವೇಷ ಇವನಲ್ಲಿದೆ?

ಅರ್ಥ ತನ್ನಷ್ಟಕ್ಕೆ ಗುಣುಗುಟ್ಟಿದ. '' ಈ ಕಡೆಯ ವಾಕ್ಯ ಕೋರ್ಟಿಗೆ ರುಚಿಸುವದರಲ್ಲಿ ಸಂದೇಹವಿಲ್ಲ. '' ನಂತರ ನನ್ನನ್ನು ವಿಚಾರಿಸಿದನು. '' ಹಾಂಬುರ್ಗದಲ್ಲಿ ನಿನ್ನ ವಸತಿ ಎಲ್ಲಿತ್ತು ''

'' ಒಂದೇ ಸ್ಥಳದಲ್ಲಿ ನಾನು ಇರುತ್ತಿರಲಿಲ್ಲ. ಬಹುಶಃ ಹಾಟೇಲದ ಒಂದು ಕೋಣೆ ಹಿಡಿದು ನಾನು ಇರುತ್ತಿದ್ದೆ.''

'' ಬದಮಾಷ! ಬಿಲಕುಲ ಝೂಟ! '' ಹೀಗೆ ಗದ್ದರಿಸಿ ಮತ್ತೆ ಪೆಟ್ಟು ಹಾಕಿದನು.

ಅವನದು ಅದೇ ಪ್ರಶ್ನೆ. ನನ್ನದು ಅದೇ ಉತ್ತರ. ನನ್ನ ಉತ್ತರ ಹೊರಬೀಳುವಷ್ಟರಲ್ಲಿ ಕೋರಡೆಪೆಟ್ಟು ಹಾಕುವದು. ಎಷ್ಟೋ ವೇಳೆ ನಡೆದಿತ್ತು ಹೀಗೆ.

ಕ್ರಾವುಸ ನನಗೆ ಹೇಳಿದ. '' ನೀನು ಎಷ್ಟು ಮೂರ್ಖನಿರುವೆ? ಎಲ್ಲೋ ಕುಸಿನೆನ, ಪಿಅಟನಿಟ್ಸ್ಕೀ, ವಾಲವೆಬರ ಮುಂತಾದ ದೊಡ್ಡ

ಕಳ್ಳರನ್ನು ಹಿಡಿದು ಹೀಗೆ ಮೈಮೆತ್ತಗೆ ಮಾಡಿದ್ದರೆ, ಐದು ಮಿನಿಟಿನಲ್ಲಿ ನಮಗೆ ಬೇಕಾದ ಕಬೂಲಿ ಜವಾಬು ಕೊಟ್ಟು, ಬಿಡುಗಡೆಯಾಗಲು, ಅವರೇನೂ ಹಿಂದೆಮುಂದೆ ನೋಡುತ್ತಿರಲಿಲ್ಲ. "

ನಾನೇನೂ ಉತ್ತರಕೊಡಲಿಲ್ಲ. ನಾನು ಜೀವದಿಂದಿರುವೆನೋ, ಸತ್ತಿರುವೆನೋ, ನನಗೇ ತಿಳಿಯದಂತಾಗಿತ್ತು. ಮೈಬೆವರು ಮತ್ತು ರಕ್ತದಿಂದ ಬೆನ್ನು ತೊಯ್ದುಹೋಗಿತ್ತು. ಎಡಗೈ ಬಾತು ತಿದಿಯಂತೆ ಉಬ್ಬಿಕೊಂಡಿದ್ದಿತು.

ಮತ್ತೆ ಕ್ರಾವುಸ ಕೇಳಿದ. "ಹುಂ. ನನ್ನ ಪ್ರಶ್ನೆಗಳಿಗೆ ಸರ ಸರ ಉತ್ತರಕೊಟ್ಟುಬಿಡು. ಗೆಸ್ಟಪೋ ಅಧಿಕಾರಿಗಳ ವೇಳೆ ಕಾರಣವಿಲ್ಲದೇ ಕಳೆಯುವದು ಸಹ ಅಪರಾಧ. ಅದಕ್ಕೆ ಭಾರಿ ಶಿಕ್ಷೆಯದೆ ಎಂಬುದು ನಿನಗೆ ಗೊತ್ತಿರುವದಷ್ಟೇ ?"

"ಹೌದು, ಗೊತ್ತದೆ."

"ಅಂದಮೇಲೆ ಹೇಳು. ಹಾಂಬುರ್ಗದಲ್ಲಿ ಅಡಗಿ ದೇಶದ್ರೋಹದ ಉದ್ಯೋಗ ಮಾಡುವಾಗ ನಿನ್ನ ವಸತಿ ಎಲ್ಲಿತ್ತು ? "

ನಾನು ಉತ್ತರಿಸಲಿಲ್ಲ.

ಬಳಿಯ ಪಹರೆಯವನಿಗೆ ಕ್ರಾವುಸ ಹೇಳಿದ. "ಪಂಧ್ರಾ ಘಟಕೆ ಲಗಾವ."

ಆ ಯಾತನೆ ತಾಳುವ ಶಕ್ತಿ ನನ್ನಲ್ಲಿ ಉಳಿದಿರಲಿಲ್ಲ. ನಾನು ಕೂಗಿಕೊಂಡೆ. "ಬೇಗನೆ ಪ್ರಾಣತೆಗೆದುಬಿಡಿ. ಗುಂಡುಹಾಕಿರಿ!"

ನಾನು ಎಷ್ಟು ವೇಳೆ ಕೂಗಿಕೊಂಡೆನೋ ಯಾರು ಬಲ್ಲರು ?

ಕೋರಡೆಪೆಟ್ಟು ಇದ್ದೇ ಇತ್ತು. ಕ್ರಾವುಸನದು ಪುನಃ ಪುನಃ ಅದೇ ಪ್ರಶ್ನೆ. ನಾನು ಕೂಗುವದು.

"ಇನ್ನು ಸಾಕು. ಗುಂಡುಹಾಕಿಬಿಡಿ."

ಮುಂದೆ ನಾನು ಎಚ್ಚರದಪ್ಪಿರಬೇಕು.

ನಾನು ಜಾಗ್ರತನಾದಾಗ ಸೂರ್ಯಪ್ರಕಾಶ ತೋರಿತು. ಮೈಗೇನೋ ಔಷಧ ಲೇಪಿಸಿದಂತಿದ್ದಿತು. ಅದರ ವಾಸನೆ ಬರುತ್ತಲಿತ್ತು. ಒಂದು ಸಣ್ಣ ಕಾಟಿನಮೇಲೆ ಮಲಗಿಸಿದ್ದಾರೆ. ಮೈಮೇಲೆ ಒಂದೂ ವಸ್ತ್ರವಿರಲಿಲ್ಲ.

ಬೋರಲಾಗಿ ನಾನು ಬಿದ್ದುಕೊಂಡಿದ್ದೆ. ನನ್ನ ಭುಜ ಮತ್ತು ಕಾಲುಗಳನ್ನು ಸರಪಳಿಯಿಂದ ಕಾಟಿನ ಕಾಲುಗಳಿಗೆ ಬಿಗಿದಿದ್ದರು. ಎಡಗೈಗೆ ಬ್ಯಾಂಡೇಜು ಕಟ್ಟಿತ್ತು. ಇವೆಲ್ಲ ಸಂಗತಿಗಳು ಒಂದೊಂದಾಗಿ ನನಗೆ, ಸಾವಕಾಶ ತಿಳಿದು ಬಂದವು. ನನಗೆ ಸಂವೇದನಾ ಶಕ್ತಿ ಉಳಿದಿರಲಿಲ್ಲವೇನೋ? ಏನೂ ಕೇಳಿಸುತ್ತಿದ್ದಿಲ್ಲ. ತಲೆ ಎತ್ತಬೇಕೆಂದು ಯತ್ನಿಸಿದೆ. ಚಕ್ರ ತಿರುಗಿದಂತಾಗಿ ಬಿದ್ದುಕೊಂಡೆ. ಮುಂದೇನಾಯಿತೋ ಅದು ತಿಳಿಯಲಿಲ್ಲ. . . .

## ೧೮

ನನ್ನಿಂದ ಬೇಕೆನಿಸುವ ಕಬೂಲಿ ಜವಾಬು, ತೆಗೆದುಕೊಳ್ಳಬೇಕೆಂದು ಸುಮಾರು ಮೂರು ತಿಂಗಳು ಛಲ ಸಾಗಿತು! ಕೈಕಾಲುಗಳಲ್ಲಿ ಭಾರವಾದ ಬೇಡಿಗಳು. ಒಬ್ಬನೇ ಕತ್ತಲೆಯ ಕಿರು ಕೊಟ್ಟಡಿಯಲ್ಲಿ ಇರುವದು. ಆ ದೀರ್ಘ ಅವಧಿಯಲ್ಲಿ ಹಜಾಮತಿ ಸಹ ಆಗಿರಲಿಲ್ಲ. ಸ್ನಾನಕ್ಕೆ ನೀರು ಸಿಗಲಿಲ್ಲ. ಸಾಬಾಣವನ್ನಂತೂ ಕಣ್ಣಿಂದಕೂಡ ನೋಡಲಿಲ್ಲ. ನಾನು ಪತ್ರ ಬರೆಯಲಾಗದು. ಯಾರದಾದರೂ ಬಂದರೆ ನನಗೆ ಸಿಗಲಾರದು. ಒಟ್ಟು ಜಗತ್ತಿನಿಂದ ನಾನು ದೂರಾಗಿದ್ದೆನು. ಮನುಷ್ಯರ ಸಹವಾಸವೇ ನನಗೆ ಇರಲಿಲ್ಲ. ಪ್ರೇಮೀ ಜೀವಿಗಳಿಗೆ ಮೊದಲ ರಾತ್ರಿಯ ಪ್ರೇಮಾಲಿಂಗನದ ಉತ್ಕಂಠೆ ಎನಿಸುವಂತೆ ಮೃತ್ಯುವಿನ ಆಲಿಂಗನದ ಉತ್ಕಂಠೆ ನನಗೆ ಹೆಚ್ಚಿದ್ದಿತು.

ಪ್ರತಿದಿನವೆಂದರೂ ಸರಿಯೇ. ನನ್ನ ಕತ್ತಲೆ ಕೊಟ್ಟಡಿಯಿಂದ ಹೊರಡಿಸಿ, ಆರನೇ ಅಂತಸ್ತಿನಲ್ಲಿರುವ ಛಲಗೃಹಕ್ಕೆ ಒಯ್ಯುತ್ತಿದ್ದರು. ಅಲ್ಲಿಗೆ ಹೋದಾಗ, ಆ ದಿನ ಬರ್ಮಾ ಇಸ್ಪರನು, ಹಾರಿದಂತೆ, ಹಾರ ಬರಬಹುದೇನೋ, ಎಂದು ನನ್ನ ಕಣ್ಣು ಕಿಟಿಕಿಗಳನ್ನೆಲ್ಲ ನೋಡುತ್ತಿದ್ದವು. ಆದರೆ ಮುಕ್ತತೆಯ ಆ ಮಾರ್ಗವೂ ನನಗೆ ತೆರೆದಿರಲಿಲ್ಲ. ನನ್ನ ಬೇಡಿ ಹಾಕಿದ ಕೈಗಳಿಗೆ ಕಟ್ಟಿದ ಹಗ್ಗ ಪಹರೆಯವನ ಕೈಯಲ್ಲಿರುತ್ತಿದ್ದವು. ಕೊಟ್ಟ ಹೊದಿಕೆ ಹರಿದು ಚಿಂದಿಮಾಡಿ ಅದರ ಹಗ್ಗದಿಂದ ಉರಲು ಹಾಕಿಕೊಳ್ಳಬೇಕೆಂದು ನಾನು ಯತ್ನಿಸಿದೆ. ಅದು ಸಾಧಿಸಿದಂತಾದ ಕೂಡಲೆ ಸಂತಾಪದಿಂದ ಕೊಟ್ಟಡಿಯ ಕಲ್ಲಗೋಡೆಗೆ ತಲೆ ಅಪ್ಪಳಿಸಿಕೊಂಡೆ. ಮೃತ್ಯುವೇನೂ

ಬರಲಿಲ್ಲ. ತಲೆಯೊಡೆದು ಎಚ್ಚರದಪ್ಪಿ ಬಿದ್ದೆ ಅಷ್ಟೆ. ಮುಂದೆ ಎಷ್ಟೋ ದಿನ ಆ ನೋವಿನ ವ್ಯಥೆ ತಾಳುವದೊಂದು ಪಾಲಿಗೆ ಬಂದಿತು.

ಅಪ್ಪಿ ತಪ್ಪಿ, ಎಂದಾದರೂ ತುಸು ನಿದ್ದೆಹತ್ತಿದರೆ ಚಮತ್ಕಾರಿಕ ಕನಸು ಹೇಳಬೇಕು. ಒಂದು ಸ್ವಪ್ನವಂತೂ ಇದ್ದದ್ದೇ. ನನ್ನ ಕೊಟ್ಟಡಿಯ ಹೊರಗೆ, ಸನಿಯದಲ್ಲಿಯೇ ಒಂದು ಹೊಸ ಸುಂದರ ಹಗ್ಗ ಜೋತಾಡುತ್ತಿರುವಂತೆ ಭಾಸವಾಗಬೇಕು. ಅದರಲ್ಲಿ ಕೊರಳಿಡಲಿಕ್ಕೆ ಅನುಕೂಲವಾಗುವಂತೆ ಗಂಟುಹಾಕಿ ಸಿದ್ಧವಿರಬೇಕು. ಅದನ್ನು ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಬಹು ಪ್ರಯತ್ನಮಾಡುತ್ತಿರುವಾಗ, ಕಾಣದ ಕೈಯೊಂದು ಹಿಂದೆಳೆದು ಬಿಡುತ್ತಿದ್ದಿತು. ಮುಂದೆ ಏನು ಮಾಡಿದರೂ ಆ ಹಗ್ಗ ಕೈಗೆ ಬರಲಿಕ್ಕಿಲ್ಲ....

ನನ್ನನ್ನು ಇಟ್ಟ ಸ್ಥಳ, ಹಾಂಬುರ್ಗದ ಉತ್ತರ ಸೀಮೆಯಲ್ಲಿದ್ದ ಹಳೇ ಜೇಲು. 'ಫುಲ್ಸ ಬ್ಯೂಎಲೆಟ ಕ್ಯಾಂಪ, ಎಂದು ಅದು ಪರಿಚಿತವಾಗಿದ್ದಿತು. ಅದರ ಸಮೀಪದಲ್ಲಿಯೇ ವಿಮಾನ ಕೇಂದ್ರ. ವಿಮಾನಗಳ ಗರ–ಗರ ಧ್ವನಿ ಮಲಗಿದಲ್ಲಿ ಸಹ ಕೇಳಬೇಕು. ನಿದ್ರೆಯು ಏನು ಮಾಡಿದರೂ ಬರುತ್ತಿರಲಿಲ್ಲ. ಬಂದರೂ ದಿಗ್ಗನೆ ಏಳುವಂತೆನಿಸಬೇಕು. ಅತ್ತ ಇತ್ತ ಹೊರಳುವಾಗ ಕೈಯಲ್ಲಿದ್ದ ಬೇಡಿಗಳ ಝುಣತ್ಕಾರವಾಗುತ್ತಿತ್ತು. ಅವುಗಳನ್ನು ಬಿಚ್ಚಿ ಒಗೆಯಲು ಯತ್ನಿಸಿ, ಅದು ಅಶಕ್ಯವೆಂದು ತಿಳಿದಾಗ ಅಳುತ್ತಿದ್ದೆ. ಅತ್ತು ಬಾಯಾರಿ ದಣಿವೆನಿಸಿತೆಂದರೆ ಪುನಃ ಬಿದ್ದುಕೊಳ್ಳುವದು. ಬಿದ್ದಾಗ ವಿಚಾರಚಕ್ರ. ಗತಾಯುಷ್ಯದ ಸಾವಿರಾರು ಚಿತ್ರಗಳು ಅಂಕ–ಡೊಂಕಾಗಿ ಕುಣಿಯುತ್ತಿದ್ದವು. ಶತ್ರು–ಮಿತ್ರರ ಆಕೃತಿಗಳು ಕಂಡು ಅಡಗುತ್ತಿದ್ದವು. ಇವರಲ್ಲಿ ಫಿರೇಲಾಯಳ ನೆನಪೊಂದು. ನೆನಪಾದ ವೇಳೆಗೊಮ್ಮೆ–ವಿಹ್ವಲನಾಗಿ "ಫಿರೇಲಾಯ, ನೀನು ಎಲ್ಲಿರುವೆ?" ಎಂದು ಕೂಗದೇ ನಾನಿರಲಿಲ್ಲ. ಒಮ್ಮೆ ಅವಳ ಮೃದು ಶಬ್ದ ಕೇಳಿದಂತಾಗಿ, ಆಕೆ ದೃಢವಾಗಿ ಅಪ್ಪಿಕೊಂಡಂತೆನಿಸಬೇಕು. ಪ್ರೇಮಲ ಶಬ್ದಗಳಿಂದ ನನ್ನನ್ನು ಸಾಂತ್ವನಗೊಳಿಸುತ್ತಿರುವಳೆನಿಸಬೇಕು. ಅಷ್ಟರಲ್ಲಿ ಆ ಸವಿಗನಸು ಅಡಗಿ ಹೊರಗಿನ ಪಹರೆಯವರ ಕರ್ಕಶ ಶಬ್ದ ಕಿವಿಗೆ ಬಡಿಯುತ್ತಿದ್ದಿತು. ಅಥವಾ

ವಿಮಾನಗಳ ಗರ-ಗರಧ್ವನಿ ಕೇಳುತ್ತಿದ್ದಿತು. ಅಯ್ಯೋ! ನನ್ನ ಭಗ್ನ ಚರಿತ್ರವೇ !......

ಕಡೆಗೊಂದು ದಿನ ನನ್ನನ್ನು ಆ ಸ್ಥಳದಿಂದ ಬರ್ಲಿನಕ್ಕೆ ಒಯ್ದರು. ಅಲ್ಲಿ ತಪಾಸಣಿಗೆ ಆರಂಭವಾಯಿತು. ಅದು ಅರ್ಥಾತ್ ಛಲವೇ. ಪೊಲಿಸಗಿಂತ ಇಲ್ಲಿ ಛಲದ ಪ್ರಕಾರ ಭಯಂಕರ. ಈ ಗೆಸ್ಟಪೋ ಜನರು ಛಲ ಏನು ಬಾಕಿ ಉಳಿಸಿದರು ? ಬಲವಂತದಿಂದ ಒಂದು ಬಾಟಲಿಯಲ್ಲಿ ಮೂತ್ರ ಹೊಯಿಸಿ, ನನಗೆ ಅದನ್ನೇ ಕುಡಿಯಹಚ್ಚಿದರು !

ನನ್ನಲ್ಲಿರುವ ವೀರ್ಯ- ಪಕ್ಷದ ವಿಷಯಕ್ಕಿರುವ ಅಭಿಮಾನ ನಿಷ್ಠಾದಿಗಳನ್ನು ನಾಶಗೊಳಿಸಬೇಕೆಂದು ಅವರು ಯತ್ನ ಮಾಡುತ್ತಿದ್ದರು. ಏನಾದರೂ ಮಣಿಯೆನೆಂದು ನನ್ನ ನಿಶ್ಚಯ. ಅವರ ಛಲದ ಒಂದೊಂದೆ ಪ್ರಕಾರಗಳು ಆರಂಭವಾದ ಕೂಡಲೇ, ಮನಸ್ಸನ್ನು ಗಟ್ಟಿಮಾಡಿ ನನ್ನೊಳಗೇ ಹೇಳಿಕೊಳ್ಳುವದೇನಂದರೆ- "ಮುಂಡೇ ಮಕ್ಕಳೇ! ಪ್ರಾಣ ತೆಗೆಯುತ್ತಿದ್ದರೆ ತೆಗೆದು ಬಿಡಿ. ನನ್ನ ಬಾಯಿಂದ ಒಂದು ಶಬ್ದ ಕೂಡ ಹೊರಬೀಳುವದಿಲ್ಲ."

ಹೀಗಿದ್ದರೂ ಒಂದು ದಿನ ನನ್ನ ಸಹನ ಶಕ್ತಿ ಇಲ್ಲದಾಯಿತು! ಅದು ಹೇಗೆ ಎಂಬುದನ್ನೇನೂ ಹೇಳಲಾರೆ. ಬಹಳ ವಿಚಾರಮಾಡಿ ಶರಣಾಗತನಾಗಲಿಕ್ಕೆ ಸಿದ್ಧನಾದೆ. ಅಲ್ಲ.. ಅಲ್ಲ... ಒಂದು ಹಗ್ಗ ಚಟಕ್ಕನೇ ಹರಿದು ಬಿದ್ದಂತೆ ಮನಸ್ಸಿನಲ್ಲಿ ಏನೋ ಆಯಿತು. "ಸಾಕು. ಸಾಕು. ನೀವು ಹೇಳುವ ಜವಾಬಿಗೆ ರುಜುಮಾಡಲು ನಾನು ಸಿದ್ಧ." ಹೀಗೆ ಬಾಯಿಂದ ಶಬ್ದ ಬಂದವು. ಅವು ಹೊರಬಿದ್ದಾಗ ನನಗೆ ತಿಳಿದಿತು. ಇವು ನನ್ನವೇ ಶಬ್ದಗಳು.

ಹಾಂಬುರ್ಗದಲ್ಲಿ ಕ್ರಾವುಸನಿರುವಂತೆ ಇಲ್ಲಿಯ ಇನ್ಸ್ಪೇಕ್ಟರ- ರ್‍ಯಾಡಾಮು, ನನ್ನ ಮಾತುಕೇಳಿ ಅವನೆಂದ.

"ಛಲೆ ಹಾಗಾದರೆ ಬಹಳ ಒಳ್ಳೆಯದು."

ಮರುಕ್ಷಣದಲ್ಲಿ ಕೈಕಾಲಿನ ಬೇಡಿ ಕಳಚಿದವು. ನನ್ನನ್ನು ಎತ್ತಿ ಕಾಟಿನ ಮೇಲೆ ಮಲಗಿಸಿದರು. ಯಾರೋ ಕಾಫಿ ಕೊಟ್ಟರು. ಅದನ್ನು ನಾನು ಗಟಗಟ ಕುಡಿದು ಬಿಟ್ಟೆ. ಸಿಗಾರೇಟು ಕೊಟ್ಟಾಗ ಸೇದತೊಡಗಿದೆ. ನನಗೇತರ ಪರಿವೆ ಉಳಿದಿತ್ತು ಆಗ.

ಇನ್ಸಪೆಕ್ಟರ ರ್‍ಯಾಡಾಮ ಹೇಳಹತ್ತಿದ. ನೆರೆಯವನೊಬ್ಬ ಟಾಯಿಪು ಮಾಡಹತ್ತಿದ. ರ್‍ಯಾಡಾಮ ಹೇಳುವದು ನನಗೆ ಕೇಳುತ್ತಿರಲಿಲ್ಲ. ಏನೋ ನನ್ನ ಹೆಸರು ಮಾತ್ರ ಮೇಲಿಂದ ಮೇಲೆ ಕೇಳಬೇಕು. ನನಗೆ ತಿಳಿದಿತು. ನನ್ನ ಜವಾಬಿನ ಸಿದ್ಧತೆ ನಡೆದಿದೆ. ಬರೆಯುವದನ್ನು ಕೇಳಬೇಕೆಂದೇನೂ ಇಚ್ಛೆ ಹುಟ್ಟಲಿಲ್ಲ. ನಾನು ಕೇವಲ ಕಾಫಿಯನ್ನು ಬಟ್ಟಲಿನ ಮೇಲೆ ಬಟ್ಟಲು ಕುಡಿಯುತ್ತಿದ್ದೆ. ಒಂದರ ಹಿಂದೊಂದು ಸಿಗಾರೇಟು ಸೇದುತ್ತಿದ್ದೆ.

ಎಷ್ಟೋ ವೇಳೆಯ ನಂತರ ಟಾಯಿಪರಾಯಿಟರ ನಿಂತಿತು. ರ್‍ಯಾಡಾಮ ಹೇಳಿದನು. "ಎದ್ದು ಹೀಗೆ ಬಾ." ಟಾಯಿಪು ಮಾಡಿದ ಕಾಗದ ಮುಂದೆ ಹಿಡಿದು, ಮಸಿ ಎದ್ದಿರ ಟಾಕು ಸಹ ಕೈಯಲ್ಲಿತ್ತನು. ಮತ್ತೆ ಹೇಳಿದನು. "ಈ ಪ್ರತಿಯೊಂದು ಕಾಗದಗಳ ಕೆಳಗೆ ರುಜು ಹಾಕು."

ಅದನ್ನು ಓದುವ ಶಕ್ತಿ ನನ್ನಲ್ಲಿರಲಿಲ್ಲ. ತುಸು ಯತ್ನಿಸಿದಾಗ ಅಕ್ಷರಗಳು ತೇಲಿಹೊದಂತೆ, ಹಿಂದೆ ಮುಂದೆ ಮಣಿದಂತೆ ಭಾಸವಾಯಿತು. ಒಂದೊಂದೇ ಕಾಗದಕ್ಕೆ ರುಜು ಹಾಕಹತ್ತಿದೆ. ಕಡೆಯ ಉಪಾಯವೆಂದು ಅಕ್ಷರಗಳನ್ನು ಮಾತ್ರ ಶಕ್ಯವಾದಷ್ಟು ಬದಲಿಸಿ ರುಜು ಮಾಡಿದೆ. ಕಡೆಯ ಕಾಗದ ಬಂದಾಗ ರ್‍ಯಾಡಾಮ ಅಂದನು.

"ನಿಲ್ಲು. ಇದು ಕಡೆಯ ಕಾಗದ. ಇದರ ಮೇಲೆ ರುಜು ಹಾಕುವ ಮೊದಲು ಮೇಲೆ ಬರೆ. ಈ ಜವಾಬು ನಾನು ಸ್ವತಃ ಓದಿಕೊಂಡಿದ್ದೇನೆ. ಇದರಲ್ಲಿನ ಎಲ್ಲ ವಿಧಾನಗಳು ನಿಜವಾಗಿವೆ."

ಅದರಂತೆ ಬರೆದು ರುಜು ಮುಗಿಸಿದೆ ರ್‍ಯಾಡಾಮ ನನ್ನ ಕೈ ಹಿಡಿದು ಅಲುಗಿಸುತ್ತ ನುಡಿದನು. "ಎಷ್ಟು ತಿಳಿವಳಿಕೆಯ ಹುಡುಗ ನೀನು. ಇನ್ನು ಏನಾದರೂ ಜವಾಬು ಕೊಡಬೇಕೆನಿಸಿದರೆ ಪಹರೆಯವರಿಂದ ನನಗೆ ಫೋನು ಮಾಡಿಸು."

ನಂತರ ನನ್ನನ್ನು ಕೊಟ್ಟಡಿಗೆ ಒಯ್ದರು.

ಮೇಲೆ ನಾನು ನೋಡಿದಾಗ ಪೂರ್ವದ ಕ್ಷಿತಿಜದಲ್ಲಿ ಅರುಣೋದಯದ ಕೋಮಲ ರಕ್ತಿಮ ಪಸರಿಸತೊಡಗಿತ್ತು!

ಆ ದಿನ ಬೇಡಿಗಳಿರಲಿಲ್ಲ, ಮಲಗಲಿಕ್ಕೆ ಗಾದಿ ದೊರೆಯಿತು. ಸ್ವಚ್ಛ ಹೊದಿಕೆ, ತಂಬಾಕದ ಒಂದು ಡಬ್ಬಿ ಸಿಕ್ಕವು. ಪಹರೆಯವ ಹೇಳಿದ.

ಬೇಕಾದಷ್ಟು ವೇಳೆ ಮಲಗಿ ನಿದ್ರೆಮಾಡು. ಎದ್ದರೆ ಬಾಗಿಲು ಒಡಿ. ನಾಳೆ ನಿನ್ನ ಹಜಾಮತಿಗೆ ಅನುಕೂಲವಾಗುವದು. ಕೂದಲು ಕತ್ತರಿಸಿಕೋ. ನಿನ್ನ ಸ್ನಾನದ ಸಿದ್ಧತೆಯೂ ಇರುವದು. ''

ಹೀಗೆ ಹೇಳಿ ಅವನು ಹೊರಟುಹೋದನು.

ನಾನು ಹಾಸಿಗೆ ಮೇಲೆ ಮಲಗಿದೆ.

ಏನಾದರೂ ನಿದ್ರೆ ಬರಲಿಲ್ಲ.

* * * *

ಮರು ದಿವಸ ನನ್ನನ್ನು ಪೇಪನಬರ್ಗ ಕ್ಯಾಂಪಿಗೆ ಕಳಿಸಿದರು. ಡಚ್ಚ ಸೀಮೆಯ ಅಡವಿಯ ಸಮೀಪದಲ್ಲಿ ಇತ್ತು. ಗೆಸ್ಟಪೋದವರಿಗೆ– ಜವಾಬು ಬರೆದು ಕೊಟ್ಟವರದೆಲ್ಲ ಕೋರ್ಟಿನಲ್ಲಿ ವಿಚಾರವಾಗಬೇಕು; ಅಲ್ಲಿಯವರೆಗೆ ಅಂಥವರಿಗೆಲ್ಲ ಈ ಕ್ಯಾಂಪು ವಾಸ.— ರೀತಿಯಂತೆ ನಮಗೆ ಇನ್ನೂ ಶಿಕ್ಷೆ ಯಾಗದಿದ್ದರೂ, ನಮ್ಮ ದಿನಚರಿ ಎಲ್ಲ ಕೈದಿಗಳಂತೇ. ಡಚಸೀಮೆ ಸಮೀಪ ದಲ್ಲಿರುವ ಕಾರಣ ಓಡಿ ಹೋಗಲು ಅನೇಕ ಕೈದಿಗಳು ಯತ್ನಿಸುತ್ತಿದ್ದರು. ಅವರಲ್ಲಿ ಯಾರಿಗೋ ಒಬ್ಬರಿಗೆ ಮಾತ್ರ ಯಶ. ಸುತ್ತಮುತ್ತಲಿನ ಬೈಲು ಸ್ಥಳವಿದ್ದುದರಿಂದ ಓಡಿಹೋಗುವ ಕೈದಿಗಳಿಗೆ ಗುಂಡೆಸೆಯುವದು ಸುಲಭ ವಾಗಿದ್ದಿತು. ಬಹಳ ಜನರ ಗತಿ ಹೀಗಾಗಬೇಕು. ಈ ರೀತಿ ಸತ್ತವರ ಹೆಸರು ಮರುದಿನ ನಮ್ಮ ಮುಂದೆ ಓದಿ ಹೇಳಲ್ಪಡುತ್ತಿದ್ದವು. ಓಡಿ ಹೋಗುವಾಗ ಜೀವಂತ ಸಿಕ್ಕವರಿಗೆ ಫಟಕೀ ಶಿಕ್ಷೆಯಾಗುತ್ತಿದ್ದಿತು. ಕೈದಿ ಗಳನ್ನೆಲ್ಲ ಕೂಡಿಸಿ ಬೆಳಗಿನ ಉಪಹಾರಕ್ಕಿಂತ ಮೊದಲು ಆ ಸಮಾರಂಭ ನೆರವೇರಿಸುತ್ತಿದ್ದರು.

ನನ್ನ ಖಟ್ಲೆ ನಡೆಯುವದಕ್ಕೆಂದು, ಹಾಂಬುರ್ಗಕ್ಕೆ ಎಪ್ರೀಲ ಎರಡನೇ ವಾರದಲ್ಲಿ ಕರೆದೊಯ್ದರು.

ಎಷ್ಟೋ ವಾರ ಖಟ್ಲೆ ಕುಂಟುತ್ತ ಸಾಗಿತು. ಅನೇಕ ಆರೋಪಿಗಳು ನನ್ನ ಸಂಗಡವಿದ್ದರು. ಎಲ್ಲರ ಮೇಲೆ ಕೆಲಸ ನಡೆದುದು ಒಂದೇ ಕಾಲಕ್ಕೆ.

ಕಡೆಗೊಮ್ಮೆ ನಿರ್ಣಯ ಹೇಳಿದರು. ಅದನ್ನು ಕೇಳಲಿಕ್ಕೆ ಒಂದು ದರಬಾರವೇ ನೆರೆದಿರುವದೇನೋ? ದೊಡ್ಡ ದೊಡ್ಡ, ನಾಝೀ ಅಧಿಕಾರಿ ಗಳೆಲ್ಲ ಕೋರ್ಟಿಗೆ ಬಂದಿದ್ದರು. ಆಗ ಒಬ್ಬ ಆರೋಪಿಯ ಮುಖದ

ಮೇಲೂ ಕಳೆ ಎಂಬುದಿರಲಿಲ್ಲ. ನಮ್ಮ ಜೀವಿತ–ನಾಟಕದ ಕಡೆಯ ತೆರೆ ಬಿದ್ದು ಆಟ ಮುಗಿಯುವ ದಿನವದು. ನ್ಯಾಯಾಧೀಶರು ಒಳಗೆ ಬಂದು, ತಮ್ಮ ಸ್ಥಾನದ ಕಡೆ ಸಾಗಹತ್ತಿದಾಗ, ನಾವು ಎದ್ದು ನಿಂತುಕೊಂಡೆವು. ಎಲ್ಲರಿಗೂ ಅತ್ಯಂತ ವಿಷಣ್ಣತೆ ಎನಿಸಿದ್ದಿತು. ನ್ಯಾಯಾಧೀಶರು ನಿರ್ಣಯ ಓದು ವಾಗಲೂ ನಾವು ನಿಂತೇ ಇದ್ದೆವು. ಫಾಶೀ ಶಿಕ್ಷೆ ಆದವರ ಹೆಸರು ಮೊದಲು ಓದಿದರು. ನಾನು ಉಸಿರು ಬಿಗಿಹಿಡಿದು ಈಗ ಕೇಳುತ್ತಿದ್ದೆ ಆದರೆ ಆ ಯಾದಿಯಲ್ಲಿ ನನ್ನ ಹೆಸರು ಬರಲಿಲ್ಲ. ನಂತರ ದೀರ್ಘಾವಧಿ ಶಿಕ್ಷೆ ಯಾದವರ ಹೆಸರು ಹೊರಟವು. ಕೆಲವರಿಗೆ ಹದಿನೈದು, ಕೆಲವರಿಗೆ ಹದಿ ಮೂರು, ಹನ್ನೆರಡು ವರ್ಷ ಸಕ್ತಮಜೂರಿ. ಇದರಲ್ಲಿಯೂ ನನ್ನ ಹೆಸರು ಇಲ್ಲ. ಮರುಕ್ಷಣದಲ್ಲಿ ನನ್ನ ಹೆಸರು ಕೇಳಬಂದಿತು. " ಜರ್ಮನ ಕ್ರಾಂತಿ ಮಾರ್ಗದಲ್ಲಿ ತಡೆಯುಂಟುಮಾಡಿದ ಅಪರಾಧಕ್ಕೆ, ಈ ಆರೋಪಿಗೆ ಹತ್ತು ವರ್ಷದ ಸಕ್ತಮಜೂರಿ ಶಿಕ್ಷೆ. "

ಮೇ ತಿಂಗಳ ೧೯ನೇ ತಾರೀಖಿನ ಬೆಳಗಿನಲ್ಲಿ ಪಹರೆಯವರು ದಿನಕ್ಕಿಂತ ಮೊದಲೇ ನನ್ನನ್ನು ಎಬ್ಬಿಸಿ, ಹೊರಡಲಿಕ್ಕೆ ಹೇಳಿದರು. ನನಗೆ ಆಶ್ಚರ್ಯ ವೆನಿಸಿ ನಾನು ಕೇಳಿದೆ. '' ಈ ದಿನ ವಿಶೇಷವೇನು ? '' '' ವಿಚಾರ ಮಾಡು ವಂತಿಲ್ಲ. ಸುಮ್ಮನೇ ಹೊರಬೀಳು. ''

ಹೊರಬಿದ್ದು ಆವಾರದ ಬೈಲಿಗೆ ಬಂದೆನು. ನಿಲ್ಲು ಎಂದಲ್ಲಿ ನಿಂತು ಕೊಂಡೆನು. ಎಲ್ಲ ಕೈದಿಗಳನ್ನು ಹೀಗೇ ನಿಲ್ಲಿಸುತ್ತಿದ್ದರು. ಏನು ಗೊಂದಲ ವಿರುವದೋ, ಇದು ಯಾತರ ಸಿದ್ಧತೆ, ಎಂಬುದು ತಿಳಿದುಹೋಯಿತು. ತಿಳಿಯುವದೇ ತಡ, ಎದೆ ನಡುಗಿ ಒಂದು ಕ್ಷಣ ಕಣ್ಣು ಮುಚ್ಚಿಕೊಂಡು ಬಿಟ್ಟೆ.

ನಮ್ಮ ಖಟ್ಲೆಯಲ್ಲಿ ಯಾವ ನಾಲ್ಕು ಜನಗಳಿಗೆ ದೇಹಾಂತ ಶಾಸನ ವಾಗಿದ್ದಿತೋ, ಅವರಿಗೆ ಫಾಶಿಕೊಡುವ ಸಮಾರಂಭವಿದು.

ಆವಾರದ ಮಧ್ಯಭಾಗದಲ್ಲಿ ಒಂದು ಕಟ್ಟಿಗೇ ಪ್ಲಾಟಫಾರ್ಮು ರಚಿಸಿ ದ್ದಾರೆ. ಅದಕ್ಕೆ ತಿಳಿ ಹಸಿರು ಬಣ್ಣವಿದೆ. ಈಚೆಗೆ ದೊಡ್ಡ ನಾಲ್ಕು ಬುಟ್ಟಿ ಗಳು ಕಾಣುತ್ತಿವೆ. ಒಂದು ಶಿಪಾಯಿ ಗೊಳಲಿ ತುಂಬಿದೆ. ಪ್ಲಾಟ ಫಾರ್ಮಿನ ಸುತ್ತಲು ಗೊಳಲಿ ಹರವಲ್ಪಟ್ಟಿದ್ದಿತು. ಮೆಲ್ಲನೆ ಸಮುದಾಯ

ಕೂಡಿತು. ಜೇಲ ಅಧಿಕಾರಿಗಳಂತೂ ಸರಿಯೇ. ಅಲ್ಲದೇ ಇನ್ಸಪೆಕ್ಟರ ರ್ಯಾಡಾನು, ಖಟ್ಲೆ ನಡೆಸಿದ ನ್ಯಾಯಾಧೀಶರು, ಸರಕಾರೀ ವಕೀಲರು, ಇವರೆಲ್ಲ ಬಂದುದನ್ನು ನಾನು ನೋಡಿದೆ. ಎಲ್ಲರಿಗಿಂತ ಹಿಂದೆ ಕೊಲೆಗಡಕ ಬಂದ. ಇವನೇ ಶಿರಚ್ಛೇದ ಮಾಡತಕ್ಕವನು. ಅವನೂ ಎಲ್ಲರಂತೆ ಬಿಳಿಯ ಶರ್ಟು, ಪಟ್ಟೆ ಪಟ್ಟೆಯ ಇಜಾರು, ತಲೆಗೆ ಉದ್ದವಾದ ಟೊಪ್ಪಿಗೆ, ಹಾಕಿದ್ದನು. ಅವನು ಬಂದ ಮೇಲೆ ಅವನ ಸಹಕಾರಿಗಳಾದ ನಾಲ್ಕು ಜನ. ಈ ನಾಲ್ಕು ಜನರಲ್ಲಿ ಒಬ್ಬನು ಓಡುತ್ತ ಒಳಗೆ ಹೋಗಿ ಅಷ್ಟೇ ವೇಗದಿಂದ ಹೊರಗೆ ಬಂದನು. ಈಗ ಅವನ ಕೈಯ್ಯಲ್ಲಿ, ಕೊಡಲಿ ಕಾಣಿಸಿತು.

ಹಿಟ್ಲರನು ದೇಹಾಂತ ಶಾಸನದ ಆಧುನಿಕ ಸಾಧನಗಳನ್ನೆಲ್ಲ, ತಿರಸ್ಕರಿಸಿ, ತನ್ನ ಶತ್ರುಗಳ ತಲೆ ಹೊಡಿಸಲಿಕ್ಕೆ ಕೊಡಲಿಯನ್ನೇ ಆರಿಸಿದ್ದಾನೆ. ಆ ಶಸ್ತ್ರವನ್ನು ಸ್ಥಿರದೃಷ್ಟಿಯಿಂದ ನೋಡಿಕೊಂಡೆ. ಆ ಕೊಡಲಿ– ಕಾವು ಸುಮಾರು ನಾಲ್ಕು ಫೂಟು ಉದ್ದವಾಗಿರಬೇಕು. ಅದಕ್ಕೆ ಒಳ್ಳೇ ಪಾಲೀಸು ಮಾಡಿದ್ದರು. ಅದರ ಹೊಂಚು ನೋಡಿದರೆ ಅದೆಂಥ ಉತ್ಕೃಷ್ಟ ಉಕ್ಕಿನದೆಂಬುದು ತಿಳಿಯುವಂತಿದ್ದಿತು.

ಸರಕಾರೀ ವಕೀಲನು ತನ್ನ ತೊಗಲಿನ ಬ್ಯಾಗಿನಿಂದ, ಕಾಗದ ತೆಗೆದು ಓದಹತ್ತಿದನು. ಅದೇನೋ ಸರಿಯಾಗಿ ನನಗೆ ಕೇಳಲಿಲ್ಲ. ಬಹುಶಃ ಆ ಫಾಶೀ ಶಿಕ್ಷೆಯಾದವರ ಹೆಸರು ಮುಂತಾದವುಗಳದ್ದು ಅವನು ಓದಿರಬಹುದು. ಕೊಲೆಗಡಕರು ಸಿದ್ಧರಾಗಿ ನಿಂತುಕೊಂಡಿದ್ದರು. ನೋಡನೋಡುತ್ತ ತಲೆ ತಿರುಗಿದಂತಾಯಿತು. ನಾನು ಕಣ್ಣು ಮುಚ್ಚಿದೆ.

ತುಸು ವೇಳೆಯ ನಂತರ ಕಣ್ಣು ತೆರೆದಾಗ, ಫಾಶೀ ಆದ ಆ ನಾಲ್ವರೊಳಗಿನ ಜಾನೀ ಡೇಟಮರನನ್ನು ವಧಸ್ಥಲಕ್ಕೆ ಸಾಗಿಸುತ್ತಿದ್ದರು ಅವನ ಎಡಬಲಕ್ಕೆ ಪಹರೆಯವರಿದ್ದರು. ಡೇಟಮರನದು ಎಂಥ ಠೀವಿ? ಮುಗಿಲು ಹಾಗೂ ಸುತ್ತಲಿನ ಗಿಡ ನೋಡುತ್ತ ಪ್ರಾತಃಕಾಲದ ತಿರುಗಾಟಕ್ಕೆ ಹೊರಟಂತೆ ಹೊರಟಿದ್ದಾನೆ. ಸರಕಾರೀ ವಕೀಲನ ಮುಂದೆ ಒಂದು ಕ್ಷಣ ಅವನನ್ನು ನಿಲ್ಲಿಸಿದರು. ಆ ವಕೀಲ ಅಲಕ್ಷಿತನಾಗಿ ಏನೋ ಗುಣುಗುಟ್ಟಿದ. ಇಷ್ಟರಲ್ಲಿ, ಇದುವರೆಗೂ ಕಣ್ಣಿಗೆ ಬೀಳದಿದ್ದ ಒಬ್ಬ ಧರ್ಮಾಧಿಕಾರಿ ಮುಂದೆ ಬಂದನು. ಅವನು ಕಪ್ಪು ಬಣ್ಣದ ಪರಿಕರ ಉಟ್ಟು, ಎದೆಯ ಮೇಲೆ ದೊಡ್ಡ

ಸ್ವಸ್ತಿಕ ಚಿಹ್ನ ಧರಿಸಿದ್ದನು. ಅವನು ಜಾನೀಗೆ ಏನೋ ಹೇಳಿರಬೇಕು. ಜಾನೀ ಪಕ್ಕನೇ ಅವನ ಮೈಮೇಲೆ ಹೋಗಿ ಒದರಿದನು. "ಒಲೆಯಲ್ಲಿ ಹಾಕು ನಿನ್ನ ಪ್ರಾರ್ಥನೆ."

ಸುತ್ತು ನೆರೆದಿದ್ದ ಕೈದಿಗಳ ಘೋಷಧ್ವನಿ ಹೊರಟಿತು. "ಗುಡ ಬಾಯ ಜಾನಿ." "ಇನ್‌ಕಿಲಾಬ ಝಿಂದಾಬಾದ" "ಹಿಟ್ಲರ ಮುರ್ದಾಬಾದ."

ಮೇಲೆ ಹತ್ತಿಸಲು ಜಾನಿಯನ್ನು ನಾಲ್ವರು ಹಿಡಿದಿದ್ದರು. ಅವರಿಗೆ ತನ್ನ ಬೇಡಿಯ ಕೈಗಳಿಂದ ಲತ್ತೆ ಹಾಕಲು ಜಾನಿ ಪ್ರಾರಂಭಿಸಿದ. ಆದರೆ ಇದೆಷ್ಟು ವೇಳೆ ನಡೆದೀತು! ಅವನ ಕೈಕಾಲು ಕಟ್ಟಿ ಬೊರಲುಹಾಕಿ ಬಿಟ್ಟರು. ನಾನು ಮನದಲ್ಲಿ ಅಂದುಕೊಂಡೆ—

Farewell Johnny! Good bye, Good bye. ಕೊಲೆ ಪಾತಕಿಗಳು ಮೇಲೆ ಕೊಡಲಿಯನ್ನು ಚಮಕಾಯಿಸಿದುದು ನನಗೆ ಕಂಡಿತು. ಮರುಕ್ಷಣದಲ್ಲಿಯೇ ಜಾನಿಯ ಶಿರಸ್ಸು ಕೆಳಗಿನ ಬುಟ್ಟಿಯಲ್ಲಿ ಬಿದ್ದು ಹೋಯಿತು. ಒಂದು ಕ್ಷಣ ಮುಂಡ ಚಟಪಟ ಮಾಡಿತು. ನೆಲವೆಲ್ಲ ರಕ್ತ ಮುಳುಗಿತು. ಇಬ್ಬರು ಕೂಡಲೇ ಆ ಮುಂಡವನ್ನು ಎಳೆದು ಬುಟ್ಟಿಗೆ ಹಾಕಿದರು. ಮತ್ತಿಬ್ಬರು ಪ್ಲಾಟಫಾರ್ಮ ತೊಳೆಯಹತ್ತಿದರು. ಈಗ ಧರ್ಮಾಧಿಕಾರಿ ಮಂತ್ರ ಹೇಳುತ್ತಿದ್ದ. ಮತ್ತೊಬ್ಬನು, ಜಾನಿಯ ರುಂಡ ಮುಂಡಗಳಿದ್ದ ಬುಟ್ಟಿಯನ್ನು ಎತ್ತಿಕೊಂಡೊಯ್ದನು. ಕೆಲವರು ಗೊಳಲಿ ಹರವಹತ್ತಿದರು.

ಹರ್ಮಾನ ಫಿಶರ! ಯಾರೋ ಕೂಗಿದರು. ಫಿಶರನನ್ನು ವಧಸ್ಥಾನಕ್ಕೆ ತಂದು ನಿಲ್ಲಿಸಿದರು. ಇವನು ಮಾತ್ರ ಅತ್ತಿತ್ತ ನೋಡದೇ–ನೆಟ್ಟಗೆ ಬಂದನು. ಅಲ್ಲಿದ್ದ ಧರ್ಮಾಧಿಕಾರಿಯನ್ನು ದೂಡಿಕೊಟ್ಟು ತಾನೇ ಪ್ಲಾಟಿಫಾರ್ಮ ಏರಿ ಬಿಟ್ಟನು. ಆಗ ಅವನ ಐಟು ಏನು! ನಮ್ಮೆಲ್ಲ ಪ್ರೇಕ್ಷಕರನ್ನು ನೋಡಿ ಹೇಳುತ್ತಾನೆ. "ಪ್ರೇಕ್ಷಕ ಸಮುದಾಯ ತುಂಬಿಕೊಂಡಿದೆ." ಇವೇ ಅವನ ಕಡೆಯ ಮಾತುಗಳು!

ಮುಂದೆ ಫ್ರೆಡ ವೆಹರೆನಬರ್ಗನ ಪಾಳಿ. ಅವನು ಬಂದದ್ದು ಒಂದು ಕ್ರಾಂತಿ ಗೀತಹಾಡುತ್ತ. :"ಬಂಧುಗಳೇ! ಪ್ರಕಾಶದ ಕಡೆಗೆ ಸ್ವಾತಂತ್ರ್ಯದ

ಕಡೆಗೆ ಹೋಗುವ ಬನ್ನಿ." ಸರಕಾರೀ ವಕೀಲ ಅವನ ಶಿಕ್ಷೆ ಓದಿದಾಗ ಅವನು ಕೂಗಿಕೊಂಡನು. "ಸೋವ್ಹಿಯಟ ಯುನಿಯನ ಝಿಂದಾಬಾದ! ಸೋವ್ಹಿಎಟ ಜರ್ಮನಿ ಝಿಂದಾಬಾದ! ತನ್ನ ಕೊಟ್ಟಡಿಯ ತೂತಿನಿಂದ ನೋಡುತ್ತಿದ್ದ ಕೈದಿಯೊಬ್ಬನು ಉದ್ಗರಿಸಿನು. "ನೋಡು, ನೋಡು!!

ಕಡೆಗೆ ಅರ್ಥರಶ್ಮಿಟನನ್ನು ತಂದರು. ಇವನು ಹೆದರಿದಂತಿದ್ದ. ಪಹರೆಯವರು ಆಸರೆ ಕೊಟ್ಟು ಅವನನ್ನು ತರಬೇಕಾಯಿತು. ಪ್ಲಾಟಫಾರ್ಮಿನ ಮುಂದೆ ಮೊಣಕಾಲುದ್ದ ಗೊಳಲಿಯ ರಾಶಿ ಬಿದ್ದಿತ್ತು. ಅತ್ತಿತ್ತ ಬಿದ್ದ ಕೆಂಪು–ಕಪ್ಪು ರಕ್ತದ ಕಲೆಗಳು, ಉಳಿದ ಒಂದೇ ಬುಟ್ಟಿ, ತೊಯಿದು ಹೋದ ಪ್ಲಾಟಫಾರ್ಮು, ಮತ್ತು ಕೊಲೆಗಡಿಕರ ಕೈಯಲ್ಲಿರುವ ಚಕ–ಚಕಿಸುವ ಕೊಡಲಿ ನೋಡಿ, ಇನ್ನಿಷ್ಟು ಬೆದರಿ ಅವನು ನಿಂತುಕೊಂಡು, ವಿಚಾರಿಸಿದನು.

"ಉಳಿದವರು ಸತ್ತರೇ ?"

ಅವನಿಗೆ ಯಾರು ಉತ್ತರ ಕೊಡಬೇಕು ?

ಒಮ್ಮೆಲೆ ಶ್ಮಿಟ ಸಿಡಿದು ನಿಂತನು. ಸರಕಾರೀ ವಕೀಲನ ಕಡೆಗೆ ಹೊರಳಿ ಕೂಗಿದನು. "ಒಂದು ದಿನ ನಿನ್ನ ತಲೆಯೂ ಕತ್ತರಿಸಿಬೀಳುವದು!"

ಅವನನ್ನು ಕಟ್ಟಿಹತ್ತಿದಾಗ ತನ್ನೊಳಗೇ ಆದರೆ ದೊಡ್ಡ ದನಿಯಿಂದ ಅವನು ಮಾತಾಡುತ್ತಿದ್ದನು. "ಮನುಷ್ಯನಿಗೆ ಮರಣವೆಂದಾದರೂ ಬರತಕ್ಕದ್ದೇ. ನಾನು ಕೆಲಸಗಾರರ ಸಲುವಾಗಿ ಸಾಯುತ್ತೇನೆ. ಆರ್ಥರಶ್ಮಿಟನ ಪ್ರಾಣತೆಗೆದುಕೊಳ್ಳಲು ಬರಬಹುದು. ಆದರೆ ಅವನ ಅಂತಃಕರಣದಲ್ಲಿಯ ಜ್ಯೋತಿ ಆರಿಸಲು ಬಂದೀತೇ?....ಕಡೆಗೆ ಅವನು— ಅಮ್ಮಾ! ಅಮ್ಮಾ! ಎಂದು ಚೀರಿಕೊಂಡ.

ಈಗ ಮಾತ್ರ ಅದನ್ನೆಲ್ಲ ನೋಡುವದು ನನಗಾಗಲಿಲ್ಲ. ಎದುರಿನ ಗೋಡೆ, ಜೇಲಿನ ಮಂದಿರ ಇವೆಲ್ಲ ನನ್ನ ಕಡೆಗೆ ಸರಿದು ಬರುವಂತೆ ಭಾಸವಾಯಿತು. ಕಣ್ಣುಮುಚ್ಚಿಕೊಂಡೆ.

+ + + +

ಆ ಮೇಲೆ ಮೂರು ತಿಂಗಳ ನಂತರ ಸ್ಪೇಶಲ ಕೋರ್ಟ ಮುಂದೆ ನನ್ನ ಎರಡನೇ ಖಟ್ಲೆ ನಡೆಯಿತು. ಆರೋಪಗಳಿಗೇನು ಕಮ್ಮಿ? ಈಗ ಮೂರು

ಜನ ಹೋಗಿ ಐವರು ನ್ಯಾಯಾಧೀಶರು. ನನ್ನೊಡನೆ ಸಿಲಿಯ ಖಟ್ಲೆಯೂ ಸಾಗುವದೆಂದು ತೋರಿತು. ಏಕೆಂದರೆ, ನಾನು ಕೋರ್ಟಿನಲ್ಲಿ ಬಾಕಿನ ಮೇಲೆ ಕುಳಿತಾಗ, ಎಂಟು ಹತ್ತು ಮೊಳ ದೂರ ಸಿಲಿಯು ಕುಳಿತಿದ್ದಳು. ಆಕೆಯ ಮುಖ ಮುದ್ರೆ ಯಾವಾಗಲೂ ಇರುವಂತೆ ಶಾಂತ ಮತ್ತು ಆಕರ್ಷಕವಿದ್ದಿತು. ಆದರೆ ಅವಳು ಬಹಳ ಕೃಶಳಾದಂತೆ ಮಾತ್ರ ಕಂಡು ಬಂತು.

ಈ ಖಟ್ಲೆಯಲ್ಲಿ ನನಗಾದ ಶಿಕ್ಷೆ ಮೂರು ವರ್ಷ. ಅದನ್ನು ಕೇಳಿ ಯಂತ್ರದಂತೆ ನನ್ನಲ್ಲಿಯೇ ಮಾತಾಡಿಕೊಂಡೆ. ಹತ್ತು-ಮೂರು=ಹದಿಮೂರು. ಸಿಲಿಗಾದ ಶಿಕ್ಷೆ ಬರೆ ಏಳು ತಿಂಗಳು. ಜೇಲಿನ ಕಡೆಗೆ ನಮ್ಮನ್ನೊಯ್ಯುತ್ತಿರುವಾಗ ಬಾಗಿಲ ಬಳಿಯಲ್ಲಿ ಅವಸರದಿಂದ, ಸಿಲಿಯು ಕೈ ಹಿಡಿದು ಮೆಲ್ಲನೆ ಹೇಳಿದೆನು. "ನಿನ್ನ ಬಿಡುಗಡೆಯಾದ ಮೇಲೆ, ಫಿರೇಲಾಯುಳನ್ನು ಭೆಟ್ಟಿಯಾಗಿ ಹೇಳು. ನಾನು ಆಕೆಯನ್ನು ಬಹಳ ವಿಚಾರಿಸಿದ್ದೇನೆ." ಆಕೆಯ ಕಣ್ಣುಗಳಲ್ಲಿ ನೀರು ಬಂದವು. ಒರೆಸಿಕೊಳ್ಳುತ್ತ ಹೇಳಿದಳು. "ಭೆಟ್ಟಿಯಾಗುತ್ತೇನೆ.....ಹೇಳುತ್ತೇನೆ."

ಇನ್ನು ಹಾಂಬೂರ್ಗದ ಜೇಲಿನಲ್ಲಿ ನನ್ನ ಆಯುಷ್ಯಕ್ರಮ ಪ್ರಾರಂಭವಾಯಿತು.

ಹೊರಗಿನ ಜಗತ್ತಿನ ಸಂಬಂಧ ನನಗೆ ತಪ್ಪಿಹೋಯಿತು. ಪ್ರಚಂಡ ಸ್ಫೋಟವಾಗಿ, ಎಲ್ಲ ಜಗತ್ತು ಹಾರಿಹೋದರೂ ನನಗೆ ತಿಳಿಯುವ ಸಂಭವವಿರಲಿಲ್ಲ. ಎರಡು ತಿಂಗಳಿಗೊಮ್ಮೆ ಒಂದು ಪತ್ರ ಬರೆಯಲಿಕ್ಕೆ ಮಾತ್ರ ನನಗೆ ಪರವಾನಿಗೆ. ಯಾವ ಪತ್ರದಲ್ಲಿಯೂ ಹನ್ನೆರಡು ಸಾಲುಗಳಿಗಿಂತ ಹೆಚ್ಚು ಇರುವ ಹಾಗಿಲ್ಲ. ಒಂದೊಂದು ಸಾರೆ ಅವರಲ್ಲಿಯೂ ಅರ್ಧದಷ್ಟು ಕತ್ತರಿಸಬೇಕು. ಏನೇ ಆಗಲಿ. ಪತ್ರವ್ಯವಹಾರ ಸಾಧ್ಯವಿತ್ತು. ಇದೇನು ಸಣ್ಣದೇ? ಫಿರೇಲಾಯುಳಿಂದ ಪತ್ರ ಬರುತ್ತಿದ್ದವು. ಆ ಪುಟ್ಟ ಪತ್ರಗಳಲ್ಲಿಯೂ ತುಂಬಿರುವ, ಪ್ರೇಮ- ಸಹಾನುಭೂತಿ- ಧೈರ್ಯ ಎಷ್ಟು?— ಮೇಲಿಂದ ಮೇಲೆ ಬರೆಯಬೇಕು ಆಕೆ. "ನೀನು ಅಲ್ಲಿ ಒಬ್ಬನೇ ಇರುವೆನೆಂದು ತಿಳಿಯಬೇಡ. ಇಲ್ಲ ನೀನು ಒಬ್ಬನೇ ಇಲ್ಲ. ನಾನು ನಿನ್ನೆಡೆಗೆ ಬಂದಿದ್ದೇನೆ. ನಿನಗೆ ಕಾಣಿಸದಿಲ್ಲವೇ? ನಾವಿಬ್ಬರೂ ಕೈಗೆ ಕೈ ಹಿಡಿದು

ಕೊಂಡು, ನಿನ್ನ ಕೊಟ್ಟಡಿಯಲ್ಲಿ ಶತಪಥ ಮಾಡುತ್ತೇವೆ. ಒಂದು, ಎರಡು ಮೂರು–ನಾಲ್ಕು ತಿರುಗಿ ಒಂದು–ಎರಡು–ಮೂರು–ನಾಲ್ಕು. ನಾವಿಬ್ಬರು ಪರಸ್ಪರ ಮಾತಾಡುತ್ತೇವೆ. ಮತ್ತು ಇಬ್ಬರೂ ಕೂಡಿ ಕಳೆದ–ಸುಖದ ಅವಿಸ್ಮರಣೀಯ ಕಾಲವನ್ನು, ನೆನಸಿಕೊಳ್ಳುತ್ತೇವೆ. ನೀನು ಒಂಟಿಗನಲ್ಲ. ನಾನು ಯಾವಾಗಲೂ ನಿನ್ನ ಬಳಿಯಲ್ಲಿ. ''

ಈ ಪತ್ರಗಳೇ ವೇಳೆಗಳೆಯಲು ನನಗೆ ಆಧಾರ.

ಆದರೆ ೧೯೩೪ನೇ ನವಂಬರದಲ್ಲಿ ನನ್ನ ಈ ಸುಖ ಮುಗಿದಿತು. ಫಿರೇಲಾಯುಳ ಒಂದೂ ಪತ್ರ ಬರದೆ, ಚಿಂತೆಗಾರಂಭವಾಯಿತು. ದಿನ ಬೆಳಗಿನಲ್ಲಿ ಹೊರಗಿನ ಮೆಟ್ಟಲಿನಲ್ಲಿ ಕಾಲು ಸಪ್ಪಳವಾದರೆ ನಾನು ತವಕಿಸ ಬೇಕು. ಇನ್ನು ನನಗೆ ಫಿರೇಲಾಯುಳ ಪತ್ರ ದೊರೆಯುತ್ತವೆ. ಪರಂತು ಕಾಲು ಸಪ್ಪಳ–ಮುಂದೆ ಸಾಗಬೇಕು. ನನ್ನ ಮನಸ್ಸು ಅನೇಕ ತರ್ಕ–ವಿತರ್ಕ ಮಾಡತೊಡಗಬೇಕು. '' ಫಿರೇಲಾಯುಳಿಗೆ ಏನಾದರೂ ಆಗಿರ ಬಹುದು? ನನ್ನನ್ನು ಮರೆತಿರಬಹುದೇ? ಬೇಸರಗೊಂಡಿರಬಹುದೇ? ಪಕ್ಷದ ಕೆಲಸಕ್ಕೆ ಎಲ್ಲಾದರೂ ದೂರ ಕಳಿಸಿರಬಹುದೋ! ನನಗೆ ಪತ್ರ ಕಳಿಸಲಿಕ್ಕೆ ಪ್ರತಿಬಂಧಿಸಿರಬಹುದು. ಅಥವಾ ಆಕೆಗೆ....'' ಇಂಥ ಸಾವಿರಾರು ಸಂಶಯದಿಂದ ಮನಸ್ಸು ವ್ಯಾಕುಲವಾಗುತ್ತಿದ್ದಿತು.

ಹಾಗೇ ಚಳಿಗಾಲ ಕಳೆದಿತು. ೧೯೩೫ರ ವಸಂತ ಋತು ಕೂಡ! ಈಗಲೂ ಫಿರೇಲಾಯುಳ ಸುದ್ದಿ ನನಗೆ ತಿಳಿಯಲಿಲ್ಲ. ಮುಂದೆ ಮಾತ್ರ ನನ್ನ ಅವಸ್ಥೆ ಹುಚ್ಚನಂತಾಯಿತು. ಬಿಸಿಲು ತಾಪಕ್ಕೆ ಬೇಗುದಿಗೊಂಡ ನೊಣ ಗಳು ಕೊಟ್ಟಡಿಯಲ್ಲಿ ಅತ್ತಿತ್ತ ಹಾರಾಡುವದು ಕಾಣಬೇಕು. ಅವುಗಳಿಗೆ ನನ್ನ ಪ್ರಶ್ನೆ ಇದು. '' ಫಿರೇಲಾಯಳು ಎಲ್ಲಿದ್ದಾಳೆ?'' ಜೂನ ತಿಂಗಳಿನಲ್ಲಿ ಒಂದು ಪಾತರಗಿತ್ತಿಹುಳ ತಪ್ಪಿ ಕೊಟ್ಟಡಿಗೆ ಬಂತು. ಅದನ್ನು ಕೈಸಂಪುಷ್ಟ ದಲ್ಲಿ ಹಿಡಿದು ಹಾಕಿ ನಾನು ವಿಚಾರಿಸಿದೆ. '' ಫಿರೇಲಾಯುಳ ಕಡೆಯಿಂದ ಬಂದೆ ಏನು?''

* * * * *

ಈಗಿನವರೆಗಿದ್ದುದು ನನಗೊಂದು ಸ್ವತಂತ್ರ ಕೊಟ್ಟಡಿ. ಯಾವ ಕೈದಿಗಳ ಸಂಪರ್ಕವೂ ನನಗಿರಲಿಲ್ಲ. ಒಮ್ಮೆ ಜೇಲ ಇನ್ಸಪೆಕ್ಟರು ತಪಾಸ

ಣೆಗೆ ಬಂದು ವಿಚಾರಿಸಿದರು. “ ಒಬ್ಬನೇ ಇರುವದು ನಿನಗೆ ಸೇರುವದೋ? ” ನಾನಂದೆ. “ ಹುಂ ”

“ ಅದೇಕೆ? ”

ನಾನು ಹೇಳಿದೆ. “ ಒಬ್ಬನೇ ಇದ್ದರೆ ಹೊತ್ತು ತಿಳಿಯುವದಿಲ್ಲ. ಹೀಗಾಗಿ ಶಿಕ್ಷೆಯ ದಿವಸ ಬೇಗ ಕಳೆದಂತೆ ಅನಿಸುವದು. ” “ ಹಾಗೋ ” ಎಂದು ಅಂದುಕೊಂಡು ಅವನು ಹೊರಟು ಹೋದನು.

ಮರುದಿನವೇ ನನ್ನನ್ನು ಎತ್ತಾಡಿಸಿದರು. ಮತ್ತೆ ಉಳಿದ ಕೈದಿಗಳಿರುವ ಸ್ಥಳದಲ್ಲಿ ಸೇರಿಸಿಬಿಟ್ಟರು. ಈ ಸ್ಥಳದ ಹೆಸರು ಹಾಲ ನಂಬರು ಒಂಭತ್ತು. ಇಲ್ಲಿ ಕಾಲಿಟ್ಟಾಗ ಆ ಗಡಿಬಿಡಿ, ಗೊಂದಲ ನೋಡಿ ನಾನು ಕ್ಷಣಮಾತ್ರ ಸ್ತಂಭಿತನಾದೆ. ಜೇಲಿನಲ್ಲಿ ಇಂಥ ಗೊಂದಲದ ಸ್ಥಳ ಇರಬಹುದೆಂದು ನನ್ನ ಕಲ್ಪನೆ ಇರಲಿಲ್ಲ. ಆಶ್ಚರ್ಯಚಕಿತನಾಗಿ ಹೀಗೆ ನಾನು ನಿಂತುಕೊಂಡಾಗ ಹಿಂದಿನಿಂದ ಯಾರೋ ನನ್ನ ಕಣ್ಣು ಮುಚ್ಚಿ, “ ಓಹೋ ಸಿಕ್ಕೆಯಲ್ಲ ! ” ಎಂದು ಆನಂದೋದ್ಗಾರ ತೆಗೆದರು. ಕೈಬಿಡಿಸಿಕೊಂಡು ತಿರುಗಿ ನೋಡುತ್ತೇನೆ. ನನ್ನ ಮುಂದೆ ಸಾಲೋಮನ ನಿಂತುಕೊಂಡಿದ್ದಾನೆ. ಒಂದು ಕಾಲಕ್ಕೆ ಈ ಸಾಲೋಮನ ನನ್ನ ಗೆಳೆಯ. ಅವನು ಆಗ ನನ್ನ ಕೈ ಅಲುಗಾಡಿಸಿದ ಜೋರಿಗೆ ನಾನು ಬಿದ್ದೇ ಹೋಗಬೇಕು. ಗಡ್ಡ ಮೀಸೆಗಳಿಂದ ವಿದ್ರೂಪವಾದ ಅವನ ಮುಖ ಎಷ್ಟು ಪ್ರಫುಲ್ಲಿತವಾಗಿತ್ತು? ಅವನೆಂದ. “ ಬರಬೇಕು ಬರಬೇಕು ! ನೀನು. ಜೀವಂತನಿರುವಿ ಹಾಗಾದರೆ? ನಿನ್ನನ್ನು ಹೊಡೆದು ಹಾಕಿದರೆಂದು ನಾವು ಕೇಳಿದ್ದೆವು.

ಈ ಹಾಲಿನಲ್ಲಿದ್ದ ಎರಡು ಮೂರಾಂಶ ಕೈದಿಗಳು ರಾಜಕೀಯ ಶಿಕ್ಷೆ ಆದವರೇ. ಉಳಿದವರು ಕಳ್ಳರು, ದರೋಡೆಖೋರರು, ಕೊಲೆಗಾರರು, ವೇಶ್ಯಾವ್ಯಾಪಾರಿಗಳು, ಠಕ್ಕರು, ಇಂಥವರು. ಸಾಲೋಮನನು ಎಚ್ಚರಿಸಿದನು. “ ಇಲ್ಲಿ ಯಾರೊಡನೆಯೂ ಸಹಸಾ ಮಾತಾಡುವಂತಿಲ್ಲ. ಇದರಲ್ಲಿಯೂ ಗೆಸ್ಟಪೋ ಗುಪ್ತ ಹೇರರಿದ್ದಾರೆ. ” ಹೊರ ಜಗತ್ತಿನಲ್ಲಿ ನಡೆದ ಅನೇಕ ಸ್ಥಿತ್ಯಂತರಗಳ ಸುದ್ದಿಯನ್ನು ಅವನು ಹೇಳಿದನು. ವ್ಹಿಎನ್ನಾ ಪಟ್ಟಣದಲ್ಲಿ ಕೆಲಸಗಾರರು ಬಂಡೆಬ್ಬಿಸಿದ್ದರು. ಆದರೆ ಚಾನ್ಸಲರ ‘ಡಾಲ್ಫ

ಸನು' ಅವರನ್ನು ಮಣ್ಣು ಮುಕ್ಕಿಸಿದನು. ಮತ್ತೆ ನಾಝಿ ಸಿಪಾಯರು ಡಾಲ್ಫಸನಿಗೆ ಗುಂಡಿಕ್ಕಿ ಕೊಂದರು. ಬೆಲ್ಜಿಯಮದ ಅರಸು ಅಪಘಾತದಿಂದ ಮರಣ ಹೊಂದಿದನು. ಸನಫ್ರಾನ್ಸಿಸ್ಕೋದಲ್ಲಿ ಕೆಲಸಗಾರರ ಪ್ರಚಂಡ ಸಂಪು ನಡೆದ ಮೂಲಕ ಅಮೇರಿಕೆಯ ವ್ಯಾಪಾರಕ್ಕೆ ದೊಡ್ಡ ಪೆಟ್ಟು ತಗುಲಿತು. ಹಿಂಡೆನಬುರ್ಗ ಸತ್ತುಹೋಗಿದ್ದ ಅವನ ಸ್ಥಳ ಹಿಟ್ಲರ ಹಿಡಿದು ಕೊಂಡಿದ್ದ. ಗ್ರೀಸದಲ್ಲಿ ಹಳೇ ರಾಜ ಮನೆತನ ಮುಳುಗಿ ಹೊಸ ಸ್ಥಾಪನೆ ಆಗಿದ್ದಿತು. ಮಾರ್ಸೇಲದಲ್ಲಿ ಒಬ್ಬ ಬಲ್ಗೇರಿಯನ ಕ್ರಾಂತಿಕಾರ, ಯುಗೋಸ್ಲೋವಿಯದ ಅರಸು, ಮತ್ತು ಫ್ರಾನ್ಸದ ಪರರಾಷ್ಟ್ರ ಮಂತ್ರಿ ಇವರಿಗೆ ಪಿಸ್ತೂಲು ಹೊಡೆದು ಕೊಂದುಹಾಕಿದ...."

ಕೇಳುತ್ತ ನಾನು ವಿಚಾರಿಸಿದೆ. "ನಿಮಗೆ ವರ್ತಮಾನಪತ್ರ ಸಿಗುವವೇನೋ ?"

ಅವನೆಂದ. "ವರ್ತಮಾನಪತ್ರವಷ್ಟೇ ಏಕೆ? ಬೇಕಾದುದನ್ನು ನಾವು ದೊರಕಿಸಬಲ್ಲೆವು. ಹೊರಗೆ ಕಳಿಸಬಲ್ಲೆವು. ಅದಕಾಗಿ ಕೆಲವು ಯುಕ್ತಿ ಮಾಡಿಕೊಂಡಿದ್ದೇವೆ. ನಮ್ಮ ಡಿಮಿಟ್ರಾಫ ಇದೇ ತಾನೆ ಹೊರಡಿಸಿದ ಪತ್ರಿಕೆ ಸಹ ನಾವು ದೊರಕಿಸಿದ್ದೇವೆ. ಕಾಮಿಂಟರ್ನದ ಧೋರಣ ಈಗ ಬೇರೆಯಾಗಹತ್ತಿದೆ. ಮೆಲ್ಲನೆ ನಿನಗೆಲ್ಲ ತಿಳಿಯುವದು. ಆದರೆ– "ಎಚ್ಚರದಿಂದ ಸಾವಕಾಶ" ಎಂಬುದು ಇಲ್ಲಿಯ ಮಹಾಮಂತ್ರ. ಮರೆಯಬೇಡ. ಎಲೋ ಎಲ್ಲಕ್ಕೂ ಮಹತ್ವದ ಸುದ್ದಿ ನಾನು ಹೇಳಿಯೆ ಇಲ್ಲ. ಆಲ್ಬರ್ಟ ವಾಲ್ಟರ.—

ಉತ್ಕಂಠಿತನಾಗಿ ನಾನು ಕೇಳಿದೆ. "ಅವನದೇನು ಸುದ್ದಿ?"

"ಅವನು ಗೆಸ್ಟಪೋದವರಿಗೆ ಒಡೆದು ಬಿಟ್ಟಿದ್ದಾನೆ."

ಕೇಳಿ ನನಗಾದ ಆಶ್ಚರ್ಯದ, ಆಘಾತವನ್ನು ವರ್ಣಿಸಲಿಕ್ಕೆ ಸಾಧ್ಯವಿಲ್ಲ.

ಸ್ವತಂತ್ರ ಕೊಟ್ಟಡಿಯಲ್ಲಿರುವಾಗ ಪಕ್ಷ– ಕಾಮಿಂಟರ್ನ ಇವನ್ನೆಲ್ಲ ಮರೆತಿದ್ದೆ. ಇಲ್ಲಿ ಬಂದ ಮೇಲೆ ಮಾತ್ರ ಅಡಗಿ ಹೋಗುತ್ತಿದ್ದ ಆ ನನ್ನ ನಿಷ್ಠಾಭಾವ ಪುನಃ ಜಾಗ್ರತವಾಯಿತು. ಆಗ ನನ್ನ ಸುತ್ತಲಿರುವವರು

ಹಳೆಯ ಸಹಕಾರಿಗಳು. ಅವರಲ್ಲಿ ಮೊದಲು ಪಕ್ಷ; ಆಮೇಲೆ ವ್ಯಕ್ತಿ ಎಂಬ ಭಾವನೆ ತೀವ್ರ ಸ್ವರೂಪದಲ್ಲಿದ್ದಿತು. ಅದನ್ನು ನೋಡಿ ನನ್ನಷ್ಟಕ್ಕೆ ಅಂದು ಕೊಳ್ಳುತ್ತಿದ್ದೆ. ಜಗತ್ತಿನಲ್ಲಿ, ಜೇಲಿನಲ್ಲಿ, ಇಂಥ ಅದ್ಭುತ ಕಾರ್ಯ ನಿಷ್ಠೆಯ—ಇಂಥ ಚಮತ್ಕಾರ ನೋಡಲು ಸಿಗಲಿಕ್ಕಿಲ್ಲ. ನಾವೆಲ್ಲರೂ ಬಂದ ಶಾಲೆಯಲ್ಲಿದ್ದವು. ಅಲ್ಲಿ ಸಾವಿರಾರು ವಿಘ್ನ. ಇದರಿಂದಲೂ ಮಾರ್ಗ ಹುಡುಕಿ ಸಾವಿರಾರು ಪ್ರಕಾರಗಳಿಂದ ಪಕ್ಷದ ಕಾರ್ಯ ಜೀವಂತವಾಗಿರಿಸಿದ್ದೆವು. ನಾನು ದುರ್ಬಲ, ನಾನು ಪರಾಭೂತ, ಎಂದು ಯಾವ ಭಾವನೆ ಏಕಾಂತವಾಸದಲ್ಲಿರುವಾಗ, ನನ್ನಲ್ಲಿ ಅಂಕುರಿಸ ತೊಡಗಿದ್ದಿತೋ, ಅದೀಗ ನಾಶವಾಗಿತ್ತು. ಪಕ್ಷವು ಬಲಿಷ್ಠ. ಅರ್ಥಾತ್ ನಾನು ಬಲಿಷ್ಠ. ನಾವು ಕಡೆಗೆ ಯಶ ದೊರಕಿಸುವದರಲ್ಲಿ ಸಂದೇಹವೇನು? ಹೀಗೆ ವಿಚಾರ ತೇಜ ನನ್ನ ಮೈಯ್ಯಲ್ಲಾಡುತ್ತಿದ್ದಿತು.

ಒಂದರ ಹಿಂದೊಂದು ತಿಂಗಳು ಕಳೆದವು. ಗ್ರೀಷ್ಮ ಋತು ಹೋಯಿತು. ಆವಾರದಲ್ಲಿಯ ಗಿಡಗಳ ಎಲೆಗಳಾಚೆ ಹೊಂಬಣ್ಣ ಕಾಣಿಸಿತು. ಆಕಾಶದಲ್ಲಿ ಮೇಘ ಮಾಲೆ ಗೋಚರಿಸತೊಡಗಿತು. ಮುಂದೆ ಗಿಡಗಳ ಎಲೆ ಉದುರಿದವು. ಭೂಮಿ ಹಿಮಾವೃತವಾಯಿತು. ಹಿಮದಿಂದ ಹೆಪ್ಪುಗಟ್ಟಿದ ದೂರ ಪ್ರದೇಶಗಳಿಂದ, ಹಾರಿಬರುತ್ತಿರುವ ‘ಗೆಲ’ ಪಕ್ಷಿಗಳ ಹಿಂಡಿನ ಫಡಫಡಾಟದಿಂದ ಸಿಕ್ಕು ವ್ಯಾಪಿಸಿದವು. ಚಳಿಗಾಲ ಮುಗಿಯಿತು. ವಸಂತ ಹೋಯಿತು. ೧೯೩೬ ಬೇಸಿಗೆಕಾಲ ಆರಂಭವಾಯಿತು.

ಇಂಗ್ಲಂಡದ ಜಾರ್ಜ ಬಾದಶಹನು ಸತ್ತುಹೋಗಿದ್ದನು. ಹಿಟ್ಲರನ ಸೈನ್ಯ ಹ್ರಾಯಿನ ಲಂಡದ ಕಡೆಗೆ ಹೋಗಿದ್ದಿತು. ಜನರಲ ಫ್ರಾಂಕೋ ಸ್ಪೇನದಲ್ಲಿ ಯಾದವೀ ಕಲಹದ ನಿಶಾನೆ ಊರಿದ್ದನು. ಲೆನಿನ ಗ್ರಾಡದಲ್ಲಿದ್ದ ನಮ್ಮ ಪಕ್ಷದ ಮುಖ್ಯ ಸರ್ಜೇಕಿರಾಫನ ಕೊಲೆ ಯಾದುದರಿಂದ, ಸ್ಟಾಲಿನನು ಹತ್ಯಾಮಯ ಶುದ್ಧೀಕರಣ ಸಮಾರಂಭ ನಡೆಸಿದ್ದನು. ಅಸಂಖ್ಯ ಹಳೇ ಕಾರ್ಯಕರ್ತರು ಗುಂಡಿಗೆ ಆಹುತಿಯಾದರು....

ಫಿರೇಲಾಯಳ ಪತ್ರ ನನಗೆ ಬಂದಿರಲಿಲ್ಲ. ಎಲ್ಲಿ ಅಡಗಿದ್ದಳೋ?

ಆಕೆಯ ಕಡೆಯ ದರ್ಶನವಾಗಿ ಎರಡು ವರ್ಷ ಎಂಟು ತಿಂಗಳು ಸಂದು ಹೋಗಿದ್ದವು !

ಜುಲಾಯಿ ತಿಂಗಳ ಕಡೆಯಲ್ಲಿ ಅಕಸ್ಮಾತ್ ಆಕೆಯ ಸುದ್ದಿ ತಿಳಿದಿತು!

ನಮ್ಮ ಹಾಲಿನಲ್ಲಿದ್ದ ಒಬ್ಬ ಕೈದಿಯನ್ನು ವಿಚಾರಣೆಗೆಂದು ಒಯ್ದಿದ್ದರು. ಮರಳಿ ಬಂದು ನನಗೆ ಅವನು ಹೇಳಿದ.

“ಅಲ್ಲಿ ನಿನ್ನ ಹೆಂಡತಿಯನ್ನು ನೋಡಿದೆ. ಕೈದಿಗಳ ವೇಷದಲ್ಲಿರುವ ಐದು ಜನ ಹೆಂಗಸರಲ್ಲಿ ಆಕೆ ಕಂಡಳು.”

ಗದ್ಗದಿತನಾಗಿ ನಾನಂದೆ. “ನಿನಗೆ ಖಾತ್ರಿ ಎನಿಸಿತೇ?”

“ಹೋ. ಆಕೆಯೂ ನನ್ನನ್ನು ಗುರುತಿಸಿದಳು. ನನ್ನನ್ನು ನೋಡಿ ಆಕೆ ನಕ್ಕಳು ಸಹ.

ಸಿಡಿಲು ಮೈ ಮೇಲೆ ಬಿದ್ದಂತಾಯಿತು. ಫಿರೇಲಾಯಳು ಗೆಸ್ಟಪೋದವರ ಕೈಯ್ಯಲ್ಲಿಯೋ? ಎಂದು ಹಿಡಿದರು? ಜರ್ಮನಿಗೆ ಆಕೆ ಏಕೆ ಬಂದಳು? ಕೂಸು ಹುಡುಕಲಿಕ್ಕೆ? ಆಕೆಗೆ ಶಿಕ್ಷೆಯಾಯಿತೇ? ನನ್ನಂತೆ ಆಕೆಯ ಛಲವೂ ನಡೆದಿತೇ?....

ರಾತ್ರಿ ಎಲ್ಲ ಇವೇ ವಿಚಾರ. ಇದೊಂದು ಹೊಸ ವೇದನೆ. ಅತ್ತು ಬಿಡಬೇಕೆನಿಸಿತು. ನನ್ನನ್ನೇ ನಾನು ನಿಂದಿಸಿಕೊಂಡೆನು. “ಚಾಂಡಾಲಾ! ಇದೆಲ್ಲ ನಿನ್ನದೇ ದೋಷ. ರಕ್ತದಿಂದ ತೊಯ್ದ ಕಲಂಕಿತ ಕಟುಗರ ಸ್ಥಳಕ್ಕೆ ಆಕೆಯನ್ನು ಎಳೆದೆ. ನಿನ್ನ ಸಂಬಂಧವೇ ಆಕೆಗೆ, ಆಗದಿದ್ದರೆ ಇಂದು ಅವಳು ಸ್ವತಂತ್ರಳಾಗಿರುತ್ತಿದ್ದಳು ಸುಖದಲ್ಲಿರುತ್ತಿದ್ದಳು! ಪಶ್ಚಾತ್ತಾಪದ ಈ ವಿಚಾಗರಳು ತೀಕ್ಷ್ಣಧಾರೆಯ ಶಸ್ತ್ರದಂತೆ ನನ್ನ ಅಂತರಂಗವನ್ನು ಛೇದ ವಿಚ್ಛೇದ ಮಾಡತೊಡಗಿದವು.

ಆ ಭಯಾನಕ ರಾತ್ರಿ ಹೇಗೆ ಕಳೆದಿತೋ ಬಲ್ಲವರಾರು? ಬೆಳಗಿನಲ್ಲಿ ಸಲಾಕೆಗಳುಳ್ಳ ಕಿಟಕಿಯಿಂದ ಅರುಣೋದಯದ ಮಂದಕಿರಣಗಳು ಚಾಚುವಷ್ಟರಲ್ಲಿ ಹೇಗೋ, ಏನೋ? ಮನಸ್ಸಿನ ತಳಮಳ ತಣ್ಣಗಾಗಿತ್ತು. ಶಾಂತನಾಗಿದ್ದೆ. ನನ್ನಷ್ಟಕ್ಕೆ ಹೇಳಿಕೊಂಡೆ. “ಏನು ಬೇಕಾದುದನ್ನು ಮಾಡಿ ಫಿರೇಲಾಯಳನ್ನು ಬಿಡುಗಡೆ ಮಾಡಬೇಕು.

೧೯

ಫಿರೇಲಾಯಳ ಭೆಟ್ಟಿಗೆ ಪರವಾನಿಗೆ ದೊರೆಯಬೇಕೆಂದು ನಾನು ವಿನಂತಿ ಬರೆದುಕೊಂಡೆನು. ಕೂಡಲೇ ಹೀಗೆ ಉತ್ತರ ದೊರೆಯಿತು. "ಹೊಸ ಜರ್ಮನಿಯೊಡನೆ, ಶತ್ರುತ್ವವಿರುವ ಅಪರಾಧಿಗಳು ಪರಸ್ಪರ ಭೆಟ್ಟಿಯಾಗುವಂತೆ ಪರವಾನಿಗೆ ಕೊಡುವದು ಸಾಧ್ಯವಿಲ್ಲ. ಹೆಲ ಹಿಟ್ಲರ! ನಾನು ಪುನಃ ವಿನಂತಿಮಾಡಿಕೊಂಡೆ. ಆದರ ಉತ್ತರವೇ ದೊರೆಯಲಿಲ್ಲ. ಕಡೆಗೆ ಸ್ಪೆಶಿಲ ಟ್ರಿಬ್ಯೂನಲದ ಅಧ್ಯಕ್ಷರಿಗೆ ಪತ್ರ ಬರೆದುಕೊಂಡೆನು. ಯಾವ ಅಪರಾಧದಿಂದ ಫಿರೇಲಾಯಳಿಗೆ ಎಷ್ಟು ಶಿಕ್ಷೆಯಾಗಿದೆ? ಆಕೆ ಯಾವ ಜೇಲಿನಲ್ಲಿದ್ದಾಳೆ. ಈ ಮಾಹಿತಿ ನನಗೆ ತಿಳಿಯಬೇಕು. ಆದರ ಉತ್ತರ ಬಂದುದು ಹೀಗೆ—

" ರಾಜದ್ರೋಹದ ಆರೋಪದಿಂದ ನಿನ್ನ ಹೆಂಡತಿಗೆ, ಆರು ವರ್ಷ ಸಕ್ತ ಮಜೂರಿ ಶಿಕ್ಷೆ ಆಗಿದೆ. ಲ್ಯುಬೆಕದ ಹೆಂಗಸರ ಜೇಲಿನಲ್ಲಿ ಆಕೆ ಇರುವಳು. "

ಇಷ್ಟು ತಿಳಿದಮೇಲೆ ಅವಳು ಗೆಸ್ಟಪೋ ಜನರಿಗೆ ಸಿಕ್ಕ ಬಗೆ ಹೇಗೆ? ಇತ್ಯಾದಿ ಮಾಹಿತಿಯನ್ನು ದೊರಕಿಸಲು ನಮ್ಮ ಸಂಘಟಿತ ಗುಪ್ತ ಹೇರರನ್ನು ಉಪಯೋಗಿಸಿಕೊಂಡೆ. ಅದು ಎಷ್ಟೋ ದಿನಗಳ ನಂತರ ತಿಳಿದಿತು. ಆದರೂ ಸಂಪೂರ್ಣವಾಗಿ ತಿಳಿಯಲಿಲ್ಲ. ಒಬ್ಬರು ಒಂದು ವಿಧ ಹೇಳಿದರೆ, ಇನ್ನೊಬ್ಬರು ಮತ್ತೊಂದು ವಿಧ ಹೇಳಬೇಕು. ಹೀಗೆ ದೊರೆತ ಮಾಹಿತಿಯನ್ನೇ ಒಟ್ಟುಗೂಡಿಸಿದ್ದು ಹೀಗೆ—

೧೯೩೪ರ ಅಕ್ಟೋಬರ ತಿಂಗಳವರೆಗೆ ಫಿರೇಲಾಯಳು ಕೋಪನಹೆಗನದಲ್ಲಿಯೇ ಕಾಮಿಂಟರ್ನದ ಕಾರ್ಯ ಮಾಡುತ್ತಿದ್ದಳು. ಎಂದರೆ ಹಾಂಬುರ್ಗದಲ್ಲಿ ನಾನು ಗೆಸ್ಟಪೋದವರ ಕೈಯಲ್ಲಿ ಸಿಕ್ಕನಂತರ ಹನ್ನೊಂದು ತಿಂಗಳು ಆಕೆ ಕೋಪನಹೆಗನದಲ್ಲಿಯೇ ಇದ್ದಳು. ನನ್ನ ಬಂಧನದಿಂದ ಆಕೆಗೆ ಅತ್ಯಂತ ದುಃಖವಾಗಿದ್ದಿತು. ಆ ದುಃಖದ ಭರದಲ್ಲಿ ವಾಲವೆಬರನ ಮೇಲೆ ಬಹಿರಂಗವಾಗಿಯೇ ಆರೋಪ ಮಾಡಿದಳು. ೧೯೩೪ರ ವಸಂತ ಋತುವಿನಲ್ಲಿ ನಾನು ಮರಣಹೊಂದಿದೆನೆಂದು, ಹೇಗೋ ಕಾಮಿಂಟರ್ನದ ಗುಪ್ತ ಹೇರರಿಗೆ ಸುದ್ದಿ ತಿಳಿದಿತು. ಇದನ್ನು ಫಿರೇಲಾಯಳು ಕೇಳಿ ಮಾನ್ಸೋ

ದಲ್ಲಿರುವ ಪಿಲಿಟನಿಟ್ಟ್ಸುನಿಗೆ ಈ ರೀತಿ ಪತ್ರ ಒರೆಸಳು. ಆ ಪತ್ರದಲ್ಲಿ ವಾಲ ವೆಬರನಮೇಲೆ ಸ್ಪಷ್ಟ ಆರೋಪವಿದ್ದಿತು. ನಾವಿಕ ಪ್ರಚಾರ ಕಾರ್ಯಕ್ಕೆಂದು ದೊರೆಯುವ ಹಣ ಎತ್ತಿಹಾಕಲಿಕ್ಕೆ ವಾಲವೆಬರನು ಚಾಸನಸ್ನು ಬೇಕೆಂತಲೇ ಜರ್ಮನಿಗೆ ಕಳಿಸಿದ್ದಾನೆ. ರಶಿಯಕ್ಕೆ ಹೊರಟ ಓರ್ವ ಬೆಲ್ಜಮು ಕಾಮ್ರೆಡನ ಸಂಗಡ ಈ ಪತ್ರವಿತ್ತು. ಕಡೆಗೆ ಅದು ಮಾಸ್ಕೋದವರೆಗೆ ಮುಟ್ಟಿತೋ, ಇಲ್ಲವೋ, ತಿಳಿಯಲಿಕ್ಕೆ ಮಾರ್ಗವಿರಲಿಲ್ಲ. ಇಷ್ಟು ಮಾತ್ರ ನಿಜ. ಆಕೆಯ ಪತ್ರ ಹೋದ ತುಸು ದಿನಗಳಲ್ಲಿ, ವಾಲವೆಬರ ಒಂದು ಗುಪ್ತ ಕಾರ್ಯದ ಸಲುವಾಗಿ ಆಕೆಗೆ ಜರ್ಮನಿಗೆ ಹೋಗಬೇಕೆಂದು ವಿಧಿಸಿದನು. ಮುಂದೆ ಮೂರು ತಿಂಗಳಿಗೆ ಚ್ರಿಮೆನ ಪಟ್ಟಣದಲ್ಲಿ ಗೆಸ್ಟಪೋ ಜನರು ಆಕೆಯನ್ನು ಹಿಡಿದರು. ನನ್ನ ಛಲಮಾಡಿದ ಕ್ರಾವುಸನ ಮುಂದೆ ಆಕೆ ಸಹ ನಿಲ್ಲಬೇಕಾಯಿತು. ಕಡೆಗೆ ಆರು ವರ್ಷ ಸಕ್ತ ಮಜೂರಿ ಶಿಕ್ಷೆ ಆಗಿದ್ದಿತು.

ಇದೆಲ್ಲ ಸಂಗತಿ ತಿಳಿದು ದುಃಖವಾದುದಂತೂ ಸರಿಯೇ. ಏನಾದರೂ ಮಾಡಿ ಫಿರೇಲಾಯುಳನ್ನು ಬಂದಿವಾಸದಿಂದ ಬಿಡುಗಡೆ ಮಾಡಬೇಕೆಂಬ ವಿಚಾರ ಬಲವಾಗಹತ್ತಿತು. ಆಕೆ ಸುಖವಾಗಿದ್ದು, ನನಗೆ ಒಬ್ಬನಿಗೇ ಕಷ್ಟದ ಈ ಬಂದಿವಾಸ ಒದಗಿದ್ದರೆ ಅದೇನೂ ಮಹತ್ವದ್ದೆನಿಸುತ್ತಿರಲಿಲ್ಲ. ಆದರೆ ಅವಳೂ ಗೆಸ್ಟಪೋ ಜೇಲಿನಲ್ಲಿ ಕೊಳೆಯುತ್ತ ಬೀಳುವದು ನನಗೇಕೋ ಸಹನವಾಗಲಿಲ್ಲ. ಆಕೆಯ ಬಿಡುಗಡೆಗೆ ಬೇಕಾದ ಸಾಹಸ ಮಾಡಲು ನಾನು ಸಿದ್ಧನಿದ್ದೆ. ಯಾವ ಸಾಹಸದಿಂದ ನನ್ನ ಹೇತು ಸಫಲವಾಗುವದೆಂಬುದು ಮಾತ್ರ ನನಗೆ ತಿಳಿಯದಾಯಿತು. ಅದೇ ರಾತ್ರಿ-ಹಗಲು ಚಿಂತೆ.

ಹೀಗಿರುವಾಗ ನನಗೆ ಮಾರ್ಗ ಕಾಣಿಸುವಂಥ ಒಂದು ಸಂಗತಿ ಅಕಸ್ಮಾತ್ ಘಟಿಸಿತು.

ಆ ದಿನ ಸಪ್ಟಂಬರ ೨೯ ನೇ ತಾರೀಖು. ಬೆಳಗಿನ ಹತ್ತುಗಂಟೆಗೆ ನನ್ನ ಕೊಟ್ಟಡಿಯ ಬಾಗಿಲು ತೆರೆದಿತು. ನೋಡುತ್ತೇನೆ. ಪಹರೆಯವರ ಸಂಗಡ 'ರುಡಾಲ್ಫ ಹಾಯಿಟಮಾನ' ನು ಒಳಗೆ ಬಂದನು. ಇವನೆಂದರೆ ಯುಕ್ತಿಯಿಂದ ಗೆಸ್ಟಪೋ ದಳದಲ್ಲಿ ಸೇರಿದ ಕಾಮಿಂಟರ್ನದ ಕಾರ್ಯಕರ್ತ: ಅವನಿಗೀಗ ಗೆಸ್ಟಪೋದಲ್ಲಿ ದೊಡ್ಡಹುದ್ದೆ. ಇದು ನನಗೆ ಗೊತ್ತಿರುವ

ಕಾರಣ ಆಶ್ಚರ್ಯವಷ್ಟೇ ಅಲ್ಲದೆ ಉತ್ಸುಕತೆ ಎನಿಸಿತು. ಒಳಗೆ ಬಂದವನೇ ಹಾಯಿಟಮಾನನು ಪಹರೆಯವನಿಗೆ ಹೇಳಿದ. "ನಾನು ಇಲ್ಲಿಯೇ ಇರುತ್ತೇನೆ. ನೀನು ಹೊರಗೆ ಕೀಲಿಹಾಕು. ನಾನು ಈ ಕೈದಿಯ ತಪಾಸಣೆ ಮಾಡಬೇಕಾಗಿದೆ."

ಪಹರೆಯವನು ಹೊರಗೆ ಹೋಗಿ ಬಾಗಿಲಿಗೆ ಕೀಲಿ ಜಡಿದನು. ನಾವಿಬ್ಬರೂ ಪರಸ್ಪರ ಗುರುತಿಸುತ್ತಿದ್ದೆವು. ಕೊಟ್ಟಡಿಯಲ್ಲಿ ನಾವಿಬ್ಬರೇ ಇದ್ದರೂ ಹೊರಗೆ ಹೋದ ಪಹರೆಯವ ಬಾಗಿಲ ಕಿಂಡಿಗಳಲ್ಲಿ ನೋಡುತ್ತಿರುವದು ಇಬ್ಬರಿಗೂ ತಿಳಿದಿತ್ತು. ಆಗ ಗುರುತು ಪರಿಚಯ ಶಕ್ಯವಿರಲಿಲ್ಲ. ಜೇಲ ಅಧಿಕಾರಿಗಳ ಮುಂದೆ ನಿಲ್ಲುವಂತೆ ಹಾಯಿಟಮಾನನ ಮುಂದೆಯೂ ನಾನು ನಿಂತುಕೊಂಡೆನು.

ಹಾಯಿಟಮಾನನು ಒಮ್ಮೆಲೇ ಒಂದು ಜಾಡಿಸಿ ಗೋಡೆಗೆ ದಬ್ಬಿ, ಕೂಗಿದನು.

"ಬದಮಾಷ! ಒಳ್ಳೇ ಚೈನಿಯಿಂದ ನಿನ್ನ ವೇಳೆ ಸಾಗಿದೆ ಅಲ್ಲವೇ? ನಿಜವಾಗಿ ಎಂದರೆ ನಿನಗೆ ಫಾಶೀ ಏರಿಸಬೇಕಾಗಿತ್ತು."

ಹೇಗೆ, ಹೇಗೋ ಜೋಲಿಹಿಡಿದು ನಿಲ್ಲಬೇಕೆನ್ನುವಷ್ಟರಲ್ಲಿ ಮತ್ತೊಮ್ಮೆ ದೂಡಿದನು. ನಾನು ನೆಲಕ್ಕೆಬಿದ್ದೆನು. ಆಗ ನನ್ನ ಕಣ್ಣುಗಳು ಬಾಗಿಲ ಕಿಂಡಿಯಕಡೆ ತಿರುಗಿದವು. ನೋಡುತ್ತೇನೆ. ಪಹರೆಯವ ಅಲ್ಲಿ ಕಣ್ಣಿಟ್ಟಿದ್ದಾನೆ.

ಹಾಯಿಟಮಾನ ಒದರಿದನು. "ಏಳು. ನೆಲದಮೇಲೆ ಬಿದ್ದುಕೊಂಡಿರಲಿಕ್ಕೆ ಪರವಾನಿಗೆ ಯಾರು ಕೊಟ್ಟರು?"

ಹೇಗೋ ಎದ್ದುನಿಂತೆ. ಅವನು ಅಬ್ಬರಿಸಿದನು. "ನಾನು ವಿಚಾರಿಸುವ ಪ್ರಶ್ನೆಗಳಿಗೆ ನಿಜವಾದ ಉತ್ತರಕೊಡುವೆಯಾ?"

ನಾನಂದೆ. "ಕೊಡುತ್ತೇನೆ."

ಹಾಯಿಟಮಾನನು ಒಂದು ಸಣ್ಣ ಫೋಟೋ ತೆಗೆದನು. ತನ್ನ ಅಂಗೈಯಲ್ಲಿ ಇಟ್ಟುಕೊಂಡಂತೆ ಮಾಡಿ ನನ್ನ ಮುಂದೆ ಹಿಡಿದನು. ಪಾಸಪೋರ್ಟಿನಮೇಲೆ ಹಚ್ಚುವರಲ್ಲ ಅಂಥದೊಂದು ಒಬ್ಬ ತರುಣನ ಸಣ್ಣ ಫೋಟೋ ಅದು. ಹಾಯಿಟಮಾನ ವಿಚಾರಿಸಿದನು.

"ಈ ಆಸಾಮಿಯನ್ನು ನೀನು ಗುರುತಿಸುವಿಯೋ?'"

"ಇಲ್ಲ."

ಕೂಡಲೆ ತನ್ನ ಮುಷ್ಟಿಯಿಂದ ಮೂಗಿನಮೇಲೆ ಗುದ್ದಿಬಿಟ್ಟನು. ಮೂಗು ಬಿಚ್ಚಿ ರಕ್ತ ಹರಿಯತೊಡಗಿತು.

"ಹುಂ. ಈ ಫೋಟೋದಲ್ಲಿರುವವನನ್ನು ಗುರುತಿಸುವಿಯೋ ಇಲ್ಲವೋ?"

"ಇಲ್ಲ." ಹೀಗೆ ಉತ್ತರಕೊಡುವಾಗ ನಾನು ತಿಳಿದಿದ್ದೆ. ಇದನೆಲ್ಲ ವಿಚಾರಿಸಲಿಕ್ಕೆ ಹಾಯಿಟಮಾನ ಬಂದವನಲ್ಲ.

ಬಾಗಿಲು ಕಡೆಗೆ ನಾನು ನೋಡಿದಾಗ ಆ ಕಣ್ಣು ಹಾಗೇ ಇದ್ದವು.

ಹಾಯಿಟಮಾನ ಗದ್ದರಿಸಿದನು. "ಘಟಕೀ ಹೊಡೆತ ತಿನ್ನುವ ಹುರುಪು ನಿನಗೆ ಬಂದಿರುವದೋ?"

"ಇಲ್ಲ."

"ಹಾಗಾದರೆ ಈ ವ್ಯಕ್ತಿಯ ವಿಷಯಕ್ಕೆ ನಿನಗೆ ಗೊತ್ತಿದ್ದ ಸಂಗತಿ ಎಲ್ಲಾ ಹೇಳು."

ನಾನು ಏನೂ ಮಾತಾಡಲಿಲ್ಲ.

ಹಾಯಿಟಮಾನ ಕೈ ಮೇಲೆತ್ತಿ ಆ ಫೋಟೋವನ್ನು ನನ್ನ ಮೂಗಿಗೆ ಹಚ್ಚಿದಂತೆ ಹಿಡಿದನು. ಹಲ್ಲುಕಡಿಯುತ್ತ ತನ್ನ ಮುಖವನ್ನು ಅಷ್ಟು ಸಮೀಪಕ್ಕೆ ತಂದುದನ್ನು ನೋಡಿದರೆ ನನ್ನ ಕುತ್ತಿಗೆ ತಿರುಹುವನೇನೋ ಅನಿಸುವಂತಿದ್ದಿತು. ಅವನ ಕಣ್ಣುಗಳಲ್ಲಿ ವಿಲಕ್ಷಣ ತೇಜ ಕಂಡಿತು. ಮೆಲ್ಲನೆ ಪುನಃ ನುಡಿದನು.

"ಈ ಫೋಟೋ ಚನ್ನಾಗಿ ನೋಡು. ಇದರಲ್ಲಿಯ ಮನುಷ್ಯನ ಎಲ್ಲ ಮಾಹಿತಿ ಹೇಳು."

ದಿಟ್ಟಿಸಿ ನಾನು ನೋಡಿದಾಗ ಆ ಫೋಟೋ ಅಸ್ಸ್ಟ್ ವಾಲವೆಬರನದೆಂದು ಕಂಡಿತು.

"ಚನ್ನಾಗಿ ನೋಡಿಕೊಂಡು ವಿಚಾರಮಾಡು." ಎಂದು ಗೊಗ್ಗರು ದನಿಯಿಂದ ಹೇಳುತ್ತ, ತನ್ನ ಉಂಗುರ ತುದಿಯಿಂದ ಕೈಯೊಳಗಿನ ಆ ಫೋಟೋದ ಸಣ್ಣ ಕಾಗದವನ್ನು ಚಲಾಕಿಯಿಂದ ತಿರುವಿ ನನ್ನ ಮುಂದೆ

ಹಿಡಿದನು. ಅವನ ಭಾರೀ ಬೆನ್ನು ಅಡ್ಡಾಗಿರುವದರಿಂದ ಈ ಚಮತ್ಕಾರ ಪಹರೆಯವನಿಗೆ ತಿಳಿಯುವದು ಸಾಧ್ಯವಿರಲಿಲ್ಲ. ಆ ಫೋಟೋದ ಹಿಮ್ಮಗ್ಗಲು, ಎರಡು-ಮೂರು ಸಣ್ಣ ಸಣ್ಣ ವಾಕ್ಯಗಳಿದ್ದವು. ಅವುಗಳನ್ನು ದಿಟ್ಟಿಸಿ ನಾನು ನೋಡಹತ್ತಿದೆನು. "ಗೆಸ್ಟಪೋದಲ್ಲಿ ಪ್ರವೇಶಮಾಡುವ ಇಚ್ಛೆ ಇರುವದೆಂದು ನೀನು ಸೋಗುಹಾಕು. ಇದು ಅನುಕೂಲ ಸಂಧಿ. ನನ್ನೊಡನೆ ಮಾತಾಡುವಾಗ ಜಾಗ್ರತೆ." ಹಾಯಿಟಮಾನ ಒದರಿ ಕೇಳಿದನು. "ವಾಲವೆಬರನು ಈ ಆಸಾಮಿಯನ್ನು ಗುರುತಿಸುವನೋ ಇಲ್ಲವೋ?"

ಮೆಲ್ಲನೆ ನಾನಂದೆ. "ಗುರುತಿಸುತ್ತಿರಬಹುದೆಂದು ಕಾಣುತ್ತದೆ."

"ನಿನ್ನ ಸಂಶಯ ನಮಗೆ ಬೇಡ. ಈ ಆಸಾಮಿ ಮತ್ತು ವಾಲವೆಬರ ಇವರಿಗೆ ಗುರುತು ಇತ್ತೋ ಇಲ್ಲವೋ?"

"ಇತ್ತು."

ಕೈಯಲ್ಲಿದ್ದ ಫೋಟೋ ಜೇಬಿನಲ್ಲಿಟ್ಟು ಹಾಯಿಟಮಾನ ವಿಚಾರಿಸಿದನು.

"ಈ ಮನುಷ್ಯನ ಕಡೆಗೆ ನಿನ್ನ ಸಮಕ್ಷ ವಾಲವೆಬರನು ಏನಾದರೂ ಕೆಲಸ ಒಪ್ಪಿಸಿದ್ದನೋ?"

"ಹೌದು."

"ಯಾವ ಕೆಲಸ ಅದು?"

"ಪೋಲೀಸು ಖಾತೆಗೆ ಅದರ ಸಂಬಂಧವೇನೋ ಇತ್ತು."

"ಹೀಗೋ" ಎಂದು ಉದ್ಗರಿಸಿ ಚೀರುವಂತೆ ಅಂದನು. "ಮೊದಲೇ ಇಷ್ಟು ಹೇಳಲಿಕ್ಕೆ ಪ್ರಾಣಹೋಗುತ್ತಿದ್ದಿತೇ? ನಿನ್ನದು."

ಅವನು ತಿರುಗಿ ಮುಷ್ಟಿಯಿಂದ ಬಾಗಿಲವನ್ನು ಟಕ-ಟಕ ಬಾರಿಸಿದನು. ಪಹರೆಯವ ಬಾಗಿಲು ತೆರೆದಕೂಡಲೆ ಅವನಿಗೆ ಹೇಳಿದನು.

"ಈಗ ಸ್ವಾರೀ ಮೆತ್ತಗಾಗಿ ಮಾತಾಡಹತ್ತಿದೆ. ನಿನ್ನ ಕೆಲಸಕ್ಕೆ ಹೋಗಬೇಕಾಗಿದ್ದರೆ ನೀನು ಹೋಗು."

ಪಹರೆಯವ ಹೊರಟುಹೋದ. ನನ್ನ ಕೊಟ್ಟಡಿಯಲ್ಲಿ ನಾನು ಮತ್ತು ಹಾಯಿಟಮಾನ ಇಬ್ಬರೇ ಉಳಿದೆವು. ಇನ್ನು ಅವನು ನಮ್ಮ ಕಮ್ಯುನಿಷ್ಟ ಮುಖ್ಯ ಕಚೇರಿಯಿಂದ ನನಗಾಗಿ ತಂದ ಸಂದೇಶ ಹೇಳುತ್ತಾನೆ ಎಂಬ ವಿಷಯಕ್ಕೆ ಏನೂ ಸಂದೇಹ ಉಳಿಯಲಿಲ್ಲ. ಅವನು ಮಾತಾಡುವ ಹಾದಿ

ನೋಡಹತ್ತಿದೆ. ಜೇಬಿನಿಂದ ಒಂದು ಚಪ್ಪಟೆ ಬಾಟಲಿ ತೆಗೆದು ಮದ್ಯದ ಎರಡು ಗುಟುಕು ಕುಡಿದನು.

ಮೆಲ್ಲನೆ ನಾನಂದೆ. "ಹುಂ ಹೇಳು."

ಮೆಲ್ಲನೆ ಅವನು ಹೇಳಹತ್ತಿದನು. "ಮುಖ್ಯ ಕಚೇರಿಯ ಒಂದು ಆಸಾಮಿಯ ಸಂಗಡ ನಾನು ಮಾತಾಡಿದ್ದೇನೆ. ಕಂಪನಿಯವರಿಗೆ ನಿನ್ನ ಪೂರ್ಣ ಗುಣಗಳ ಪರಿಚಯವಿದೆ. ನಮ್ಮ ಪ್ರತಿಸ್ಪರ್ಧಿಗಳ ಕಾರಖಾನೆಯಲ್ಲಿ ನೀನು ಸೇರಿಕೊಳ್ಳಬೇಕೆಂದು ಕಂಪನಿಯವರ ಅಭಿಪ್ರಾಯ. ಪ್ರತಿಸ್ಪರ್ಧಿಗಳ ವ್ಯವಹಾರದಲ್ಲಿಯ ಶಕ್ಯವಾದಷ್ಟು ಗುಪ್ತ ಮಾಹಿತಿ ದೊರಕದ ವಿನಾ, ನಮ್ಮ ವಿಕ್ರಿಯ ಪ್ರಮಾಣವು, ಬೆಳೆಯಬೇಕಾದಷ್ಟು ಬೆಳೆಯುವದಿಲ್ಲ......."

ಕಂಪನಿ, ಎಂದರೆ ನಮ್ಮ ಪಕ್ಷ. ಮತ್ತು ಪ್ರತಿಸ್ಪರ್ಧಿ, ಎಂದರೆ ಗೆಸ್ಟಪೋ ಇಷ್ಟು ನನಗೆ ತಿಳಿಯುವಂತಿತ್ತು. ಅದಕಾಗಿ ಅವನ ಸಾಂಕೇತಿಕ ಮಾತಿನ ಅರ್ಥ ಸಹಜ ಲಕ್ಷ್ಯದಲ್ಲಿ ಬಂದಿತು. ಹೀಗೆ ನಮ್ಮ ಪಕ್ಷದ ವರಿಷ್ಠರು ಯೋಜಿಸಿರುವರೋ! ಇದೇತರದ ಆಜ್ಞೆಯನ್ನು ಇಬ್ಬರು – ಮೂವರಿಗೆ ಕೊಟ್ಟಂತೆ ಸ್ಮರಣದಲ್ಲಿತ್ತು. ಅದರೊಡನೆಯೇ ಬೇರೆ ಸ್ಮರಣವಾಗುತ್ತಿದ್ದಿತು. ಹಾಗೆ ಪ್ರಯತ್ನಿಸಿದವರು ಮೃತ್ಯುಮುಖದಲ್ಲಿ ಸೇರಿಕೊಂಡರು.

ನಾನು ಹಾಯುಟಮಾನನಿಗೆ ಕೇಳಿದೆ. "ಪ್ರತಿಸ್ಪರ್ಧಿಗಳ ಕಂಪನಿಯಲ್ಲಿ ನನಗೆ ಪ್ರವೇಶ ದೊರೆಯುವದು ಅಶಕ್ಯ. ನನ್ನ ಹೆಸರು ಬಹಳ ಕೆಟ್ಟುಹೋಗಿದೆ."

ಹಾಯುಟಮಾನ ತಲೆ ಅಲ್ಲಾಡಿಸಿ ಹೇಳಿದನು. "ನೀನು ತಪ್ಪುವಿ. ನಿನ್ನ ಹೇತು ಸಫಲವಾಗುವಂತೆ ತುಸು ಸಿದ್ಧತೆ, ಮೊದಲೇ ಆಗಿದೆ. ಇನ್ನು ನಿನಗೆ ಸಹಾಯ ದೊರೆಯುವದು. ಪ್ರತಿಸ್ಪರ್ಧಿಗಳಿಗೆ ನಿನ್ನಂಥ ತರುಣ, ಕುಶಲ ಮನುಷ್ಯರು ಸಿಕ್ಕರೆ ಯಾವಾಗಲೂ ಬೇಕು. ವೇಳೆ ಹಿಡಿದೀತು, ಎಚ್ಚರದಿಂದ ನಡೆಯಬೇಕಾದೀತು. ಆದರೂ ನಿನ್ನ ಕಾರ್ಯ ವಾದೀತು.

"ನಾನು ಯುಕ್ತಿಯನ್ನಾದರೂ ಏನು ಮಾಡಬೇಕು ?"

"ಅದನ್ನು ನಾನು ಹೇಗೆ ಹೇಳಲಿ? ಆ ಕಪಟನಾಟಕ ಹೇಗೆ

ರಚಿಸಬೇಕೆಂಬುದನ್ನು ನೀನೇ ವಿಚಾರಿಸು. ಬಹಳವಾದರೆ ನಾನು ಮೊದಲಿಗೇನು ಮಾಡಬೇಕೆಂಬುದನ್ನು ಹೇಳಬಲ್ಲೆ."

"ಹೇಳು."

"ಹಿಟ್ಲರನ 'ಮಾಯಿನಕಾಂಫ' ಪುಸ್ತಕ ಓದಲಿಕ್ಕೆಂದು ಬೇಡು. ಬಹುಶಃ ಈ ಬೇಡಿಕೆಯಿಂದ ಅನುಕೂಲ ಪರಿಣಾಮವಾಗುವದು. ಆಮೇಲೆ ನೋಗುಹಾಕು. ರಶಿಯದಲ್ಲಿ ದೊಡ್ಡ ಪ್ರಮಾಣದಿಂದ ನಡೆದ ಕೊಲೆಗಳ ವಾರ್ತೆ ಕೇಳಿ ಮನುಸ್ಸು ಹೇಸಿದೆ. ಮತ್ತು ಕಂಪನಿಯ ಮೇಲಿನ ವಿಶ್ವಾಸ ಹಾರಿಹೋಗಿದೆ. ಇಷ್ಟುಮಾಡಿ ಏನಾದರೂ ಪರಿಣಾಮವಾಗುವದೋ ನೋಡು. ನಿನ್ನ ದೈವ ಅನುಕೂಲವಿದ್ದರೆ ಕಾರ್ಯದಲ್ಲಿ ಜಯ. ಇರಲಿ, ಜೇಲಿನಲ್ಲಿದ್ದು ಎಷ್ಟು ದಿನವಾಯಿತು?"

"ಸುಮಾರು ಮೂರು ವರ್ಷ."

"ಹೀಗಿದ್ದಮೇಲೆ ನಿನ್ನ ಪೂರ್ವ ಚಾರಿತ್ರ್ಯದ ವಿಷಯಕ್ಕೆ ತಿರಸ್ಕಾರ ಹುಟ್ಟಿದೆ. ಎಂದು ನಟಿಸಿ ತೋರಿಸುವದು ಬಹಳ ಸುಲಭ!"

"ನಾನು ವಿಚಾರಿಸಿ ನೋಡುತ್ತೇನೆ."

ಕಿಂಚಿತ್ ನಕ್ಕು ಹಾಯಿಟಮಾನನೆಂದ. "ಏನು ವಿಚಾರ ಮಾಡುತ್ತೀ. ನನ್ನ ಕಡೆಗೆ ಚನ್ನಾಗಿ ನೋಡು. ಹೀಗೇ ನಾನು ಗೆಸ್ಟಪೋದಲ್ಲಿ ಸೇರಿಕೊಂಡಿದ್ದೇನೆ. ಇಷ್ಟು ವರ್ಷಗಳಾದರೂ ತಲೆ ಸುರಕ್ಷಿತವಾಗಿದೆ."

ಇಷ್ಟುಹೇಳಿ ಪಹರೆಯುವನನ್ನು ಕೂಗಿದನು. ಹೆಲ ಹಿಟ್ಲರ! ಎಂದು ಸಲಾಮುಕೊಟ್ಟು ಅವನು ಹೊರಟುಹೋದನು.

ಆ ಇಡೀ ದಿನವೆಲ್ಲ ನಾನು ಕೊಟ್ಟಡಿಯಲ್ಲಿ ತಿರುಗಾಡುತ್ತಲೇ ಇದ್ದೆ. ನಿದ್ರೆ ಬರಲಿಲ್ಲ. ಒಂದು ಕ್ಷಣ ಸಹ ಕಣ್ಣಿಗೆ ಕಣ್ಣುಹತ್ತಲಿಲ್ಲ. ಜ್ವರ ಬಂದಂತೆ ಮೈಯೆಲ್ಲ ಕಾದುಹೋಗಿತ್ತು. ಈಗಿನ ಮುಖ್ಯ ಕಚೇರಿಯ ಹುಕುಮು ಎಂದರೆ ಅಷ್ಟು ಕಠಿಣವೆನಿಸಿದ್ದಿತು. ಹಿಂದೆ ಮಾಡಿದ ಕಾರ್ಯಗಳಿಗಿಂತಲೂ ಹೆಚ್ಚು ಕಠಿಣ. ಹೆಚ್ಚು ಸಾಹಸದ್ದು. ಇದರಿಂದ ನಾನು ಪ್ರಾಣಾಂತಿಕ ಸಂಕಟದಲ್ಲಿ ಸಿಲುಕುತ್ತಿದ್ದೆ. ಈ ಮಾರ್ಗದಿಂದ ನನಗೆ ಸ್ವಾತಂತ್ರ್ಯ ಸುಖ ಸಿಗುವದಿರಲಿ. ಪ್ರಾಣ ಉಳಿಯದೆಂದು ಸ್ಪಷ್ಟ ಕಾಣುತ್ತಿದ್ದಿತು. ಮಾರ್ಗ ಹಿಡಿಯದೇ ಬಿಡುವಂತಿಲ್ಲ. ನನಗೂ ಸಾಹಸದ

ಮೋಹವೆನಿಸಿ ಮನಸ್ಸು ಆ ಕಡೆಗೆ ಎಳೆಯುತ್ತಿದ್ದಿತು. ಹೀಗೆ ರಾತ್ರಿ ಕಳೆಯುತ್ತ ಬಂತು. ಬೆಳಗಿನಲ್ಲಿ ತಂಗಾಳಿಯೊಡನೆ ತಂಬಾಕದ ಮೋಹಕ ಉಗ್ರ ಸುಗಂಧವು ಕೊಟ್ಟಡಿಯಲ್ಲಿ ತುಂಬಿತು. ಹೊರಗಿನ ಪಹರೆಯವ ಸಿಗಾರೇಟು ಸೇದಿರಬೇಕು. ಮುಂದೆ ನನಗೆ ನಿದ್ರೆ ಹತ್ತಿದುದು ಗೊತ್ತಾಗಲಿಲ್ಲ.

ಮುಂಜಾವದಲ್ಲಿ ಎದ್ದಾಗ ಮನಸ್ಸಿನ ಹೊಯ್ದಾಟ ಅಡಗಿತ್ತು. ನಿಶ್ಚಯಮಾಡಿಕೊಂಡಿದ್ದೆ. ಪಕ್ಷದ ಆಜ್ಞೆಯಂತೆ ನಡೆಯುವದೇ ಕರ್ತವ್ಯ.

ಬಾಗಿಲು ತೆರೆದು ಪಹರೆಯವ ಒಳಗೆ ಬಂದಾಗ ನಾನಂದೆ—

"ನನ್ನದೊಂದು ವಿನಂತಿಯನ್ನು ಅಧಿಕಾರಿಗಳಿಗೆ ತಿಳಿಸು."

"ಯಾವದು?"

"ಹಿಟ್ಲರನ, 'ಮಾಯಿನಕಾಂಫ' ಪುಸ್ತಕ ಓದಲಿಕ್ಕೆ ಬೇಕಾಗಿದೆ."

ಅವನೆಂದ. "ಶಕ್ಯವಿಲ್ಲ."

ಒಂದೇ ಸಮನೆ ನಾನು ಗಂಟುಬಿದ್ದೆನು. ಜೇಲ ಅಧಿಕಾರಿಯ ಭೆಟ್ಟಿಯಾಗಬೇಕೆಂದು ಹೇಳಿಕೊಂಡೆ. ಅವನ ಮುಂದೆ ನಿಲ್ಲಿಸಿದರು. ಆಗ ನಾನು ಹೇಳಿದೆ. "ಹಿಟ್ಲರನ ಮಾಯಿನಕಾಂಫ ಪುಸ್ತಕ ನನಗೆ ಓದಲಿಕ್ಕೆ ಬೇಕಾಗಿದೆ." ಅವನು ತಪಾಸಣಿ ಮಾಡಿದಂತೆ ಕೆಲವು ಪ್ರಶ್ನ ವಿಚಾರಿಸಿದನು. ಕಡೆಗೆ ನನ್ನ ವಿನಂತಿ ಮಾನ್ಯಮಾಡುವದಿರಲಿ, ವಿನಂತಿ ಮಾಡಿಕೊಂಡದ್ದಕ್ಕೆ ಶಿಕ್ಷೆ ಕೊಟ್ಟನು.

ಆದರೂ ಪ್ರಯತ್ನಮಾಡುವದೆಂದು ನನ್ನ ನಿಶ್ಚಯ. ಪಹರೆಯವನಿಂದ ಮೂರು ಕಾಗದ ಬೇಡಿ ತಕ್ಕೊಂಡು, ಗೆಸ್ಟಪೋ ಮುಖ್ಯ ಅಧಿಕಾರಿಯ ಹೆಸರಿನಿಂದ ಒಂದು ಅರ್ಜಿ ಸಿದ್ಧಗೊಳಿಸಿದೆನು. ಈ ಅರ್ಜಿಯಲ್ಲಿ ಕಮ್ಯುನಿಸ್ಟರ–ಸುಳ್ಳು–ಸೊಟ್ಟು–ದಿಟ ತಂತ್ರಗಳನ್ನು ಬರೆದೆನು. ಅವರ ಪ್ರಚಾರಕನಾಗಿ ಕೆಲಸ ಮಾಡಿದುದಕ್ಕೆ ಈಗ ನನಗಾಗುತ್ತಿರುವ ಪಶ್ಚಾತ್ತಾಪವನ್ನೂ ವರ್ಣಿಸಿದೆನು. ಅರ್ಜಿಯ ಕಡೆಗೆ ಬರೆದೆ. "ನಾನು ಜನ್ಮದಿಂದ ರಕ್ತದಿಂದ ನಿಜವಾದ ಜರ್ಮನನಿದ್ದೇನೆ. ಕಮ್ಯುನಿಸ್ಟ ಪಕ್ಷದ ಪುರಸ್ಕಾರ ಮಾಡುವದು; ಮತ್ತು ಮಾಸ್ಕೋದ ಸುಲತಾನಶಾಹಿಗೆ ಸಹಾಯವಾಗುವಂಥ ಯಾವದೇ ಕೃತ್ಯಮಾಡುವದೆಂದರೆ ನನ್ನ ಪಿತೃದೇಶದ ಭಯಂಕರ

ದ್ರೋಹ ಬಗೆದಂತೆ". ಎಂದು ಜೇಲಿನ ಈ ಏಕಾಂತವಾಸದಲ್ಲಿ ವಿಚಾರದಿಂದ ಹೀಗೆ ನನಗೆ ಖಾತ್ರಿ ಆಗಿದೆ. "

ಈ ಮಾತ್ರೆ ನಾಟಿತು. ತುಸು ದಿನಗಳಲ್ಲಿಯೇ ಮಾಯಿನಕಾಂಫದ ಒಂದು ಪುಸ್ತಕ ನನಗೆ ಕೊಟ್ಟರು. ಕೊಡುವದಕ್ಕಿಂತ ಮೊದಲು ಫುಲ್ಸ ಬ್ಯುಎಲೆಟ ಜೇಲು ಬಿಡಿಸಿ, ಫ್ಲೊ ಎಟ್‌ರ್ಬುನ್ನ್ಸಿ ಜೇಲಿಗೆ ಕಳಿಶಿದರು.

ಲಕ್ಷಪೂರ್ವಕವಾಗಿ ಮಾಯಿನಕಾಂಫ ಓದಹತ್ತಿದೆ. ಕಾಗದ ದೊರಕಿಸಿ ಅದರ ಮೇಲೆ ಪುಸ್ತಕದಲ್ಲಿಯ ಕೆಲವು ವಾಕ್ಯಗಳನ್ನೂ ಒಂದು ಪರಿಚ್ಛೇದಕ್ಕೆ ಪರಿಚ್ಛೇದವನ್ನೂ ಬರೆಯಹತ್ತಿದೆ. ಮಾರ್ಜಿನದಲ್ಲಿ ಕೇವಲ ಸತ್ಯ; ಇದರಲ್ಲೇನು ಸಂಶಯ! ಇಂಥ ಪ್ರಶಂಸಾತ್ಮಕ ಉದ್ಗಾರ ಬರೆಯುವದು; ಮತ್ತು ಕೊಟ್ಟಡಿಯ ಕಸಬಳಿಯುವವನಿಗೆ ಅವು ಸಹಜ ದೊರೆಯುವಂತೆ ಅತ್ತಿತ್ತ ಚಲ್ಲುವದು– ಈ ಕ್ರಮ ಸಾಗಿಸಿದೆ. ಆ ಕಾಗದಗಳನ್ನು ಜೇಲರನಿಗೆ ಮುಟ್ಟಿಸುವರು. ನನ್ನ ಕೇಸಿನಲ್ಲಿ ಅವುಗಳನ್ನು ಫಾಯಿಲು ಮಾಡಿಡುವರು. ಈ ವಿಷಯದಲ್ಲಂತೂ ಖಾತ್ರಿ ಇದ್ದಿತು. ಯಾವಾಗಾದರೊಮ್ಮೆ ನನ್ನ ಅಣ್ಣನ ಪತ್ರಗಳು ಬರುತ್ತಿದ್ದವು. ಓದಲಿಕ್ಕೊಂದು ಎರಡು ತಾಸು ನನ್ನ ಒಳಿಯಲ್ಲಿಯೇ ಅವುಗಳನ್ನು ಇಡುತ್ತಿದ್ದರು. ಆಮೇಲೆ ತೆಗೆದುಕೊಂಡು ಹೋಗುತ್ತಿದ್ದರು. ಆ ಪತ್ರಗಳಲ್ಲಿ ತೆರವು ಇದ್ದ ಸ್ಥಳ ಸಿಕ್ಕಲ್ಲಿ; ಹಿಟ್ಲರನೆಂದರೆ ಜರ್ಮನಿ, ಜರ್ಮನಿ ಎಂದರೆ ಹಿಟ್ಲರ. ಇದೇ ಸತ್ಯ! ಕಾಮ್ಯುನಿಝಂ ತತ್ವಜ್ಞಾನವೆಂದರೆ ಶುದ್ಧ ಪಾಪ!' ಕಮ್ಯುನಿಸ್ಟ ಪಕ್ಷದಲ್ಲಿ ಸೇರಿದವರು ತಮ್ಮ ಪಿತೃದೇಶದ ದ್ರೋಹ ಮಾಡುವರು. ಹೀಗೆಲ್ಲ ಬರೆಯಹತ್ತಿದೆನು. ಈ ಪತ್ರಗಳು ಗೆಸ್ಟಪೋ ಮುಖ್ಯ ಕಚೇರಿಯವರೆಗೆ ತಲುಪಿ, ನನ್ನ ಮತ ಪರಿವರ್ತನದ ವಿಷಯಕ್ಕೆ ಅಲ್ಲಿ ಚರ್ಚೆ ನಡೆಯುವದು. ಈ ವಿಷಯಕ್ಕೂ ಸಂದೇಹವಿರಲಿಲ್ಲ ನನಗೆ.

ಎಷ್ಟೋ ವಾರ ಕಳೆದವು. ನನ್ನ ಕಪಟ ನಾಟಕ ಯಶಸ್ವಿಯಾಗುವದೋ, ಇಲ್ಲವೋ ತಿಳಿಯಲಿಕ್ಕೆ ಏನೂ ಮಾರ್ಗವಿದ್ದಿಲ್ಲ. ಆದರೂ ಆ ವಿಚಿತ್ರ ಉದ್ಯೋಗವನ್ನು ನಾನು ಒಂದೇ ಸಮನೆ ಸಾಗಿಸಿದ್ದೆ.

ಕಡೆಗೆ ದೈವ ತೆರೆದಿತು. ಒಂದುದಿನ ಪಹರೆಯವ ಒಳಗೆ ಬಂದು ನಮ್ಮ ಸಾಮಾನು ಕಟ್ಟಿಕೊಳ್ಳಲಿಕ್ಕೆ ಹುಕುಮು ಕೊಟ್ಟನು.

ನಾನು ವಿಚಾರಿಸಿದೆ. “ನನ್ನನ್ನು ಎಲ್ಲಿಗೆ ಒಯ್ಯುತ್ತಾರೆ?”

ಕೈಯೊಳಗಿನ ಮುದ್ರಿತ ಹುಕುಮು ನೋಡುತ್ತ ಅವನೆಂದ.

“ಗೆಸ್ಟಪೋ ಅಧಿಕಾರಿಗಳು ನಿಮಗೆ ಭೆಟ್ಟಿಯಾಗಬೇಕಾಗಿದೆ. ಅದಕ್ಕಾಗಿ ನಿಮ್ಮನ್ನು ಹಾಂಬುರ್ಗಕ್ಕೆ ಕಳಿಸಬೇಕೆಂದು ಹುಕುಮು ಬಂದಿರುತ್ತದೆ.”

ಮರುದಿನವೇ ಹಾಂಬುರ್ಗದ ಮುಖ್ಯ ಕಚೇರಿ. ಹಿಂದೆ ನನ್ನ ತಪಾಸಣೆಯು-ಛಲ ನಡೆದ ಸ್ಥಳದಲ್ಲಿಯೇ ನಾನು ಪುನಃ ಕಾಲಿಟ್ಟೆ. ನಾನು ಒಳಗೆ ಹೋಗುವಾಗ ಕೈಯೊಳಗಿನ ಬೇಡಿಗಳನ್ನು ಈಗ ಕಳಚಿದ್ದರು. ಅತ್ತ-ಇತ್ತ ನೋಡಿದರೆ ಆ ಸ್ಥಳದ ಸ್ವರೂಪ ಹಿಂದಿನಂತೇ. ಅಲ್ಲೊಂದು ದೊಡ್ಡ ಮೇಜಿನ ಹಿಂದೆ ಹರ್ಥಾ ಜೇನ್ಸ್ ಕುಳಿತಿರುವದು ಕಾಣಿಸಿತು. ಮೂರುವರ್ಷ ಕಳೆದು ಹೋಗಿದ್ದರೂ ಆ ಅಮ್ಮನವರು ಮೊದಲಿನಂತೆಯೇ ಕಂಡರು. ಉಡುಪು ಮಾತ್ರ ಮೊದಲಿನಗಿಂತ ಬೆಲೆಯದು. ಮುಂಗೈ ಮೇಲಿದ್ದ ಗಡಿಯಾರದ ಹರಳುಗಳು ಮಿಂಚುತ್ತಿದ್ದವು. ನನ್ನನ್ನು ನೋಡಿದೊಡನೆ ಆಕೆ ಗೋಣು ಮಣಿಸಿ ಅತಿಶಯ ಮೋಹಕ ಹಾಸ್ಯ ತೋರಿ ನುಡಿದಳು. “ಹಲೋ! ಹೇಗೆ, ಏಸು? ಒಳಿತೇ? ನೀನು ಬರುವಿ ಎಂದು ವರದಿಯಾಗಿತ್ತು ನಮಗೆ. ಎಂದು ಮಾತಾಡಿ ಯಾರಿಗೋ ಫೋನಿನಲ್ಲಿ ಹೇಳಿದಳು. “ಅವನು ಬಂದಿದ್ದಾನೆ.”

ಇನ್ಸಪೆಕ್ಟರ ಕ್ರಾವುಸ ಬಂದು, ಮತ್ತೊಂದು ಭಾಗದಲ್ಲಿ ನನ್ನನ್ನು ಕರೆದೊಯ್ದನು. ಈ ಭಾಗ ಮಾತ್ರ ತುಸು ಏನೋ ಅಲಂಕೃತವಾಗಿದ್ದಿತು. ಕುರ್ಚಿ-ಮೇಜು-ದೀಪ-ಪುಸ್ತಕದ ಕಪಾಟು ಒಂದು ಗೋಡೆಯ ಮೇಲೆ ಹಿಟ್ಲರನ ದೊಡ್ಡ ಫೋಟೋ.

ಕ್ರಾವುಸನು ಕುರ್ಚಿಯ ಮೇಲೆ ಕೂಡುವಂತೆ ನನಗೆ ಹೇಳಿದನು. ತಾನು ಕೂಡುವಾಗ ನನ್ನ ಮುಂದೆ ಸಿಗಾರು ತುಂಬಿದ ಬೆಳ್ಳಿಯ ಡಬ್ಬಿಯನ್ನು ತೆರೆದು ನನ್ನ ಮುಂದಿಡುತ್ತ ಹೇಳಿದನು. “ತೆಗೆದುಕೊಳ್ಳಿರಲ್ಲ.”

ನಾನು ಒಂದು ಸಿಗಾರು ತೆಗೆದುಕೊಂಡೆ. ತುದಿಗೆ ಸೋನೇರಿ ವರ್ಕು ಹಚ್ಚಿದ ಭಾರಿ ಸಿಗಾರು ಅದು. ಕ್ರಾವುಸ ಕಡ್ಡಿ ಕೊರೆದು ನನ್ನ

ಸಿಗಾರಿಗೆ ಹಚ್ಚಿದನು. ನಾನು Thank you ಎಂದೆ. ಹಿಂದೆ ಇದೇ ಗೃಹಸ್ಥ ನನ್ನ ಛಲ ಮಾಡಿದುದು ನೆನಪಿಗೆ ಬರದೇ ಇರಲಿಲ್ಲ.

ಮೇಜಿನಿಂದ ಕೆಲವು ಕಾಗದ ತೆಗೆದು ತೋರಿಸಿದನು. ಅವೆಲ್ಲ ನಾನು ತಾವುಗಟ್ಟಲೆ ಬರೆದ ಅರ್ಜಿಗಳು. ಕ್ರಾವುಸ ವಿಚಾರಿಸಿದನು.

" ಇವುಗಳನ್ನೆಲ್ಲ ಬರೆಯುಬೇಕೆಂದು ನಿಮಗೆ ಏಕೆ ಅನಿಸಿತು ? "

ಆ ಪ್ರಶ್ನೆ ಕೇಳಿ ನಾನು ಗೊಂದಲದಲ್ಲಿ ಬಿದ್ದಂತೆ ನಟಿಸಿ. ತಡೆದು ಹೇಳಿದೆನು. " ನಿಮ್ಮ ಪ್ರಶ್ನೆಗೆ ಉತ್ತರಕೊಡಬೇಕಾದರೆ, ನಾನು ಬಹಳ ಹಳೇ ಕತೆ ಹೇಳಬೇಕಾಗುವದು. "

" ಜೇಲಿನಲ್ಲಿ ನೀವು ಎಷ್ಟು ದಿನದಿಂದ ಇರುವಿರಿ ?

" ನನಗೆ ಶಿಕ್ಷೆಯಾಗಿ ಮೂರು ವರ್ಷ ಒಂದು ತಿಂಗಳಾಯಿತು. "

" ಅಂದಿನಿಂದ ಹೇಳುವ ಕತೆ ಇದೆಯೋ ?

" ಇಲ್ಲ; ಅದಕ್ಕೂ ಮೊದಲಿನದನ್ನು ನಾನು ಹೇಳಬೇಕು. "

ಕ್ರಾವುಸ ಮತ್ತೊಂದು ಸಿಗಾರೇಟು ಹಚ್ಚಿದನು. ಒಳ್ಳೇ ತಲಬುಗಾರ. ನನಗೆಂದನು.

" ಒಳ್ಳೇದು ಆರಂಭಿಸಿ. ಮನಸ್ಸಿನಲ್ಲಿ ಇರುವದನೆಲ್ಲ ಹೇಳಿಬಿಡಿ. ಹೇಗೆ ನಾನು ಲಕ್ಷ್ಯಕೊಟ್ಟು ಕೇಳುವೆನೆಂಬುದನ್ನು ನೋಡುವಿರಂತೆ. "

ಪ್ರಾರಂಭದಲ್ಲಿ ತಡೆ-ತಡೆದು ಕಡೆಗೆ ಅಸ್ಖಲಿತವಾಗಿ ನಾನು ಮಾತಾಡ ಹತ್ತಿದೆ. ಮೂರು ಗಂಟೆಗೆ ನನಿಯುದ ಅಂಗಡಿಯಿಂದ ಊಟ ತರಿಸಿದನು. ಊಟದ ವೇಳೆಯಲ್ಲಿ ಹರ್ಥಾಜೇಸ್ಸ ನಮ್ಮ ಬಳಿ ಕುಳಿತಿದ್ದಳು. ಊಟ ಮುಗಿದ ಮೇಲೆ ಮತ್ತೆ ನಾನು ಹೇಳಲಾರಂಭಿಸಿದೆನು. ಸುಮಾರು ಐದರ ವರೆಗೆ ನಾನು ಹೇಳುತ್ತಲೇ ಇದ್ದೆನು. ನಿಜವಾಗಿ ನನ್ನ ಮತ ಪರಿವರ್ತನ ವಾಗಿದೆ ಎಂದು ಕ್ರಾವುಸನ ಖಾತ್ರಿಯಾಗುವಂತೆ ನನ್ನ ಮಾತುಗಳಿದ್ದವು. ಸರಿ.

ನಮ್ಮ ಭೆಟ್ಟಿ ಮುಗಿದು ಎದ್ದೆವು. ಕ್ರಾವುಸನು ಬೊಗಸೆತುಂಬ ಸಿಗಾರು ಮುಂದೆ ಹಿಡಿದು ಹೇಳಿದನು. " ಇವುಗಳನ್ನು ತೆಗೆದುಕೊಳ್ಳಿ. ನಿಮಗೆ ಹೊಗೆ ಫರಾಳದ ಚಟವಿದ್ದಂತೆ ಕಾಣುತ್ತದೆ. ಸೇದಲಿಕ್ಕೆ ಪರವಾ ನಿಗೆ ಕೊಡಲು ಜೇಲರನಿಗೆ ನಾನು ಫೋನಿನಿಂದ ತಿಳಿಸುತ್ತೇನೆ. "

ಯಾವನ ಕೈ ನನ್ನ ಸಾವಿರಾರು ಪ್ರಿಯ ಸಹಕಾರಿಗಳ ರಕ್ತದಿಂದ

ಕಲಂಕಿತವಾಗಿದ್ದವೋ ಅವನು ಮುಂದೆ ಮಾಡಿದ ಸಿಗಾರೇಟು ತೆಗೆದು ಕೊಳ್ಳಬೇಕಾದರೆ, ಮೈಕೂದಲು ನೆಟ್ಟಗಾದವು. ಆ ಸಿಗಾರೇಟು ತಕ್ಕೊಂಡು, ಅಲ್ಲಿಂದ ಹೊರಟೆನು.

ಪುನಃ ಫುಲ್ಸಬ್ಯೂಎಲಟ ಜೇಲು. ಈಗ ಕೈಯಲ್ಲಿ ಬೇಡಿಗಳಿರಲಿಲ್ಲ. ಬೇಕಾದಂತೆ ಕೈ ಬೀಸಬಹುದಾಗಿತ್ತು. ಒಂದು ಪಕ್ಷಿಯಂತೆ ನಾನು ಬಿಡುಗಡೆಯಾಗಿರುವ ಎಂದು ಭಾವಿಸಿದೆ! ಕೊಟ್ಟಡಿಯಲ್ಲಿ ಮೇಜು-ಕುರ್ಚಿಗಳು ಕಂಡವು. ಅದರ ಮೇಲೆ ಎರಡು ಪುಸ್ತಕಗಳು! ಒಂದು ಪ್ರೊ. ಹೌಶೋಫರ ಇವರ ರಾಜನೀತಿ ವಿಷಯುಕ ಗ್ರಂಥ. ಮತ್ತೊಂದು ಮಾಯಿನ ಕಾಂಫದ ಕೋರಾ ಪ್ರತಿ! ಆ ಪುಸ್ತಕಗಳಿಗೆ ನಾನು ಕೈ ಹಚ್ಚಲಿಲ್ಲ.

ಮರುದಿನ ಪುನಃ ಕ್ರಾವುಸನ ಭೆಟ್ಟಿಗೆ ಹೋಗಬೇಕಾಯಿತು. ಆಗ ಕ್ರಾವುಸನಲ್ಲದೇ ಇನ್ನೊಬ್ಬ ವರಿಷ್ಠ ಅಧಿಕಾರಿ ಇದ್ದನು. ಕ್ರಾವುಸ ವಿಚಾರಿಸಿದನು.

"ನೀವು ನಿಶ್ಚಯ ಮಾಡಿಕೊಂಡಿರಾ?"

"ಹೌದು."

"ನಮ್ಮೊಳಗೆ ಸೇರುವಿರಾ?"

"ಹೌದು.— ಆದರೆ ಎರಡು ಕರಾರದಿಂದ."

ಮತ್ತೊಬ್ಬ ಅಧಿಕಾರಿ ಹೇಳಿದನು. "ನಮ್ಮ ಕರಾರುಗಳೂ ಉಂಟು ಅವುಗಳ ವಿಷಯಕ್ಕೆ ಆಮೇಲೆ ಮಾತಾಡುವಾ. ಮೊದಲು ನಿಮ್ಮ ಕರಾರು ಹೇಳಿ.

ನಾನು ಹೇಳಿದೆ. ನನ್ನ ಮೊದಲು ಕರಾರು ಹೀಗೆ. ಕೂಡಲೇ ನನ್ನ ಹೆಂಡತಿಯ ಬಿಡುಗಡೆ ಆಗಬೇಕು. ಎರಡನೆಯದೆಂದರೆ– ಸಣ್ಣ-ಪುಟ್ಟ ಮತ್ತು ಹೇಯ ಕಾರ್ಯಗಳನ್ನು ನಾನು ಮಾಡಲಾರೆ. ನನ್ನ ಯೋಗ್ಯತೆ ಮಹತ್ವಾಕಾಂಕ್ಷೆ ಇವುಗಳಿಗನುಸಾರವಾಗಿ ಕಾರ್ಯವಿರಬೇಕು. ಕಾರಣವೆಂದರೆ ಕಮ್ಯುನಿಷ್ಟ ಪಕ್ಷದ ಸಾಮಾನ್ಯ ಜನರೊಡನೆ ನನ್ನ ಜಗಳವಿಲ್ಲ. ಪಾಪ! ಅವರು ಬಂಡಿಗೆ ಹೂಡಿದ ಪಶುಗಳಂತೆ ಎಳೆಯುವರು ಅಷ್ಟೆ. ಅವರ ಭೋಳೇತನದ ಲಾಭ ತೆಗೆದುಕೊಂಡು, ಧೂರ್ತ ಕಮ್ಯುನಿಷ್ಟ ಮುಂದಾಳುಗಳು, ಬಂಡಿ ಎತ್ತ ಹೊರಳಿಸುವರು ಎಂಬ ಕಲ್ಪನೆಯೇ ಅವರಿ

ಗಿರುವದಿಲ್ಲ. ಸ್ವತಃ ಜೀವ ಉಳಿಸಿಕೊಂಡು, ಉಳಿದವರನ್ನು ಮೃತ್ಯುವಿನ ದವಡೆಯಲ್ಲಿ ದೂಡುವ ಈ ಧೂರ್ತ-ವಂಚಕ ಜೀವಗಳ್ಳರ ಪಾರುಪತ್ಯ ನನ್ನ ಕೈಯಿಂದಾಗಬೇಕೆಂದು ಇಚ್ಛೆ.''

ಇನ್ಸಪೆಕ್ಟರ ಕ್ರಾವುಸ ಹೇಳಿದ. ''ನಿಮ್ಮ ಯೋಗ್ಯತೆ ನಮಗೆ ಗೊತ್ತು. ನೀವು ಇಚ್ಛಿಸುವಂಥ ಕಾರ್ಯವನ್ನೇ ನಿಮಗೆ ಒಪ್ಪಿಸುತ್ತೇವೆ.''

ನನ್ನ ಸಂದೇಹ. ''ನನಗೆ ಹದಿಮೂರು ವರ್ಷದ ಶಿಕ್ಷೆಯಾಗಿರುವದು ಕಾಮಿಂಟರ್ನಕ್ಕೆ ತಿಳಿದಿರುವದು. ಮೊದಲೇ ನನ್ನ ಬಿಡುಗಡೆಯಾದರೆ ಅವರು ಸಂದೇಹಪಡಬಹುದು. ಹಾಗೇನೂ ಆಗದಂತೆ ನನ್ನ ಬಿಡುಗಡೆ ಆಗಬೇಕು.''

ಕ್ರಾವುಸ ಕಣ್ಣು ಚಿವುಟಿ ಹಾಸ್ಯದಿಂದ ಹೇಳಿದನು. ''ಅದರ ಚಿಂತೆ ಬೇಡ ನಿಮಗೆ. ಒಳ್ಳೇ ಸಾಹಸಮಾಡಿ, ನೀವು ಜೇಲಿನಿಂದ ಓಡಿಹೋದಿರಿ. ನಿಮ್ಮನ್ನು ಹಿಡಿಯಲು ನಾವು ಪ್ರಯತ್ನ ನಡೆಸಿದ್ದೇವೆ. ಹೀಗೆ ಸಹಜ ನಾಟಕ ಮಾಡುವೆವು.''

ಮೆಲ್ಲನೆ ನಾನು ವಿಚಾರಿಸಿದೆ. ''ನಿಮ್ಮ ಕಾರ್ಯಕ್ಕಾಗಿ ನಾನು ಒಮ್ಮೆ ಜರ್ಮನಿಯಿಂದ ಹೊರಬಿದ್ದೆನೆಂದರೆ ನಿಮ್ಮ ಕಣ್ಣಿಗೆ ಇಂಗು ಸವರಿ ನಾನು ಓಡಿಹೋಗಬಹುದು. ಎಂದು ನಿಮಗೆ ಸಂದೇಹವಿಲ್ಲವಷ್ಟೇ?''

ಕ್ರಾವುಸನೆಂದ, ''ಇಲ್ಲ. ಮೂರು ಕಾರಣಗಳಿಂದ ನಮಗೆ ವಿಶ್ವಾಸ ವಿದೆ. ಒಂದು ಬೇಕಾದಲ್ಲಿ ನೀವು ಹೋದರೂ ನಮ್ಮ ವಿಶ್ವಸ್ತ ಮನುಷ್ಯರ ದೃಷ್ಟಿ ನಿಮ್ಮ ಮೇಲೆ ಇದ್ದೇ ಇರುವದು. ಎರಡು ಮತ ಪರಿವರ್ತನದ ಉದ್ದವಾದ ಈ ಕಬೂಲಿ. ವಿಶ್ವಾಸಘಾತ ಮಾಡಿದೆ ಎಂದರೆ. ಇದನ್ನು ಪ್ರಸಿದ್ಧಿಸುತ್ತೇವೆ. ಆಗ ಕಾಮಿಂಟರ್ನದವರು ನಿಮ್ಮ ತಲೆ ನಿಶ್ಚಯದಿಂದ ಹಾರಿಸುತ್ತಾರೆ. ಮೂರನೆಯ ಕಾರಣ—

''ಯಾವುದು?''

''ನಿಮ್ಮ ಹೆಂಡತಿ ಮತ್ತು ಮಗ ಜರ್ಮನಿಯಲ್ಲಿಯೇ ಇರುತ್ತಾರೆ. ಅವರು ಸ್ವತಂತ್ರ ಇರಬಹುದು. ದೇಶಬಿಟ್ಟು ಹೊರಗೆ ಹೋಗಲಿಕ್ಕೆ ಮಾತ್ರ ಬರುವದಿಲ್ಲ. ನಮ್ಮ ತೀಕ್ಷ್ಣ ದೃಷ್ಟಿ ಇದ್ದೇ ಇರುವದು. ನೀವು ಬೇಕಾದಷ್ಟು ಸಾರೆ ಅವರಿಗೆ ಭೆಟ್ಟಿಯಾಗಬಹುದು. ಆದರೆ ಅದೆಲ್ಲ ಇಲ್ಲಿ, ಜರ್ಮನಿ

ಯಲ್ಲಿಯೇ. ಅವರು ಸುಖವಾಗಿರಬೇಕೆಂದು, ನಿಮ್ಮ ಇಚ್ಛೆ ಇರುವವರೆಗೆ ನಮ್ಮ ವಿಶ್ವಾಸಘಾತ ಮಾಡದೇ ಇರುವದು ನಿಮ್ಮ ಕರ್ತವ್ಯ.

" ನಿಮ್ಮ ಅಭಿಪ್ರಾಯ ತಿಳಿಯಿತು. "

" ನೆಟ್ಟಗಾಯಿತು.

ಹರ್ಥಾಜೇನ್ಸ್ ನನ್ನ ಕಡೆಗೆ ನೋಡಿ ನಕ್ಕು ಮಾತಾಡಿದಳು. " ನಿಮಗೆ ಹೆಂಡತಿ ಒಳ್ಳೆಯಾಕೆ ಸಿಕ್ಕಿದ್ದಾಳೆ. "

ಆಕೆಯ ಆ ಉದ್ಗಾರ- ಶುದ್ಧ- ಮತ್ತು ನಿಷ್ಕಪಟ ಭಾವದಿಂದ ಬಂದದ್ದು.

ಕ್ರಾವುಸನೆಂದ. " ಇನ್ನು ನಿಮ್ಮ ಪ್ರತಿಜ್ಞಾಪತ್ರಿಕೆ ಸಿದ್ಧಗೊಳಿಸ ಬೇಕು. "

ಹರ್ಥಾಜೇನ್ಸ್ ಕ್ರಾವುಸ ಹೇಳಿದಂತೆ ಟಾಯಿಪು ಮಾಡಿದಳು.

## ಪ್ರತಿಜ್ಞಾ ಪತ್ರಿಕ

ನಾನು ಪ್ರತಿಜ್ಞೆಮಾಡಿ ಈ ಪ್ರತಿಜ್ಞಾ ಪತ್ರ ಜಾಹೀರುಪಡಿಸುತ್ತೇನೆ. ನನ್ನ ಪಿತೃದೇಶದ ಏಕನಿಷ್ಠ ಪುತ್ರನ ವ್ರತ ಈದಿನ ಸ್ವೀಕರಿಸುತ್ತೇನೆ. ಈ ಕ್ಷಣದಿಂದ ಹೊಸ ಜರ್ಮನಿಯ ಹಿತಕ್ಕೆ ವಿರೋಧಮಾಡುವ ಮನುಷ್ಯರನ್ನು ಶತ್ರುಗಳೆಂದು ತಿಳಿಯುವೆನು. ನನ್ನ ದೇಶದ ಮತ್ತು ಅಡಾಲ್ಫ ಹಿಟ್ಲರನ ಶತ್ರುಗಳ ನಾಶಮಾಡುವ ಕಾರ್ಯಮಾಡುತ್ತಿರುವದು ನನ್ನ ಪವಿತ್ರ ಕರ್ತವ್ಯವೆಂದು ಭಾವಿಸುವೆನು. ಮತ್ತು ಗೆಸ್ಟಪೋದ ಪ್ರತಿಯೊಂದು ಆಜ್ಞೆ ಶಿರೋಧಾರ್ಯವೆಂದು ತಿಳಿದು ಪಾಲಿಸುವಲ್ಲಿ, ಸದೈವ ತತ್ಪರನಾಗಿರುವೆನು.

ಹಾಂಬುರ್ಗ....ತಾರೀಖು ೧೭ ಫೆಬ್ರುವರಿ ೧೯೩೭

ಆ ಕಾಗದ ಮುಂದಿಟ್ಟು ಕ್ರಾವುಸ ಹೇಳಿದನು. " ಇದರ ಮೇಲೆ ರುಜು ಹಾಕಿರಿ. "

ನಾನು ರುಜು ಹಾಕಿದೆ. ಕೈಯೇನೂ ನಡುಗಲಿಲ್ಲ. ನನ್ನ ಬೊಟ್ಟಿನ ಗುರ್ತು ಆ ಕಾಗದದ ಮೇಲೆ ತೆಗೆದುಕೊಂಡರು. ಒಂದು ನನ್ನ ಫೋಟೋ ಹಚ್ಚಿದರು. ಗೆಸ್ಟಪೋ ಮುದ್ರೆ ಬಿತ್ತು.

ಕ್ರಾವುಸ ಪ್ರಸನ್ನನಾಗಿ ನಗುತ್ತ ಹೇಳಿದನು. " ನೀವು ನಮ್ಮಲ್ಲಿ

ಸೇರಿದಿರಿ. ಈ ಆನಂದ ಪ್ರದರ್ಶನವೆಂದು ನಾವು ಈಗ ಸಾಯಡರ, ಕುಡಿಯುವಾ. ಹರ್ಥಾ! ಫೋನು ಮಾಡಿ ಬಾಟಲಿ ತರಿಸು.''

ಫೋನು ಮಾಡುವಾಗ ಹರ್ಥಾಜೇನ್ನಳ ಕೈ ಅಷ್ಟೇ ಅಲ್ಲ. ಶರೀರವೆಲ್ಲ ನಡುಗುತ್ತಿದ್ದಿತು. "ಏನೋ ಅದ್ಭುತ ಘಟಿಸಿದಂತೆ ನನಗೆ ಭಾಸವಾಯಿತು."

ಒಬ್ಬ ಸಿಪಾಯಿ ಸಾಯಡರ ಬಾಟಲಿ, ಮೂರು ಗ್ಲಾಸು ತಂದನು. ಮೂವರೂ ಕುಡಿದೆವು.

ಮುಂದೆ ಎಷ್ಟೋ ಹೊತ್ತು ಕ್ರಾವುಸ- ಮತ್ತು ನಾನು ಮಾತಾಡುತ್ತಿದ್ದೆವು. ಕಡೆಗೆ ನಾನು ಕೋಪನಹೆಗನಕ್ಕೆ ಹೋಗಿ ಕಾರ್ಯ ಪ್ರಾರಂಭಿಸಬೇಕೆಂದು ನಿರ್ಣಯವಾಯಿತು.

ಈ ಭೆಟ್ಟಿ ಮುಗಿಸಿಕೊಂಡು ನಾನು ಹೊರಟ ಕೂಡಲೆ—ನಾಝೀ ಪದ್ಧತಿಯಂತೆ ಸಲಾಮೀ ಕೊಟ್ಟೆ. 'ಹೆಲ ಹಿಟ್ಲರ!''

ತನ್ನ ಕೈ ಏನೋ ತುಸು ಸುಮ್ಮನೆ ಮೇಲೆಮಾಡಿ ಕ್ರಾವುಸ ಗುಣುಗುಟ್ಟಿದ. "ಹೆಲ ಹಿಟ್ಲರ!'

* * * * *

## ೨೦

ನಾನು ಗೆಸ್ಟಪೋದ ಆ ಪ್ರತಿಜ್ಞಾ ಪತ್ರಿಕೆ ಬರೆದುಕೊಟ್ಟು ನಾಲ್ಕಾರು ದಿನ ಕಳೆದವು. ಒಂದು ದಿನ ಒಮ್ಮೆಲೇ ಫುಲ್ಸಬ್ಯುಎಲೆಟ ಜೇಲು ಬಿಡಿಸಿ—ಹಾಂಬುರ್ಗ ಉಪನಗರದ ಒಂದು ಸಣ್ಣ ಜೇಲಿನಲ್ಲಿ ಇಟ್ಟರು. ಮುಂದೆ ಒಂದೆರಡು ದಿನಗಳಲ್ಲಿಯೇ, ನಾನು ಜೇಲಿನಿಂದ ಓಡಿದೆ. ಎಂದು ಸುಳ್ಳು ನಾಟಕ ಪ್ರಚಾರವಾಗಿ ಹೋಯಿತು.

ಅಂದು ಮಾರ್ಚ ೧೭ನೇ ತಾರೀಖು. ಗೆಸ್ಟಪೋ ಮುಖ್ಯ ಕಚೇರಿಗೆ ಹೋದೆ. ಎಂದಿನಂತೆ ಕ್ರಾವುಸನ ಭೆಟ್ಟಿಗೆಂದು ನನ್ನ ಕಲ್ಪನೆ. ಆದರೆ ಜೊತೆಯ ಸಿಪಾಯಿ ಕ್ರಾವುಸನ ಕಚೇರಿ ಬಿಟ್ಟು ಮೂರನೇ ಅಂತಸ್ತಿಗೆ ಕರೆದೊಯ್ದ. ಒಂದು ಸಣ್ಣ ಕೊಟ್ಟಡಿಯಲ್ಲಿ ಒಂದು ಮೇಜು ಎರಡು

ಕುರ್ಚಿಗಳು. ಇದರ ಅರ್ಥವೇ ನನಗೆ ತಿಳಿಯಲಿಲ್ಲ. ಅಷ್ಟರಲ್ಲಿ ಕಂಡಿತು. ಒಂದು ಕುರ್ಚಿಯ ಮೇಲೆ ಫಿರೇಲಾಯ ಕುಳಿತಿದ್ದಾಳೆ!

ನಮ್ಮ ದಿಟ್ಟಿ ಕೂಡಿದವು. ಎಷ್ಟೋ ದೀರ್ಘಾವಧಿಯ ನಂತರ ಈ ಭೆಟ್ಟಿ ಒದಗಿತ್ತು. ಅಗಲುವಿಕೆಯ ನಡುವಿನ ಕಾಲವನ್ನು ಇಬ್ಬರೂ ಪರಾಕಾಷ್ಠೆಯ ದುಃಖದಿಂದ ಕಳೆದಿದ್ದೆವು. ಅದಕಾಗಿ ಏನೋ ಒಂದು ವಿಧ ಸಂಕೋಚ ಇಬ್ಬರಲ್ಲಿಯೂ ಹುಟ್ಟಿರಬೇಕು. ಯಾಕಂದರೆ ಬಿಗಿದಪ್ಪಿಕೊಳ್ಳಬೇಕೆಂದು ಮನಸ್ಸಿನಲ್ಲಿ ಒಂದಿಷ್ಟೂ ನನ್ನ ಕಾಲು ಮುಂದಾಗಲಿಲ್ಲ. ಆಕೆಯೂ ಮುಂದೆ ಬರಲಿಲ್ಲ.

ಪರಸ್ಪರರನ್ನು ನೋಡುತ್ತ ಹಾಗೇ ಸುಮ್ಮ ನಿಂತೆವು. ಆಕೆ ಒದರಿ ಏನೂ ಮಾತಾಡಬಾರದು. ಎಂದು ಸಂಜ್ಞೆ ಮಾಡುವದಕ್ಕೆ ನಾನು ತುಟಿ ಮೇಲೆ ಬೊಟ್ಟಿಟ್ಟುಕೊಂಡೆ. ತಿರುಗಿ ಬಾಗಿಲು ನೋಡಿದೆ. ಕಿಂಡಿಗಳೇನೂ ಕಾಣಲಿಲ್ಲ. ಅತ್ತಿತ್ತ ನೋಡಿದರೂ ಸಂಶಯವೆನಿಸಲಿಲ್ಲ. ಇದ್ದ ಒಂದೇ ಒಂದು ಕಿಟಿಕಿ ಬಯಲು ಸ್ಥಳದ ಮಗ್ಗಲು. ಆದರೆ ನಮ್ಮಿಬ್ಬರ ಮಾತು ಕೇಳುವ ವ್ಯವಸ್ಥೆ ಗುಪ್ತವಾಗಿ ಇರಲೇಬೇಕೆಂದು ನನ್ನ ಕಲ್ಪನೆ. ಮೆಲ್ಲನೆ ಹೆಜ್ಜೆ ಇಡುತ್ತ ಕೊಟ್ಟಡಿ ಎಲ್ಲ ತಿರುಗಿ ನೋಡಹತ್ತಿದೆನು. ನನ್ನ ಸಂದೇಹ ನಿಜವಾಯಿತು. ಅಲ್ಲೊಂದು ಉಷ್ಣತಾವಾಹಕ ಯಂತ್ರದ ಒಳಿಯಲ್ಲಿ ಸಣ್ಣ ಮಾಯಕ್ರೊಫೋನು ಕೌಶಲ್ಯದಿಂದ ಕೂಡಿಸಿದ್ದರು. ಅದರ ತಂತಿಗಳನ್ನು ಆಚೇ ಕೊಟ್ಟಡಿಗೆ ಒಯ್ದಿರಬೇಕು.

'ಇದನ್ನು ನೋಡಿದೆಯಾ?' ಎಂಬ ಅರ್ಥದಿಂದ ಫಿರೇಲಾಯಳಿಗೆ ಆ ಮಾಯಕ್ರೊಫೋನು ತೋರಿಸಿದೆನು.

'ನೋಡಿದೆ' ಎಂದು ಆಕೆ ತಲೆ ಹಾಕಿದಳು.

ಕೇಳಿಸುವಂತೆ ದೊಡ್ಡ ದನಿಯಲ್ಲಿ ನಾನಂದೆ. "ಯಾರು? ಫಿರೇಲಾಯಳೇ?"

"ಹೌದು. ನಾನೇ."

ಇನ್ನು ನಾವು ಹೊಸ ಜೀವನ ಆರಂಭಿಸುವಾ. ಇನ್ನೂ ನಾವು ಕಳೆಯುವ ದಿನ ಬಹಳ ಇವೆ."

"ನೀನು ಹೀಗೇಕೆ ಮಾತಾಡುವೆ?" ಎಂದು ಕೇಳುವಾಗ ಆಕೆ ವಿನೋದ ಮಾಡಿದಳು. ಕೂಡಲೇ ಅಡಗಿಹೋಯಿತು.

ಏನು ಮಾತಾಡಬೇಕೆಂಬುದು ನನಗೆ ತಿಳಿಯಲಿಲ್ಲ. ಬಾಯಿಂದ ಬರುವ ಶಬ್ದಗಳಿಗೆ ಅರ್ಥವಿಲ್ಲ ಎಂದೆನಿಸಬೇಕು. ನಾನಂದೆ. "ನೀನು ಮರಳಿ ಜರ್ಮನಿಗೆ ಏಕೆ ಬಂದೆ? ನನ್ನ ಸಂಬಂಧ ಚಿರಂತವಾಗಿಯೇ ಮುಗಿದಿತೆಂದು ತಿಳಿದು, ದೂರವಿದ್ದರೆ ಸರಿಯಾಗುತ್ತಿದ್ದಿತು."

ಆಕೆ ಒಮ್ಮೆಲೇ ಎರಡು ಹೆಜ್ಜೆ ಮುಂದಾದಳು. ನನ್ನನ್ನು ದಿಟ್ಟಿಸಿ ನೋಡುತ್ತ ನುಡಿದಳು. "ಆಮಾತು ಈಗೇಕೆ? ನೀನು ಮರಣಹೊಂದಿದ ವಾರ್ತೆ ಕೋಪನಹೆಗನದಲ್ಲಿ ಪಸರಿಸಿತ್ತು. ಆಗ ನಾನು ತಿಳಿದೆ. ನಿನ್ನಿಂದ ನಿಜವಾಗಿ ಅಂತರಿಸಿದೆ. . . ."

ಈಗ ಸನಿಯುದಲ್ಲೇ ಬಂದಿದ್ದಳು. ಒಮ್ಮೆಲೇ ಬಿಗಿಗಪ್ಪಿಕೊಂಡು ವಿಚಾರಿಸಿದೆನು "ನನ್ನ ಪುಟ್ಟ ಜಾನ, ಎಲ್ಲಿದ್ದಾನೆ?"

"ಸುಖವಾಗಿದ್ದಾನೆ. ಅವನಿಗೆ ಐದು ತುಂಬಿ ಆರನೇ ವರ್ಷ. ಈಗ ದೊಡ್ಡವನಾಗಿದ್ದಾನೆ. ನಾನು ಮಾತ್ರ ನೋಡಿಲ್ಲ. ಹೇಳುತ್ತಾರೆ."

"ಯಾವ ಜೇಲಿನಲ್ಲಿ ನೀನು ಇರುವೆ?"

"ಲ್ಯುಎಬೆಗದಲ್ಲಿ. ಈ ದಿನ ಬೆಳಗಿನಲ್ಲಿ ಇಲ್ಲಿಗೆ ತಂದರು."

"ನೀನು ಒಬ್ಬಾಕೆಯೇ ಕೊಟ್ಟಡಿಯಲ್ಲಿ?"

"ಎರಡುವರ್ಷ ಒಬ್ಬಳೇ ಇದ್ದೆ. ಈಗೊಬ್ಬ ಹೆಂಗಸು ಜೊತೆಯಾಗಿದ್ದಾಳೆ. ಆಕೆ ಮುದುಕಿ. ಕುರೂಪಿ ಹೊಲಸು. ಆದರೂ ಪಾಪ ಅಂತಃಕರುಣಿ."

ಸುಮ್ಮನೇ ನಿಂತುಕೊಂಡು ಬಿಟ್ಟೆವು. ಆಗ ಹರ್ಷವೂ ಎನಿಸಲಿಲ್ಲ. ಖೇದವೂ ಇಲ್ಲ. ಒಂದು ಚಮತ್ಕಾರಿಕ ಜಡ ಸುಖದ ಪ್ರತ್ಯಯವು ಮಾತ್ರ ಆಕ್ಷಣದಲ್ಲಿದ್ದೀತು.

ಫಿರೇಲಾಯುಳು ಹಿಂದಿನಾಕೆಯುಳಿದಿರಲಿಲ್ಲ. ಮೊಗದಲ್ಲಿನ ಕೋಮಲತ್ವ ಹೋಗಿ, ಕೃಶಳಾಗಿದ್ದಳು. ಸ್ವಭಾವದಲ್ಲಿದ್ದ ವಿನೋದ, ಆನಂದ; ಉತ್ಸಾಹ, ಜಗತ್ತಿನ ಸೌಂದರ್ಯದ ವಿಷಯಕ್ಕೆ ಮಧುರ ಭ್ರಮ, ಮತ್ತು ಸ್ವಚ್ಛಂದ ಹಾಸ್ಯ,— ಇವೆಲ್ಲ ಅಳಿಸಿದಂತಾಗಿದ್ದವು. ಕೋಮಲವಾದ,

ಆಕೆಯ ಕೈಗಳು, ಕಷ್ಟಕಾರ್ಯ ಮಾಡಿ, ಮಾಡಿ ಒರಟಾಗಿದ್ದವು. ಕೈದಿಗಳ ವೇಷದಲ್ಲಿ ಅವಳೊಬ್ಬ, ಸಾದಾ, ದಣಿದ ಹೆಂಗಸಾಗಿದ್ದಳು. ಫರೇಲಾಯುಳೆಂದಳು. "ಈಗ ನನ್ನ ಸೌಂದರ್ಯ, ಹಾಗೂ ತಾರುಣ್ಯ ಇಲ್ಲದಂತಾಗಿದೆ. ನಿನ್ನ ಮನಸ್ಸಿನಲ್ಲಿ ನಡೆದ ವಿಚಾರಗಳು ನನಗೆ ತಿಳಿದವು. ನನ್ನ ಅವಸ್ಥೆ ಹೀಗಾದುದು ನಿನ್ನದೇ ಅಪರಾಧ. ಆದರೆ ಅಸಮಾಧಾನವನ್ನೇನೂ ಪಡಬೇಡ. ನನ್ನದು ಒಂದು ಇಚ್ಛೆ ಪೂರ್ಣವಾದರೆ ಈಗಲೂ ನಾನು ಪುನಃ ತರುಣಳಾಗಿ ಸುಂದರ ತೋರುವೆನು...."

ಮೈನವಿರೆದ್ದಂತೆ ಆಕೆ ಮಾಡಿದಳು. ಅಳುವೇ ಬಂದಿತೇನೋ! ಅದು ಅಂತಃಕರಣದ ದುಃಖವಾಗಿರಲಿಕ್ಕಿಲ್ಲ. ಬಹುಶಃ ಸುಖದ ತೀವ್ರ ಆಶೆಯ ಉದ್ರೇಕವದು. ಆಕೆ ನುಡಿದಳು. "ಇಚ್ಛೆಯು ಇಷ್ಟೇ—ನನ್ನ ಮುದ್ದು ಕೂಸು ನನ್ನ ಕೊರಳಿಗೆ ಬೀಳಬೇಕು. ಮತ್ತು ಅಮ್ಮಾ, ನನಗೆ ಅದನ್ನು ಕೊಡು, ಎಂಬ ಮುದ್ದು ಶಬ್ದ ನನ್ನ ಕಿವಿ ಕೇಳಬೇಕು...."

"ಬೇಗನೆ ನಿನ್ನ ಇಚ್ಛೆ ಪೂರ್ಣವಾದೀತು."

ಕಿಂಚಿತ್ ಕಠೋರ ಸ್ವರದಿಂದ ಅಂದಳು. "ಸುಮ್ಮನೆ ಸುಳ್ಳು ಆಶೆ ಹೇಳಿ ನನ್ನ ಸಮಾಧಾನ ಮಾಡಬೇಡ. ನನಗೆ ತಿಳಿದು ಹೋಗಿದೆ. ಇನ್ನು ನನ್ನ ಸುಖದಕಾಲ ಮುಗಿದಂತೆ. ತಾರುಣ್ಯದ ಆ ಸವಿಸ್ವಪ್ನ, ಎಲ್ಲ ಕೋಮಲತ್ವ, ಚಿರಕಾಲದವರೆಗೆ ನಷ್ಟವಾದವು. ಈಗ ನನಗೆ ಯಾರಾದರೂ ಒಂದು ಕಾಡಿಗೆ ಕರೆದೊಯ್ದು, ಇಲ್ಲಿ ಬಿದ್ದುಕೋ, ಎಂದರೂ, ಆ ದಟ್ಟ ಹುಲ್ಲಿನಲ್ಲಿ ಬಿದ್ದುಕೊಳ್ಳುವುದು ಆನಂದವೆಂದು ನಾನು ತಿಳಿಯುತ್ತೇನೆ. ಆಗಲೇ ಹೇಳಿಕೊಳ್ಳುವೆನು. ಇಲ್ಲಿ ಹೀಗೇ ನನ್ನ ಕಣ್ಣು ಮುಚ್ಚಿಕೊಳ್ಳಲಿ."

ಎಷ್ಟು ವೇಳೆ ಇಬ್ಬರೂ ಹಾಗಿದ್ದೆವೋ ಯಾರು ಬಲ್ಲರು? ಕದಾಚಿತ್ ಮೂರು ಗಂಟೆಯಾಗಿರಬಹುದು. ಒಂದು ಗಂಟೆ ಇರಬಹುದು. ಮನಸ್ಸಿನಲ್ಲಿ ಹೇಳಬೇಕೆಂದಿರುವದು ಬಾಯಿಂದ ಆಡಲು ಬರುತ್ತಿರಲಿಲ್ಲ. ಬಹುಶಃ ನಾವು ಸುಮ್ಮನೇ ಇದ್ದೆವು. ಆಗೀಗ ಒಂದಿಷ್ಟು ಮಾತಾಡುವದು; ಆಚೆ ಕೊಟ್ಟಡಿಯಲ್ಲಿ ಕಳ್ಳತನದಿಂದ ಕೇಳುವವರಿಗೆ ಸಂಶಯ ಬರಬಾರದೆಂಬ ಬುದ್ಧಿಯಿಂದ ನಾನು ಗೆಸ್ಟಪೋದಲ್ಲಿ ಸೇರಿದುದು, ಫರೇಲಾಯಳಿಗೆ ಗೊತ್ತಿರಲಿಲ್ಲ. ನಾನು ಏಕೆ ಸೇರಿದೆನೆಂಬುದನ್ನು ಆ ಸ್ಥಳದಲ್ಲಿ ಹೇಳುವದು ಸರಿಯಾದುದಲ್ಲ.

ಹೀಗಾಗಿ ನಮ್ಮ ವೇಳೆ ಮುಗಿದಿತೆಂದು ತಿಳಿಸುವ, ಪಹರೆಯವ ಒಳಗೆ ಬಂದನು. ಇನ್ನೆಂದು ಭೆಟ್ಟಿಯೋ ಕಾಣೆನೆಂದು ಫಿರೀಲಾಯಳು ದೂರಾದಳು. ಅವಳಿಗೆ ಹಾಗೆನಿಸಿತಲ್ಲ. ಎಂದು ನನಗೆ ಅಸಹ್ಯ ದುಃಖವಾಯಿತು. ಪರಸ್ಪರ ನಿರೋಪ ಪಡೆಯುವಾಗ ನಮ್ಮ ಮನಸ್ಥಿತಿಯು, ಮೂರ್ಛಿತರಾಗುವವರಂತೆ ಜಡವಾಗಿದ್ದಿತು.

ಪುನಃ ಜೇಲಿನ ನನ್ನ ನಿವಾಸಸ್ಥಾನ. ದಿವಸ ಸಾಗತೊಡಗಿದವು. ಗೆಸ್ಟಪೋದ ಕಡೆ ಹುಕುಮು ಇನ್ನೂ ಕೈಗೆ ಬಂದಿರಲಿಲ್ಲ. ಮುಂದಿನ ನನ್ನ ಸ್ಥಿತಿ ಸಾಶಂಕವಾಗಿದ್ದಿತು.

ಎಪ್ರಿಲ ತಿಂಗಳ ಪ್ರಾರಂಭ ದಿವಸದಲ್ಲಿ, ಬರ್ಲಿನದ ಗೆಸ್ಟಪೋ ಮುಖ್ಯ ಕಚೇರಿಗೆ ಕರೆಸಿಕೊಂಡರು. ಅಲ್ಲಿ ಗೆಸ್ಟಪೋ ಮುಖ್ಯಾಧಿಕಾರಿ– ಹಿಮ್ಲರನ ಭೆಟ್ಟಿಯಾಯಿತು. ನಾನು ಕೋಪನಹೆಗನಕ್ಕೆ ಹೋಗಿ ಯಾವ ಕಾರ್ಯ ಮಾಡಬೇಕೆಂಬುದನ್ನು ಅವನು ತಿಳಿಸಿದನು. ಸಾಕಷ್ಟು ಅರಿವೆ–ಅಂಚಡಿಗಳು ದೊರೆತವು. ಬಹಳಷ್ಟು ಹಣವನ್ನೂ ಸ್ವಾಧೀನಪಡಿಸಿದರು. ಕಡೆಗೆ ಕ್ರಾವುಸ ನನಗೆ ಹೇಳಿದನು.

" ಕೋಪನಹೆಗನಕ್ಕೆ ಹೋಗುವ ಮೊದಲು, ನಿನಗೆ ಹತ್ತು ದಿನದ ರಜೆ. ಗೆಸ್ಟಪೋದ ಒಬ್ಬ ಮನುಷ್ಯನು ನಿನ್ನನ್ನು ಬರ್ಲಿನಕ್ಕೆ ಕರೆದೊಯ್ಯುವನು. ಅಲ್ಲಿ ನೀನು ಎರಡು ದಿನವಿರು. ಆಮೇಲೆ ನಮ್ಮ ಮನುಷ್ಯನು ಸಮುದ್ರ ತೀರದ ಒಂದು ಶಾಂತಸ್ಥಳ ತೋರಿಸುವನು. ಅಲ್ಲಿ ನಿನ್ನ ಹೆಂಡತಿ ಮಗನ ಭೆಟ್ಟಿಯ ವ್ಯವಸ್ಥೆಯುಂಟು. ಅವರ ಸಹವಾಸದಲ್ಲಿ ಎಂಟು ದಿನ ಆನಂದದಿಂದ ಕಳೆಯಬಹುದು. "

ಆ ಹೇಳಿಕೆಯಂತೆ ಹೊರಟು ನಾನು ಸಮುದ್ರತೀರದ ಒಂದು ಸಣ್ಣ ಊರಿಗ ಬಂದೆನು. ಅಲ್ಲಿ ಎತ್ತ ನೋಡಿದರೂ, ಕೋಳಿಜನರ ಸಣ್ಣ–ಸಣ್ಣ ಗುಡಿಸಲುಗಳೇ ಕಾಣುತ್ತಿದ್ದವು. ಅವುಗಳ ಮಧ್ಯದಲ್ಲಿ ಎರಡು ಅಂತಸ್ತಿನ ಒಂದು ಮಂದಿರ ತೋರಿಸಿ, ಗೆಸ್ಟಪೋ ಮನುಷ್ಯನಂದ. " ಆ ಹಾಟೆಲದಲ್ಲಿ ನೀನು ಹೋಗು, ನಾನು ಇನ್ನು ಮೇಲೆ ನಿನ್ನ ನಿರೋಪ ತೆಗೆದುಕೊಳ್ಳುತ್ತೇನೆ!"

ನಾನೊಬ್ಬನೇ ಆ ಮಂದಿರಕ್ಕೆ ಹೊರಟೆ. ಮೆಟ್ಟಲೇರಿ ಫರಸುಗಲ್ಲಿನ ಮೇಲೆ ನನ್ನ ಕೈಬೆತ್ತ ಬಾರಿಸಿದೆನು— ಮಿಂಚುವ ಬಿಳಿಗೂದಲಿನವಳೂ, ಕೆಂಪುಗಜ್ಜರಿ ಬಣ್ಣದವಳೂ. ಆದ ಒಬ್ಬ ಲಠ್ಠ ಹೆಂಗಸು, ಹೊರಗೆ ಬಂದು ನನಗೆ ಹೇಳಿದಳು.

" ಹೆಲ ಹಿಟ್ಲರ ಬರಬೇಕು. "

" ನನ್ನ ಹೆಂಡತಿ ಇಲ್ಲಿರುವಳೋ ? "

ನಗುತ್ತ ಆಕೆ ಹೇಳಿದಳು. " ನಿಮ್ಮ ಮುದ್ದು ಹುಡುಗನೂ ಇದ್ದಾನೆ. ಆ ಹುಡುಗ ಎಷ್ಟು ಸುಂದರ! ಇಲ್ಲಿ ಉತ್ತಮ ಕೊಟ್ಟಡಿ ನಾನು ಬಿಡಿಸಿ ಕೊಟ್ಟಿದ್ದೇನೆ. ಈ ವರ್ಷ ನನ್ನಲ್ಲಿ ಇರಲಿಕ್ಕೆ ಬರುವ ಅತಿಥಿಗಳಲ್ಲಿ ನೀವು ಮೊದಲಿಗರು.

ಫಿರೇಲಾಯ– ಮತ್ತು ನನ್ನ ಹುಡುಗ ತಿರುಗಾಡಲಿಕ್ಕೆ ಸಮುದ್ರ ತೀರದಲ್ಲಿ ಹೋಗಿದ್ದರು. " ಉಸುಕಿನಲ್ಲಿ ಸಿಗುವ ಶಂಖ ಕೂಡಿಸುವದು; ಮತ್ತು ಸಮುದ್ರ ಲಹರಿಗಳೊಡನೆ ತೇಲಿಬರುವ ಕಟ್ಟಿಗೆ ಕೂಡಿಸಿ ಅವುಗಳನ್ನು ಹೋಳಿಮಾಡುವದು; ನಿಮ್ಮ ಹುಡುಗನಿಗೆ ಬಹಳ ಇಷ್ಟ. " ಹಾಟೆಲದ ಒಡೆಯಳು ನನಗೆ ಹೇಳಿದಳು.

ನಾನು ಅತ್ತ ಹೊರಟೆ. ತುಸು ದೂರ ಹೋಗುತ್ತಿರಲು ಕಪ್ಪು ಹೊಗೆಯ ದೊಡ್ಡ, ದೊಡ್ಡ ಪತುರ್ಲಿಗಳು ಗಾಳಿಯಲ್ಲಿ ಮೇಲಕ್ಕೇರುತ್ತಿರುವದು ಕಾಣಿಸಿತು. ಅಲ್ಲಿಯೇ ಫಿರೇಲಾಯಳು ಮತ್ತು ಹುಡುಗ ಇರಬೇಕು. ಅದೇಕೋ, ನಾನು ಹೇಳಲಾರೆ. ಮುಂದೆ ಹೋಗುವದಕ್ಕಿಂತ ಹಿಂದೆ ಮರಳಬೇಕೆಂದು ಮನದಲ್ಲಿ ವಿಚಾರ ಬರತೊಡಗಿತು ಯಾವ ಸ್ಥಳದಲ್ಲಿ ಕಟ್ಟಿಗೆ ಹೋಳಿ ನಡೆದಿರುವದೋ ಅದು ಇನ್ನೂ ಗಾವುದ ದೂರದಲ್ಲಿರಬೇಕಾಗಿತ್ತು. ಅಲ್ಲಿ ಪ್ರತ್ಯಕ್ಷ ಮುಟ್ಟುವ ಮೊದಲು ಸರಿಯಾಗಿ ನಾನು ವಿಚಾರ ಮಾಡಬೇಕಾಗಿತ್ತು. ಎಂದರೆ ಒಳ್ಳೇದಾಗಬಹುದಿತ್ತು. ಹೀಗೆ ವಿಚಾರಿಸುವ ಮನಸ್ಸಿಗೆ ಸಂತಾಪದಿಂದ ನಾನು ಹೇಳಿದೆನು. " ಸಾಕು, ಸಾಕು, ಆಯುಷ್ಯದ ಇಷ್ಟು ವರ್ಷಗಳು ವಿಚಾರದಲ್ಲಿಯೇ ಕಳೆದಿವೆ. ಮುಂದಾಗು. " ಇನ್ನು ಆ ಹೋಳಿಯ ಸ್ಥಳ–ನೂರು ಹೆಜ್ಜೆ ಇರಬಹುದಷ್ಟೇ. ಅತ್ತಿತ್ತ ತಿರುಗಿ ಕಟ್ಟಿಗೆ ಗೂಡಿಸಿ, ಉರಿಯಲ್ಲಿ ಹಾಕುವ ನನ್ನ ಜಾನ ನನಗೆ ಸ್ಪಷ್ಟ

ಕಾಣತೊಡಗಿದ್ದ. ಬಳಿಯಲ್ಲಿಯೇ ಫಿರೇಲಾಯು ಕುಳಿತಿದ್ದಳು. ದೂರ ಅಂತರದ ಕ್ಷಿತಿಜ ರೇಖೆಯಲ್ಲಿ ಒಂದು ಸಣ್ಣ ಹಡಗು ಮೆಲ್ಲನೆ ತನ್ನ ಮಾರ್ಗ ಹಿಡಿದು ಸಾಗಿತ್ತು. ಅಲ್ಲಿ ಆಕೆಯ ದೃಷ್ಟಿ ನೆಲಿಸಿರಬೇಕು. ಆ ಹಡಗಿನಿಂದ ಹೊರಟ ದಟ್ಟ-ಕಪ್ಪು ಬಣ್ಣದ ಹೊಗೆ ಅದೊಂದು ಭಯಸೂಚಕ ಸ್ತಂಭ ದಂತಿದ್ದಿತು.

ನಾನು ಬಹಳ ಸನಿಯದಲ್ಲಿ ಹೋಗಿ ನಿಂತುಕೊಂಡೆನು. ಕೈಯಲ್ಲಿ ಕಟ್ಟಿಗೆ ಹಿಡಿದುಕೊಂಡು ಹೋಳಿಯ ಕಡೆಗೆ ಹೋಗುವ ತವಕದಲ್ಲಿ ಜಾನ ನಿದ್ದನು. ಅವನ ಕಣ್ಣಿಗೆ ನಾನು ಬಿದ್ದಕೂಡಲೇ ತಾನು ನಿಂತು ನುಡಿದನು.

" ಅಮ್ಮ, ಅದು ನೋಡು ಯಾರೋ ಬಂದಿದ್ದಾರೆ. "

ಮೆಲ್ಲನೆ ಹೊರಳಿದಳು. ನನ್ನನ್ನು ನೋಡಿ ಎದ್ದುನಿಂತುಕೊಂಡಳು. ವಾಯು ಲಹರಿಯಿಂದ, ಆಕೆಯ ಮುಂಗುರುಳು ಕುಣಿದವು. ನನ್ನ ಕಡೆಗೆ ಆಕೆ ಬರಹತ್ತಲು, ಜಾನ ಕೂಡ ತನ್ನ ಪುಟ್ಟ-ಪುಟ್ಟ ಹೆಜ್ಜೆ ಹಾಕುತ್ತ, ಅವಳೊಡನೆ ಬಂದ.

ಜಾನ ಕೇಳಿದನು. "ಅಮ್ಮ, ಯಾರು ಇವರು ?"

"ಹುಚ್ಚಾ, ನಿನ್ನ ಹಿರಿಯರಲ್ಲೇನೋ ?" ಫಿರೇಲಾಯುಳು ನಕ್ಕಳು. ಅದನ್ನು ಕೇಳಿ ಜಾನ ಆಕೆಯ ಮುಂದೆ ಓಡಿ ಬಂದನು. ತ್ವರೆಯಿಂದ ನಾನು ಎತ್ತಿಕೊಂಡುಬಿಟ್ಟೆ. ಅವನು ಜಿಜ್ಞಾಸೆ, ಆಶ್ಚರ್ಯಗಳಿಂದ ನನ್ನನ್ನು ನೋಡಹತ್ತಿದನು.

ನಾನು ಕೇಳಿದೆ. " ನಾನು ಯಾರು ಹೇಳು ನೋಡುವಾ. "

ಒಂದು ಪಕ್ಷಿ ಕಿಲಿ-ಬಿಲಿ ಎಂದಂತೆ ಜಾನ ನುಡಿದ. " ನೀನು ನನ್ನ ಪಪಾ. ನೀನು ಹಡಗಿನಿಂದ ಬಂದೆ. ಅಲ್ಲವೇ? "

" ಹೂಂ ಹಡಗಿನಿಂದ. "

" ಆಫ್ರಿಕಾದಿಂದ ? "

" ಹೂಂ- ಆಫ್ರಿಕಾದಿಂದ. "

" ಆಫ್ರಿಕಾದಲ್ಲಿ ದೊಡ್ಡ ಸಿಂಹವಂತೆ. ನಿಜವೇ ? ಅಮ್ಮ ಹೇಳುತ್ತಿದ್ದಳು. ಚಲೋ ಗಾಳಿಬಿಟ್ಟರೆ ನಿಮ್ಮ ಹಡಗು ಈದಿನ ಬರುವದು. ಎಲ್ಲಿದೆ ನಿಮ್ಮ ಹಡಗು ? "

ಆ ಕ್ಷಣದಲ್ಲಿ ನಾನು ಆಯುಷ್ಯದಲ್ಲಿನ ಉತ್ಕಟವೆನಿಸುವ ಸುಖದ ಅನುಭವಕ್ಕೆ ಪಾತ್ರನಾಗಿದ್ದೆ. ಜಾನನು ತನ್ನ ಎರಡೂ ಪುಟ್ಟ ಕೈಗಳಿಂದ, ನನ್ನ ಹೆಗಲು ಹಿಡಿದುಕೊಂಡಿದ್ದನು. ನನ್ನ ಬಲಗೈಯಿಂದ ನಾನು ಫಿರೇಲಾಯಳ-ಕಟಿಭಾಗದಲ್ಲಿ ಹಿಡಿದುಕೊಂಡಿದ್ದೆನು. ಮೆಲ್ಲಮೆಲ್ಲನೆ ನಡೆಯುತ್ತ ನಾವು ಹೋಳಿಯ ಹತ್ತರ ಬಂದೆವು. ಫಿರೇಲಾಯಳ ಕಣ್ಣಿನಿಂದ ಆನಂದಾಶ್ರುಗಳು ಉದುರುತ್ತಿದ್ದವು.

ಆಕೆ ನುಡಿದಳು. "ನಾವು ಒಬ್ಬರೊಬ್ಬರಿಗೆ ಭೆಟ್ಟಿಯಾದುದು ನಿಜವೇ ಎನಿಸುವದಿಲ್ಲ."

ಮರಳಿನಲ್ಲಿ ಕುಳಿತೆವು. ಹೋಳಿ ಉರಿದು ಆರುವವರೆಗೂ ಮಾತಾಡುತ್ತಲೇ ಇದ್ದೆವು. ಪುನಃ ಪುನಃ ನಾನು–ಮತ್ತು ಫಿರೇಲಾಯಳು ಒಬ್ಬರನ್ನೊಬ್ಬರು ನೋಡಬೇಕು. ಪರಸ್ಪರ ಅಂತಃಕರಣದಲ್ಲಿ ನೆಲೆಯಾಗುತ್ತಿದ್ದೆವೇನೋ? ಅಲ್ಲದೇ–ಮಧ್ಯಕಾಲದಲ್ಲಾದ–ಸಂಕಟ–ಮತ್ತು ಛಲಗಳಿಂದಾದ ವ್ರಣಗಳನ್ನು ನಾವು ಪರಸ್ಪರರು ಮುಚ್ಚಿಕೊಳ್ಳಬೇಕಾಗಿದ್ದಿತು. ನಡುವೆ ಫಿರೇಲಾಯಳೆಂದಳು. "ಮೊದಲಿನಂತೆ ನೀನು ಬಹಳ ಮಾತಾಡುವದಿಲ್ಲ. ನಿನ್ನ ವೃತ್ತಿಯ ಉಚ್ಛೃಂಖಲತೆ ಕಡಿಮೆಯಾಗಿದೆ. ನಿನ್ನ ಖಿನ್ನತೆಯನ್ನು ನಾನು ಕಳೆಯಬೇಕು."

"ಅದು ಯಾವ ಸಂಗತಿಗಳಿಂದ ಬಂದಿರುವದೋ, ಅವುಗಳನ್ನೆಲ್ಲ ಅಳಿಸುವದು ಕಠಿಣ."

ಪ್ರೇಮದಿಂದ ಆಕೆ ನುಡಿದಳು. "ಹಾಗೇಕೆ ಹೇಳುವೆ? ದುಃಖದ ಪ್ರಕರಣ ಮುಗಿದಿತೆಂದು ನಾವು ಗೆರೆ ಹಾಕಬಹುದು. ನಮ್ಮ ಜೀವನದ ಮಂದಿರವನ್ನು ಹೊಸದಾಗಿ ಕಟ್ಟೋಣ. ಕೂಡಿಕೊಂಡೇ ಇರೋಣ.."

"ಕೂಡಿಕೊಂಡೇ?" ಇಷ್ಟೇ ಮಾತು ಬಾಯಿಂದ ಬಂದದ್ದು. ಅದರಲ್ಲಿ ನಿರಾಶೆ, ಸಿಡಕುತನವಿದ್ದವೆಂಬುದು ನನಗೆ ತಿಳಿದು ಬಂತು.

"ನೀನು ದಣಿದಿರುವೆ ಏನು? ಅಥವಾ ನನ್ನೊಡನೆ ಮಾತಾಡಲಿಕ್ಕೆ ಬೇಸರವೆನಿಸುವಷ್ಟು ನಾನು ದಿನಗಳೆದ ಕುರೂಪಿ ಕಾಣುವೆನೋ?"

"ಇಲ್ಲ, ಇಲ್ಲ. ನೀನು ಸುಂದರಿಯೂ–ಮೋಹಕಳೂ ಇದ್ದೇ ಇರುವಿ."

ನಗುತ್ತ ಫಿರೇಲಾಯಳೆಂದಳು. "ನಾನೊರ್ವ ಮೂರ್ಖ ಹೆಂಗಸು ನಿಜ ಆದರೆ ಈ ಕ್ಷಣದಲ್ಲಿ ನಾನು ಬಹು ಸುಖಿ. ನಿನಗೆ ಕಾಣದೇ ?"

ಅಷ್ಟರಲ್ಲಿ ಮುದ್ದು ಜಾನ ನನ್ನನ್ನು ದಿಟ್ಟಿಸುತ್ತ ನುಡಿದನು. "ಪಪಾ, ನೀನು ಎಲ್ಲಿಂದ ಬಂದೆ—ಆಫ್ರಿಕಾ..?"

ಅವೇ ಶಬ್ದಗಳ-ಒಂದೊಂದೇ ಅಕ್ಷರ ಪುನರುಚ್ಚರಿದಳು ಫಿರೇಲಾಯಳು- "ಆ....ಫ್ರಿ....ಕಾ! ಇದೊಂದು ಪದ್ಯದ ಪಲ್ಲವಿಯಾಗಿರಬಹುದೇನು ?

ಆ ದಿನ ರಾತ್ರಿಯಲ್ಲಿ ಜಾನ ಮಲಗಿದ ನಂತರ ನನ್ನ ಎಲ್ಲ ವೃತ್ತಾಂತವನ್ನು ಫಿರೇಲಾಯಳಿಗೆ ತಿಳಿಸಿದೆನು. ನಮ್ಮ ಬಿಡುಗಡೆಗಾಗಿ ರಚಿಸಿದ ಕಪಟ ನಾಟಕ ಹೇಳಿದೆನು. ನನ್ನ ಮಾತು ಮುಗಿದೊಡನೆ ಆಕೆ ಮಾತಾಡಿದಳು. "ಒಮ್ಮೆ ಸ್ವೀಕರಿಸಿದನಂತರ ಆ ಕಾರ್ಯವನ್ನು ಬಿಡಲಿಕ್ಕೆ ನಮಗೆ ಬರಬಾರದು. ಪರಾಭವ ಒಪ್ಪಿಕೊಂಡು, ಹಿಂದೆಗೆಯುವದು ಭೂಷಣವಲ್ಲ. ಹಾಗೆ ಮಾಡಿದುದೇ ಆದರೆ, ನಮ್ಮ ಕೈ-ಮತ್ತು ನಮ್ಮ ಅಂತಃಕರಣ ಇವು ಶಿರವಾಗಿ ಉಳಿಯುವವು. ನಡುವಿನ ಈ ಕಾಲದಲ್ಲಿ ನಾನು ಬಹಳ ಯೋಚಿಸಿದೆ. ನನಗೆ ಖಾತ್ರಿಯಾಗಿದೆ. ಯಾರು ಜೀವಂತವಾಗಿರಬೇಕೆಂದೆನ್ನುವರೋ, ಅವರಿಗೆ ಸಾಮಾನ್ಯ-ಸುಲಭ ಸುಖಶಾಂತಿಯಲ್ಲಿ ಸಮಾಧಾನವೆನಿಸುವದಿಲ್ಲ. ನಾವು ಒಬ್ಬರನ್ನೊಬ್ಬರು ಅವಲಂಬಿಸಿ, ಮಾಡಲಿಕ್ಕೆ ಸಾಧ್ಯವೆನಿಸಿದಷ್ಟು ಕಾರ್ಯ ಮಾಡುವಾ."

ಆ ಏಳು ದಿನಗಳು ಬೇಗನೆ ಕಳೆದುಹೋದವು. ನಗುತ್ತ ನಲಿಯುತ್ತ ಆ ಕಾಲಾವಧಿಯಲ್ಲಿ ಶಕ್ಯವಾದಷ್ಟು ಆನಂದದಿಂದ ಇದ್ದೆವು. ಆದರೆ ಉಸುಕಿನಲ್ಲಿ ಹರಿದ ನೀರು, ಒಣಗಿ ಹೋಗುವಂತೆ, ಆ ದಿನಗಳು ಹೋಗಿಬಿಟ್ಟವು. ಹಿಂದಿನ ಸುಖ-ದುಃಖ, ಮುಂದೆ ಬರಲಿರುವ ಸುಖ-ದುಃಖ ಇವುಗಳ ಸ್ಮರಣಕಲ್ಪನೆ ಮಾಡಿದೆವು. ಇಬ್ಬರೂ ಕೂಡಿ ಜರ್ಮನಿಯಿಂದ, ಓಡಿ ಹೋಗಲು ಬರುವದೋ, ಹೇಗೆ ಎಂಬ ವಿಚಾರವನ್ನೂ ಮಾಡಿನೋಡಿದೆವು. ಅಶಕ್ಯತೋರಲು ಮರೆತುಬಿಟ್ಟೆವು.

ಫಿರೇಲಾಯಳು ಹೇಳಬೇಕು. "ಮೊದಲು ನೀನು ದೇಶದಾಟಿ ಹೋಗು. ನಮ್ಮ ಪಕ್ಷಕ್ಕೆ ಪುನಃ ಕೂಡಿ, ವರಿಷ್ಠರ ವಿಶ್ವಾಸ ಸಂಪಾದಿಸಿ

ಕೊಂಡರೆ—ಎಂದಾದರೂ—ನಾನು—ಮತ್ತು ಜಾನನನ್ನು ಕರೆದುಕೊಂಡು ಹೋಗುವೆ. ಎಂದು ನಾನು ವಿಶ್ವಾಸಪಟ್ಟಿದ್ದೇನೆ.''

ನಾನು ಅನ್ನಬೇಕು. "ನಿಜ ಸಧ್ಯಕ್ಕೆ ನಿನ್ನನ್ನು ಬಿಟ್ಟುಹೋಗ ಬೇಕಾಗಿದೆ. ಆದರೆ ಧೈರ್ಯಗುಂದಬೇಡ. ಈ ನರಕದಿಂದ ನಿಶ್ಚಯವಾಗಿ ನಿನ್ನನ್ನು ಬಿಡಿಸುವೆನು.''

ನಾವು ಹೀಗೆ ಮಾತಾಡುತ್ತಿರುವಾಗ. ಮುದ್ದು ಜಾನನು ನಡುವೆ ಬಂದು, ನನ್ನ ಅಥವಾ ಫಿರೇಲಾಯುಳ ಗದ್ದ ಹಿಡಿದು ಅನೇಕ ಪ್ರಶ್ನೆ ಮಾಡ ಬೇಕು. "ನೀರಿನ ಬಣ್ಣ ನೀಲಿ ಏಕೆ?" "ಈ ಪಕ್ಷಿಗಳು ಹೀಗೇಕೆ ಕಿಲಿ ಬಿಲಿ ಮಾಡುತ್ತವೆ?'' "ಪಾತರಗಿತ್ತಿಯ ಮೈ ಹೀಗೆ ಬಣ್ಣ, ಬಣ್ಣ ಯಾರು ಮಾಡಿದರು?"

ಎಂಟುದಿನ ಮುಗಿದವು.

ಬ್ಲುಮೆಂಥಾಲ ಎಂಬ ಸಣ್ಣ ಪಟ್ಟಣದಲ್ಲಿ ಫಿರೇಲಾಯುಳು ಸ್ಥಿರವಾಗಿರ ಬೇಕೆಂದು ಗೆಸ್ಟಪೋ ಹುಕುಮಾಯಿತು. ಆಕೆ ದಿನಕ್ಕೆರಡು ಸಾರೆ ಆ ಪಟ್ಟಣದ ಗೆಸ್ಟಪೋ ಕಚೇರಿಯಲ್ಲಿ ಹಾಜರಿ ಕೊಡಬೇಕೆಂದು ನಿರ್ಬಂಧ ವಿದ್ದಿತು. ಪರಸ್ಪರ ಪತ್ರವ್ಯವಹಾರಕ್ಕೆ ಸಮ್ಮತಿ ಇತ್ತು. ಆದರೆ ಸೆನ್ಸರ ಬೋರ್ಡಿನವರು ಇವುಗಳನ್ನು ನೋಡಬೇಕು. ಇವುಗಳನ್ನು ಬಿಟ್ಟರೆ ಫಿರೇಲಾಯುಳು ಸ್ವತಂತ್ರಳೇ.

ನಾನು ಹಾಂಬುರ್ಗಕ್ಕೆ ಹೋಗಿ ಅಲ್ಲಿಯ ಗೆಸ್ಟಪೋ ಕಚೇರಿಗೆ ವರದಿ ಕೊಟ್ಟೆ. ಶ್ರೀಕೆನಬಾಕ, ಎಂಬ ಅಧಿಕಾರಿಗೆ ಭೆಟ್ಟಿಯಾದೆನು. ನಾನು ಬಂದಕಾರ್ಯ ಅವನಿಗೆ ತಿಳಿದಿತ್ತು. ನನ್ನ ಸ್ವತಃದ ಹೆಸರಿನದೊಂದು ಜರ್ಮನ ಪಾಸಪೋರ್ಟು; ಮತ್ತು 'ಎಮಿಲಬರ್ಗ'ನೆಂದು ಹೆಸರಿಟ್ಟು, ಉದ್ಯೋಗ ಇಂಜನಿಯರನೆಂದು ಬರೆದು, ನನ್ನ ಫೋಟೋ ಅಂಟಿಸಿ ಇನ್ಸ ಪೆಕ್ಟರ ಕ್ರಾವುಸ ರುಜು ಹಾಕಿದ, ಗೆಸ್ಟಪೋ ಮುದ್ರೆ ಇರುವ ಮತ್ತೊಂದು ಪಾಸಪೋರ್ಟು, ಹೀಗೆ ಎರಡು ಕಾಗದಗಳನ್ನು ಅವನು ನನ್ನ ಸ್ವಾಧೀನ ಪಡಿಸಿದನು. ಪರದೇಶಗಳಲ್ಲಿರುವ ಗೆಸ್ಟಪೋ ಎಜಂಟರಲ್ಲಿ ವಿಶ್ವಾಸ ಹುಟ್ಟಿಸಿಲೆಂದು, ನಾನು ಇವುಗಳ ಉಪಯೋಗ ಮಾಡಬೇಕಾಗಿದ್ದಿತು. ಮಹತ್ವದ ಈ ಕಾಗದ ಕೊಡುವಾಗ ಶ್ರೀಕೆನಬಾಕ ಹೇಳಿದನು. "ಬೆಂಕಿ

ಯಲ್ಲಿ ಬೀಳಲಿ; ಮಹಾಪೂರದಲ್ಲಿ ಮುಳುಗುವ ಪ್ರಸಂಗ ಬರಲಿ; ಒಂದು ಮಾತು ಲಕ್ಷ್ಯದಲ್ಲಿಡು. ಶತ್ರುಗಳ ಕೈಗೆ ಈ ಕಾಗದ ಪತ್ರ ಹತ್ತಗೊಡಬೇಡ. ''

೧೯೩೭ರ ಮೇ ತಿಂಗಳ ಮೊದಲ ವಾರದಕಡೆಗೆ ನಾನು ಜರ್ಮನಿಯಿಂದ ಹೊರ-ಹೊರಡುವ ವೇಳೆ ಬಂದಿತು. ನನಗೆ ನಿರೋಪ ಕೊಡುವದಕ್ಕೆ ಇನ್ಸ್‌ಪೆಕ್ಟರ ಕ್ರಾವುಸನು, ಸಂದಿಯಲ್ಲಿರುವ ಒಂದು ರೆಸ್ಟೋರಂಟದಲ್ಲಿ ಭೆಟ್ಟಿಯಾದನು. ಅವನೊಡನೆ ಹರ್ಥಾಜೇನ್ಸಳಿದ್ದಳು. ಒಳ್ಳೇ ಅಡ್ಡದಾರಿಗೆ ಆಕೆ ಬಿದ್ದಂತೆ ತೋರಿತು. ಯಾಕೆಂದರೆ ಅವಳನ್ನು ನೋಡಿದೊಡನೆ ವಿಷಯವಾಸನೆ ಜಾಗ್ರತವಾಗಬೇಕು. ಕ್ರಾವುಸ ಬಜಾಯಿಸಿದನು: '' ಗೆಸ್ಟಪೋದ ಕೈ ಬಹುದೂರ ಚಾಚುತ್ತವೆ. ಲಕ್ಷ್ಯದಲ್ಲಿಡು. ನಮ್ಮನ್ನು ವಂಚಿಸುವ ಯತ್ನಮಾಡಬೇಡ. ಮಾಡಿದರೆ ಅದು ನಿನ್ನ ಪ್ರಾಣಕ್ಕೆ ಮುಳುವು. ಬಹುದೂರ ಚೀನದಲ್ಲಿ-ಅಥವಾ ಬ್ರಾಝಿಲದಲ್ಲಿ ಅಡಗಿದ್ದರೂ, ಹಿಡಿಯದೇ ನಾವು ಬಿಡುವದಿಲ್ಲ. ''

ಎದ್ದು ಒಬ್ಬರೊಬ್ಬರ ಕೈ ಹಿಡಿದೆವು. ಕ್ರಾವುಸ ಹೇಳಿದನು. '' ನಿನ್ನ ಪ್ರವಾಸ ಸುಖವಾಗಲಿ. ''

ಹದಿನೆಂಟು ವರ್ಷದ ಮೊದಲು ನಾನು ಜನ್ಮ ಭೂಮಿಯ ದಂಡೆ ಬಿಟ್ಟು ಹೊರಟಿರಲು, ನಿರೋಪ ಕೊಡುವಾಗ ನನ್ನ ತಾಯಿ ಇವೇ ಶಬ್ದ ಉಚ್ಚರಿಸಿದ್ದಳು.

ರಿಚರ್ಡ ಜೇನಸೇನನಿಗೆ ನಾನು ಸಾದಾ ಒಂದು ಪೋಸ್ಟಕಾರ್ಡ ಗೀಚಿದ್ದೆನು. ಕೋಪನಹೆಗನಕ್ಕೆ ನಾನು ಮುಟ್ಟಿದಾಗ ಅವನ ದಪ್ಪ ಪ್ರಕೃತಿ; ದಂಡೆಯ ಮೇಲಿನ ಜನ ಸಮುದಾಯದಲ್ಲಿ ತೋರಿತು. ನನ್ನನ್ನು ತನ್ನ ಮೋಟರಿನ ಹತ್ತರ ಕರೆದೊಯ್ದು, ಕೂಡಿಸಿ ಅಂದನು. ಮಾತಾಡುವಾಗ ಅವನೇಕೋ ಕಣ್ಣು ಮುಚ್ಚಿ ನಗುತ್ತಿದ್ದ.

'' ಒಳ್ಳೆಲಾಗ ಹಾಕಿದೆಯಪ್ಪ? ಗೋರಿ ಒಡೆದು ಹೊರಗೆ ಬಂದಂತಾಗಿರಬಹುದು. ನಿನಗೆ. ಅಲ್ಲವೇ ? ''

ಉಂ. ಹೇಗೆ- ಏನು ?

"ನೆಟ್ಟಗೆ" ಇಷ್ಟೇ ಹೇಳಿ ನಾನು ಆ ಸ್ಥಳದಲ್ಲಿ ಕೈಕಾಲು ಚಾಚಿದೆ. ಯಾಕೋ, ನನಗೆ ಬಹಳ ದಣಿವೆನಿಸಿತು. ಎಲ್ಲಿಯಾದರೂ ಬಿದ್ದುಕೊಂಡು ವಿಶ್ರಾಂತಿ ಪಡೆಯಬೇಕು. ಮತ್ತಾವುದೂ ಬೇಡ. ಎನಿಸಿತು.

ಜೇನಸೇನ ಹೇಳುತ್ತಿದ್ದ. "ನಿನಗೆ ಉತ್ತಮ ವ್ಯವಸ್ಥೆಮಾಡಿ ಕೊಡುತ್ತೇನೆ. ಚಿಂತೆ ಮಾಡಬೇಡ. ಗೆಸ್ಟಪೋ ನರಕದಿಂದ ಪಾರಾಗಿ, ಮರಳಿ ಮನುಷ್ಯರಲ್ಲಿ ಬರುವದೆಂದರೆ ಎಂಥ ದಿವ್ಯ? ಇದನ್ನು ನಾನು ಬಲ್ಲೆ. ಆ ದಿವ್ಯ ಮಾಡುವವರು ನಿನ್ನಂಥ ಒಬ್ಬರೇ...."

ನಾನು ಜೇಬಿನಲ್ಲಿ ಕೈಹಾಕಿ ಹಾಂಬುರ್ಗ ಕಚೇರಿಯಿಂದ ಪಡೆದ ಆ ಎರಡೂ ಪಾಸಪೋರ್ಟ್ ಜೇನಸೇನನ ಕೈಯಲ್ಲಿಡುತ್ತ ಹೇಳಿದೆ. "ಇದನ್ನು ನಿನ್ನ ಬಳಿ ಇಟ್ಟುಕೋ. ನಾನೆಲ್ಲಿ ಈ ಪೀಡೆ ಕಟ್ಟಿಕೊಂಡಿರಲಿ?" ಜರ್ಮನಿಯಿಂದ ಓಡಿಬಂದ ಸಾಮಾನ್ಯ ಪ್ರವಾಸಿ ಎಂದು ತಿರುಗುವದೇ ನನಗೆ ಸುಖದಾಯಕ."

ಆ ಕಾಗದ ನೋಡಿ ಜೇನಸೇನ ಪುನಃ ಪುನಃ ಉದ್ಗಾರ ತೆಗೆದನು. "ವ್ಹಾ, ವಾ. ಭೇಷ ಭೇಷ. ಇರಲಿ. ನಿನ್ನ ಫಿರೇಲಾಯ ಹೇಗಿದ್ದಾಳೆ? ಅದನ್ನು ಹೇಳಯ್ಯಾ."

"ಆಕೆ ಜೇಲಿನಲ್ಲಿ ಇಲ್ಲ. ಗೆಸ್ಟಪೋ ನಜರ ಕೈದಿನಲ್ಲಿದ್ದಾಳೆ. ಆಕೆ ಒತ್ತೆ ಇರುವಳೆಂದು ಬೇಕಾದರೆ ತಿಳಿ. ಹೇಗಾದರೂ ಮಾಡಿ ಜರ್ಮನಿಯಿಂದ ಆಕೆಯನ್ನು ಪಾರುಮಾಡಬೇಕು."

"ಹೋ-'ಮಾಡೋಣ. ಇನ್ನು ಪಕ್ಷದ ವಿಷಯದಲ್ಲಿ ಆಕೆಯ ನಿಷ್ಠೆ ಇರುವದೋ?"

"ಅರ್ಥಾತ್."

"ಪರವಿಲ್ಲ. ನೋಡಲು ಬಂದೀತು. ಎಲ್ಲಿಯವರೆಗೆ ಗೆಸ್ಟಪೋದವರಿಗೆ ನಿನ್ನ ಸಂಶಯ ಬರುವದಿಲ್ಲವೋ, ಅಲ್ಲಿಯವರೆಗೇನೂ ಆಕೆಗೆ ಉಪದ್ರವ ಕೊಡುವದಿಲ್ಲ."

ಫಿರೇಲಾಯಳ ವಿಚಾರ ಮನಸ್ಸಿನಿಂದ ಕ್ಷಣಕೂಡ ದೂರಾಗಲಿಲ್ಲ. ಕಾರ್ಯ ಆರಂಭಿಸಿದೆ. ಕಾರ್ಯವೆಂದರೆ—ಕಾಮಿಂಟರ್ನದ ಕಾರ್ಯಕ್ರಮ, ಮತ್ತು ಮುಂದಿನ ಯೋಚನೆ ಇವುಗಳ ಸುಳ್ಳು ಸುದ್ದಿಗಳನ್ನು ಗೆಸ್ಟಪೋಕ್ಕೆ

ತಿಳಿಸುವದು. ಆದರೆ ಒಂದೇ ವಿಚಾರ ಮನಸದಲ್ಲಿ. ನನ್ನ ಹೆಂಡತಿ ಮತ್ತು ಹುಡುಗ ಇವರನ್ನು ಜರ್ಮನಿಯಿಂದ ಬಿಡಿಸಬೇಕು. ಯಾರು ಬೇಕಾದವರ ಮುಂದೆ ಹೇಳಿದರೂ ಅವರೆನ್ನಬೇಕು. ಇದು ಹೇಗೆ ಸಾಧ್ಯವಾಗುವದು? ಪಕ್ಷದ ಎಲ್ಲ ಜನರ ಅಂತಃಕರಣದಲ್ಲಿ ಸ್ಟಾಲಿನನ ವಿಷಯಕ್ಕೆ ಏನೋ-ಒಂದು ವಿಚಿತ್ರ ಭೀತಿ ಹುಟ್ಟಿದಂತೆ ತೋರಿತು.

೧೯೩೪ರಲ್ಲಿ ಲೆನಿನಗ್ರಾಡದ ರಾಜಕೀಯ ಖಾತೆಯ ಮುಖ್ಯ 'ಸರ್ಜೀ ಕಿರಾಫ' ಇವನ ಕೊಲೆಯಾದ ನಂತರ ಸ್ಟಾಲಿನನು ಕಮ್ಯುನಿಷ್ಟ ಪಕ್ಷದ ಶುದ್ಧಿ ಮಾಡಲು, ಭಯಂಕರ ಹತ್ಯಾಕಾಂಡ ಆರಂಭಿಸಿದನು. ಈಗ ೧೯೩೭ರ ವರೆಗೆ ನೋಡಿದರೆ ಆ ಶುದ್ಧಿಯ ತರಂಗ ಕಮ್ಯುನಿಷ್ಟ ಪಕ್ಷದ ಪರ ದೇಶದ ಶಾಖೆಗಳವರೆಗೂ ವ್ಯಾಪಿಸಿತ್ತು. ಯಾರಿಗೆ ಏನು ಪ್ರಸಂಗವೋ, ನೇಮವಿಲ್ಲ. ಒಬ್ಬನು ಮತ್ತೊಬ್ಬನನ್ನು ವಿಶ್ವಾಸಘಾತಕಿ ಎಂದು ದೂರ ಬೇಕು. ತಾನು ಪಕ್ಷದಲ್ಲಿ ಯಾವದಾದರೊಂದು ಸ್ಥಳ ದೃಢಪಡಿಸಿಕೊಳ್ಳ ಬೇಕು. ಇದು ಸಹಜ ನಡೆಯುವಂಥ ನಿತ್ಯ ವ್ಯವಹಾರ. ಕಾಮ್ರೇಡ ಎಂಬ ಶಬ್ದ ಹೆಸರಿಗೆ ಉಳಿದಿತ್ತು. ನಿಜವಾದ ಗೆಳೆತನ ಲಯವಾಗಿದ್ದಿತು.."

ಇದನೆಲ್ಲ ನಾನು ನೋಡಿಕೊಂಡು ಪರರ ಮುಂದೆ ಫಿರೇಲಾಯಳ ಮಾತು ನೋಡಿ ತೆಗೆಯಬೇಕೆಂದುಕೊಂಡೆ. ಆದರೆ ಅದಕಾಗಿ ವರಿಷ್ಠರ ಬೆನ್ನುಹತ್ತಬೇಕೆಂದು ನಿರ್ಧಾರ ಮಾಡದೆ ಬಿಡಲಿಲ್ಲ. ಜೂನ ತಿಂಗಳ ಕಡೆಗೆ ವಾಲವೆಬರ, ಜೇನಸೇನ, ಅವ್ಹಾಟಿನ, ಇವರದೊಂದು ಗುಪ್ತ ಬೈಠಕ್ಕು ನಡೆದಾಗ ನನ್ನ ಪ್ರಶ್ನವನ್ನು ಸಹಜ ಮುಂದಿಟ್ಟೆ.

"ಫಿರೇಲಾಯ ಮತ್ತು ನನ್ನ ಮಗ ಇವರನ್ನು ಗೆಸ್ಟಪೋದವರ ಕಣ್ಣು ತಪ್ಪಿಸಿ, ಇತ್ತ ತರುವದು ನಿಮಗೇನು ಕಠಿಣವಲ್ಲ. ಮೂರು-ನಾಲ್ಕು ವಿಶ್ವಾಸಿಕರೂ-ಸಾಹಸಿಗಳೂ ಆದ ಜನ ನೇಮಿಸಿದರೆ ಅವರು ಸಹಜ ಈ ಕಾರ್ಯ ಮಾಡುವರು. ನನ್ನ ಬೇಡಿಕೆ ಅಸಾಧ್ಯವೆಂದು ನಿಮಗನಿಸುವ ಕಾರಣವಿಲ್ಲ. ಇದು ನಿಮ್ಮಿಂದ ಸಹಜ ಆಗುವ ಕೆಲಸ. ನನ್ನ ದೃಷ್ಟಿಯಿಂದ ಮಾತ್ರ ಬಹಳ ದೊಡ್ಡದು."

ಅವ್ಹಾಟಿನ, ಕೂಡಲೇ ನನ್ನ ಪಕ್ಷ ಹಿಡಿದ. ಗೆಸ್ಟಪೋದವರೊಡನೆ ಯಾವುದೇ ಪ್ರಸಂಗ ಬರಲಿ, ಅವನ ಉತ್ಸಾಹ- ಅಷ್ಟು ಹೆಚ್ಚು. ಜೇನಸೆನ

ಮೋರೆ ಕಿವುಚಿದ. ಅವನು ವಾಲವೆಬರನ ಗಟ್ಟಿನ ಗುಡಿ. ವಾಲವೆಬರ ನನ್ನು ನೋಡಿದರೆ ನನ್ನ ಬೇಡಿಕೆಗೆ ಕೂಡಲೇ ಕತ್ತರಿ ಹಾಕಿದನು. ಅವನು ಹೇಳಿದನು. “ ಗೆಸ್ಟಪೋದಲ್ಲಿ ನಮ್ಮ ಅನೇಕ ಕಾರ್ಯಕರ್ತರನ್ನು ಸೇರಿಸಬೇಕೆಂದು ಯತ್ನಿಸಹತ್ತಿದ್ದೇವೆ. ಹೀಗಿರುವಾಗ ಒಂದು ಸಾಹಸ ಮಾಡಿ, ಅವರ ಸಂಶಯಕ್ಕೆ ಸ್ಥಳ ಮಾಡಿಕೊಡುವದರಿಂದ ಪಕ್ಷದ ದೊಡ್ಡ ಹಾನಿಯಾಗುವದು. ಇಂಥ ಸಣ್ಣ ಮಾತು ನಿನಗೆ ತಿಳಿಯದಿದ್ದರೆ ಪಕ್ಷದ ಏಕನಿಷ್ಠ ಸೇವಕನೆಂದು ನಿನಗೆ ಯಾರು ಹೇಳಬೇಕು ? ”

ಇದನ್ನು ಕೇಳಿ ಸಿಟ್ಟು ಸಹನವಾಗಲಿಲ್ಲ. ಆರ್ಥರ ಸಮುಸಿಂಗನ ತಂಗಿ ಸಿಲವ್ಹಿಯಾ' ಇವಳ ಮತ್ತು ವಾಲವೆಬರನ ಪ್ರೇಮ ಸಂಬಂಧ. ನಂತರ ಆದ ಅವರ ಲಗ್ನ ಇದೆಲ್ಲ ನನಗೆ ಗೊತ್ತಿದ್ದಿತು. ವಾಲವೆಬರನಿಗೆ ಅದರ ನೆನಪು ಕೊಟ್ಟು, ನಾನು ಹೇಳಿದೆನು.

“ ಈಗ ಫಿರೇಲಾಯಳು, ಸಿಕ್ಕಂತೆ ನಿನ್ನ ಸಿಲವ್ಹಿಯಾ ಜರ್ಮನಿಯಲ್ಲಿ ಸಿಕ್ಕಿದ್ದರೆ, ಹೀಗೆ ವಾದ ಮಾಡುತ್ತಿದ್ದೆಯೋ? ”

ವಾಲವೆಬರ ಗುರುಗುರಿಸಿದನು. “ ಅದು ವಾದದ ವಿಷಯವಲ್ಲ. ”

ಬೈಠಕ್ಕು ಮುಗಿದ ಮೇಲೆ ಅವ್ಹಾಟಿಸನು ಒತ್ತಟ್ಟಿಗೆ ಭೆಟ್ಟಿಯಾದಾಗ ನಾನಂದೆ—

“ ನಾನು ಸ್ವತಃ ಜರ್ಮನಿಗೆ ಮರಳಿಹೋಗಿ ಫಿರೇಲಾಯಳನ್ನು ಕರೆ ತರುವೆನು. ನಾನು ಅಲ್ಲಿ ಎಂಟು ದಿವಸ ಇರಲಿಕ್ಕೆ ಅನುಕೂಲವಾಗುವಂತೆ, ಒಂದು ಕಾರ್ಯ ಹುಡುಕು. ಮತ್ತು ನನಗೆ ೫೦೦ ಕ್ರಾವುನ ಕೊಡು. . . . ”

“ ಆದರೆ ಗೆಳೆಯಾ ! ಈ ಸಾಹಸದಲ್ಲಿ ಕದಾಚಿತ್ ನಿನಗೆ ಪ್ರಾಣ ಸಂಕಟ ಒದಗಬಹುದು. ಇದನ್ನು ನೀನು ಮರೆಯುವೆಯಲ್ಲ? ”

“ ಹೇಗಾದರೂ ನಾನು ಹೋಗುತ್ತೇನೆ. ”

“ ಪಕ್ಷದ ಹುಕುಮು ಇಲ್ಲದೇ ? ”

“ ನೀನು ನನ್ನ ವರಿಷ್ಠ. ನೀನು ಹುಕುಮು ಕೊಡು. ”

“ ಗೆಸ್ಟಪೋ ಜನ, ಕತ್ತೆಗಳೆಂದು ನೀನು ತಿಳಿಯುವಿಯೋ ? ಹೇಗೆ? ”

“ ನಿನ್ನ 'ಮಾಲ್ಕಾ'ಳನ್ನು ನೆನೆಸಿ ನೋಡು. ಆಕೆ ಪೋಲಂಡದಲ್ಲಿ

ಹಿಡಿಯಲ್ಪಟ್ಟಾಗ ನೀನೇನು ಮಾಡಿದೆ? ಪಕ್ಷದ ಪರವಾನಿಗೆಯ ಹಾದಿ ಕಾಯದೆ ವಿಮಾನದಿಂದ ಹೊರಟೆಯಲ್ಲ.''

'' ಹಂ. ಚುಪ್ ! ಪಾಪ ಮಾಲ್ಕಾ ಸತ್ತಳು ಆಕೆ. ಅವಳ ವಿಷಯದಲ್ಲಿ ಒಂದು ಅಕ್ಷರ ಕೂಡ ಮಾತಾಡಬೇಡ.''

ನಾನು ಕೂಗಿಬಿಟ್ಟೆ. '' ನಾನು ಫಿರೇಲಾಯಳನ್ನು ಬಿಡಿಸಲೇ ಬೇಕು.''

ಕೆಲವು ವೇಳೆ ತಡೆದು ಮೆಲ್ಲನೆ ಅವನೆಂದ. '' ನಿನಗಾದ ವ್ಯಥೆ ನನಗೆ ಗೊತ್ತು. ನೀನು ಜರ್ಮನಿಗೆ ಹೋಗು. ನೀನು ಗೆಸ್ಟಪೋದ ಕಾರ್ಯಕ್ಕಾಗಿ ಬಂದಿರುವೆ ಎಂದು ಅವರಿಗೆ ಭಾಸವಾಗುವಂತೆ, ಅವರ ಸ್ವಾಧೀನ ಮಾಡಲು ನಾನು ಬೆಳಗಿನಲ್ಲಿ ಕೆಲವು ಕಾಗದ-ಪತ್ರ ನಿನಗೆ ಕೊಡುತ್ತೇನೆ.''

ಮರುದಿನ ನಾನು ಹೊರಟೆ. ನನಗೆಷ್ಟು ಆನಂದವಾಗಿತ್ತು ಆಗ. ಬಾಲ್ಟಿಕ ಸಮುದ್ರ ಅರ್ಧದಾಟುವವರೆಗೂ, ನನ್ನ ಪಾಸಪೋರ್ಟು ಬಳಿಯಲ್ಲಿಲ್ಲ; ಎಂಬ ಎಚ್ಚರಕೂಡ ಇರಲಿಲ್ಲ. ಬಂದರದಲ್ಲಿ ಇಳಿದ ಕೂಡಲೇ ಅಲ್ಲಿಯ ತಪಾಸಣೆಯಲ್ಲಿ ನಾನು ಸಿಕ್ಕುಬಿದ್ದೆ. ಒಂದೇ ಉಪಾಯ ಉಳಿದಿತ್ತು ಈಗ. ನನ್ನನ್ನು ತಡೆದ ಅಮಲದಾರನಿಗೆ ನಾನು ಹೇಳಿದೆ. ಇನ್ಸಪೆಕ್ಟರ ಕ್ರಾವುಸನಿಗೆ ಫೋನುಮಾಡಿ ಬೇಕಾದರೆ ವಿಚಾರಿಸಿಕೊಳ್ಳಿ.''

ಅವನು ಫೋನು ಮಾಡಿದನು. ಫೋನಿನ ಮೇಲೆ ಹರ್ಥಾಜೇನ್ಸ ಇದ್ದಳು. ಆಕೆ ಬಿಡಲು ಪರವಿಲ್ಲವೆಂದು ಹೇಳಿಬಿಟ್ಟಳು.

ಆ ಸಂಕಟದಿಂದ ಪಾರಾದೆ ಮಾತ್ರ. ಅದರಿಂದ ಮತ್ತೊಂದು ದೊಡ್ಡ ಸಂಕಟ ಬಂದಿತು. ಗೆಸ್ಟಪೋದವರಿಗೆ ತಿಳಿಯದಂತೆ ನಾನು ಜರ್ಮನಿಯಲ್ಲಿ ಪ್ರವೇಶಿಸಬೇಕಾಗಿದ್ದಿತು. ಅದೇನೂ ಸಫಲವಾಗಲಿಲ್ಲ. ಈಗ ಗೆಸ್ಟಪೋ ಕಚೇರಿಯಲ್ಲಿ ಮೊದಲು ವರ್ದಿ ಕೊಡುವದೇ ಸರಿಯಾಗಿತ್ತು. ಅವ್ಹಾಟಿನನಿಂದ ಕಾಗದ-ಪತ್ರ ದೊರಕಿದ್ದವೆಂದು ನೆಟ್ಟಗೆ.

ಕ್ರಾವುಸನಿಗೆ ಭೆಟ್ಟಿಯಾಗಿ ಸುಳ್ಳೇ ಹೇಳಿದೆ. ಡ್ಯಾನಿಶ ಪೋಲೀಸರ, ಕಪ್ಪುಯಾದಿಯಲ್ಲಿ ನನ್ನ ಹೆಸರು ಹೊರಟರೆ ಗೊಂದಲವೆಂದು, ಪಾಸಪೋರ್ಟು ಇಲ್ಲದೆ ನಾನು ಪ್ರವಾಸ ಮಾಡಿದೆ.

ಅವನೆಂದ. "ಅದು ಸರಿ. ಆದರೆ ನಾವು ಕೊಟ್ಟ ಪಾಸಪೋರ್ಟ್ ನೀನು ಎಲ್ಲಿ ಇಟ್ಟಿರುವೆ?"

ಗುಳಿಗೆಕೊಟ್ಟೆ. "ಒಂದು ಗುಪ್ತ ಸುರಕ್ಷಿತ ಸ್ಥಳದಲ್ಲಿ ಹುಗಿದು ಇಟ್ಟಿದ್ದೇನೆ."

ಐದು ದಿವಸ ನಾನು ಹಾಂಬುರ್ಗದಲ್ಲಿರಬೇಕಾಯಿತು. ಆರನೇ ದಿನ ಪರವಾನಿಗೆ ದೊರೆತ ಕೂಡಲೇ ಬ್ಲುಮೆಂಥಾಲಕ್ಕೆ ಹೊರಟೆ. ನನ್ನನ್ನು ನೋಡಿ ಫಿರೇಲಾಯಳಿಗೆ ಅತಿಶಯ ಆನಂದವಾಯಿತು. ನಾನು ಮಾತ್ರ ವಿಷಣ್ಣನಾಗಿದ್ದೆ. ನಾನು ಬಂದ ಕಾರಣ, ಅದು ಸಫಲವಾಗದಿರುವ ಪ್ರಸಂಗ ಇದೆಲ್ಲ ತಿಳಿದಾಗ ಆಕೆಗೂ ಕೆಡುಕೆನಿಸಿತು. ಆಕೆ ಹೇಳಿದಳು.

"ಪುನಃ ನಾವು ಯತ್ನಿಸುವಾ. ಏನಾದರೂ ಹಾದಿ ಸಿಕ್ಕೇ ತೀರುವುದು. ಧೈರ್ಯ ಬಿಡಬೇಡ."

ಮರುದಿನ ನಾನು ಫಿರೇಲಾಯಳ ನಿರೋಪ ಪಡೆದೆ.

ನಿಲ್ದಾಣದ ಪ್ಲಾಟಫಾರ್ಮಿನ ಮೇಲೆ ನಾವಿಬ್ಬರೂ ನಿಂತುಕೊಂಡಿದ್ದೆವು. ತುಸು ದೂರ ಗೆಸ್ಟಪೋದ ಒಬ್ಬ ಗುಪ್ತ ಹೇರ ನಮ್ಮ ಮೇಲೆ ಕಣ್ಣಿಟ್ಟು ನಿಂತಿರುವದು ನಮಗೆ ತಿಳಿದಿದ್ದಿತು. ಗಾಡಿ ಬಿಡುವ ವೇಳೆಯಾಯಿತು. ಆಗ ಸರಕ್ಕನೆ ಫಿರೇಲಾಯಳನ್ನು ಬಳಿಗೆಳೆದು, 'ಗುಡ್ ಬಾಯ' ಎಂದು ಚುಂಬಿಸಿದೆ.

ನನ್ನ ಆಯುಷ್ಯದಲ್ಲಿ ಅದು ಕಡೆಯ ಚುಂಬನವೆಂಬ ಕಲ್ಪನೆ, ಆ ಸಮಯದಲ್ಲಿ ನನಗೆಲ್ಲಿ?

## ೨೧

ಗೆಸ್ಟಪೋ ವಿಶ್ವಸ್ತನೆಂದು ನಾನು ಕೋಪನಹೆಗನದಲ್ಲಿ ಇರುವದಷ್ಟೇ. ಮಾಡುವ ಕೆಲಸವೆಲ್ಲ ಕಾಮಿಂಟರ್ನ ಪಕ್ಷದ್ದು. ಹಾಂಬುರ್ಗದಲ್ಲಿ ಶ್ರೇಕನ ಬಾಕನು ನನಗೆ ನಿರೋಪ ಕೊಡುವ ಸಮಯದಲ್ಲಿ ಮಾತು ನಡೆದದ್ದು ಹೀಗೆ. ಅವನ ದೂತನು ಎರಡು ದಿನಕ್ಕೊಮ್ಮೆ ಜರ್ಮನಿ ಸೀಮೆದಾಟಿ ಬಂದು ನನ್ನನ್ನು ಕಾಣಬೇಕು. ಏನಾದರೂ ಗೆಸ್ಟಪೋ ಹುಕುಮು ಇದ್ದರೆ ಕೊಡಬೇಕು. ನಾನು ಕಾಮಿಂಟರ್ನದ ಅಂತಸ್ಥ ಗುಪ್ತ ಸುದ್ದಿ ತಿಳಿದು, ಕೊಟ್ಟ

ರಿಪೋರ್ಟನ್ನು ಶ್ರೀಕೆನಬಾಕನ ಸ್ವಾಧೀನಪಡಿಸಬೇಕು. ಈ ಕ್ರಮ ಸರಿಯಾಗಿ ಸಾಗಿತ್ತು. ಆದರೆ ನಾನು ತಿಳಿಸುವ ಸುದ್ದಿಗಳೆಲ್ಲ ಕಾಮಿಂಟರ್ನದವರು ನನಗೆ ತಿಳಿಸೆಂದು ಹೇಳಿದಂಥವುಗಳೇ. ಒಟ್ಟು ಕಾಮಿಂಟರ್ನದ ಕಾರ್ಯ ಸರಾಗವಾಗಿ ಸಾಗಬೇಕು. ಗೆಸ್ಟಪೋದವರಿಗೆ ದಿಕ್ಕುತಪ್ಪಿ, ಅವರು ಇತ್ತ ಲಕ್ಷಕೊಡದಿರಬೇಕು. ಹೀಗಿತ್ತು ನನ್ನ ಕಾರ್ಯ. ರಶಿಯದಲ್ಲಿ ಕೆಲಸ ಮಾಡುವ ಕಾಮಿಂಟರ್ನ ಜನರ ವಿಷಯಕ್ಕೆ ನಾನು ಬೇಕಾದಂತೆ ರಿಪೋರ್ಟು ಬರೆಯಬೇಕು. ಅವರು ಗುಪ್ತವಾಗಿ ಜರ್ಮನಿಯಲ್ಲಿ ಸಂಚರಿಸುತ್ತಾರೆ. ಜರ್ಮನಿಯಲ್ಲಿರುವವರ ವಿಷಯಕ್ಕೆ, ಅವರು ಇಂಥ-ಇಂಥಲ್ಲಿ ಇರುವದು. ಆಗ ಸ್ಪೇನದಲ್ಲಿ ನಡೆದ ಯುದ್ಧದಲ್ಲಿ 'ಇಂಟರ ನ್ಯಾಶನಲ ಬ್ರಿಗೇಟ' ಎಂದು ಲೋಕಶಾಹೀ ಪಕ್ಷದ ಪರವಾಗಿ ಯುದ್ಧ ಮಾಡುವದೊಂದು ಗುಂಪು ಇತ್ತು. ಅದರಲ್ಲಿ ಸೇರಿಕೊಂಡ ಜರ್ಮನ್ ಸಿಪಾಯಿಗಳ ದೊಡ್ಡ ಯಾದಿಯೊಂದನ್ನು ನಾನು ಗೆಸ್ಟಪೋಕ್ಕೆ ಸಾದರಪಡಿಸಿದೆ. ಆದರೆ ಆ ಹೆಸರುಗಳೊಂದೂ ಜೀವಂತ ವ್ಯಕ್ತಿಯವಲ್ಲ. ಕಾಮಿಂಟರ್ನದವರು ತೆಗೆದು ಹಾಕಿದ ಸಾಂಕೇತಿಕ ಭಾಷೆ ಈಗ ಪ್ರಚಾರದಲ್ಲಿದೆ ಎಂದು ಸಹಜ ತಿಳಿಸುತ್ತಿದ್ದೆ. ಮತ್ತು ಕಾಮಿಂಟರ್ನ ಕಚೇರಿಯಲ್ಲಿ ಬೇಕೆಂತಲೇ ಸಿದ್ಧಗೊಳಿಸಿದ ಪತ್ರಗಳನ್ನು, ಬಹಳ ಸಾಹಸದಿಂದ ದೊರಕಿಸಿದ ಗುಪ್ತ ಪತ್ರವ್ಯವಹಾರವೆಂದು ಕಳಿಸಿಬಿಡಬೇಕು. ಅರ್ಥಾತ್ ಇವೆಲ್ಲ ಕಾರ್ಯಗಳಲ್ಲಿ ಬಹಳ ಕುಶಲತೆ ಬೇಕಾಗುತ್ತಿದ್ದಿತು. ಈ ಆಟ- ಎಂದು ಹೊರಳುವದೋ ನೇಮವಿರಲಿಲ್ಲ. ಪಗಾರ ಗೆಸ್ಟಪೋದ್ದು. ಕಾರ್ಯ ಕಾಮಿಂಟರ್ನದ್ದು. ಹೀಗೆ ನನ್ನ ಕೈಯಿಂದಾದ ಕಾಮಿಂಟರ್ನದ ಸೇವೆ ಕಮ್ಮಿಯದಲ್ಲ. ವರಿಷ್ಠರೂ ಇದನ್ನರಿತಿದ್ದರು. ನಾನೂ ಆ ಆನಂದದಲ್ಲಿದ್ದೆ.

ಇದಕ್ಕೂ ಹೆಚ್ಚಿನ ಗೆಸ್ಟಪೋದ ವಿಶ್ವಾಸಘಾತ ನಾನು ಮಾಡಬೇಕೆಂದು ವಾಲವೆಬರ ಮುಂತಾದವರು ಯೋಚಿಸಹತ್ತಿದರು. ಒಂದು ಸಾರೆ ನಡೆದ ವೃತ್ತಾಂತ ಹೀಗೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ನನಗೆ ಭೆಟ್ಟಿಯಾಗುವ ಶ್ರೀಕೆನಬಾಕನ ಗುಪ್ತ ದೂತನಿಗೆ ನಾನು ಹೇಳಿದೆ. ಇಂಥ ದಿವಸ ವಾಲವೆಬರನು ಡೆನ್ಮಾರ್ಕ ಸಂಚಾರಕ್ಕೆ ಹೋಗುತ್ತಾನೆ. ಅವನ ಕಾರ್ಯಕ್ರಮ ಹೀಗೆ ಹೀಗೆ. ಸಾಂಡರ್ಸಬರ್ಗ

ದಲ್ಲಿ ಮಂಗಳವಾರ ಇರಬಹುದು. ಆ ಊರು ಜರ್ಮನ ಸೀಮೆಯಿಂದ ಸನಿಯದಲ್ಲಿದೆ. ಆಗ ಶ್ರೀಕೆನಬಾಕನು ನಾಲ್ಕು ವಿಶ್ವಾಸಿಕರೊಡನೆ ಹೋಗಿ, ವಾಲವೆಬರ ಇಳಿದ ಹಾಟೆಲಕ್ಕೆ ಮುತ್ತಿಗೆ ಹಾಕಿ ಅವನನ್ನು ಹಿಡಿದೊಯ್ಯ ಬೇಕು. ಈ ಮಹತ್ವದ ಸುದ್ದಿ ಶ್ರೀಕೆನಬಾಕನಿಗೆ ತಿಳಿಯಿತು. ನಮ್ಮ ಈ ವ್ಯೂಹದಲ್ಲಿ ಶ್ರೀಕೆನಬಾಕ ಸಿಕ್ಕು ಬೀಳುವನೆಂದು ನಮ್ಮ ತರ್ಕವಿದ್ದಿತು. ಹಾಗೆ ಆಗಿದ್ದರೆ......

ವಾಲವೆಬರನಂಥ ದೊಡ್ಡ ಅಧಿಕಾರಿ ಒಬ್ಬನೇ ಸಾಂಡರ್ಸಬರ್ಗಕ್ಕೆ ಬರುವ ಸುದ್ದಿ ಗೆಸ್ಟಪೋ ಜನರಿಗೆ ಸಂಶಯಾಸ್ಪದವೆನಿಸಿತು. ನಮ್ಮ ತರ್ಕ ದಂತೆ ಶ್ರೀಕೆನಬಾಕ ಒರಲಿಲ್ಲ. ಭದ್ರತೆಗೆಂದು ನಾಲ್ಕು ಸಿಪಾಯರು-ಗುಪ್ತ ಹೇರರು ಇವರನ್ನು ಮಾತ್ರ ಸಾಂಡರ್ಸಬರ್ಗದಲ್ಲಿ ಇಟ್ಟುಬಿಟ್ಟರು ಅಷ್ಟೆ.

ಇದರ ಅರ್ಥವು ನಮ್ಮ ತಂತ್ರ ಫಲಿಸಲಿಲ್ಲ; ಎಂಬುದಷ್ಟೇ ಅಲ್ಲ. ಗೆಸ್ಟಪೋದಲ್ಲಿ ನಾನು ಅವಿಶ್ವಾಸಿಕನೆಂದಾದೆ. ಇನ್ನು ಮುಂದೆ ಇಕ್ಕಟ್ಟಿನ ಈ ಆಟವಾಡುವದು, ನನಗೆ ಅಶಕ್ಯವೆನಿಸಿತು. ನೆಟ್ಟಗೆ ಗೆಸ್ಟಪೋ ಸಂಬಂಧ ಕಡಿದುಕೊಳ್ಳುವದು ಬೇಕಾಗಿದ್ದಿತು. ಅದು ಸಹ ಬಹಳ ಕೌಶಲ್ಯದಿಂದ. ಯಾಕೆಂದರೆ ನನ್ನ ಫಿರೇಲಾಯಳು ಜರ್ಮನಿಯಲ್ಲಿ.

ಒಂದು ಯುಕ್ತಿ ಮಾಡಿದೆ. ಶ್ರೀಕೆನಬಾಕನಿಂದ ಬರುವ ದೂತನಿಗೆ, ಏಳೆಂಟು ದಿನ ನಾನು ಭೆಟ್ಟಿಯೇ ಆಗಲಿಲ್ಲ. ಗೊತ್ತಾದ ವೇಳೆಗೆ ಒಂದು ಅವನು ಕೈಬೀಸುತ್ತ ಹೊರಟುಹೋದನು. ನನ್ನದೇನು? ಎಂದು ಶ್ರೀಕೇನಬಾಕ ಆಶ್ಚರ್ಯಪಡಹತ್ತಿದನು. ಆಗ ಅವಸರದಿಂದ ಗೀಚಿದಂತೆ ನಾನು ಒಂದು ಪತ್ರ ಬರೆದೆ. ಅದರಲ್ಲಿದ್ದ ವಿಷಯ ಹೀಗೆ- "ಸೋವ್ಹಿಎಟದ ಲಷ್ಕರೀ ಶಿಕ್ಷಣ ಶಾಲೆಯಲ್ಲಿ ನಾನು ಯುಕ್ತಿಯಿಂದ ಪ್ರವೇಶ ದೊರಕಿಸಿ, ಅಲ್ಲಿಗೆ ಈಗಲೇ ಹೊರಟಿದ್ದೇನೆ." ಸೋವ್ಹಿಎಟ ಸರಕಾರದ ಅಂತರಂಗದ ಗುಪ್ತ ಸುದ್ದಿ ತಿಳಿಯಲು, ನಾನು ಈ ಹಂಚಿಕೆ ಹಾಕಿರುವೆನೆಂದು ತಿಳಿದು ಶ್ರೀಕೆನಬಾಕ ಆನಂದ ಪಡಬಹುದು; ಎಂದು ನಾನು ತರ್ಕಮಾಡಿದ್ದೆನು. ಕೂಡಲೇ ಆ ಪತ್ರವನ್ನು 'ರಿಗಾ' ದಲ್ಲಿರುವ ಒಬ್ಬ ಪ್ರಚಾರಕ ಮಿತ್ರನಿಗೆ ಕಳಿಸಿ ಬಿಟ್ಟೆ.

" ಅಲ್ಲಿಂದ ಅವನು ಮುಂದೆ ಶ್ರೀಕೆನಬಾಕನ ವಿಳಾಸಕ್ಕೆ ನನ್ನ ಪತ್ರಗಳನ್ನು ಕಳಿಸುವದೆಂದು ವ್ಯವಸ್ಥೆ ಮಾಡಿದೆನು. ಇದರ ಹೇತುವಿಷ್ಟೇ. ಮಾಸ್ಕೋಕ್ಕೆ ಹೋಗ-ಹೋಗುತ್ತ ಮಾರ್ಗದಲ್ಲಿ ನಾನು ಪತ್ರ ಬರೆದಿರುವೆ-ಎಂದು ಗೆಸ್ಟಪೋಕ್ಕೆ ಭಾಸವಾಗಬೇಕು. ಮುಂದೆ ಎಷ್ಟೋ ದಿನ ನನ್ನ ಪತ್ರ ಹೋಗದಿದ್ದರೂ ಅವರಿಗೆ ಸಂದೇಹವೆನಿಸಬಾರದು. ಮತ್ತು ಫಿರೇಲಾಯಳು ಸುರಕ್ಷಿತವಾಗಿರಬೇಕು.

ಆಕ್ಟೋಬರ ತಿಂಗಳು ಬಂದಿತು; ಒಂದು ದಿನ ಬೆಳಗಿನಲ್ಲಿ ವಾಲವೆಬರ ಮತ್ತು ಕುಸಿನೆನ ಇವರು ಭೆಟ್ಟಿಗೆ ಕರೆಸಿಕೊಂಡರು. ಗೆಸ್ಟಪೋಕ್ಕೆ ವಂಚಿಸುವ ಒಂದು ಕಾರ್ಯವನ್ನು ನನಗೆ ಹೇಳತೊಡಗಿದರು. ನಾನಂದೆ-" ಇನ್ನು ಮುಂದೆ ಇಂಥ ಯಾವ ಕೆಲಸವನ್ನೂ ಹೇಳಬೇಡಿರಿ. ನಾನು ಈಗ ರಶಿಯದಲ್ಲಿರುವೆನೆಂದು ಗೆಸ್ಟಪೋದವರಿಗೆ ಭ್ರಮೆ ಹುಟ್ಟಿಸಿದ್ದೇನೆ."

ಕುಸಿನೆನ ನಗುತ್ತ ನುಡಿದನು. " ತಪ್ಪೇನಾಯಿತು ? ತುಸು ದಿವಸಗಳ ನಂತರ ಮಾಸ್ಕೋದಿಂದ ತಿರುಗಿ ಬಂದೆನೆಂದು ಬರೆಯಲಿಕ್ಕೆ ನಿನಗೆ ಬಂದೇ ಬರುವದು. ಆಮೇಲೆ.... "

ನಾನು ಎದ್ದು ನಿಂತು ಆವೇಶದಿಂದ ನುಡಿದೆ. " ನಿಮಗೆ ನಿಮ್ಮ ಕಾರ್ಯಗಳಷ್ಟೇ ಕಾಣುವವು. ಪರರ ಅಂತಃಕರಣ ಕಾಣಿಸುವದಿಲ್ಲ. ಜರ್ಮನಿಗೆ ಮರಳಿ ಹೋಗಲು ನಾನು ಬೆದರುವೆನೆಂದು ನೀವು ತಿಳಿದರೆ ಅದು ತಪ್ಪು. ನಿಂತಕಾಲಮೇಲೆ ಹೋಗಲು ಸಿದ್ಧ ನಾನು. ಆದರೆ ಮೊದಲು ನನ್ನ ಹೆಂಡತಿಯು ಬಿಡುಗಡೆಯಾಗಬೇಕು. ನನ್ನ ನಾಲ್ಕು ಸಾಹಸೀ ಮಿತ್ರರನ್ನು ಕೊಡಿರಿ...."

" ಅದು ಶಕ್ಯವಿಲ್ಲ."

" ಶಕ್ಯವಿಲ್ಲದಿದ್ದರೆ ನಿಮ್ಮ ಹುಕುಮು ಪಾಲಿಸುವದು, ನನಗೂ ಶಕ್ಯವಿಲ್ಲ. ನಾವು ಎಂದರೆ- ನೀವು ಯಾರು, ಎಂದು ತಿಳಿದಿರುವಿರಿ? " ಹೀಗೆಂದು ನಾನು ಎರಡೂ ಮುಷ್ಟಿಗೈ ಮೇಲೆತ್ತಿದೆ.

ಒಮ್ಮೆಲೇ ಕುಸಿನೆನ ಹಿಂದೆ ಸರಿದನು. ಇದೊಂದು ಹೇಡಿ. ಹಿಂದೆ ಫಿನಲಂಡದ ಕೆಲಸಗಾರರ ಬಂಡಾಯದಲ್ಲಿ ಸರಕಾರೀ ಲಷ್ಕರಕ್ಕೆ ಹೆದರಿ ರಶಿಯಕ್ಕೋಡಿದ ಆಕ್ಯಾಬಾಯಿ.

ವಾಲವೆಬರನೆಂದ. "ನಿನ್ನ ಖಾಸಗೀ ಕಾರ್ಯಗಳಿಗೆ ಪಕ್ಷದ ಸಹಾಯ ಬೇಡುವದು, ಶಿಸ್ತು ಎನಿಸುವದಿಲ್ಲ."

ಸಂತಾಪದಿಂದ ಹಲ್ಲುಕಡಿಯುತ್ತ ವಿಚಾರಿಸಿದೆ. "ಖಾಸಗೀ ಕಾರ್ಯವೋ? ಭಲೆ! ಒಳ್ಳೇ ಮಾತು. ನಾಝಿ ಜೇಲಿನಲ್ಲಿ ಕೊಳೆಯುತ್ತ ಬಿದ್ದಿರುವ ಸಾವಿರಾರು ಕಾಮ್ರೇಡರಿಗೆ ನಿನ್ನ ಶಬ್ದ ಕೇಳಿ ಬಹಳ ಧನ್ಯತೆ ಎನಿಸಬೇಕು ನಿಜ. ಯಾರು ಗೆಸ್ಟಪೋ ಕೋರಡೆಯ ಪೆಟ್ಟು ಮೈಮೇಲೆ ಹಾಕಿಸಿಕೊಂಡರೋ, ಯಾರು ಜೇಲಿನಲ್ಲಿ ಅನನ್ವಿತ ಛಲ ಸೋಸಿದರೋ, ಫಾಶಿಯಮೇಲೆ ಏರುವಾಗ ಸಹ "ಕಮ್ಯುನಿಷ್ಟ ಪಕ್ಷದ ವಿಜಯವಿರಲಿ." ಎಂದು ಬೊಬ್ಬಿರಿದರೋ, ಅವರಿಗೆ ನಿನ್ನ ಈ ಶಬ್ದ...."

ಇಷ್ಟರಲ್ಲಿ ಕುಸಿನೆನ ಓಡಿಹೋಗಿದ್ದ..ಗುರುಗುರಿಸುತ್ತ ವಾಲವೆಬರನೆಂದ.

"ಶಾಂತನಾಗು, ಶಾಂತನಾಗು."

"ನಾನು ಶಾಂತನಿದ್ದೇನೆ."

"ನಿಜವೆಂದರೆ ನಿನಗೆ ವಿಶ್ರಾಂತಿ ಬೇಕಾಗಿದೆ."

"ನನಗೆ ಎಷ್ಟೂ ವಿಶ್ರಾಂತಿ ಬೇಕಾಗಿಲ್ಲ. ಒಬ್ಬ ದೊಡ್ಡ ನಾಝಿ ಮುಂದಾಳುವಿನ ತಲೆ ಹಾರಿಸಲಿಕ್ಕೆ ಹೇಳಿ ನೋಡು. ನಾನು ಬೆದರುವೆನೇನೋ? ಅಲ್ಲಿ ನನ್ನ ಹೆಂಡತಿ ಮಗ ಪ್ರಾಣ ಸಂಕಟದಲ್ಲಿರುವಾಗ ನಾನು ಸ್ವಸ್ಥನಿರಬೇಕೆಂದು ನಿನ್ನ ಅಪೇಕ್ಷೆಯೋ?"

"ಒಳ್ಳೇದು ಇರಲಿ. ನಿನ್ನ ಅಭಿಪ್ರಾಯವನ್ನು ಮೇಲೆ ಸೆಕ್ರೆಟರಿಗೆ ತಿಳಿಸುತ್ತೇನೆ. ಆಮೇಲೆ ನೋಡೋಣ. ಏನಾದರೂ ಮಾಡಲಿಕ್ಕೆ ಬಂದರೆ"

ಈ ಪ್ರಸಂಗದಿಂದ ಕುಸಿನೆನ ಮತ್ತು ವಾಲವೆಬರರ ವೈರ ಸಂಪಾದಿಸಿದೆನೆಂದು ಹೇಳಬಹುದು. ಸಂಧಿ ಸಾಧಿಸಿ ಅವರು ಸೇಡು ತೀರಿಸಿಕೊಳ್ಳುವರೆಂಬ ವಿಷಯದಲ್ಲಿ ಸಂದೇಹವಿರಲಿಲ್ಲ. ನಮಗೆ ಬೇಡಾದ ಕಾರ್ಯಕರ್ತ ಟ್ರಾಟಸ್ಕಿ ಅನುಯಾಯಿ, ಕ್ರಾಂತಿಯ ಶತ್ರು ಎಂದು ಸೇಡು ತೀರಿಸಿಕೊಳ್ಳುವ ಪದ್ಧತಿ ರೂಢಿಯೇ ಆಗಿದ್ದಿತು. ಈ ಬಹಿಷ್ಕೃತರನ್ನು ಏನಾದರೂ ನೆವದಿಂದ ರಶಿಯಕ್ಕೆ ಕಳಿಸಬೇಕು. ಅಲ್ಲಿ ಅವರು ಹೋದರೆ ಸಾಕು. ಯಮಲೋಕ. ಶುದ್ಧೀಕರಣದ ಈ ತಂತ್ರ ಎಲ್ಲರಿಗೂ ಈಗ ತಿಳಿದಿತ್ತು.

ಇಂಥ ಇಂಥವರು ರಶಿಯಾಕ್ಕೆ ಕಳಿಸಲ್ಪಟ್ಟರು, ಈ ವಾಕ್ಯಕ್ಕೆ ಈಗೀಗ ಅಶುಭ ಸೂಚಕ ಅರ್ಥ ಬಂದೊದಗಿತ್ತು. ಕಾರಣ ನನ್ನ ಮೇಲೆ ಸಂಕಟ ಬರುವದೆಂದು ಯಾರೂ ನನಗೆ ಹೇಳಬೇಕಾಗಿರಲಿಲ್ಲ. ಅದೂ ಬಹಳ ದಿನ ದಾರಿಕಾಯಬೇಕಾಗಲಿಲ್ಲ.

ಒಂದು ದಿನ ರಿಚರ್ಡ ಜೇನಸೆನನ ಮಗ ಮಾರ್ಟಿನ ಬಂದು ಹುಕುಮಿನ ಕಾಗದ ಕೊಟ್ಟು ಹೇಳಿದನು.

“ ಈಗಲೇ ನೀನು ರಶಿಯಾಕ್ಕೆ ಹೋಗುವ ಹುಕುಮಾಗಿದೆ. ಸೋಪ್ಹಿಯೆಟ ಕ್ಯಾಸ್ಸಲನ ಭೆಟ್ಟಿಯಾಗು. ಅವನು ನಿನ್ನ ಪಾಸಪೋರ್ಟ ಮುಂತಾದವನ್ನು ನಿನಗೆ ಕೊಡುವನು. ”

ತ್ವೇಷದಿಂದ ನಾನಂದೆ. “ ನಾನು ವಾಲವೆಬರನಿಗೆ ಭೆಟ್ಟಿಯಾಗಬೇಕು. ”

“ ವಾಲವೆಬರ ಪಾರಿಸಕ್ಕೆ ಹೋಗಿದ್ದಾನೆ. ”

“ ಹಾಗಾದರೆ ಕುಸಿನೆನನ ಭೆಟ್ಟಿಯಾಗಬೇಕು. ”

“ ಅವನು ಮಾಸ್ಕೋಕ್ಕೆ ಹೋಗಿದ್ದಾನೆ. ”

“ ಅವ್ಹಾಟಿನ? ”

“ ಅವನು ಸ್ವೀಡನಕ್ಕೆ. ”

ಯಾವ ಅಧಿಕಾರಿಯ ಮುಂದೆ ಸಹ ನಾನು ಹೇಳ-ಕೇಳಬಾರದೆಂದು ಈ ತಂತ್ರವೋ ? ಕೋಪದಿಂದ ನಾನಂದೆ.

“ ಈಗಲೇ ಹೋಗಲು ನನಗೆ ಶಕ್ಯವಿಲ್ಲ. ”

“ ನಾಳಿಗಾದರೂ ನೀನು ಹೋಗಲೇಬೇಕು. ” ಎಂದು ಬಜಾಯಿಸಿ ಮಾರ್ಟಿನ ಹೊರಟುಹೋದನು.

ಆ ಹುಕುಮಿನಂತೆ ನಾನು ನಡಿಯಲಿಲ್ಲ. ರಶಿಯಾಕ್ಕೆ ಹೋಗಿ ನಾಮಶೇಷವಾಗಲು ನಾನು ಸಿದ್ಧನಿರಲಿಲ್ಲ. ವಾಲವೆಬರನಿಗೆ ಕೈ ಹಚ್ಚಬೇಕೆಂದು ನಾನು ನಿಶ್ಚಯಿಸಿದೆ. ಹೇಗೆ ಸಾಧ್ಯ ಎಂಬದು ಮಾತ್ರ ನನಗೆ ತಿಳಿಯಲಿಲ್ಲ. ಅದರ ವಿಚಾರದಲ್ಲಿಯೇ ಎಷ್ಟೋ ದಿನ ಕಳೆದೆನು. ಒಂದು ಅನುಕೂಲ ಸಮಯ ಆಕಸ್ಮಾತ್ ಬಂದಿತು. ಪಾರಿಸದಿಂದ ಲಿಓಹಾಯಿಕಿಸನು

ಕೋಪಸಹೆಗನಕ್ಕೆ ಏನೋ ಮಹತ್ವದ ವಿಚಾರಕ್ಕೆ ಬಂದಿರುವನೆಂದು ತಿಳಿಯಿತು. ಹಾಯಿಕಿಸನೆಂದರೆ ಮಾಸ್ಕೋದಲ್ಲಿಯ ದೊಡ್ಡ ಆಸಾಮಿ. ಅವನ ಅಭಿಪ್ರಾಯಕ್ಕೆ ಈಗ ಬಹಳ ಮಾನವಿದ್ದಿತು. ನನ್ನ ವಿಷಯದಲ್ಲಿ ಅವನ ಅಭಿಪ್ರಾಯ ಸರಿಯಾಗಿತ್ತು.

ಅವನಿಗೆ ಭೆಟ್ಟಿಯಾದೆ. ನನ್ನನ್ನು ನೋಡಿ ಅವನಿಗೆ ಆನಂದವೆನಿಸಿರ ಬೇಕು. ಉತ್ಸುಕತೆಯಿಂದ ನನ್ನ ಕಾರ್ಯ ಮುಂತಾದವುಗಳನ್ನು ವಿಚಾರಿಸಿಕೊಂಡನು. ಚಮತ್ಕಾರವಿಷ್ಟು. ವಾಲವೆಬರನ ಉಲ್ಲೇಖ ನಾನು ಮಾಡಿದ ಕೂಡಲೇ ಅರ್ಥ ತನ್ನಷ್ಟಕ್ಕೆ ತಾನೇ ಅಂದುಕೊಂಡನು.

“ ಹಃ, ವಾಲವೆಬರ! ಭಾರಿ ಹೆಗ್ಗಣ. ನನಗೆ ತುಂಬ ಗೊತ್ತು.

ವಾಲವೆಬರ ಮತ್ತು ನನಗೆ ಆದ ಮತಭೇದವನ್ನು ನಾನು ಸ್ಪಷ್ಟ ಹೇಳಿದೆನು. ಮತ್ತು ರಶಿಯಕ್ಕೆ ಹೋಗುವ ಹುಕುಮಾದುದನ್ನೂ ಹೇಳಿ ಬಿಟ್ಟೆನು.

ಲೆಕ್ಕಮಾಡಿ ಮಾತಾಡಿದಂತೆ ಹಾಯಿಕಿಸನೆಂದನು. “ ಈ ವಾಲವೆಬರ— ಇವನ ಒಟ್ಟು ಚರಿತ್ರವಾದರೂ ಏನು ? ಗೆಸ್ಟಪೋದವರ ಸಂಬಂಧ ಇವನಿಗೆ ಇರಲಿಕ್ಕಿಲ್ಲವಷ್ಟೆ? ”

ಹಾಗೆ ಅವನು ಹೇಳಲು ಯಾವ ಕಾರಣವೋ ? ನಾನೆಂದೆ. “ ವಾಲವೆಬರನು ಗೆಸ್ಟಪೋಕ್ಕೆ ಒಪ್ಪಿಸಿದ ಕಾರ್ಯಕರ್ತರ ಇಪ್ಪತ್ತೊಂದು ಉದಾಹರಣಗಳು ನನಗೆ ಗೊತ್ತಾಗಿವೆ. ಅವರಲ್ಲಿ ಹತ್ತು ಜನರ ತಲೆ ಹಾರಿಸಲ್ಪಟ್ಟವು. ”

ತಡೆದು ಹಾಯಿಕಿಸನೆಂದ “ ಒಳ್ಳೇದು. ರಶಿಯಾಕ್ಕೆ ನೀನು ಹೋಗುವ ಕಾರಣವಿಲ್ಲ. ಅದಕ್ಕೆ ಮಾಡಬೇಕಾದ ವ್ಯವಸ್ಥೆ ನಾನು ಮಾಡುತ್ತೇನೆ. ನಿನ್ನನ್ನು ನಾವು ಸ್ಪೇನಕ್ಕೆ ಕಳಿಸುತ್ತೇವೆ. ನಿನ್ನ ಹೆಂಡತಿ, ಹಾಗು ಮಗನನ್ನು ರಶಿಯಕ್ಕೆ ಒಯ್ದರೆ ನಿನ್ನ ಸಮ್ಮತಿಯೋ? ”

“ ಜರ್ಮನಿಯಿಂದ ಅವರ ಬಿಡುಗಡೆಯಾಗಲಿ, ಎಂಬುದಷ್ಟೇ ನನ್ನ ಬೇಡಿಕೆ. ”

“ ಒಳ್ಳೇದು ” ಹಾಯಿಕಿಸನೆಂದನು— “ ಈಗ ನೀನು ವಾಲವೆಬರನ ವಿಷಯಕ್ಕೆ ಸಂಪೂರ್ಣ ರಿಪೋರ್ಟು ನನಗೆ ಬರೆದುಕೊಡು. ಮುತ್ಸದ್ದಿಗಿರಿಯ

ರಿಪೋರ್ಟು ನನಗೆ ಬೇಡ. ಕೇವಲ ಖಾಸಗೀ ಅಂತಃಕರಣದಿಂದ ಬರೆದ ರಿಪೋರ್ಟು ನನಗೆ ಬೇಕು. ಮಾಸ್ಕೋ ಅಧಿಕಾರಿಗಳೆನಿಸುವ ನಮಗೆ ಇವೆರಡು ರಿಪೋರ್ಟುಗಳ ಅಂತರ ತಿಳಿಯುವದೆಂದು ಲಕ್ಷದಲ್ಲಿಡು. ವಾಲ ವೆಬರನ ಬದ್ಮಾಷಗಿರಿ, ಶಿರೆಗುಡುಕತನ, ಹೆಂಗಸರ ಸಂಬಂಧ, ಹಣದ ಹಾಳು ನಿನಗೇನು ಗೊತ್ತಿರುವದೋ ಅದೆಲ್ಲ ಬರೆದುಕೊಡು. ಕೆಳಗೆ ನಿನ್ನ ಸ್ವಂತ ರುಜು ಹಾಕು. ನಕಲು ಇಡುವ ಕಾರಣವಿಲ್ಲ. ಆ ಅಸಲು ರಿಪೋರ್ಟನ್ನೇ ನಾನು ಮಾಸ್ಕೋಕ್ಕೆ ಒಯ್ಯುತ್ತೇನೆ. ''

'' ಒಳ್ಳೇದು. ''

ನಾನು ರಿಪೋರ್ಟು ಸಿದ್ಧಗೊಳಿಸಿದೆ. ಅದನ್ನು ತೆಗೆದುಕೊಂಡು ಹಾಯಿಕಿಸ ಮಾಸ್ಕೋಕ್ಕೆ ಹೋದನು.

ನನ್ನ ದುರ್ದೈವ. ಸ್ಪೇನ ಯುದ್ಧದ ಕರುಣಾಸ್ಪದ ಕರೆಯಾದ ನಂತರ ತೀವ್ರವೇ ಸ್ಟಾಲಿನನು ಯಾವ ಶುದ್ಧೀಕರಣ ಮಾಡಿದನೋ ಅದರಲ್ಲಿ ಹಾಯಿಕಿಸ ಬಲಿಯಾದನು!

ರಶಿಯಕ್ಕೆ ಹೋಗಲು ನನಗಾದ ಹುಕುಮು ಹೇಗೋ ತಿಳಿಯದು ಹಿಂದೆಬಿತ್ತು. ನನ್ನನ್ನು ಅಂಟ್ವರ್ಪಕ್ಕೆ ಕಳಿಸಿದರು.

ಅಲ್ಲಿರುವಾಗ ಫಿರೇಲಾಯಳಿಗೆ ಒಂದು ಪತ್ರ ಬರೆದೆನು. ಅದರಲ್ಲಿ ಬ್ಲುಮೆಂಥಾಲದ ವಿಳಾಸವಿರಲಿಲ್ಲ. ಹಿಂದೆ ನಾವೇ ಗೊತ್ತು ಮಾಡಿಕೊಂಡಿದ್ದ ಗುಪ್ತ ವಿಳಾಸಕ್ಕೆ ಆಕೆಯ ಪತ್ರ ಬಂದಿತು. ಅದರಲ್ಲಿ ಒಂದೇ ಸಾಲು.

'' ಪತ್ರ ಬರೆಯಬೇಡ. ಗಂಡಾಂತರವಿದೆ. ''

ತುಸು ದಿನಗಳ ಮೇಲೆ ಪುನಃ ಆಕೆಯ ಪತ್ರ ಬಂದಿತು. '' ದಾರಿ ನೋಡು. ನನಗೆ ಸುರಕ್ಷಿತವೆನಿಸಿದರೆ ತಿಳಿಸುತ್ತೇನೆ. ''

ಅಂಟ್ವರ್ಪದ ಪೂರ್ವಕ್ಕೆ ಸಮೀಪದಲ್ಲಿಯೇ ಜರ್ಮನಿ ಇತ್ತು. ನನ್ನ ಆ ಜನ್ಮಭೂಮಿ ಇಂದು ಒಬ್ಬ ರಾಕ್ಷಸನ ಭಯಂಕರ ದವಡೆಯಂತೆ ನನಗೆ ಭಾಸವಾಗುತ್ತಿದ್ದಿತು. ನನ್ನ ಮಗ ಮತ್ತು ನನ್ನ ಹೆಂಡತಿ ಆ ಕರಾಲ ದವಡೆಯಲ್ಲಿ ಸಿಕ್ಕಿಕೊಂಡಿದ್ದರು. ಅವರನ್ನು ಬಿಡಿಸುವ ಸಾಮರ್ಥ್ಯ

ನನ್ನೊಬ್ಬನದೇ ಇರಲಿಲ್ಲ. ಎಲ್ಲಿಯ ವರೆಗೆ ನಾನು ಕಾಮಿಂಟರ್ನದ ಒಂದು ಅವಯುವವಾಗಿರುವೆನೋ, ಅಲ್ಲಿಯ ವರೆಗೆ, ಕಾಮಿಂಟರ್ನದ ಶಕ್ತಿಯು ಬೆಂಬಲ ನನಗೆ ಇತ್ತು. ಅಂತೆಯೇ ನಾನು ಹೆಂಡತಿ ಮಗನನ್ನು ಮರಳಿ ಪಡೆಯುವ ಆಶೆ ಹಿಡಿದಿದ್ದೆ.

ಆ ಆಶೆಯಿಂದಲೇ ನಾನು ಬದುಕಿಕೊಂಡಿದ್ದು. ಮತ್ತು ಅಂಟ್ವರ್ಪ ದಲ್ಲಿದ್ದು ಪಕ್ಷದ ಕಾರ್ಯ ನಡೆಸಿದ್ದು.

ಆದರೆ ದೈವಕ್ಕೆ ಇದು ರುಚಿಸಿರಲಿಲ್ಲ.

ಒಂದು ದಿನ ಪಾರಿಸ ಕೇಂದ್ರದ ಮುಖ್ಯ ಅಡಾಲ್ಫ ಡೇಟರನು ಕರೆಸಿ ಹೇಳಿದನು. "ವಾಲವೆಬರನು ಹೇಳಿಕಳಿಸಿದ್ದಾನೆ. ಸಮಕ್ಷಮ ನೀನು ಭೆಟ್ಟಿಯಾಗಬೇಕು. ನಿನಗೆ ಹೊಸದೊಂದು ಮಹತ್ವದ ಕಾರ್ಯ ಒಪ್ಪಿಸುವನು."

"ಯಾವದು?"

"ಒಬ್ಬ ಕಾಮ್ರೇಡನನ್ನು ಹಾಂಬುರ್ಗಕ್ಕೆ ಕಳಿಸಬೇಕಾಗಿದೆ. ಅಂಟ್ವರ್ಪ ದಲ್ಲಿ ಅವನು ನಿನಗೆ ಭೆಟ್ಟಿಯಾಗುತ್ತಾನೆ. ಅಲ್ಲಿ ಒಂದು ಹಡಗಿನಲ್ಲಿ ನೀನು ಅವನನ್ನು ಕೂಡಿಸಬೇಕು."

"ಒಳ್ಳೇದು. ನಮಗೆ ಉಪಯುಕ್ತವೆನಿಸುವ ಹಡಗು ಎರಡು ಸಾರೆ ಅಂಟ್ವರ್ಪದಿಂದ ವಾರದಲ್ಲಿ ಹೊರಡುವವು."

ಅವನು ಚು, ಚು ಎಂದು ನಾಲಿಗೆಯಿಂದ ಧ್ವನಿ ಮಾಡುತ್ತ ಹೇಳಿದನು. "ಸರಿಯಾಗಿ ನಿನ್ನ ಲಕ್ಷದಲ್ಲಿ ಬಂದಂತೆ ಕಾಣಲಿಲ್ಲ. ದೊರೆತ ಹಡಗಿನಿಂದ ನೆಟ್ಟಗೆ ಅವನನ್ನು ಕಳಿಸುವಂಥ ಸರಳವಾದುದಲ್ಲ ಇದು. ಸ್ಪೆಶಲ ಕೆಲಸ ಇದು. ಇವನ ಒಳಿಯಲ್ಲಿ ಬಹಳ ಹಳೆ ಜರ್ಮನ ಪಾಸಪೋರ್ಟ ಇದೆ. ಅದರಮೇಲಿಂದ ಅವನನ್ನು ಹಾಂಬುರ್ಗಕ್ಕೆ ಕಳಿಸಬೇಕು. ಕೈ ಮೈಗೆ ಹತ್ತದಂತೆ ಅವನನ್ನು ಕಳಿಸಿ ನಾವು ಕಡೆಗಿರಬೇಕು. ಹಾಂಬುರ್ಗದ ನಮ್ಮ ಕಾರ್ಯಕರ್ತರಿಗೆ ಸಹ ಅವನು ಬಂದುದು ತಿಳಿಯುವಂತಿಲ್ಲ. ಲಕ್ಷದಲ್ಲಿ ಬಂದಿತೇ?"

" ಸರಿಯಾಗಿ ತಿಳಿಯಿತು. ಈ ಕಾಮ್ರೇಡ ಪಕ್ಷಕ್ಕೆ ಬೇಡಾಗಿದ್ದಾನೆ. ಅವನನ್ನು ಮುಗಿಸಬೇಕಾಗಿದೆ. "

ಮೋರೆ ಸೊಟ್ಟ ಮಾಡಿ ಡೇಟರ ಅಂದನು. " ಏನು ಮಾತಾಡಬೇಕು ? ಏನೂ ಇಲ್ಲ. ಇದು ನಿನಗೆ ತಿಳಿಯುವದೋ ಇಲ್ಲವೋ ? "

" ಅವನನ್ನು ರಶಿಯಕ್ಕೆ ಅಥವಾ ಸ್ಪೇನಕ್ಕೆ ಏಕೆ ಕಳಿಸುವದಿಲ್ಲ ? "

" ಛೆ, ಛೇ ! ಜರ್ಮನಿಗೇ ಕಳಿಸಬೇಕು.

ನಾನು ತಿಳಿದೆನು. ಯಾವನೋ ಸ್ಪಷ್ಟ ವ್ಯಕ್ತಿ ,ಕಾಮ್ರೇಡನು ಈ ಡೇಟರನ, ಅಥವಾ ವಾಲವೆಬರನ ದ್ವೇಷ ಸಂಪಾದಿಸಿರಬೇಕು. ಅದಕಾಗಿ ಈ ಮಹಾಶಾಸನ. ಇನ್ನೊಂದು ಬಲಿಯನ್ನು ಗೆಸ್ಟಪೋಕ್ಕೆ ಕೊಟ್ಟು ತನ್ನ ಆಸನವನ್ನು ವಾಲವೆಬರನು ಭದ್ರಮಾಡಿಕೊಳ್ಳಬೇಕಾಗಿರಬಹುದು.

ಹೀಗೆ ಮನದಲ್ಲಿ ವಿಚಾರಿಸುತ್ತಲೇ ನಾನು ಕೇಳಿದೆ. " ಆ ಕಾಮ್ರೇಡನ ಹೆಸರೇನು ? "

" ನೀನು ಅವನನ್ನು ಗುರುತಿಸುವೆ. ಅವನ ಹೆಸರು ಕಾರ್ಲಸಾರ. "

ಈ ಹೆಸರು ಕೇಳಿ ನನಗೆ ಪೆಟ್ಟು ತಗುಲಿತೆಂದೇ ಹೇಳಬಹುದು. ಹಾಗೆ ಮಾತ್ರ ನಾನು ತೋರಗೊಡಲಿಲ್ಲ ಕಾರ್ಲಸಾರನು ನನಗೆ ಒಳ್ಳೇ ಗುರುತಿನವ. ಮೂವತ್ತು ಮೂವತ್ತೆರಡು ವರ್ಷದ ಗಿಡ್ಡಕಿನ ತರುಣ. ಕಾರ್ಯ ಮಾಡುವ ಹುಮ್ಮಸ ಅವನಿಗೆ ಬಹಳ. ಎಲ್ಲಿ ಬೇಕೋ ಅಲ್ಲಿ ಹಾರಲಿಕ್ಕೆ ಹುಲಿಯಂತೆ ಯಾವಾಗಲೂ ಸಿದ್ಧ. ೧೯೩೨ ರಲ್ಲಿ ಮಾಸ್ಕೋದ ಲಷ್ಕರೀ ಶಾಲೆಯಲ್ಲಿ ಶಿಕ್ಷಣ ಮುಗಿಸಿ, ಇಲ್ಲಿಗೆ ಬಂದಿದ್ದನು. ಮುಂದೆ ಒಂದು ವರ್ಷದಲ್ಲಿಯೇ ಗೆಸ್ಟಪೋದ ಕೈಗೆ ಸಿಕ್ಕುಬಿದ್ದ. ೧೯೩೬ ರ ಮಾರ್ಚ ತಿಂಗಳಿನಲ್ಲಿ ಕೈದಿಗಳ ಒಂದು ಹಿಂಡನ್ನು ಹಾಂಬುರ್ಗದಿಂದ ಸ್ಥಳಾಂತರ ಮಾಡುವಾಗ, ಹಡಗಿನಿಂದ ಓಡಿಬಿಟ್ಟ. ಯಾರಿಗಾದರೂ ಸುಳ್ಳು ಎನಿಸಬಹುದು. ಆದರೆ ಅವನು ಅಪೂರ್ವ ಸಾಹಸ ಮಾಡಿ ಪಕ್ಷದಲ್ಲಿ ಸೇರಿಕೊಂಡಿದ್ದನು........ಈಗ....

ಒಮ್ಮೆಲೇ ಡೇಟರನನ್ನು ಕೇಳಿದೆನು. " ಕಾಮ್ರೇಡ ಸಾರನು ಮಾಡಿಹ ಅಪರಾಧವಾದರೂ ಏನು ? "

"ಅವನು ವಿಶ್ವಾಸಘಾತಕಿ ಎಂದು ನಮ್ಮ ಖಾತ್ರಿಯಾಗಿದೆ."

ಆಗ ಬೇರೊಂದು ಸಂಶಯು ಮನದಲ್ಲಿ ಇಣಿಕಿತು. ನನ್ನ ಸಲುವಾಗಿಯೇ ಈ ಜನರು ಇಂಥ ಆಟ ಹೂಡಿರಬಹುದೋ? ನನ್ನ ನಿಷ್ಠಾಂ ಎಷ್ಟು ದೃಢವಾಗಿದೆಯೋ ನೋಡುವಾ ಎಂದು ಒರೆಗೆ ಹಚ್ಚಲು ಈ ಯುಕ್ತಿ ಇರಲಿಕ್ಕಿಲ್ಲವಷ್ಟೇ? ಅಥವಾ ಒಬ್ಬ ಸಾಹಸೀ ಕಾರ್ಯಕರ್ತನನ್ನು ಇಲ್ಲದಂತೆ ಮಾಡಲಿಕ್ಕೆ ಇವರು ಯೋಚಿಸಿರುವರೋ?

"ಒಳ್ಳೇದು" ಎಂದು ಹೇಳಿ ನಾನು ಡೇಟರನ ಸಿರೋಪ ಹೊಂದಿದೆನು.

ಕಾರ್ಲಸಾರನು ಅಂಟ್ವರ್ಪದಲ್ಲಿ ನನ್ನ ಭೆಟ್ಟಿಗೆ ಬಂದನು. ಅವನು ನೀಲಿ ಸೂಟು ಹಾಕಿದ್ದನು. ಅದು ಅವನಿಗೆ ಬಹಳ ಸಡಿಲಾಗುತ್ತಿರಬೇಕೆಂದು ತೋರಿತು. ಹಿಂದಿನಗಿಂತಲೂ ಈಗ ಅವನು ಬಹಳ ಸೊರಗಿದ್ದನು. ಮುಖಮುದ್ರೆಯ ಲಕ್ಷಣ ಮಾತ್ರ ಹಾಗೇ ಇದ್ದಿತು.

ನಾನು ಒಮ್ಮೆಲೇ ಹೇಳಿದೆ. "ಕಾರ್ಲ— ನೀನು ನನ್ನ ಮಾತು ಕೇಳು. ಜರ್ಮನಿಗೆ ಮಾತ್ರ ಹೋಗಬೇಡ."

ಅವನು ಸಹಜ ವಿಚಾರಿಸಿದನು. "ನನಗೆ ಆದ ಹುಕುಮನ್ನು ನೀನು ತಿರುಗಿಸಿಕೊಂಡಿರುವೆಯೋ ಹೇಗೆ?"

"ಇಲ್ಲ."

"ಹಾಗಾದರೆ?"

"ನೀನು ಜರ್ಮನಿಗೆ ಹೋದರೆ ತಿರುಗಿ ಜೀವಂತ ಬರಬಹುದೇ?"

"ಅಲ್ಲಿಗೆ ಹೋದ ಹತ್ತು ಜನರಲ್ಲಿ, ಒಂಭತ್ತು ಜನ ಸತ್ತು ಹೋಗುವದು ನನಗೆ ಗೊತ್ತು."

"ಅದಕ್ಕೇ ನಾನು ಹೇಳುವದು. ಹೋಗಬೇಡ. ನಿನ್ನನ್ನು ಕಳಿಸುವ ಯುಕ್ತಿಯೇ ಹಾಗಿದೆ. ನೀನು ಹಾಂಬುರ್ಗಕ್ಕೆ ಮುಟ್ಟುವಷ್ಟರಲ್ಲಿ, ಗೆಸ್ಟಪೋ ಜನರು ಬೇಡಿ ತೆಗೆದುಕೊಂಡು ನಿನ್ನ ಸ್ವಾಗತಕ್ಕೆ ಸಿದ್ಧರಿರುತ್ತಾರೆ. ನಿನ್ನ ತಲೆ ಉರುಳಿಸಬೇಕೆಂದು ಇವರ ಯೋಚನೆ."

"ಇವರ—ಎಂದರೆ—ಯಾರದು?"

"ಅದನ್ನು ನಾನು ಹೇಳಲಾರೆ."

" ಹೂಃ— "

ಕಾರ್ಲನು ತುಸು ಪೇಳೆ ಸುಮ್ಮನೆ ತನ್ನ ನಡುಕಟ್ಟಿನಲ್ಲಿ ಕೈ ಇಟ್ಟು ಕೊಂಡು ನಿಂತನು. ಮನಸ್ಸಿನಲ್ಲಿ ಏನೋ ಜೋರಾಗಿ ವಿಚಾರಮಾಡಹತ್ತಿರ ಬೇಕು. ಪಂಜರದಲ್ಲಿ ಸಿಕ್ಕ ಎರಡು ಶ್ವಾಪದಗಳಂತೆ ನಾವು ಪರಸ್ಪರರನ್ನು ನೋಡತೊಡಗಿದ್ದೆವು.

ಕಡೆಗೆ ಅವನು ಕೇಳಿದನು. " ಅಷ್ಟು ಸಿಟ್ಟು ನನ್ನ ಮೇಲೆ ಏಕೆ? "

" ನನಗಾದರೂ ಹೇಗೆ ಗೊತ್ತು. "

ಕೋಪದಿಂದ ಅವನು ಕೇಳಿದನು. " ಇದರಲ್ಲಿ ನಿನ್ನದೇನು ತಂತ್ರವಿದೆ? "

ಅದನ್ನು ಕೇಳದವನಂತೆಯೇ ನಾನು ಹೇಳಿಬಿಟ್ಟೆ. " ಕಾರ್ಲ—ನಾನು ನನ್ನ ಜೇಬಿನಿಂದ ತೆಗೆದು ನೂರು ಡಾಲರುಗಳನ್ನು ನಿನಗೆ ಕೊಡಲು ಸಿದ್ಧ ನಿರುವೆನು. ನಿನಗೆಲ್ಲಿ ಬೇಕೋ ಅಲ್ಲಿಗೆ ಹೋಗು. ಅಮೇರಿಕಾ, ಮೆಕ್ಸಿಕೋ ಬೇಕಾದಲ್ಲಿ ಹೋಗಲಿಕ್ಕೆ ಹಡಗು ಸಿಗುತ್ತವೆ. "

" ಹೀಗೆ ಓಡಿ ಹೋಗಲಿಕ್ಕೆ ನನ್ನ ಇಚ್ಛೆ ಇಲ್ಲ. "

ಇದು ಕೇಳು. ಕಾರ್ಲ—ನೀನು ನಾಝಿಗಳ ಗುಪ್ತ ಹೇರನಾಗಿದ್ದರೆ ನಿನ್ನ ಪ್ರಾಣದ ಬೆಲೆ— ನಾನು— ಏನೂ ಎಣಿಸುತ್ತಿರಲಿಲ್ಲ. ನನ್ನ ಕೈಯಿಂ ದಲೇ ಒಂದು ಚೂರಿ ತಕ್ಕೊಂಡು ನಿನ್ನ ತಲೆ ಹಾರಿಸುತ್ತಿದ್ದೆ. ಆದರೆ ನೀನು ಕಾಮಿಂಟರ್ನದ ಏಕನಿಷ್ಠ ಸೇವಕನೆಂಬುದು ನನಗೆ ಗೊತ್ತು. ಅದಕಾಗಿ ನಿನ್ನ ಮೇಲೆ ಬಂದ ಪ್ರಾಣಸಂಕಟ ನಾನು ನೋಡಲಾರೆ. ನಿನ್ನ ಮನಸಿನ ವಿಚಾರ ನಾನು ತಿಳಿಯುತ್ತೇನೆ. ಜೀವಹೋದರೂ ಪರವಿಲ್ಲ. ಹೇಡಿ ಎಂದು ಯಾರೂ ಹೇಳಬಾರದೆಂದು ನೀನು ಇಚ್ಛಿಸುತ್ತೀ. ಆದರೆ ಈ ಪ್ರಸಂಗ ದಲ್ಲಿ ಭೀತಿ ಅಥವಾ—ಶೌರ್ಯ ಇವುಗಳ ಪ್ರಶ್ನವೇ ಇಲ್ಲ. ಇದೆಲ್ಲ ರಾಜ ಕಾರಣದಲ್ಲಿಯ ನೀಚ ತಂತ್ರವಾಗಿದೆ. ನೀನು ಜರ್ಮನಿಗೆ ಹೋದರೆ— ಯಮನ ಮನೆಗೆ ಹೋದಂತೆಯೇ ಸರಿ. ಇದಕ್ಕಿಂತ ಹೆಚ್ಚು ನಿನಗೆ ನಾನು ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. "

ಕಾರ್ಲನು ನನ್ನ ಮಾತು ಕೇಳಿ ತಿರಸ್ಕಾರದ ಹಾಸ್ಯಮಾಡಿ ವಿಚಾರಿಸಿ ದನು. " ಇನ್ನೂ ಕ್ರಾಂತಿಯ ಮೇಲೆ ನಿನ್ನ ವಿಶ್ವಾಸವಿರುವದೋ? "

"ಇಲ್ಲ."

"ನನಗೂ ಇಲ್ಲ."

"ಎಂದ ಮೇಲೆ ಮತ್ತೆ?"

"ಇಷ್ಟೇ. ಒಂದು ಸಾರಿ ಪಕ್ಷ ಹಿಡಿದಿದ್ದೇವೆ. ಪಕ್ಷ ಜೀವಂತವಿರಬೇಕು."

"ಫುಲ್ಸ್‌ಬ್ಯುಎಟೆಲ ಕ್ಯಾಂಪಿನಲ್ಲಿ ನಡೆದ ಸಾವಿರಾರು ಕಾಮ್ರೇಡರ ಛಲ ನೆನಪಿರುವದೋ? ನಮ್ಮ ಸಹಕಾರಿಗಳ ರಕ್ತದ ಸಿಡಕು— ಅಲ್ಲಲ್ಲಿ— ಭೂಮಿಯ ಮೇಲೆ, ಗೋಡೆಗಳ ಮೇಲೆ, ಅನೇಕ ಸಾರೆ—ಮೇಲಕ್ಕೆ ಸಹ ಹೇಗೆ ಚಿಮ್ಮಿತು. ಮತ್ತು ಅವರ ಕರುಣಾಕ್ರಂದನ ಹೇಗೆ ಕೇಳಿಸಿತು? ಇದೆಲ್ಲ ಸ್ಮರಣವಾಗುವದೇ ನಿನಗೆ? ಜೇಲಿನ ಪ್ರತಿಯೊಂದು ಕೊಟ್ಟಡಿಯಲ್ಲಿ ನಾವು ರಾತ್ರಿ–ಅಪರಾತ್ರಿಯಾದ ಮೇಲೆ ಹೇಗೆ ಸ್ಮಶಾನಗೀತ ಹಾಡುತ್ತಿದ್ದೆವು? ಒಮ್ಮೆ ನೀನು ನಿನ್ನ ಕೊಟ್ಟಡಿಯ ಕಿಟಕಿಯಿಂದ ಹೊರಗೆ ಮೋರೆ ಹಾಕಿ, "ಕ್ರಾಂತಿಗಾಗಿ ಸಾಯುವ ಹುತಾತ್ಮರು ಅಮರರಾಗುತ್ತಾರೆ." ಎಂದು ಹೇಗೆ ಕೂಗಿಕೊಂಡೆ? ಅದನ್ನು ಕೇಳಿ ಕೈದಿಗಳೆಲ್ಲ, 'Rache! Rache!' ಎಂಬ ಜಯಘೋಷದಿಂದ ಜೇಲು ಹೇಗೆ ಪ್ರತಿಧ್ವನಿಗೊಳಿಸಿದರು? ಪಹರೆಯವರು ಪ್ರತಿಯೊಂದು ಕಿಟಕಿಯ ಮೇಲೆ, ಗುಂಡು ಹೇಗೆ ಹಾರಿಸಿದರು?

—ಇದೆಲ್ಲ ನಿನ್ನ ಲಕ್ಷ್ಯದಲ್ಲಿರುವದಷ್ಟೇ?

ಕಾರ್ಲ ಹಲ್ಲು ಕಡಿಯುತ್ತ ಮಾತಾಡಿದನು. "ಎಲೋ, ಅದರ ನೆನಪನ್ನು ಈಗೇಕೆ ಮಾಡಿಕೊಡುತ್ತಿರುವೆ ನೀನು."

ನನ್ನನ್ನು ತಡೆಯಬೇಕೆಂದು ಅವನು ಯತ್ನಿಸಿದ. ನಾನು ನಿಲ್ಲಲಿಲ್ಲ. ಹಾಗೇ ಮಾತಾಡುತ್ತ ಕಡೆಗೆ ಹೇಳಿದೆನು.

"ಕಾರ್ಲ! ನಾನು ಇದನ್ನೆಲ್ಲ ಹೇಳುವ ಕಾರಣವಿಷ್ಟೇ. ನಮ್ಮಲ್ಲಿಯ ಸಹಸ್ರಾರು ಜನ ಅನನ್ಯ ಛಲಕ್ಕೆ ಗುರಿಯಾದರು; ಅಥವಾ ಬಲಿಯಾದರು. ಅವರೆಲ್ಲ ಕ್ರಾಂತಿಗಾಗಿಯೇ ಸತ್ತರೆಂದು ಹೇಳಲಿಕ್ಕೆ ಬರುವದಿಲ್ಲ. ಅಂಥ ಭ್ರಮದಲ್ಲಿ ಮಾತ್ರ ಅವರು ಸತ್ತರು. ನಿಜ. ಸ್ಟಾಲಿನ ಮತ್ತು ಅವನ

ಹಸ್ತಕರು ಇಂತವರ ಅಧಿಕಾರ ಲಾಲಸೆಯನ್ನು ಪೂರ್ಣಗೊಳಿಸಲಿಕ್ಕೆ ಈ ಹೆಣ ಬಿದ್ದವು. . . . ''

ಮಾತು ಮಾತಾಡುತ್ತ ನನಗೆ ದಣಿವಾಯಿತು. ಹೇಗೋ ಒಂದು ಕುರ್ಚಿಯ ಮೇಲೆ ಬಿದ್ದುಕೊಂಡೆನು.

ಕಾರ್ಲನ ಮುಖ ಬಿಳುಪಿಟ್ಟು ಹೋಗಿದ್ದಿತು. ಆದರೂ ಅವನ ಕಣ್ಣಿನಲ್ಲಿ ದೃಢನಿಶ್ಚಯವಿತ್ತು. ಅವನೆಂದ-'' ಅದೇನೇ ಇದ್ದರೂ ನಾನು ಜರ್ಮನಿಗೆ ಹೋಗುತ್ತೇನೆ. ''

ನಾನು ಕಾರ್ಲನನ್ನು ಕಳಿಸಬೇಕಾಯಿತು. ಅವನಿಗೆ ಉಪಯೋಗವಾಗುವಂಥ ಖೊಟ್ಟಿ ಪಾಸಪೋರ್ಟ ದುರ್ಮಿಳವಾದುದರಿಂದ ನಂಬಿಗೆಯ ಒಬ್ಬ ದಾರಿಕಾರನೊಡನೆ ಕಾಲು ದಾರಿಯಿಂದ ಅವನನ್ನು ಕಳಿಸಿದೆ. ಇಂಥದೊಂದು ಹಡಗಿನಿಂದ ಕಾರ್ಲನನ್ನು ಹಾಂಬುರ್ಗಕ್ಕೆ ಕಳಿಸಿದೆನೆಂದು ಡೇಟರನಿಗೆ ತಾರುಬಿಟ್ಟೆ.

* * * *

ಮರುದಿನ ಈಗಲೇ ಕೋಪನಹೆಗನಕ್ಕೆ ಹೊರಟು ಬರಬೇಕೆಂದು ತಾರು ಬಂದಿತು. ಆ ತಾರು ನೋಡಿ ಲಿಓಹಾಯಿಕಿಸ ಕರೆಸಿರಬಹುದೆಂದು ನಾನೆಂದುಕೊಂಡೆ.

ಅಲ್ಲಿಗೆ ಮುಟ್ಟಿದ ಕೂಡಲೇ ನಾನು ಅನುಮಾನಿಸದೇ ಹೊರಟು ಬರಬೇಕೆಂದು ಮಾಡಿದ ಯುಕ್ತಿ ಇದು ಎಂದು ನಾನು ತಿಳಿದೆ.

ನಾನು ಜೇನಸೆನನ ಮನೆಗೆ ಹೋದೆನು. ಆಗ ಅವನು ಡ್ರೆಸಿಂಗ ಗೌನು ಹಾಕಿಕೊಂಡಿದ್ದನು. ಕೂದಲು ಕೆದರಿದ್ದವು. ಅವ್ಹಾಟಿನನ ಕೈಕೆಳಗೆ ಕೆಲಸ ಮಾಡುವ G. P. C. ದ ಇನ್ನು ನಾಲ್ಕು ಜನರು ಆ ಕೊಟ್ಟಡಿಯಲ್ಲಿದ್ದರು. ಆಗ ಬೀರ ಕುಡಿಯಹತ್ತಿದ್ದರು. ಸಿಗಾರೇಟಿನ ಹೊಗೆಯ ವರ್ತುಲಗಳು ತೇಲಿಬರುತ್ತಿದ್ದವು. ನನ್ನನ್ನು ನೋಡಿದೊಡನೆ ಜೇನಸೆನ ತುಸು ನಕ್ಕ. ಆದರೆ ಹಸ್ತಾಂದೋಲನಕ್ಕೆ ಕೈ ಏನೂ ಮುಂದೆ ಮಾಡಲಿಲ್ಲ ಸುಮ್ಮನೆ ಕೂಡು, ಎಂದಿಷ್ಟು ಹೇಳಿ, ಟೆಲಿಫೋನು ಮಾಡಿದನು. ತುಸು ವೇಳೆಯಲ್ಲಿ ಮಾರ್ಟಿನ ಮತ್ತು ಅವನ ಹಿಂದೆ ವಾಲವೆಬರ ಬಂದರು.

ಇಬ್ಬರು ಸೇವಕರು ಆಜ್ಞೆಯ ಕೊಟ್ಟಡಿಯಿಂದ ಒಂದು ದೊಡ್ಡ ಮೇಜು ಎತ್ತಿ ತಂದರು. ಅದರ ಒಂದು ತುದಿಗೆ ವಾಲವೆಬರ ಕುಳಿತನು. ಎದುರಿಗೆ ನನಗೆ ಕೂಡುವಂತೆ ಸಂಜ್ಞೆ ಮಾಡಿದನು. ಕೂಡುವಾಗ ನೋಡುತ್ತೇನೆ. ಎಡಬಲಕ್ಕೆ ಸಶಸ್ತ್ರ ಪಹರೆಯವರು ಸರಕ್ಕನೆ ಬಂದು ನಿಂತುಕೊಂಡರು.

ಈ ಲಕ್ಷಣ ನಾನೂ ತಿಳಿದೆ. ಆಗ ನನ್ನ ವಿಚಾರಣೆಯಾಗುವದಿರಬಹುದು.

ವಾಲವೆಬರ ಮಾತಾಡಹತ್ತಿದನು. ಟ್ರಾಟಸ್ಕಿ, ಝಿನೋಫೀಫ, ಬುಖಾರೀನ, ಮೊದಲಾದವರ ಹೆಸರು ಉಚ್ಚರಿಸುತ್ತ, ಪಕ್ಷದ ವಿಶ್ವಾಸ ಕಳಕೊಂಡ ಪ್ರತಿಯೊಂದು ವ್ಯಕ್ತಿ ಹಿಟ್ಲರನ ಕಡೆಯವನೇ ಎಂದು ಹೇಗೆ ತಿಳಿಯಬೇಕಾಗುವದು? ಸಕಾಲದಲ್ಲಿಯೇ ಹೇಗೆ ಅವನನ್ನು ದೂರ ಮಾಡಬೇಕಾಗುವದು, ಇತ್ಯಾದಿ ಪ್ರವಚನವನ್ನೇ ನಡೆಸಿಬಿಟ್ಟನು.

ನಾನಂದೆ. “ ಇದು ನೋಡಿ ನನ್ನ ಮೇಲೆ ಇರುವ ಆರೋಪಗಳು ಯಾವವು? ಅವುಗಳನ್ನು ಯಾರು ಮಾಡಿದ್ದಾರೆ? ಇಷ್ಟು ಸಾಕ್ಷಿಪಟ್ಟಿ ಸಹಿತ ಹೇಳಿಬಿಡಿರಲ್ಲ. ”

ವಾಲವೆಬರನೆಂದ. “ ಅವಶ್ಯ. ಕೆಲವು ದಿವಸಗಳ ಹಿಂದೆ ನೀನು ಒಂದು ರಿಪೋರ್ಟು ಬರೆದೆ. ಅದು ಮಾಸ್ಕೋ ಕಾಮ್ರೇಡದ ಡಿಮಿಟ್ರಾಫನ ಕೈಯಲ್ಲಿರುವದು. ಆ ರಿಪೋರ್ಟಿನಲ್ಲಿ ಒಳ್ಳೆ ಒಳ್ಳೇ ಕಾರ್ಯಕರ್ತರನ್ನು ಜರ್ಮನಿಗೆ ಬೇಕೆಂತಲೇ ಕಳಿಸಿ ನಾಶಗೊಳಿಸಿದ ಆರೋಪವನ್ನು ನೀನು ಪಕ್ಷದ ಮೇಲೆ ಮಾಡಿರುವಿ. ”

ನಾನು ಸಂತಾಪದಿಂದ ಹೇಳಿದೆ. “ ನಾನು ಆರೋಪ ಮಾಡಿದ್ದು ನಿಜ. ಆದರೆ ಆರೋಪ ಪಕ್ಷದ ಮೇಲೆ ಸರ್ವಥಾ ಅಲ್ಲ. ಕಾಮ್ರೇಡ ಅನ್ಸ್ಟ್ರ್ ವಾಲವೆಬರನ ಮೇಲೆ ನನ್ನ ಆರೋಪ. ”

ಇಂಥ ಬಿರುಸು ನನ್ನ ಬಾಯಿಂದ ಬರಬಹುದೆಂದು ವಾಲವೆಬರ– ಮತ್ತು ಇತರರಿಗೆ ಕಲ್ಪನೆ ಇರಲಿಲ್ಲ.

“ ಹೆಸರು ಹೇಳುವೆಯೋ? ”

" ಏಕೆ ಹೇಳಬರುವದಿಲ್ಲ ? ಯಾವ ರಿಪೋರ್ಟರ್ ಡಿವಿಟ್ರಾಫನ ಕೈಯಲ್ಲಿರುವದೆಂದು ಹೇಳುವಿರೋ, ಅದರಲ್ಲಿ ಎಲ್ಲ ಹೆಸರು ಸ್ವಚ್ಛ ಬರೆದಿದ್ದೇನೆ. "

" ನೀನು ಬೇಕಾದ ಹೆಸರು ಬರೆಯಬಹುದು. ಅವು ನಿಜವಾಗ ಬೇಕಷ್ಟೇ? ಈಗ ನಿನ್ನ ಮೇಲೆ ಆರೋಪವಿರುವದೆಂದರೆ ನೀನು ವಿಶ್ವಾಸ ಘಾತಕಿಯಾಗಿರುವೆ. ನೀನು ಹಾಲಂಡದಲ್ಲಿರುವಾಗ ಮಾಡಿದ ವಿಶ್ವಾಸ ಘಾತಕ ಸಂಗತಿಗಳ ಸಮಗ್ರವೃತ್ತಾಂತ ನಮ್ಮ ಕೈಗೆ ಬಂದಿದೆ. ಇದೆ ತಾನೆ ಆದ ನಿನ್ನ ಫಿತೂರಿಯ ಉದಾಹರಣವೆಂದರೆ— ಕಾರ್ಲಸಾರ. "

ಕಾರ್ಲನ ಹೆಸರು ಕೇಳಿ ನಾನು ಚಕಿತನಾದೆ. " ಏನು ? " ಎಂಬುದಿಷ್ಟೆ ಉದ್ಗಾರ ನನ್ನ ಬಾಯಿಂದ ಹೊರಟಿತು.

ವಾಲವೆಬರನೆಂದ. " ಇಲ್ಲಿ ನೋಡು ಕಾರ್ಲನಿಂದ ಬಂದ ಪತ್ರ. ಅವನು ಹೇಳುತ್ತಾನೆ. ಕಾಮಿಂಟರ್ನದ ಪಕ್ಷ ಬಿಟ್ಟು ಹೋಗಲಿಕ್ಕೆ ನೀನು ಆಗ್ರಹ ಪಡಿಸಿ ನೂರು ಡಾಲರು ಕೊಡುತ್ತೇನೆ ಎಂದು ಹೇಳಿದೆಯಂತೆ

ನಾನು ಆ ಪತ್ರ ನೋಡುತ್ತ ನಿಂತೆ.

ಕೆಲ ವೇಳೆಯ ಮೇಲೆ ಅವ್ಹಾಟ ಬಂದ. ಅವನೊಡನೆ ಮಾರ್ಟಿನನ ಹೆಂಡತಿ 'ಇಂಜ' ಇದ್ದಳು. ಆಕೆ ಮೇಜಿನ ಮೇಲೆ ಕಾಗದ ಇಟ್ಟು, ಪೆನ್ಸಿಲ ಹಿಡಿದು ಕುಳಿತಳು. ಆಗ ವಾಲವೆಬರ ನನಗೆ ಹೇಳಿದನು. " ನಿನ್ನ ಸಂರಕ್ಷಣೆಗೆ ಏನಾದರೂ ಹೇಳುವದಿದ್ದರೆ ಮಾತಾಡು. "

ನಾನು ಹೇಳಹತ್ತಿದೆ. ೧೯೨೩ ರಿಂದ ಇಂದಿನವರೆಗೆ ಪಕ್ಷಕ್ಕಾಗಿ ನಾನು—ಏನು ಏನು ಕಷ್ಟಪಟ್ಟೆ. ಎಂಥ ಏಕನಿಷ್ಠೆಯಿಂದ ಇದ್ದೆ. ಇತ್ಯಾದಿ ವರ್ಣಿದೆನು. ಇಂಜಳು ನನ್ನ ಭಾಷಣ ಬರೆಯುತ್ತಿದ್ದಳು. ಹೇಳುವಾಗ ನನಗೆನಿಸಿತು. ಇದರ ಉಪಯೋಗವೇನು? ಎದುರಿನ ಗೋಡೆಯನ್ನು ಉದ್ದೇಶಿಸಿ ಮಾತಾಡಿದಂತೆಯೇ ಇದು ಒಮ್ಮೆಲೇ ನಾನು ಕೇಳಿದೆ.

" ನನ್ನನ್ನು ಏನು ಮಾಡಬೇಕೆಂದಿದ್ದೀರಿ. ನೀವು ? "

" ನಾವು ನಿನ್ನನ್ನು ಸ್ಪೇನಕ್ಕೆ ಕಳಿಸುತ್ತೇವೆ. ಅಥವಾ ರಶಿಯಕ್ಕೆ. "

" ಗುಂಡು ಹಾಕಿಸಿ ಕೊಲ್ಲಿಸಬೇಕೆಂದೋ ? "

" ಅಂಥ ಕೆಲಸ ನಾವು ಮಾಡುವದಿಲ್ಲ. "

"ಅದನ್ನು ನನಗೆ ಹೇಳುವಿರೋ ನೀವು ?"

ವಾಲವೆಬರ ಹೊರಟು ಹೋದನು. ಅದೇ ನನ್ನ ಅವನ ಕೊನೆಯ ಸಂದರ್ಶನ. ಜೇನಸೆನ ಬೀರದ ಒಂದು ಬಾಟಲಿ ನನ್ನ ಮುಂದಿಟ್ಟು ಹೇಳಿದನು. "ಬಾ ಕುಡಿ" ಅವ್ಹಾಟಿಸನು ಇಬ್ಬರು ಸಿಪಾಯರಿಗೆ ಸಂಜ್ಞೆ ಮಾಡಿದನು. ಅವರು ಓವ್ಹರಕೋಟು ಹಾಕಿಕೊಂಡು ಬಂದರು.

ಅವರಲ್ಲಿ ಒಬ್ಬನು ನನಗೆ ಹೇಳಿದನು. "ನಡೆ"

ನಾನಂದೆ— "ಎಲ್ಲಿಗೆ ?"

"ನಾನು ಒಯ್ದಲ್ಲಿಗೆ."

ನಡುವೆ ಅವ್ಹಾಟಿಸ ಮಾತಾಡಿದನು. "ನನ್ನ ನಿನ್ನ ಗೆಳೆತನ ಬಹಳ ವಿತ್ತು. ಇಂದಿನವರೆಗೆ- ನಿನಗೆ ನಾನು ನಿಜ ಹೇಳುತ್ತೇನೆ. ದೂರದ ಒಂದು ಶಾಂತಸ್ಥಳದಲ್ಲಿ ನಿನ್ನನ್ನು ಇಡುವರು. ನಿನ್ನ 'ಕೇಸ'ನ್ನು ಮೇಲಿನವರ ನಿರ್ಣಯ ತಿಳಿಯುವವರೆಗೆ ಪಕ್ಷದ ಯಾವ ಕೆಲಸವೂ ನಿನ್ನ ಕಡೆಗೆ ಇರುವದಿಲ್ಲ."

ನಾನೆಂದೆ— "ಕೈದಿನಲ್ಲಿ ಇಡುವೆವೆಂದು ಸರಳವಾಗಿ ಹೇಳಲ್ಲ."

ಅವನೆಂದ— "ಹೌದು ಹಾಗೇ."

## ೨೨

ಜೇನಸೇನನ ಮಗ ಮತ್ತು ಇಬ್ಬರು ಸಶಸ್ತ್ರ ಸಿಪಾಯರು ನನ್ನನ್ನು ಮೋಟರಿನಲ್ಲಿ ಕೂಡಿಸಿಕೊಂಡು ನಜರ ಕೈದಿನಲ್ಲಿಡಬೇಕಾದ ಸ್ಥಳಕ್ಕೆ ಒಯ್ದರು. ಅದು ಇಂಥಲ್ಲಿಯೇ ಇತ್ತು ಎಂಬುದು ನನಗೆ ಹೇಳಲಿಕ್ಕೆ ಬರುವಂತಿಲ್ಲ. ಮೋಟರಿಗೆ ಎಷ್ಟೋ ತಾಸು ಹಿಡಿಯಿತು. ಇದರಿಂದ ಆ ಸ್ಥಳ ಬಹಳ ದೂರವಿದ್ದಿತೆಂಬುದು ಸ್ಪಷ್ಟ. ಅದೊಂದು ಜೋಪಡಿಯೂ ಅಲ್ಲ. ಮನೆಯೂ ಅಲ್ಲ- ಹೀಗಿತ್ತು. ಅಟ್ಟ ಮುಂತಾದವೇನೂ ಇರಲಿಲ್ಲ. ಮನೆಯ ಸುತ್ತು ಮುತ್ತಲೆಲ್ಲ ಹುಲ್ಲು ಬೆಳೆದುಹೋಗಿದ್ದಿತು. ಮನೆಯ ಒಂದು ಭಾಗ ಬಾಲ್ಟಿಕ ಸಮುದ್ರದ ಕಡೆಗಾಗಬೇಕು. ನಾಲ್ಕೂ ನಿಟ್ಟಿಗೆ ಆಳೆತ್ತರ ಬೇಲಿಹಾಕಿದ್ದರು.

ಇಲ್ಲಿಗೆ ಬಂದಮೇಲೆ ಕೈಮೇಲೆ ಮಾಡು ಎಂದು ಹುಕುಮು ಮಾಡಿ ಮಾರ್ಟಿನನು ನನ್ನ ಜೇಬು ಮುಂತಾದವುಗಳನ್ನು ಶೋಧಿಸತೊಡಗಿದನು.

ನಾನೆಂದ—"ಸುಮ್ಮನೆ ಹಾಗೆಲ್ಲ ಶೋಧಿಸಬೇಡ. ನೀನೆಂದರೆ ಗೆಸ್ಟಪೋ ಎಂದು ತಿಳಿದುಕೊಂಡಿರುವೆಯೋ?"

"ನಾನು ಗೆಸ್ಟಪೋ ಅಲ್ಲ. ಇದನ್ನು ಮಾತ್ರ ಮಾಡಬೇಕಾಗಿದೆ." ಎಂಧು ಹೇಳಿ ತನ್ನ ಝಡತಿ ಆರಂಭಿಸಿಬಿಟ್ಟ. ನನ್ನ ಗಡಿಯಾರ, ಫಾವುಂಟನ್‌ಪೆನ, ಜೇಬಿನಲ್ಲಿದ್ದ ಹಣ, ಚಾಕು, ಎರಡು ಪಾಸಪೋರ್ಟು ಕೆಲವು ಬಿಳಿಕಾಗದ- ಏನು ಸಿಕ್ಕಿತೋ ಅದನ್ನು ತೆಗೆದುಕೊಂಡ. ಒಟ್ಟು ಹದಿನಾರು ಕ್ರೋನರ ನಾಣ್ಯ ನನ್ನ ಜೇಬಿನಲ್ಲಿ ಹೊರಟವು. ಅದರೊಳಗಿನ ಆರು ನನಗೆ ಕೊಟ್ಟನು. ಹತ್ತು ತಾನಿಟ್ಟುಕೊಂಡನು.

ನಾನೆಂದ. "ಈಗ ನಡೆದಿರುವದು ನನಗೆ ರುಚಿಸುವದಿಲ್ಲ."

ಅವನೆಂದ. "ನನಗೆ ರುಚಿಸುವದೆಂದು ನೀನು ತಿಳಿದಿರುವೆಯೋ ಹೇಗೆ? ನಾನಾದರೂ ಏನು ಮಾಡಲಿ?

ಅವ್ಹಾಟಿನನು ನಿನ್ನನ್ನು ನನ್ನ ಸ್ವಾಧೀನಮಾಡಿದ್ದಾನೆ."

"ನನ್ನ ವಿಷಯದಲ್ಲಿ ನಿನಗಿದ್ದ ಹುಕುಮಾದರೂ ಏನು?"

"ಇಷ್ಟೇ. ಮಾಸ್ಕೋದಿಂದ ನಿರ್ಣಯ ಬರುವವರೆಗೆ ನಿನಗೆ ಯೋಗ್ಯ ವ್ಯವಸ್ಥೆ ಇಡುವದು."

"ನನ್ನ ಫಾವುಂಟನಪೆನ-ಮತ್ತು ಕಾಗದ ಕೊಡು."

"ಏತಕ್ಕೆ?"

"ನಾನು ಒಂದು ಪತ್ರ ಬರೆಯಬೇಕಾಗಿದೆ. ಕಾಮ್ರೇಡ ಡಿಮಿಟ್ರಾಫನಿಗೆ ನನ್ನ ಅಭಿಪ್ರಾಯವೂ ಅಷ್ಟು ತಿಳಿಯಬೇಕು."

"ನೀನು ಪತ್ರ ಬರೆಯಬೇಕೋ? ಬೇಡವೋ? ಎಂಬುದನ್ನು ವಿಚಾರಿಸಬೇಕಾಗುವದು ನಾನು."

"ನಾನು ಟ್ರಾಟ್ಸ್ಕಿಯ ಅನುಯಾಯಿ. ಒಬ್ಬ ಜಪಾನಿ ಹೇರ-ಅಥವಾ ಗೆಸ್ಟಪೋ ಎಜಂಟನಿದ್ದಂತೆ ನೀವು ನನ್ನನ್ನು ನಡೆಸಿರುವಿರಲ್ಲ! ಏನು? ನಿಮ್ಮ ಕಲ್ಪನೆಗಳಾದರೂ ಏನು?"

"ನನ್ನ ಕಲ್ಪನೆ ಏನೂ ಇಲ್ಲ. ನನಗೆನಿಸುವದೆಂದರೆ ವಾಲವೆಬರ

ಹೇಳಿದುದು ನಿಜವಿದ್ದರೆ ನೀನು ಒಳ್ಳೇ ಭಯಂಕರ ಮನುಷ್ಯನೆನಿಸುವೆ. ಇರಲಿ ಈಗ ಹೇಳುವದಿಷ್ಟೇ. ನೀನು ನನ್ನ ಸ್ವಾಧೀನದಲ್ಲಿರುವವರೆಗೆ ಏನೂ ಗೊಂದಲಹಾಕಬೇಡ."

"ಈ ಜೋಪಡಿ ಒದ್ದು, ಓಡಿಹೋಗಲಿಕ್ಕೆ ನನಗೆ ಸಾಧ್ಯವಿದೆ. ಮನಸ್ಸು ಮಾಡಿದರೆ."

"ಹೌದು. ಹಾಗೆ ಮನಸ್ಸಿನಲ್ಲಿ ತರಬೇಡ. ನೀನು ಓಡಿಹೋಗ ಹತ್ತಿದರೆ ನಾವು ಗುಂಡು ಹಾಕಬೇಕಾಗುವದು. ಅಲ್ಲದೆ ಈಗ ಹಾಗೇ ಬಿಟ್ಟಿದ್ದೇವೆ. ಗಡಿಬಿಡಿ ಮಾಡಿದರೆ ಕೈಯಲ್ಲಿ ಬೇಡಿಹಾಕುವ ಪ್ರಸಂಗ ಬರುವದು. ಕದಾಚಿತ್- ಮಾಸ್ಕೋ ನೀನು ನಿರ್ದೋಷಿ ಎಂದು ನಿರ್ಣಯಿಸಬಹುದು. ಹಾಗೆ ಆದರೆ ನನಗೆ ಆನಂದವೇ. ನಿನ್ನ ಬಿಡುಗಡೆಯಾದ ದಿನ ನಾವು ತಿನ್ನೋಣ, ಕುಡಿಯೋಣ, ಮೋಜು ಮಾಡೋಣ. ಈಗ ವಿನಂತಿ ಮಾಡಿಕೊಳ್ಳುವೆನು. ನನ್ನ ಸ್ವಾಧೀನದಲ್ಲಿರುವ ಮಟ್ಟಿಗೆ ಒಳ್ಳೆ ರೀತಿಯಿಂದಿರು.

ಅವನ ಮಾತು ತಪ್ಪೇನೂ ಅಲ್ಲ.

ಆ ಜೇಲಿನ ಜೋಪಡಿಯಲ್ಲಿ ಮೂರು ಭಾಗ. ಮುಂದಿನ ದೊಡ್ಡ ಭಾಗದಲ್ಲಿ ಮಾರ್ಟಿನ ಇರಹತ್ತಿದ; ಹಿಂದಿನ ಸಣ್ಣ ಕೊಟ್ಟಡಿಯಲ್ಲಿ ಅವನಿಬ್ಬರು ಸಿಪಾಯರು. ಮಧ್ಯದಲ್ಲಿ ನಾನು. ನಾನಿದ್ದ ಕೊಟ್ಟಡಿಗೆ ಎರಡೂ ಮಗ್ಗಲು ಬಾಗಿಲುಗಳಿದ್ದವು. ಆದರೆ ಅವುಗಳಿಗೆ ಒಳಚಿಲಕವಿರಲಿಲ್ಲ.

ಇಂಥ ಸ್ಥಳದಲ್ಲಿ ಕಾಟಿನ ಮೇಲೆ ಬಿದ್ದುಕೊಂಡಿರುವಾಗ ವಿಚಾರ ಮಾಡಿ ಮಾಡಿ ತಲೆ ಕಾದುಹೋಗಬೇಕು. ಈ ವಿಚಿತ್ರ ಜೇಲಿನಲ್ಲಿ ನನ್ನ ಮೊದಲು ಎಷ್ಟೋ ಕಾಮ್ರೇಡರು ಬಂಧಿತರಾಗಿರಬಹುದು. ಮತ್ತು ಅವರ ಅಂತವೂ ಆಗಿರಬಹುದು. ಹಾಗೇ ನನ್ನ ಅಂತವಾಗುವದೇನು?....ನಿಜವಾಗಿ ನೋಡಿದರೆ ಕಾಮಿಂಟರ್ನದೊಡನೆ ನನ್ನದೇನೂ ಜಗಳವಿಲ್ಲ. ನನಗಿಂತ ಮೊದಲು ಕತೆ ಮುಗಿದವರದಾದರೂ ಎಲ್ಲಿತ್ತು? ಒಂದು ನಿಟ್ಟಿಗೆ ಸ್ಟಾಲಿನ ಮತ್ತು ಅವನ ಗಚ್ಚಿನಗುಡಿ ಹೇಡಿ ಸಹಕಾರಿಗಳು. ಮತ್ತೊಂದು ನಿಟ್ಟಿಗೆ ಕಾಮಿಂಟರ್ನದ ಧೋರಣ ಅಂತರರಾಷ್ಟ್ರೀಯವಿರಬೇಕೆಂದು ಅತ್ಯಂತ ಪ್ರಾಮಾಣಿಕತನದಿಂದ ಹೇಳುವ ಜನ. ಇವರ ನಡುವೆ ಈ ತಿಕ್ಕಾಟ. ಇದರಲ್ಲಿ

ಸ್ಟಾಲಿನ ಮತ್ತು ಅವನ ಸಹಕಾರಿಗಳದೇ ವಿಜಯವಾಗುತ್ತಿದ್ದಿತು. ಯಾಕೆಂದರೆ ಅಧಿಕಾರ ಅವರ ಕೈಯಲ್ಲಿ. ನಾಳೆ ಮಾಸ್ಕೋ ಕಚೇರಿಯ ಮೇಲೆ ಸ್ವಸ್ತಿಕ ಧ್ವಜ ಏರಿಸಬೇಕೆಂದು, ಸ್ಟಾಲಿನನು ಡಿಮಿಟ್ರಾಫನಿಗೆ ಹುಕುಮು ಮಾಡಿದರೆ ಅವನು ಪಾಲಿಸಿ ತೀರುತ್ತಿದ್ದ. ಇದು ಸ್ಪಷ್ಟವೇ. ಕಾಮಿಂಟರ್ನದ ಧೋರಣವೂ ತತ್ವಗಳೂ ಸ್ಟಾಲಿನನ ಆಡಳಿತೆಯಲ್ಲಿ ತುಂಬ ಬದಲಾಗಿ ಹೋಗಿದ್ದವು......

ಒಂದು ಕಡೆಗೆ ಹೀಗೆ ವಿಚಾರ ಬರಬೇಕು. ಮತ್ತೊಂದು ಕಡೆಗೆ ಎನಿಸಬೇಕು.—ಎಂಥ ವಿಚಾರ ಮಾಡುವೆನು ನಾನು? ನನ್ನ ನಿಷ್ಠೆ ಕಮ್ಮಿಯಾಗತೊಡಗಿದೆ. ನನ್ನ ದುರ್ಬಲತನದ ಸಮರ್ಥನ ಮಾಡಿಕೊಳ್ಳಲಿಕ್ಕೆ ನಾನು ಏನಾದರೂ ಕಾರಣ ಶೋಧಿಸಹತ್ತಿದ್ದೇನೆಯೋ. ಇಂದಿನವರೆಗಿನ ನನ್ನ ಆಯುಷ್ಯಕ್ರಮವೆಲ್ಲ ಕಣ್ಣಿಗೆ ಕಟ್ಟಿತು. ನಾನು ಹದಿನೆಂಟು ವರ್ಷದವನಾಗಿದ್ದೆ. ಆಗ ಒಬ್ಬ ರಾಕ್ಷಸನಂಥ ಸಾಮರ್ಥ್ಯ–ಸಾಹಸಗಳು ನನ್ನಲ್ಲಿದ್ದವು. ಇಪ್ಪತ್ತು ದಾಟಿದವು. ಆಗ ಮನಸ್ಸಿನಲ್ಲಿ ಏನೂ ಸಂದೇಹಗಳಿರಲಿಲ್ಲ. ಕ್ರಾಂತಿಯ ವಿರೋಧಿ ಯಾವನಾದರೂ ಕಂಡರೆ ಅವನ ಹಲ್ಲು ಮುರಿಯಬೇಕು. ಎಂಬ ಸರಳ ವಿಚಾರ ನನ್ನದು ಆಗ. ಇಪ್ಪತ್ತೆರಡನೇ ವರ್ಷದಲ್ಲಿ ಕಾಮಿಂಟರ್ನದ ಸೇವೆ ಮಾಡಲಿಕ್ಕೆ ನಾನು ತ್ರಿಖಂಡ ಪೃಥ್ವಿಯನ್ನೇ ಸುತ್ತುಹಾಕಿದ್ದೆನು. ಕಷ್ಟ ಸೋಸುವದರಲ್ಲಿ ಅಭಿಮಾನವೆನಿಸುತ್ತಿದ್ದಿತು. ಇಪ್ಪತ್ತೊಂಭತ್ತು ವರ್ಷದವನಿರುವಾಗ ದೇಶ–ವಿದೇಶಗಳ ಪೋಲೀಸರು ನನ್ನನ್ನು ಹಿಡಿಯಲಿಕ್ಕೆ ಜಪ್ಪಿಸಿಕೊಂಡಿದ್ದರು. ಮೂವತ್ತೊಂದನೇ ವರ್ಷದಲ್ಲಿ ನಾನು ಹಿಟ್ಲರನ ಜೇಲಿನಲ್ಲಿದ್ದು, ಅಲ್ಲಿ ಕೂಡ ಕ್ರಾಂತಿ ತತ್ವದ ಬೀಜ ಊರುವ ಪ್ರಯತ್ನ ಮಾಡುತ್ತಿದ್ದೆ! ಈಗ ಮೂವತ್ತು ಮೂರನೇ ವರ್ಷದಲ್ಲಿ ಮಾತ್ರ ನನ್ನ ಮನಸ್ಸು ವಿಚಾರಿಸುತ್ತಿತ್ತು. "ಇದೆಲ್ಲ ಭ್ರಮವಾಗಿದ್ದಿತೇ? ಜೀವಿತ ಕಾಲವನ್ನೆಲ್ಲ ತಪ್ಪು ದಾರಿಯಿಂದ ನಾನು ನಡೆದೆನೋ?......

ಹೀಗಿದೆ ಅಲ್ಲ. ತನ್ನ ಮೈಮೇಲಿನ ತೊಗಲನ್ನೇನೂ ಸುಲಿದು ಚಲ್ಲಲಿಕ್ಕೆ ಮನುಷ್ಯನಿಗೆ ಬರುವದಿಲ್ಲ.

ಆ ರೀತಿ ಸಂಶಯ–ಪಶ್ಚಾತ್ತಾಪ ಲಹರಿಗಳ ಕಲ್ಲೋಳ ಮನಸ್ಸಿನಲ್ಲಿ

ದ್ದರೂ ಮಾರ್ಕ್ಸ್, ಅಂಜೆನ್ಸ್, ಲೆನಿನ, ಹೆಗೆಲ ಇವರೇ ಮೊದಲಾದವರ ಗ್ರಂಥದಲ್ಲಿಯ ಸಿದ್ಧಾಂತವಾಕ್ಯಗಳು ನೆನಪಿಗೆ ಬಂದವು.... "ವಿರೋಧ ವಿಕಾಸ-ಜಡವಾದ ಇದೇ ಮಾರ್ಕ್ಸನ ತತ್ವಜ್ಞಾನದ ತಾತ್ಪರ್ಯ!" "ಮಾನವ ಜಾತಿಯ ಇತಿಹಾಸವೆಂದರೆ ವರ್ಗಯುದ್ಧದ ಇತಿಹಾಸ." "ಇತಿಹಾಸಕ್ಕೆ ಗತಿಕೊಡುವ ಉಗಿಯ ಎಂಜಿನು ಯಾವದಾದರೂ ಇದ್ದರೆ ಅದು ಕ್ರಾಂತಿ!" "ಭಾಂಡವಲಶಾಹಿಯ ಭರಭರಾಟಿ. ಆದರೆ ಅದರ ಗರ್ಭದಲ್ಲಿ ಅದರ ನಾಶದ ಸಿದ್ಧತೆಯಾಗುತ್ತಿರುವದು..ಕಡೆಗೆ ಶ್ರಮಜೀವಿ ವರ್ಗದವರ ಸತ್ತೆ, ಪ್ರಸ್ಥಾಪಿತವಾಗಲೇ ಬೇಕು....ಒಕ್ಕಲಿಗರಿಗೆ ಅವರ ಭೂಮಿ. ಕೆಲಸಗಾರರಿಗೆ ಅವರ ಕಾರಖಾನೆ..ಎಲೋ, ಕಳಕೊಳ್ಳುವಂಥದು ನಮ್ಮ ಕೈಯಲ್ಲಿ ಏನೂ ಇಲ್ಲ. ನಾವು ವಿಜಯಿಗಳಾದರೆ ಮಾತ್ರ ಜಗತ್ತಿನ ಮಾಲಕವಾಗಿ ಕೂಡುವೆವು!..ಅದು ಇಂಥ ಜಗತ್ತು. ಅದರಲ್ಲಿ ಸರ್ವರಿಗೂ ತಿನ್ನಲು ಸಾಕಷ್ಟು ಅನ್ನ ದೊರೆಯಬೇಕು. ಸ್ವಾತಂತ್ರ್ಯವಿರಬೇಕು. ಪ್ರತಿಷ್ಠೆಯಿಂದ ಮೋರೆ ಮೇಲೆತ್ತಿ ಅಡ್ಡಾಡುವಂತಾಗಬೇಕು...."

ಮಾರ್ಕ್ಸನ ಈ ಉದ್ಗಾರಗಳನ್ನು ಸ್ಮರಿಸಿ ಮನಸ್ಸಿಗೆ ಪ್ರಶ್ನೆ ಹಾಕಿದೆ. "ಇದರಲ್ಲಿ ತಪ್ಪು ಯಾವದು?"

ಎಲ್ಲಿಯೂ ತಪ್ಪು ಇಲ್ಲ. ಆದರೆ- ಆದುದು ಇಷ್ಟು. ಈ ಸಿದ್ಧಾಂತ, ಈ ಉದ್ಗಾರಗಳು ಉಳಿದವು ಮಾರ್ಕ್ಸನ ಗ್ರಂಥದಲ್ಲಿ. ಕಾಲವಂತೂ ಹೀಗೆ ಬಂದಿತ್ತು. ಒಬ್ಬ ಕಾಮ್ರೇಡನನ್ನು ವಿಚಾರಿಸಬೇಕು. ಬಡವರ ಉದ್ಧಾರಕರ್ತ, ಯಾರು? ಜೀವಿಸುವ ಮುತ್ಸದ್ದಿಗಳಲ್ಲಿ ಸರ್ವಶ್ರೇಷ್ಠರು ಯಾರು? ಇದಕ್ಕೆ ಮತ್ತೊಬ್ಬನು ಉತ್ತರ ಕೊಡಬೇಕು. ಕಾಮ್ರೇಡ ಸ್ಟಾಲಿನ!....

ನನಗೆ ಭಾಸವಾದುದೇನಂದರೆ ಖಡೇ ಪಾಟಿನ ದೇವದ್ವಾರದ ಹಲಿಗೆಯಲ್ಲಿ ಕೆಂಪು ಮಸಿಯಿಂದ ಬರೆದಿಟ್ಟ ಶಬ್ದಗಳು; ಅತ್ಯಂತ ಸ್ಪಷ್ಟ ಕಾಣತೊಡಗಿವೆ. "ಸ್ಟಾಲಿನನ ಮೂಲೋತ್ಪಾಟನ ಮಾಡಲೇಬೇಕು."....

ಮತ್ತೆ ಈ ಏಕಾಂತದಲ್ಲಿ ಫಿರೇಲಾಯಳ ನೆನಪು ಒಂದು ಹೀಗೆನಿಸಬೇಕು. ಪಾಪ? ಜರ್ಮನಿಯಲ್ಲಿ ಒಬ್ಬಳೇ ಈಗ ಏನು ಮಾಡುತ್ತಿರಬಹುದು? "ಯೋಗ್ಯ ಸಮಯ ಬಂದಿದೆ. ನೀನು ಬಾ." ಎಂದು ನನಗೆ

ಯಾವಾಗ ತಿಳಿಸಲು ಬಂದೀತೆಂದು ದಾರಿಕಾಯುತ್ತಿರಬಹುದು. ಅಥವಾ ಆಕೆಗೆ ಅಂಥ ಸಂಧಿ ದೊರೆತಿರಬಹುದು. ನನಗೆ ತಿಳಿಸಿರಬಹುದು. ಆದರೆ ಪತ್ರ ಹೋಗುವದು ಅಂಟ್ವರ್ಪಕ್ಕೆ. ಅದು ಇನ್ನು ನನಗೆ ಎಂದೂ ಸಿಗಲಾರದು. ಆಕೆ ನನ್ನ ಉತ್ತರದ ದಾರಿ ಕಾದು-ಕಾದು ದಣಿದು ಹೋಗುವಳು. ನನ್ನ ಸಹವಾಸದಿಂದ ಎಷ್ಟು ದುಃಖಕಾರಕ ಆಯುಷ್ಯ ಅವಳ ಪಾಲಿಗೆ ಬಂದಿರುವದಲ್ಲ!....

ಅಂಟ್ವರ್ಪ ಬಂದರದ ಧಕ್ಕೆಯಲ್ಲಿ ಆದ ನನ್ನ-ಆಕೆಯ ಮೊದಲ ಭೆಟ್ಟಿ ಒಮ್ಮೆಲೇ ನೆನಪಾಗಬೇಕು. ಆಕೆ ಒಂದು ಹಡಗಿನ ಚಿತ್ರ ಬರೆದಿದ್ದಳು. ಆ ಚಿತ್ರದಲ್ಲಿ ಕೂಸಿಗೆ ಮೊಲೆ ಕುಡಿಸುವ ಒಬ್ಬ ಹೆಂಗಸಿದ್ದಳು. ತಂತಿಯ ಮೇಲೆ ಅರಿವೆ ಒಣಗಹಾಕಿದ್ದಳು. ಒಂದು ನಾಯಿ ಬೊಗಳುತ್ತಿದ್ದಿತು. ನಾನು ಅವಳ ಸನಿಯಕ್ಕೆ ಹೋಗಿ ಅಂದಿದ್ದೆ. "ಹಡಗಿಗೆ ಒಂದು ಹೆಸರು ಇರಬೇಕಲ್ಲವೇ ? ಕೇಳಿ ಆಕೆ ಓರಾನ ಎಂದು ಚಿತ್ರದ ಕೆಳಗೆ ಬರೆದಿದ್ದಳು. ಪರಸ್ಪರ ಸಹವಾಸದಲ್ಲಿ ನಾವು ಎಷ್ಟು ಸುಖದ ಉಪಭೋಗ ತೆಗೆದುಕೊಂಡಿದ್ದೆವು? ಆಕೆ ಮುಂದಿನ ಆಯುಷ್ಯಕ್ರಮದ ವಿಷಯಕ್ಕೆ ಮನಸ್ಸಿನಲ್ಲಿ ಎಷ್ಟು ಮಹತ್ತರ ಗೋಪುರ ಕಟ್ಟಿಕೊಂಡಿದ್ದಳು ?.. ಅವೆಲ್ಲ ಮಣ್ಣುಗೂಡಿ ಹೋಗಿದ್ದವು!..ಕೇವಲ ನನ್ನ ಸಲುವಾಗಿ....

ಬಾಲ್ಟಿಕ್ ಸಮುದ್ರದ ಮೇಲಿಂದ ಬರುವ ತಂಗಾಳಿ ಕಟ್ಟಿಗೆ ಬಿರುಕಿನಿಂದ ಒಳಸೇರುತ್ತಿದ್ದಿತು. ಅದೊಂದು ಕರ್ಕಶ ಶೀಟಿಯಂತೆ ದನಿಯಾಗುತ್ತಿತ್ತು. ಅದರಲ್ಲಿ ಯಾರದೋ ದನಿ ಕೇಳಿದಂತೆ ನನಗೆ ಭಾಸವಾಯಿತು. ನಾನು ಗುರುತಿಸಿದೆ. ಅದು ಫಿರೇಲಾಯಳ ದನಿ. ಆಕೆ ಪುನಃ ಪುನಃ ವಿಚಾರಿಸುತ್ತಿದ್ದಳು.

"ಇದೇನು ನನ್ನ ಅವಸ್ಥೆ ಮಾಡಿದೆ ?...."

ಮೂರುವಾರ ಕಳೆದವು. ಮಾಸ್ಕೋದಿಂದ ನನ್ನ ವಿಷಯಕ್ಕೆ ನಿರ್ಣಯ ಬರುವದಿತ್ತು. ನಿಯಮವಿಲ್ಲದಷ್ಟು ದಿನಗಳವರೆಗೆ ಈ ಸ್ಥಳದಲ್ಲಿ ನನ್ನನ್ನು ಬಂಧಿಸಿಡುವ ವಾಲವೆಬರನ ತಂತ್ರವಿದೆಂದು ಸಾವಕಾಶವಾಗಿ ನನಗೆ ಖಾತ್ರಿಯಾಗಹತ್ತಿತು. ಪ್ರತಿ ಸಾಯಂಕಾಲದಲ್ಲಿ ಕೋಪಸಹಗನ

ದಿಂದ ಜೇನಸೇನ ಬರುತ್ತಿದ್ದನು. ಬರುವಾಗ ಬೀರ ಮತ್ತು ಸಿಗಾರೇಟು ಗಳನ್ನು ತರುತ್ತಿದ್ದನು. ನನಗೆ ಬೇಕಾದಷ್ಟು ಬೀರ ಕುಡಿಯಲಿಕ್ಕೆ ಸಿಗುತ್ತಿತ್ತು. ಸಿಗಾರೇಟು ಸೇದಲು ದೊರೆಯುತ್ತಿತ್ತು. ಅವು ನನಗೆ ಬೇಕಾಗಿದ್ದವೇ? ಮರಳುವಾಗ ಜೇನಸೇನ ಹೇಳುತ್ತಿದ್ದ. "ಇನ್ನು ನಾಲ್ಕಾರು ದಿನಗಳಲ್ಲಿ ಮಾಸ್ಕೋದ ನಿರ್ಣಯ ತಿಳಿಯಬಹುದು."

ಒಂದು ದಿನ ನಾನಂದೆ. "ನಾನು ವಾಲವೆಬರನಿಗೆ ಭೆಟ್ಟಿಯಾಗ ಬೇಕು."

ಅವನೆಂದ. "ವಾಲವೆಬರ ಇಲ್ಲಿ ಎಲ್ಲಿ ಇದ್ದಾನೆ?"

ಅವನು ಕೇವಲ ಸುಳ್ಳು ಹೇಳುತ್ತಾನೆಂದು ನನ್ನ ಖಾತ್ರಿ ಇತ್ತು. ನಾನಂದೆ—

"ಈಗ ವಾಲವೆಬರ. ನನಗೆ ಭೆಟ್ಟಿಯಾದರೆ ನೆಟ್ಟಗೆ ಅವನ ತಲೆ ಹಾರಿಸುತ್ತೇನೆ. ನಾನು."

ಜೇನಸೇನ ನಗುತ್ತ ನುಡಿದನು. "ಬಾಯಿಂದ ಹೀಗೆ ಹೇಳುವ ಅನೇಕರನ್ನು ಕಂಡಿದ್ದೇನೆ."

"ಅವರೊಳಗಿನವ ನಾನಲ್ಲ. ಲಕ್ಷ್ಯದಲ್ಲಿಡು"

ಆ ಜೇಲಿನಿಂದ ಬಿಡುಗಡೆ ಮಾಡಿಕೊಳ್ಳುವ ಯೋಚನೆಯನ್ನು ಜೋರಾಗಿ ನಡೆಸಿದೆ. ವಿಚಾರ ಮಾಡಮಾಡುತ್ತ ಮನೆಗೆ ಬೆಂಕಿಹಚ್ಚಿ ಓಡು ವದು ಎಲ್ಲಕ್ಕೂ ಸುಲಭವೆಂದು ದೃಢವಾಗಹತ್ತಿತು. ಆ ಮನೆಯಂತೂ ಹಳೇ ಮನೆ. ಅದರ ಕಟ್ಟಿಗೆ ಒಣವು. ಎಲ್ಲಿಯಾದರೂ ಕಿಡಿ ಇಕ್ಕುವದೇ ಅವಕಾಶ....ನಿತ್ಯರಾತ್ರಿ ನನ್ನ ಮನಸ್ಸಿನಲ್ಲಿ ಹತ್ತು ಸಾರೆ ಬರಬೇಕು. ಬೆಂಕಿಹಚ್ಚಿ ಬಿಡಲೋ? ಮತ್ತೆ ಬೇಡವೆನಿಸಬೇಕು. ನಾಳೆ ನೋಡುವಾ.

೧೯೩೮ರ ಜಾನೇವರಿ ತಿಂಗಳು ಮುಗಿಯುತ್ತ ಬಂದಿತು. ಒಂದು ಬೆಳಗಿನಲ್ಲಿ ಮೋಟರು ಬಂದು ಹೊರಗೆ ನಿಂತ ಸಪ್ಪಳ ಕೇಳಿಸಿತು. ಗೇಟು ತೆರೆದಂತೆಯೂ ಭಾಸವಾಯಿತು. ತುಸು ವೇಳೆಯಲ್ಲಿ ನನ್ನ ಕೊಟ್ಟಡಿ ಬಾಗಿಲಿಗೆ ಜೇನಸೇನ ಕಂಡನು. ಬೆಳಗಿನಲ್ಲಿ ಅವನು ಬಂದುದಕ್ಕೆ ನನಗೆ ಆಶ್ಚರ್ಯ.

ಅವನೆಂದ. ' ಗುಡ್ ಮಾರ್ನಿಂಗ. ಅರಿವೆ ಹಾಕಿಕೋ. ''

ನಾನು ವಿಚಾರಿಸಿದೆ. " ಎಂದರೆ ? "

" ನೀನು ಈ ದಿನವೇ ಹೊರಡಬೇಕು. ''

" ಎಲ್ಲಿಗೆ ? ''

" ರಶಿಯಾಕ್ಕೆ. "

ಹೊರಗಿನ ಕೊಟ್ಟಡಿಗೆ ಕಾಲಿಡುತ್ತ ನಾನಂದೆ. " ಹೀಗೇನು? ಹೇಗೆ ಕಳಿಸುವಿರಿ ರಶಿಯಾಕ್ಕೆ ನನ್ನನ್ನು? ''

" ಹಡಗಿನಿಂದ. ಈ ದಿನ ಮೂರನೇ ಪ್ರಹರದಲ್ಲಿ ಒಂದು ಹಡಗು ಬಿಡುತ್ತದೆ. ''

ನಗುತ್ತ ನಾನು ಹೇಳಿದೆ. " ನಿನ್ನ ಈ ಮಾತು ಹೇಗೆ ನನಗೆ ನಿಜವೆನಿಸಬೇಕು ? ಈ ದಿವಸಗಳಲ್ಲಿ ಹಡಗು ಹೊರಡುವದಿಲ್ಲವೆಂಬುದು ನಿನಗೂ ಗೊತ್ತು. ನನಗೂ ಗೊತ್ತು.

ಜೇನಸೆನ ತೆಪ್ಪಗಿದ್ದನು.

ನಾನೇ ಹೇಳಿದೆ. " ಅದು ಹೋಗಲಿ. ಹೊರಡುವ ಮೊದಲು ನಾನು ಬೋಳಿಸಿಕೊಳ್ಳಬೇಕು. ಇಷ್ಟು. ''

ಹೀಗೆ ಹೇಳಿ ನನ್ನ ಕೊಟ್ಟಡಿಗೆ ಮರಳಿದೆನು. ಪಲಾಯನ ಮಾಡುವದೇ ಆದರೆ—ಇದು ಕಡೆಯ ಕ್ಷಣವೆಂದು ಮನಸ್ಸಿನಲ್ಲಿ ಬಂದಿತು. ನನ್ನ ಮೈಯಲ್ಲಿಯ ರಕ್ತ ಸಳ-ಸಳ ಹರಿದಾಡಿತು. ತಲೆ ಬಗಿದು ಹೋಯಿತು. ಆಗ ದೇಹದಲ್ಲಿ ಬಂದ ರಾಕ್ಷಸೀ ಬಲ. ನನ್ನ ಕಾಲು ಭೂಮಿಯಲ್ಲಿ ಸ್ಥಿರವಾಗಿ ನಿಲ್ಲದಾದವು. ಇಷ್ಟು ದಿನ ಕೈಯಲ್ಲಿ ಬಿಗಿಯಾಗಿ ಗಟ್ಟಿಹಿಡಿದುಕೊಂಡಿದ್ದ ಕಠಾರಿಯನ್ನು ಕಾಮಿಂಟರ್ನದ ಒಡಲಿನಲ್ಲಿ ನಾನು ಚುಚ್ಚುವವ. " ತಾಯಿ ಎಂದು ನಿನ್ನನ್ನು ಪೂಜಿಸಿದೆ ! ಆದರೆ ನೀನು ತಾಯಿಯಲ್ಲ. ಕಾಳನಾಗಿಣಿ ಇರುವೆ ! ''

ಎಷ್ಟೋ ದಿನ ವಿಚಾರಿಸಿ ಹಂಚಿಕೆ ಹಾಕಿದ್ದೆ. ಸಿದ್ಧತೆಮಾಡಿ ಇಟ್ಟಿದ್ದೆ. ತೂಗುಹಾಕಿದ್ದ ದೀಪದಲ್ಲಿ ಸಾಕಷ್ಟು ಎಣ್ಣೆ ಇದ್ದಿತು. ಅಲ್ಲದೆ ಎರಡು ಬೀರ ಬಾಟಲಿಗಳಲ್ಲಿ ಎಣ್ಣೆ ಸಂಗ್ರಹಿಸಿ ಹಾಸಿಗೆ ಬುಡಕ್ಕೆ ಮುಚ್ಚಿಕೊಂಡಿದ್ದೆ. ಅವುಗಳನ್ನು ಕಡೆಗೆ ತೆಗೆದೆ. ಪಟ-ಪಟ ಒಡೆದೆ. ನೆಲದ ಮೇಲೆ ಎಣ್ಣೆ

ಪಸರಿಸತೊಡಗಿತು. ಕಡ್ಡಿ ಕೊರೆದು ಅದರಲ್ಲಿ ಚಲ್ಲಿಕೊಟ್ಟೆ. ಭುಗಿಲ್–ಭುಗಿಲ್. “ಬೆಂಕಿ! ಬೆಂಕಿ! ಬನ್ನಿ ಬನ್ನಿ! ಬೊಬ್ಬೆಕುಟ್ಟುತ್ತ ದಡಕ್ಕನೆ ಕೊಟ್ಟಡಿ ಬಾಗಿಲು ದೂಡಿ ಹೊರಬಿದ್ದು—ಓಡಿದೆ–

ರಾಜಬೀದಿಗೆ ಬಂದೆನು. ಒಂದು ಮೋಟರು ಕಂಡಿತು. ಎರಡೂ ಕೈ ಎತ್ತಿ ನಿಲ್ಲಿಸುವ ಯತ್ನ ಮಾಡಿದೆನು. ಅದು ನಿಲ್ಲದೇ ಹಾಗೇ ಹೋಯಿತು. ಇನ್ನು ಮೂರು ನಾಲ್ಕು ಮೋಟರುಗಳು ನಿರಾಶೆಗೊಳಿಸಿದವು. ಕಡೆಗೆ ಒಂದು ಗಾಡಿ ನಿಂತುಕೊಂಡಿತು. ತುಸು ವಯಸ್ಕನೊಬ್ಬ ಗಾಡಿಹೊಡೆಯುತ್ತಿದ್ದ. ನನ್ನನ್ನು ಒಳಗೆ ಕರೆಯಲಿಕ್ಕೆ ಬಾಗಿಲು ತೆಗೆಯುತ್ತ ಕೇಳಿದ.

“ಎಲ್ಲಿಗೆ ಹೊಗಬೇಕು?”

“ಕೋಪನಹೆಗನಕ್ಕೆ.”

ಒಳಗೆ ನಾನು ಕುಳಿತೆ. ಗಾಡಿ ಸಾಗಿತು. ಅವನು ಕೇಳಿದನು. “ಅಲ್ಲಿ ಬೆಂಕಿಹತ್ತಿದ್ದಿತೇನು?”

ನಾನಂದೆ. “ರಾತ್ರಿಯಲ್ಲಿ ಕೆಲವು ನಾವಿಕರು ಅಲ್ಲಿ ಕೂಡಿದ್ದರು. ಮಿತಿಯಿಲ್ಲದೆ ಶರೆ ಕುಡಿದು ಗಿರಕಾಗಿದ್ದರು ಮುಕ್ಕಳು.”

ಆ ಗೃಹಸ್ಥ ನಕ್ಕುಬಿಟ್ಟ.

ಕೋಪನಹೆಗನದಲ್ಲಿ ನಾನು ನಿಲ್ಲಲಿಲ್ಲ. ನನ್ನ ಬೆನ್ನುಹತ್ತುವದು ಸ್ಪಷ್ಟವಾಗಿತ್ತು. ಶಕ್ಯವಾದಷ್ಟು ಬೇಗನೆ ಸಾಧ್ಯವಾದಷ್ಟು ದೂರ ಹೋಗದವಿನಾ ನನಗೆ ನಿಶ್ಚಿಂತೆ ಎನಿಸುವದು ಅಶಕ್ಯವಾಗಿದ್ದಿತು. ಜೇಲಿನಲ್ಲಾದರೋ– ಅಷ್ಟೇ ಆರು ಕ್ರೋನರ ನಾಣ್ಯ. ಒಂದು ತಲೆ ಅಂಗಡಿಗೆ ಹೋಗಿ ಕೂದಲು ತೆಗೆಸಿಕೊಂಡೆನು. ಸ್ನಾನಗೃಹ ಸೇರಿ, ಮೈ ತೊಳೆದುಕೊಂಡೆನು. ಹಾಟೆಲಕ್ಕೆ ಹೋಗಿ ಹೊಟ್ಟೆತುಂಬ ಊಟ ಮಾಡಿದೆನು. ಹಾದಿಹಿಡಿದು ಹೋಗುವಾಗ ಒಂದು ಮನೆಯ ಮೆಟ್ಟಲಿಗಾನಿಸಿ ಇಟ್ಟ ಒಂದು ಸಾಯಕಲ್ಲು ಕಾಣಿಸಿತು. ನಿರ್ಭಯವಾಗಿ ಅದನ್ನು ಕಳವು ಮಾಡಿಕೊಂಡು ಅದರ ಮೇಲೆ ಕುಳಿತು ವೇಗದಿಂದ ಪೂರ್ವದಿಕ್ಕಿಗೆ ಸಾಗಿದೆನು. ಈಗ ನನ್ನ ಜೇಬಿನಲ್ಲಿ ಬರೇ ಮೂರು ಕ್ರೋನರ ಉಳಿದಿದ್ದವು. ನನ್ನ ಹತ್ತರ ಪಾಸುಪೋರ್ಟ ಗೀಸುಪೋರ್ಟ ಏನೂ ಇರಲಿಲ್ಲ.

ಸಮುದ್ರದ ಒತ್ತಿನ ಸ್ಥಳಕ್ಕೆ ಬಂದ ಕೂಡಲೇ ಸಾಯುಕಲ್ಲು ಚಲ್ಲಿದೆ. ಒಬ್ಬ ನಾಗರಿಕನ ಗುರುತು ಹಚ್ಚಿ, ಆಚೆಗೆ ಹೋದೆನು. ಫಿನ ಸಡುಗಡ್ಡೆ ದಾಟಬೇಕಾದರೆ ಏಳು ತಾಸು ಹಿಡಿದವು. ಅಲ್ಲಿಂದ ಒಂದು ನಾವಿನಲ್ಲಿ ಕುಳಿತು 'ಫ್ರೆಡೇರಿಶಿಯಾ'ಕ್ಕೆ ಹೋದೆನು. ಅಲ್ಲಿ ಒಂದು ರಾತ್ರಿಕಳೆದೆನು. ಮರುದಿನ ಜಟಲಂಡ ದಾಟಿ ಎಂಬ್ಬರ್ಗ ಬಂದರ ಮುಟ್ಟಿದೆನು. ಆಗ ನನ್ನ ಜೇಬಿನಲ್ಲಿ ಒಂದು ಕ್ರೋನರ ಉಳಿದಿತ್ತು. ಬಂದರದಲ್ಲಿ ನೋಡಿದೆ. ಬರ್ನಸ್ಟಾರ್ಫ ಹಡಗು ನಿಂತಿದ್ದಿತು. ನಿರ್ಭಯವಾಗಿ ಹತ್ತಿಬಿಟ್ಟೆ. ನನ್ನ ಸುದೈವವೆಂದ, ಹಳೆ ಗುರುತಿನ ಒಬ್ಬ ಕಾಮ್ರೇಡನು ಹಡಗಿನ ಅಧಿಕಾರಿ ಆಗಿದ್ದನು. ಅರ್ಥಾತ್ ನನ್ನ ಹೊಸ ಪರಿಸ್ಥಿತಿಯ ಎಷ್ಟೂ ಕಲ್ಪನೆ ಅವನಿಗಿರಲಿಲ್ಲ. ನಾನು ಅವನಿಗೆಂದೆ.

“ಗೆಳೆಯಾ. ಪಕ್ಷದ ಕೆಲಸಕ್ಕಾಗಿ ನಾನು ಈಗಲೇ ಫ್ರಾನ್ಸಕ್ಕೆ ಹೋಗಬೇಕು. ಹೇಗಾದರೂ ಮಾಡಿ ನನ್ನನ್ನು ಕಳಿಸು.”

ಅವನು ಸಂದೇಹ ತೆಗೆಯದೇ ಒಳ್ಳೇ ವ್ಯವಸ್ಥೆ ಮಾಡಿಕೊಟ್ಟ. ಒಂದುವರೆ ದಿವಸಗಳಲ್ಲಿ ಡಂಕರ್ಕ ಮುಟ್ಟಿದೆ. ಅಲ್ಲಿ ಪಕ್ಷದ ಕೇಂದ್ರ ಕಚೇರಿಗೆ ಹೋಗಿ ಕಾಮ್ರೇಡ ಮೂನಾಟಾ ಇಮ್ಸನ ಭೆಟ್ಟಿಯಾಗಿ ಹೇಳಿದೆನು. “ಅಯ್ಯಾ ಈಗಲೇ ನಾನು ಪಾರಿಸಕ್ಕೆ ಹೋಗಬೇಕು.”

ಅವನು ನೂರು ಮಾರ್ಕು ಕೈಗಡ ಕೊಟ್ಟನು. ಮತ್ತು ಪಾರಿಸದ ಗಾಡಿಯಲ್ಲಿ ಕುಳ್ಳಿರಿಸಿದನು. ಗಾಡಿಬಿಡುವ ಮೊದಲು ನಾನು ಅವನ ಹಸ್ತಾಂದೋಲನ ಮಾಡಿದೆ. ಆಗ ನನಗೆ ವಿಚಾರ ಬಂದುದೇನಂದರೆ—ನಾನು ಕಾಮಿಂಟರ್ನದ್ದೇ ಕಡೆಯ ನಿರೋಪ ತಗೆದುಕೊಳ್ಳುತ್ತೇನೆ. ಆ ಕಲ್ಪನೆಯಿಂದ ಕಂಠದುಂಬಿ ಕಣ್ಣೀರು ತೋರಿದವು.

ಮುಂದೆ ಹತ್ತು ತಾಸುಗಳಲ್ಲಿಯೇ ಪಾರಿಸದ ಜನದಟ್ಟಣೆಯ ರಸ್ತೆಗಳಲ್ಲಿ ನಾನು ತಿರುಗಹತ್ತಿದೆ. ಅಲ್ಲಿಂದ ನಾನು ರಿಚರ್ಡ ಜೇನಸೆನನಿಗೆ ಒಂದು ಪತ್ರ ಗೀಚಿದೆ. ಮತ್ತು ಕಾಮಿಂಟರ್ನದ ವರಿಷ್ಠರಿಗೆ ಅದನ್ನು ಮುಟ್ಟಿಸಬೇಕೆಂದು ವಿನಂತಿಮಾಡಿಕೊಂಡೆ. ಆದರಲ್ಲಿ ನಾನು ಬರೆದಿದ್ದೆ. ನಾನು ರಶಿಯದಲ್ಲಿರುವೆನೆಂದು. ಗೆಸ್ಟಪೋದವರ ತಿಳಿವಳಿಕೆ. ಅವರ ತಿಳಿವಳಿಕೆ

ಇರುವವರೆಗೆ ನನ್ನ ಹೆಂಡತಿ ಮತ್ತು ಮಗ ಇವರ ಜೀವ ಸುರಕ್ಷಿತ. ಅದಕ್ಕಾಗಿ ಪ್ರಾರ್ಥನೆ ಇಷ್ಟು. ನನ್ನ ಸ್ಥಿತಿಗತಿಯ ವಾಚ್ಯತೆಯು ಕಾಮಿಂಟರ್ನ ದಿಂದ ಆಗಬಾರದು. ನಾನು ಪಕ್ಷದ ವಿಷಯದಲ್ಲಿ ಒಂದು ಶಬ್ದ ಕೂಡ ಎಲ್ಲಿಯೂ ಉಚ್ಚರಿಸುವದಿಲ್ಲವೆಂದು ಆಶ್ವಾಸನ ಕೊಡುತ್ತೇನೆ.

ಪಾರಿಸದಲ್ಲಿ ಒಂದು ವೇಳೆ ಕೆಲವು ದಿವಸ ಇರುತ್ತಿದ್ದೆ. ಆದರೆ G. P. U. ದ ಜನರು ನನ್ನ ಪಾಳತಿಯ ಮೇಲೆ ಇರುವರೆಂದು ಸಂಶಯ ಬರತೊಡಗಿತು. ಒಂದು ದಿನವಂತೂ ಖಾತ್ರಿಯೇ ಆಯಿತು. ರಾತ್ರಿ ಎನ್ನದೇ ಪಾರಿಸ ಬಿಟ್ಟೆ.

ಅಂಟ್ವರ್ಪಕ್ಕೆ ಹೋಗಿ ಎಡೋಫಿಮೆನ ಎಂಬ ಹೆಸರಿನ ಹಳೇ ಮಿತ್ರನಿಗೆ ಭೆಟ್ಟಿಯಾದೆ. ನನ್ನ ಹೊಸ ಇತಿಹಾಸ ಅವನಿಗೆ ಗೊತ್ತಿರಲಿಲ್ಲ. ಆದರೂ ನನ್ನ ಮನಸ್ಥಿತಿ ಪ್ರಕೃತಿ ಸರಿಯಾಗಿಲ್ಲವೆಂದು ಅವನು ತಿಳಿದ. ಅವನೆಂದ ಕೆಲವು ದಿನ ನನ್ನ ಮನೆಯಲ್ಲಿರು. ನನ್ನ ಕಾರ್ಯದಲ್ಲಿ ನಿನ್ನ ಸಹಾಯ ಸಿಕ್ಕರೆ ನನಗೆ ಬೇಕಾಗಿದೆ. "ಆದಕ್ಕೆ ನಾನು ಒಪ್ಪದೇ ಹೇಳಿದೆನು." ನನಗೆ ಸಹಾಯ ಮಾಡಬೇಕೆಂದು ನಿನ್ನ ಇಚ್ಛೆ ಇದ್ದರೆ ಇಷ್ಟುಮಾಡು. ಒಂದು ಹಡಗಿನಲ್ಲಿ ನನಗೆ ನೌಕರಿ ಹಚ್ಚಿಕೊಡು. ತಾರುಣ್ಯದ ಆರಂಭವನ್ನು ನಾನು ಸಮುದ್ರದ ಮೇಲೆ ಕಳೆದೆ. ಅಲ್ಲಿಗೆ ಮರಳಿಹೋಗುವ ಇಚ್ಛೆಯಾಗಿದೆ ನನಗೆ.

ಏಡೋ ಎಂದರೆ ಸಂಕಟದಲ್ಲಿ ಸಿಲುಕಿದ ನಾವಿಕರ ಪ್ರೇಮಳ ಹಿತಕರ್ತ. ಆ ರಾತ್ರಿಯೇ ಒಂದು ನೌಕರಿ ದೊರಕಿಸಿಕೊಟ್ಟ. ವೆಸ್ಟಇಂಡೀಜ ದಿಂದ ಸಕ್ಕರೆ ಚೀಲ ತರುವದಕ್ಕೆ ಈ ಹಡಗು ಹೊರಡುತ್ತಿದ್ದಿತು. ಅಲ್ಲಿ ನಾನು ಇರಹತ್ತಿದೆ.

ಪುನಃ ಒಂದು ಸಾರೆ ನಾವಿಕರ ಉಡುಪು ಧರಿಸಿದೆ. ನಾನು ಎಲ್ಲಿಂದ ಬಂದೆ? ಅಥವಾ ಎಲ್ಲಿಗೆ ಹೋಗುವೆ? ಇದೇನು ಹಡಗಿನಲ್ಲಿರುವ ನನ್ನ ಸಹಕಾರಿಗಳಿಗೆ ಗೊತ್ತಿರಲಿಲ್ಲ. ಪ್ರಚಂಡ ತೆರೆಗಳ ಮೇಲೆ ಉಯ್ಯಾಲೆಯಾಡುವ ಹಡಗಿನ ಡೆಕ್ಕು ಹೊಂದಿನಿಲ್ಲುವದರಲ್ಲಿ ಹಾಗೂ ಡಾಂಬರದ ಬಾದಲಿಯೊಳಗೆ ಎರಡೂ ಕೈ ಪೂರ ಮುಳುಗಿಸುವದರಲ್ಲಿ ಯಾವ ಆನಂದವಿದ್ದಿತೋ, ಅದನ್ನು ಎಷ್ಟೆಂದು ವರ್ಣಿಸಲಿ !

ಫಿರೇಲಾಯಳಿಗೆ ಪತ್ರಬರೆಯುವದು ನನಗೆ ಶಕ್ಯವಿರಲಿಲ್ಲ. ನಾನು ಮನಸ್ಸಿನಲ್ಲಿ ವಿಚಾರಿಸಿದೆ. ಆಕೆಗೆ ಏನೂ ತಿಳಿಸದಿರುವದೇ ಮೇಲು. ಕಾಲಾಂತರದಿಂದ ರಶಿಯದಲ್ಲಿ ಎಲ್ಲೋ ನನ್ನ ಮರಣವಾಯಿತೆಂದು ಗೆಸ್ಟಪೋಕ್ಕೆ ಅನಿಸುವದು. ಹಾಗಾದರೆ ಬೇಕಾದಲ್ಲಿ ಹೋಗಲು ಫಿರೇಲಾಯಳಿಗೆ ಸ್ವಾತಂತ್ರ್ಯ ಸಿಗುವದು.

ಆದರೆ ನಾನು ಸುಖದಿಂದ ಇರಬೇಕೆಂದು G. P. U. ಮತ್ತು ಕಾಮಿಂಟರ್ನಗಳಿಗೆ ಅನಿಸುತ್ತಿರಲಿಲ್ಲ. ವಾಲವೆಬರನು ಕಡೆಗೆ ನನ್ನ ಸೇಡು ತೀರಿಸಿಕೊಂಡನು.

ನಾನು ಕೋಪನಹೇಗನದಿಂದ ಓಡಿ ಎಷ್ಟೋ ದಿನಗಳಾದ ಮೇಲೆ, ಅಂಟ್ವೆರ್ಪದ ಒಬ್ಬ ಮಿತ್ರ ಕಳಿಸಿದ ಕಾಗದ ಸುರುಳಿ ಕೈಗೆ ಬಂದಿತು. ಫಾಸಿಫಿಕದಿಂದ, ಸ್ಕಾಂಡಿನೇವ್ಹಿಯಾದ ವರೆಗಿನ ಬೇರೆ ಬೇರೆ ದೇಶದ ಕಮ್ಯುನಿಸ್ಟ ವೃತ್ತಪತ್ರಗಳ ಅಂಕು, ಅದರಲ್ಲಿದ್ದವು. ಪ್ರತಿಯೊಂದು ಪತ್ರದ ಮೊದಲನೇ ಪಾನಿನಲ್ಲಿ ನನ್ನ ಫೋಟೊ ಮುದ್ರಿಸಿರುವದು ನೋಡಿ ನಾನು ಆಶ್ಚರ್ಯಚಕಿತನಾದೆ. ಗೆಸ್ಟಪೋದವರನ್ನು ವಂಚಿಸಿ ಮೊದಲು ಕೋಪನಹೆಗನಕ್ಕೆ ಬಂದಾಗ ಗೆಸ್ಟಪೋದವರು ಕೊಟ್ಟ ಎರಡು ಪಾಸಪೋರ್ಟ ಜೇನಸೆನನ ಕೈಯಲ್ಲಿ ಕೊಟ್ಟಿದ್ದೆ. ಅದರಲ್ಲಿದ್ದುದೇ ಫೋಟೋ ಇದು. ಕೆಳಗೆ ಬರೆದಿದ್ದರು. "ಗೆಸ್ಟಪೋದ ಮನುಷ್ಯ! ಎಲ್ಲಿಯಾದರೂ ಸಿಕ್ಕರೆ ನೋಡಿರಿ!"

ನನ್ನ ಘಾತವನ್ನು ಎಷ್ಟು ಕೌಶಲ್ಯದಿಂದ ಮಾಡಿರುವರಲ್ಲ? G. P. U. ದ ಕೊಲೆಪಾತಕಿಗಳ ತಂತ್ರ ಮಣ್ಣುಗೂಡಿಸಿ ಅವರ ಕೈಯಿಂದ ಪಾರಾಗಿದ್ದೆ. ಈಗ ಅವರು ಅತ್ಯಂತ ನಿಂದ್ಯ ರೀತಿಯಿಂದ ಹೊಡೆತ ಹಾಕಿದ್ದರು. ಕಾಮಿಂಟರ್ನದವರ ಬಳಿಯಲ್ಲಿ ನನ್ನ ಅನೇಕ ಚಿತ್ರಗಳಿದ್ದವು. ಆರಿಸಿ ಇದನ್ನೇ ಪ್ರಸಿದ್ಧಮಾಡಿದ್ದರು. ಇದರಲ್ಲಿ ಮೂರು ಹೇತುಗಳನ್ನು ಸಾಧಿಸಿಕೊಂಡರೆನ್ನಬಹುದು. ಒಂದು ಆ ಫೋಟೋದಿಂದ ಜಗತ್ತಿನ ಎಲ್ಲ ಕೆಲಸಗಾರರಲ್ಲಿ ನನ್ನ ಹೆಸರು ಕೆಟ್ಟು ಹೋಗುವದಿತ್ತು. ಆ ಫೋಟೋ ನೋಡಿ ಗೆಸ್ಟಪೋ ಜನ ತಿಳಿಯುತ್ತಿದ್ದರು. ಇವನು ರಶಿಯಕ್ಕೆ ಹೋಗಿಲ್ಲ. ನಮ್ಮನ್ನು

ವಂಚಿಸಿದ್ದಾನೆ. ಮೂರನೆಯದು ಸಂಶಯಾಸ್ಪದ ಆಸಾಮಿ ಎಂದು ಯಾವದೇ ದೇಶದ ಪೋಲೀಸರು ನನ್ನನ್ನು ಬಂಧಿಸಬಹುದಾಗಿದ್ದಿತು.

ಆ ಫೋಟೋದ ಸಂಗಡ ಬರೆದ ಲೇಖನದಲ್ಲಿ "ಗೆಸ್ಟಪೋದ ಅತ್ಯಂತ ಮಹತ್ವದ ಗುಪ್ತ ಹೇರರಲ್ಲೊಬ್ಬ" ಎಂದು ನನ್ನ ವರ್ಣನೆ. ಕಾಮಿಂಟರ್ನದ ಸೇವೆಯಲ್ಲಿ ದೇಹ ಸವೆಸಿದುದಕ್ಕೆ ಒಂದು ಅಕ್ಷರದ ಉಲ್ಲೇಖ ಸಹ ಇರಲಿಲ್ಲ!

ಈ ವೃತ್ತಪತ್ರ ನೋಡುತ್ತಿರುವಾಗ ನನಗೆ ಅನೇಕ ಸಂಗತಿಗಳು ನೆನಪು ಆದವು. ಯಾವ ದಿವಸ ಕೋಪನಹೆಗನಕ್ಕೆ ಹೋಗಬೇಕೆಂದು ಶ್ರೀಕೆನ್ಬಾಕನ ನಿರೋಪ ಪಡೆದೆನೋ ಆ ದಿನ ನೆನಪಿಗೆ ಬಂದಿತು. ಪಾಸಪೋರ್ಟ್ ಕೊಟ್ಟು ಅವನು ಬಜಾಯಿಸಿದ್ದನು. "ಬೆಂಕಿಯಲ್ಲಿ ಬೀಳಲಿ. ಅಥವಾ ಮಹಾಪೂರದಲ್ಲಿ ತೇಲಿ ಹೋಗಲಿ. ಈ ಕಾಗದಗಳನ್ನು ಶತ್ರುವಿನ ಕೈಗೆ ಹತ್ತಗೊಡಬೇಡ." ನಾನು ಮೂರ್ಖ. ವಿಚಾರವಿಲ್ಲದೆ ಜೇನಸೆನನ ಕೈಯಲ್ಲಿ ಕೊಟ್ಟುಬಿಟ್ಟೆ. ಅವುಗಳನ್ನು ದಿಟ್ಟಿಸಿ ನೋಡುತ್ತ ಜೇನಸೆನನೆಂದಿದ್ದ. "ಭಲೆ ಭಲೆ ಫೇಷ." ಇನ್ನೂ ಒಂದು ಸ್ಮರಣವಾಯಿತು. ಭಯ ತೋರಿಸಲಿಕ್ಕೆ ಇನ್ಸಪೆಕ್ಟರ ಕ್ರಾವುಸ ಹೇಳಿದ್ದ. "ನಮ್ಮನ್ನು ಮೋಸಗೊಳಿಸುವ ಪ್ರಯತ್ನ ಮಾಡಬೇಡ. ಹಾಗಾದರೆ ಬಹಳ ದಿನ ಬದುಕಲಾರೆ. ಗೆಸ್ಟಪೋದ ಕೈ ಬಹಳ ದೂರ ಚಾಚುತ್ತವೆ. ಗೆಸ್ಟಪೋ ಎಂದರೆ ಚೇಷ್ಟೆ ಅಲ್ಲ."

ಕಾಮಿಂಟರ್ನದವರು ಎಲ್ಲಿ ಜಗತ್ತಿನಲ್ಲಿ ಹೀಗೆ ನನ್ನ ಅಪಹಾಸ್ಯ ಮಾಡಿದ ಉದ್ದೇಶ ಸ್ಪಷ್ಟವಿದ್ದಿತು. ಕೇವಲ ಸ್ಟಾಲಿನನ ಹಸ್ತಕರು, ನನ್ನ ಬೇಟೆಯಾಡಬೇಕು. ನನ್ನನ್ನು ನಂಬಗೊಳಿಸಬೇಕು ಇಷ್ಟೇ ಅಲ್ಲ. ಅದು. ಇದಕ್ಕಿಂತ ಹೆಚ್ಚಿನ ಧೂರ್ತ ತಂತ್ರ ಅದರಲ್ಲಿದ್ದಿತು. ಈ ವೃತ್ತಪತ್ರಗಳು ದೇಶ–ವಿದೇಶಗಳ ಗುಪ್ತ ಪೋಲಿಸ ಖಾತೆಯವರೆಗೆ ಮುಟ್ಟತಕ್ಕವು. ಹಾಂಬುರ್ಗಕ್ಕೆ ಹೋಗುವವು. ಬರ್ಲಿನಕ್ಕೆ ಹೋಗುವವು. ಹರ್ಥಾರ್ಜೇನ್ಸ ಇನ್ಸಪೆಕ್ಟರ ಕ್ರಾವುಸ, ಶ್ರೀಕೆನಬಾಕ, ಅಷ್ಟೇ ಏಕೆ ಹಿಮ್ಲರ ಸಹ ಆ ವೃತ್ತಪತ್ರ ನಿರೀಕ್ಷಿಸುವವ. ನಾನು ರಶಿಯಾಕ್ಕೆ ಹೋಗಲಿಲ್ಲ. ಗೆಸ್ಟಪೋದ ಗುಪ್ತ ಸುದ್ದಿ. ಶತ್ರುಗಳಿಗೆ ಸಾದರ ಪಡಿಸಿದೆ. ಕಡೆಗೆ ನಾನು ವಿಶ್ವಾಸ

ಘಾತಮಾಡಿದೆ. ಠಕ್ಕಿಸಿದೆ– ಎಂದು ಗೆಸ್ಟಪೋಕ್ಕೆ ಖಾತ್ರಿಯಾಗುತ್ತಿದ್ದಿತು. ಹೀಗಾದ ಮೇಲೆ ನನ್ನ ಯಥಾಯೋಗ್ಯ ಪಾರುಪತ್ಯ ಮಾಡದೇ ಗೆಸ್ಟಪೋ ಜನ ನಿಶ್ಚಯವಾಗಿ ಬಿಡುತ್ತಿರಲಿಲ್ಲ?

ನನ್ನ ಭಯ ನಿಜವೆನಿಸಿತು.

೧೯೩೮ರ ಜುಲೈ ತಿಂಗಳಿನಲ್ಲಿ ತಿಳಿದಿತು. ಗೆಸ್ಟಪೋದವರು ಫಿರೇಲಾಯಳನ್ನು ಹಿಡಿದು, ಫುಲ್ಸಬ್ಯುಎಲೆಟ ಯಮಪುರಿಯಲ್ಲಿ ಹಾಕಿದರು!

ಮುಂದೆ ಐದೇ ತಿಂಗಳಿನಲ್ಲಿ ಇದಕ್ಕಿಂತ ಭಯಂಕರ ಸುದ್ದಿ ತಿಳಿದಿತು. ಜೇಲಿನಲ್ಲಿ ಫಿರೇಲಾಯ ಸತ್ತು ಹೋಗಿದ್ದಳು! ಆಕೆ ಆತ್ಮಹತ್ಯೆ ಮಾಡಿಕೊಂಡಳೋ– ಅಥವಾ ಆಕೆಯ ಪ್ರಾಣ ತೆಗೆದರೋ, ಯಾರುಬಲ್ಲರು? "ಗೆಸ್ಟಪೋ ಎಂದರೆ ಚೇಷ್ಟೆಯಲ್ಲ!" ನನ್ನ ಕೂಸು ಜಾನು ಜರ್ಮನ ಸರಕಾರದ ಪಾಲಕತ್ವದಲ್ಲಿ ಇರಬಹುದು. ಈ ವರೆಗೆ ಅವನ ಸುದ್ದಿ ನನಗಿಲ್ಲ!